R. L. NO. [illegible]

MONDAY, OCTOBER 1ST 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೧

ಪತ್ರದ ವರ್ಗಣಿ.
ಕುಮಟೆಯಲ್ಲಿ ಅಗಾವು;
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು

ಜಾಹೀರಾತುಗಳ ದರ
ಕನಡ, ಇಂಗ್ಲಿಷ ಸ್ಮಾಲ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-0 ಆ ನಂತರ, ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅದ್ದು ಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಯಾ ಸಮಕ್ಷ ತೀರ್ಮಾನಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ಕಾರ್ತೀಕ ಶು ೧ ಮಾಹೆ ಅಕ್ಟೋಬರ ಸನ್ ೧೯೨೩ನೇ ಇಸವಿ)—

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ – ಕಬ್ಬಿಣ ಮೊಳೆಗಳು, ವ್ಯಾಪಾರ ಉಪಯೋಗದ ಬೋಲ್ಟುಗಳು, ಪಿನ್ ವ್ಹಾಶರ, ಡಿಸ್ಟಿಲ್ಡ ವ್ಹಾಟರ ಸಿಗುತ್ತವೆ, ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ ! ಎಲ್ಲಾ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಸಾಬೂನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತ್ತವೆ ! ಎಲ್ಲ ಸಾಮಾನು ಅಗ್ಗ ! ಕಿರಕೋಳ ವ್ಯಾಪಾರಸ್ಥರು ತೋಕ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ —

ಕೃಷ್ಣರಾವ ಕೇಶವ ಗ್ವಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ (ಉ. ಕನಡ)

ಪ್ರೆಸಿಡೆನ್ಸಿ ಪ್ರಾವಿಡೆಂಟ ಎಂಡ್ ಜನರಲ್
ಇನ್ಸುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ:- ಅಮೃತ ಬಿಲ್ಡಿಂಗ,
ಬೆಲಾರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರ ಭದ್ರತೆ ಇದೆ

ಮನುಷ್ಯನ ಆಯುಷ್ಯಕ್ರಮದಲ್ಲಿ ಎಲ್ಲವೂ ಅನಿಶ್ಚಿತವಿದ್ದರೂ, ಸಾವು ಮಾತ್ರ ಖಂಡಿತವಾಗಿ ಬಂದೇ ಬರುವದು! ಆದ್ದರಿಂದ ಜೀವವಿಮೆ ಇಳಿಸುವ ಅವಶ್ಯಕತೆ ಪ್ರತಿಯೊಬ್ಬನಿಗೂ ಇರುತ್ತದೆ ಪ್ರತಿಯೊಬ್ಬನೂ ವಿಮೆ ಇಳಿಸಿ ತನ್ನ ಕುಟುಂಬದ ಗೋಳನ್ನು ಕಡಿಮೆ ಮಾಡುವದಕ್ಕೆ ಪ್ರಯತ್ನಿಸಬೇಕು. ವಿಮೆ ಕಂಪನಿಗಳು ಅನೇಕ ಇರುವವು, ಆದರೆ ಎಲ್ಲಾ ಬಗೆಯಿಂದಲೂ ನಮ್ಮ ಕಂಪನಿಯಷ್ಟು ಉತ್ತಮವೂ ಎಲ್ಲ ಜನರಿಗೆ ಅನುಕೂಲವೂ ಆದ ಕಂಪನಿಯು ಬೇರೆ ಇಲ್ಲಾ. ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬಲು, ೧೪ ವರ್ಷಗಳಲ್ಲಿ ೩೫೦ ರೂಪಾಯಿಗಳಿಗಿಂತ ಹೆಚ್ಚು ಅಂದರೆ ೫೦೦ ರೂಪಾಯಿಗಳ ತನಕ ಸಿಗುವದು!! ಪ್ರತಿ ತಿಂಗಳಿಗೆ ೩ ರೂಪಾಯಿಗಳಂತೆ ತುಂಬಿ ೧೦ ವರ್ಷ ಮುದ್ದತಿನ ವಿಶೇಷ ಸವಲತ್ತಿನ ಸ್ಪೇಶಲ್ ಪೊಲಿಸಿಗಳನ್ನು ಹೊಂದಲು ಬರುತ್ತದೆ! ಕಂಪನಿಯಲ್ಲಿ ಹೆಂಗಸರಿಗೂ ವಿಮೆ ಇಳಿಸಲು ಬರುತ್ತದೆ. ಡಾಕ್ಟರರ ತಪಾಸು ಇಲ್ಲ! ಎಲ್ಲ ಕಡೆಯಲ್ಲಿಯೂ ಏಜಂಟರು ಬೇಕು! ವಿಶೇಷ ಮಾಹಿತಿಯ ಬಗ್ಗೆ ನಮ್ಮ ಕಂಪನಿಯ ಆರ್ಗನೈಝರ ಮಿ| ಎಸ್. ಟಿ. ನಾಯ್ಕ ಆಫೀಸ-ಅಂಕೋಲಾ, ಜಿಲ್ಲಾ ಉ ಕನ್ನಡ, ಇವರ ಕಡೆಗೆ ಬರೆದುಕೊಳ್ಳಬೇಕು.



ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಚವತಿಹಬ್ಬದ ಲಾಗಾಯ್ತು
ದೀಪವಾಳಿಹಬ್ಬದ
ವರೆಗೆ ಮಾತ್ರ
ನಮ್ಮ ಅಂದವಾದ
ಸೀಸೆ ಕಟ್ಟಿಗೆಯ ಮಡಚಲಿಕ್ಕಾಗುವಂಥ
ದೇವರ ಮಂಟಪಗಳು
ಕಿಮ್ಮತ್ತು ಕಡಿಮೆ ಮಾಡಿರುತ್ತದೆ.

ನಮ್ಮ ವಿಳಾಸ —
ದಿ ಕರ್ನಾಟಕ ಟ್ರೇಡಿಂಗ ಕಂಪನಿ,
ಶಾಂತಿ ಭುವನ, ಕಾರವಾರ.

"ಔಷಧ ಸೀಸೆಗಳಿಗಿಂತ ಬರೀ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು!"

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯಚಂದ್ರಿಕೆ" ಯೆಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯ ದೃಢಕಾಯರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ, ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳ, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಒಂದು ಬೀಳುವದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಚೆಟ್ಟಿ ಬೀದಿ, ಮದರಾಸು.

ವಿವಿಧ ಸಂಗ್ರಹ.

ಸು(?)ಶಿಕ್ಷಿತರ ವಿಲಾಸ ಖರ್ಚು'

ಕರಾಚಿಯ ಇಂಜನಿಯರಿಂಗ ಕಾಲೇಜಿನ ಮುಖ್ಯಾಧ್ಯಾಪಕರಾದ ಪ್ರೊಫೆಸರ ಗೋಖಲೇಯವರು ಸಾತಾರೆಯಲ್ಲಿ ಒಂದು ಉಪನ್ಯಾಸವನ್ನಿತ್ತರು. ಈಗಿನ ಸುಶಿಕ್ಷಿತರ ವಿಲಾಸದಿಂದ ದೇಶಕ್ಕುಂಟಾದ ನಷ್ಟವನ್ನು ಅವರು ವಿವರಿಸಿದರು. ೧೯೨೬-೨೭ನೇ ಸಾಲಿನಲ್ಲಿ ೧ ಕೋಟಿ ೫೮ ಲಕ್ಷ ರೂಪಾಯಿಗಳ ಹಣ್ಣು-ಹಂಪಲಗಳ ಬಗ್ಗೆ ರವಾನೆಯಾದವು, ೭ ಕೋಟಿ ರೂಪಾಯಿಗಳು ತಿಂಡಿ-ತಿನಸುಗಳನ್ನು ತರಿಸುವದಕ್ಕಾಗಿ ಕಳಿಸಲ್ಪಟ್ಟವು. ಖಾದ್ಯ ಪದಾರ್ಥಗಳ ವರ್ಗವಾರಿಯು ಹೀಗೆ - ಒಂದು ಕೋಟಿಯ ಮೆಲಿನ್ಸ ಫುಡ್, ೧॥ ಕೋಟಿಯ ಹೆಪ್ಪುಗಟ್ಟಿದ ಹಾಲು, ೪ ಲಕ್ಷದ ಬಿಸ್ಕಿಟು, ೩೫ ಲಕ್ಷದ ಮೀನು-ಮಾಂಸ, ೧೨ ಲಕ್ಷದ ಗಿಣ್ಣು, ೨೮ ಲಕ್ಷದ ರಸಾಯನ, ೫ ಲಕ್ಷದ ಚಟ್ಣಿಗಳು, ಇತರ ತಿಂಡಿ ತಿನಸುಗಳು ೨ ಕೋಟಿ ರೂಪಾಯಿಗಳವು, ಇವಲ್ಲದೆ, ೩॥ ಕೋಟಿ ರೂಪಾಯಿಗಳ ಅಡಿಕೆ, ೨ ಕೋಟಿ ೧೬ ಲಕ್ಷ ರೂಪಾಯಿಗಳ ಸಿಗರೇಟು, ೨ ಕೋಟಿ ೩೪ ಲಕ್ಷ ರೂಪಾಯಿಗಳ ಮದ್ಯ, ಹೀಗೆ ಸುಶಿಕ್ಷಿತರ ವಿಲಾಸ ಸಾಮಗ್ರಿಗಳ ಆಮದಾಯಿತು. ಅಷ್ಟೇ ಏಕೆ? ಮೇಲಾದರೆ, ೧। ಕೋಟಿ ರೂಪಾಯಿಗಳ ಉಪ್ಪು ಬಂತು! ೧೮ ಕೋಟಿ ರೂಪಾಯಿಗಳ ಸಕ್ಕರೆ ಬಂತು!' ಅಂತು ೩೨ ಕೋಟಿ ೫೨ ಲಕ್ಷ ರೂಪಾಯಿಗಳು ೮ ಸಾಲಿನಲ್ಲಿ ಪರದೇಶಗಳಿಗೆ ರಫ್ತಾದವು. ಹಿಂದುಸ್ಥಾನದಿಂದ ಗೋಧಿ ಪರದೇಶಕ್ಕೆ ಹೋಗಿ ಅಲ್ಲಿಂದ ಬಿಸ್ಕೀಟುಗಳು ತಯಾರಾಗಿ ಬರುತ್ತವೆ. ಗೋಧಿಯ ಬೆಲೆ ಇಲ್ಲಿಂದ ಹೋಗುವಾಗ ರತ್ತಲಿಗೆ ೧॥ ಆಣೆ; ಬಿಸ್ಕೀಟು ರೂಪದಿಂದ ತಿರುಗಿ ಬಂದ ಮೇಲೆ ರತ್ತಲಿಗೆ ೧॥ ರೂಪಾಯಿ.' ಇಲ್ಲಿಂದ ಹೊಗೆಸೊಪ್ಪು ರತ್ತಲಿಗೆ ೫ ಆಣೆ ದರದಿಂದ ವಿಲಾಯತಿಗೆ ಹೋಗಿ ಸಿಗರೇಟ ಬಣ್ಣ ಪಡಕೊಂಡು ಇಲ್ಲಿ ಬಂದು ರತ್ತಲಿಗೆ ೫ ರೂಪಾಯಿಯಂತೆ ಮಾರಿಹೋಗುತ್ತದೆ. ಪ್ರೊ|| ಗೋಖಲೆಯವರು ಸು(?)ಶಿಕ್ಷಿತರ ಶಿಕ್ಷಣದ ಫಲಶ್ರುತಿ ಹೇಳುವಾಗ, ಅಶಿಕ್ಷಿತರ ಅಜ್ಞಾನದಿಂದ ಆದ ನಷ್ಟವನ್ನೂ ವಿವರಿಸಿದ್ದಾರೆ. ೧। ಕೋಟಿಯ ಎಲುಬು ಇಲ್ಲಿಂದ ರಫ್ತಾಯಿತು. ಈ ಎಲುಬು ಬೇಸಾಯಕ್ಕೆ ಉಪಯೋಗಿಸಿದ್ದರೆ, ೩॥ ಕೋಟಿ ರೂಪಾಯಿ ಪ್ರಾಪ್ತಿಯಾಗುತ್ತಿತ್ತು. ಇವು ನಿರುಪಯೋಗಿಯೆಂದು ಪರದೇಶಕ್ಕೆ ರಫ್ತಾದವು. ಇದೇ ರೀತಿ ಇನ್ನೂ ಎಷ್ಟು ಎಲುಬುಗಳು ದೇಶತುಂಬ ಹರಡಿ ಬಿದ್ದಿರಬೇಕು. ಅವನ್ನೆಲ್ಲ ಉಪಯೋಗಿಸಿದರೆ, ಉಪಯೋಗಿಸುವಷ್ಟು ಜ್ಞಾನವಿದ್ದಿದ್ದರೆ, ಭೂಮಿಗೆ ಜೀವನ ರಸಾಯನ ದೊರೆತಂತಾಗಿ ಹುಟ್ಟುವಳಿಯ ಮಾನವು ಬಹಳ ಬೆಳೆಯುತ್ತಿತ್ತು. ಬೇಸಾಯ ಕಮಿಶನು ಈ ಕುರಿತು ಮಾಡಿದ ಶಿಫಾರಸು ಮನಸೆಳೆಯುವದು: ಎಲುಬಿನ ರಫ್ತೆಯನ್ನು ನಿಷೇಧಿಸಿದರೆ, ಈ ಉದ್ಯೋಗ ಮಾಡುವವರ ಜೀವನಾಧಾರವನ್ನು ಸೆಳಕೊಂಡಂತಾಗುವದೆಂದು ಅಭಿಪ್ರಾಯಪಟ್ಟಿದೆ. ಇದಲ್ಲದೆ, ಬೇಸಾಯಕ್ಕೆ ಉಪಯೋಗವಾಗುವಂಥ ೨॥ ಕೋಟಿ ರೂಪಾಯಿಗಳ ನೆಲಗಡ್ಲೆ ಹಿಂಡಿಯೂ ನಿರುಪಯೋಗಿಯೆಂದು ರಫ್ತಾಯಿತು! ಹೀಗೆ ಸುಶಿಕ್ಷಿತರ ವಿಶೇಷ ಜ್ಞಾನದಿಂದ ನಷ್ಟ; ಅಶಿಕ್ಷಿತರ ಅಜ್ಞಾನದಿಂದ ನಷ್ಟ!

⁂

ಬ್ರಿಟಿಶರ ನೀಚತನ.

ಹಿಂದುಸ್ಥಾನದೊಳಗಿನ ಸಾರ್ವಜನಿಕ ಸುರಕ್ಷಿತತೆಗೆ ಭಂಗ ಬರುತ್ತದೆಂಬ ನೆವದ ಮೇಲೆ ಬ್ರಿಟಿಶ ಪ್ರಜೆಗಳನ್ನು ವಿಚಾರವಿಲ್ಲದೆ ಹೊರಹಾಕುವ ಕಾನೂನು ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟು, ಅಧ್ಯಕ್ಷರಾದ ಶ್ರೀ|| ವಿಠ್ಠಲಭಾಯಿ ಪಟೇಲರವರ ಅಧ್ಯಕ್ಷ ಮತದಿಂದ ತಿರಸ್ಕರಿಸಲ್ಪಟ್ಟಿತು. ಸರಕಾರ ಪಕ್ಷಕ್ಕೆ ೬೧, ಲೋಕಪಕ್ಷಕ್ಕೆ ೬೧ ಹೀಗೆ ಸಮ ಮತಗಳು ದೊರಕಿದ್ದವು; ಇಂಥ ಅಸಾಧಾರಣ ಕಾನೂನಿಗೆ ಕಾಯಿದೆ ಕೌನ್ಸಿಲಿನಲ್ಲಿ ಹೆಚ್ಚಿನ ಬೆಂಬಲ ಸಿಗುವದವಶ್ಯವಿದೆಂದು ಅಧ್ಯಕ್ಷರು ಅಭಿಪ್ರಾಯಪಟ್ಟು, ತಮ್ಮ ಮತವನ್ನು ಪ್ರತಿಕೂಲ ಪಕ್ಷಕ್ಕೆ ಕೊಟ್ಟು ಕಾನೂನನ್ನು ತಿರಸ್ಕರಿಸಿದರು. ಈ ಕಾನೂನಿನ ಚರ್ಚೆ ನಡೆದಾಗ ಸಭಾಸದರಾದ ಶ್ರೀ|| ಜಮನಾದಾಸ ಮೇಹತಾರವರು ಬ್ರಿಟಿಶರ ನೀಚ ವ್ಯಾಪಾರವನ್ನು ಉದಾಹರಿಸಿದರು: ಸಾರ್ವಜನಿಕ ಸುರಕ್ಷಿತತೆಯ ನೆವದಿಂದ ಹಿಂದುಸ್ಥಾನಕ್ಕೆ ಉಪಕಾರ ಮಾಡುವ ವಿದೇಶೀಯರನ್ನು ಹೊರಹಾಕುವ ಹಂಚಿಕೆಯಿದೆಂದರು. ರೋಬರ್ಟ ಸ್ಟಾಕವೆಲ್ಲರು

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅದಕ್ಕೆ ಚಲೋ 'ಕೂದಲೆಣ್ಣೆ' ಹಚ್ಚಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೆ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

——.0·——

½ ಔಂಸಿಗೆ	ರೂ.	೨—೦—೦
¼ ಔಂಸಿಗೆ	,,	೧—೪—೦
೧ ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ.)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಹೋಗುವದು. ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX, 2082 **BOMBAY No. 2.**

ಕುಟಿಲತನದಿಂದ ಬ್ರಿಟಿಶ ಸಾಮ್ರಾಜ್ಯವನ್ನು ಸ್ಥಾಪಿಸಿದರು; ಅದನ್ನೇ ಭಾರತ ಮಂತ್ರಿಗಳಾದ ಬರ್ಕನ್‌ಹೆಡ್ ದೊರೆಗಳೂ, ವಿಂಟರಟನ್ ದೊರೆಗಳೂ ಕುಟಿಲತನದಿಂದ ಮುಂದರಿಸುತ್ತಿದ್ದಾರೆ. ಹಿಂದುಸ್ಥಾನದ ಸುರಕ್ಷಣವು ಗಂಡಾಂತರದಲ್ಲಿ ಸಿಲುಕಿಬಿದ್ದಿದೆಂಬ ಸಾಧನೆಯು ತೀರ ನಿರಾಧಾರವಾದದ್ದು. ಉದಾಹರಣೆಗಾಗಿ — ಮಹಾಯುದ್ಧದಲ್ಲಿ ನಡೆದ ಒಂದು ಪ್ರಕಾರವನ್ನು ಶ್ರೀ| ಜಮುನಾದಾಸರವರು ವಿವರಿಸಿದರು: ಮಹಾಯುದ್ಧದ ಧರ; ಜರ್ಮನಿಯ ದ್ವೇಷಭಾಂಡಾರವು ಭೂತಲದಲ್ಲೆಲ್ಲ ವ್ಯಾಪಿಸಿಕೊಳ್ಳಬೇಕು; ಬ್ರಿಟಿಶ ವರ್ತಮಾನಪತ್ರಿಕೆಯ ಸುದ್ದಿಗಾರರು ಒಂದು ಸುದ್ದಿ ಪ್ರಕಟಿಸಿದರು:- “ಜರ್ಮನರ ದುಷ್ಟತನ ನೋಡಿ! ಮಹಾಯುದ್ಧದಲ್ಲಿ ಮಡಿದ ಮಿತ್ರರಾಷ್ಟ್ರಗಳ ಸೈನಿಕರ ಶವಗಳಿಗೆ ಸಂಸ್ಕಾರ ಕೊಡುವರಂತೆ; ಸಂಸ್ಕಾರವೆಂದರೆ ಉತ್ತರವಿಧಿಯಲ್ಲ— ಒಂದು ಕಾರಖಾನೆಯಿದೆ; ಕಾರಖಾನೆಯಲ್ಲಿ ಆ ಶವಗಳನ್ನು ಹಿಯ್ಯುತ್ತಾರೆ; ವತ್ತ ನೆಣವನ್ನು ತೆಗೆಯುತ್ತಾರೆ; ಆ ನೆಣ ಯುದ್ಧ ಸಾಹಿತ್ಯಗಳಿಗೆ ಉಪಯೋಗವಾಗುತ್ತದೆ. ಭಯಂಕರ ರಾಕ್ಷಸರು! ಜರ್ಮನರಂಥ ರಾಕ್ಷಸರು ಇಡೀ ಜಗತ್ತಿನಲ್ಲಿ ಇನ್ನಾರಿಲ್ಲ.” ಎಲ್ಲ ವರ್ತಮಾನಪತ್ರಿಕೆಗಳಲ್ಲಿಯೂ ಈ ಸುದ್ದಿ ಹಬ್ಬಿತು. ಎಲ್ಲರೂ ನಂಬಿಕೊಂಡರು. ಮಹಾಯುದ್ಧ ಮುಗಿಯಿತು. ಮುಂದೆ ಈ ಸುದ್ದಿಗಾರರು ಕಾರಣಾಂತರದಿಂದ ಅಮೇರಿಕೆಗೆ ಹೋಗಿದ್ದರು. ಹೆಣದ ಕಾರಖಾನೆಯ ಪತ್ತೆ ಹಚ್ಚಿದ ಮಹಾನುಭಾವರಿವರು, ಇವರಿಗೆ ದೊಡ್ಡ ಮೇಜವಾನಿ ಸಿಕ್ಕಿತು. ಮೇಜವಾನಿಯಲ್ಲಿ ಯಥೇಷ್ಟ ಕುಡಿದರು. ಆಗ ಸತ್ಯ ಹೊರಬಿತ್ತು. ಹೆಣದ ಕಾರಖಾನೆಯ ಕಥೆಯನ್ನು ತಾವೇ ನಿರ್ಮಿಸಿದ್ದೆಂದು ಅವರು ಒಪ್ಪಿದರು. ಜರ್ಮನಿಯಲ್ಲಿ ಇಂಥ ಕಾರಖಾನೆಯು ಎಂದಿಗೂ ಇರಲಿಲ್ಲವಾಗಿಯೂ ಹೇಳಿದರು. ಅಮೇರಿಕೆಯ ವರ್ತಮಾನಪತ್ರಿಕೆಗಳು ಮಾರನೇ ದಿನವೇ ಈ ಸುದ್ದಿಯನ್ನು ಹರಡಿ ಬ್ರಿಟಿಶರ ಪ್ರಾಮಾಣಿಕತನವನ್ನು ಬೀರಿದವು. ಇದೇ ಪ್ರಕಾರದಿಂದ ಇಲ್ಲಿಯು ಬ್ರಿಟಿಶರು ಹಿಂದುಸ್ಥಾನದ ಸಾರ್ವಜನಿಕ ಸುರಕ್ಷಿತತೆಯ ಮೇಲೆ ಗಂಡಾಂತರವನ್ನು ಕಲ್ಪಿಸಿ ಈ ಅಸಾಮಾನ್ಯ ಕಾನೂನಿನ ಹೊಂಚು ಹಾಕಿದ್ದಾರೆಂದು ಶ್ರೀ| ಮೇಥಾರವರು ಪ್ರತಿಪಾದಿಸಿ, ಕಾನೂನಿಗೆ ವಿರೋಧಿಸಿದರು.

⁂

ಸಮಾಜಸತ್ತಾವಾದದ ಕಾರ್ಯಕ್ರಮ.

ಸಮಾಜ ಸತ್ತಾವಾದಿಗಳು ಹಿಂದುಸ್ಥಾನದಲ್ಲಿ ಹಾವಳಿ ಹಾಕುತ್ತಾರೆ; ಅವರ ಹೆಡಮುರಿಗೆ ಕಟ್ಟಬೇಕು. ಅವರ ಪುರಸ್ಕಾರದಿಂದ ದೇಶಕ್ಕೆ ನಷ್ಟವಿದೆ; ಇತ್ಯಾದಿ ಸರಕಾರದ ತರ್ಫೆನಿಂದ ಸಾಧನೆಯಾಗುತ್ತದೆ. ಶ್ರೀ| ಜಮುನಾದಾಸರವರು ಈ ಪಕ್ಷದ ಕಾರ್ಯಕ್ರಮವನ್ನು ಸರಕಾರಿ ದಾಖಲೆಗಳಿಂದಲೇ ವಿವರಿಸಿದರು. ಅದೇನೆಂದರೆ:- “ನಿರಂಕುಶ ಆಡಳಿತೆಯನ್ನು ನಷ್ಟಪಡಿಸುವದು; ಬೇಸಾಯಗಾರರಿಗೂ, ಕೂಲಿಕಾರರಿಗೂ ಪ್ರತ್ಯಕ್ಷಾಪ್ರತ್ಯಕ್ಷ ಸಂಬಂಧವಿದ್ದ ಲೋಕಶಾಹಿ ಸರಕಾರವನ್ನು ಸ್ಥಾಪಿಸುವದು; ಭೂಮಿಯನ್ನು ಸರಕಾರದ ಮಾಲ್ಕಿಯದೆಂದು ಎಣಿಸಿ, ನಿಕ್ಕಿ ಮುನಾಫೆಯ ಶೇಕಡಾ ೧೫ ರಂತೆ ಪ್ರಜೆಗಳಿಗೆ ತೀರ್ವೆ ಆಕರಿಸಿ ಕೊಡುವದು; ತೀರ ಬಡ ಬೇಸಾಯಗಾರರಿಗೆ ಉಚಿತವಾಗಿ ಭೂಮಿ ಕೊಡುವದು; ಬೇಸಾಯಗಾರರ ಸಾಲವನ್ನು ಪರಿಹರಿಸುವದು; ಶೇಕಡಾ ೫ಕ್ಕೆ ಮಿಕ್ಕಿ ಬಡ್ಡಿ ವಸೂಲಾಗದಂತೆ ಏರ್ಪಾಡು ಮಾಡುವದು, ಕಡಿಮೆ ಬಡ್ಡಿ ದರದಿಂದ ಬೇಸಾಯಕ್ಕೆ ಹಣ ಸಿಗುವ ವ್ಯವಸ್ಥೆ ಮಾಡುವದು; ಉಗಿಬಂಡಿ ಮುಂತಾದ ವಾಹನ ಸಾಧನಗಳ ಮಾಲ್ಕಿಯನ್ನು ಸರಕಾರವು ವಹಿಸಿಕೊಳ್ಳುವದು; ಗಣಿಗಳ ಮಾಲ್ಕಿಯೂ ಸರಕಾರದ್ದು; ಕೂಲಿಕಾರರಿಗೆ ದಿನಾ ೮ ತಾಸಿಗೆ ಮಿಕ್ಕದಂತೆಯೂ, ವಾರಕ್ಕೆ ೪೪ ತಾಸಿಗೆ ಮಿಕ್ಕದಂತೆಯೂ ಕೆಲಸ ಮಾಡದಂತೆ ವ್ಯವಸ್ಥೆ ಮಾಡುವದು; ಕೂಲಿಕಾರರಿಗೆ ಸುಖ ಕೊಡಲು ಉಪಾಯ ಮಾಡುವದು; ಪ್ರಾಥಮಿಕ ಶಿಕ್ಷಣವನ್ನು ಸಕ್ತಾಯದಿಂದ ಎಲ್ಲರಿಗೂ ಕೊಡುವದು, ಕೂಲಿಕಾರರಿಗೆ ಕೆಲಸ ಸಿಗದಿದ್ದಾಗ, ಬೇನೆ ಬಿದ್ದಾಗ ಹಾಗು ಮುಪ್ಪಿನಲ್ಲಿ ಚರಿತಾರ್ಥ ಸಾಗಿಸುವಷ್ಟು ನಿಧಿಯನ್ನು ನಿರ್ಮಿಸುವದು, ಸರಕಾರವು ಮುಕ್ಕಾಲು ಅಂಶ ಹಣ ಕೊಡಬೇಕು; ವರ್ತಮಾನಪತ್ರಗಳಿಗೆ ಸ್ವಾತಂತ್ರ್ಯವಿರತಕ್ಕದ್ದು; ಭಾಷಣಕ್ಕೆ ಪ್ರತಿಬಂಧವಿರಬಾರದು, ಸಂಘ ನಿರ್ಮಾಣಕ್ಕೆ ಅಡ್ಡಿಯಾಗಲಾಗದು; ಶಸ್ತ್ರಾಸ್ತ್ರಗಳನ್ನು ಧರಿಸಲಿಕ್ಕೆ ಪ್ರತಿಯೊಬ್ಬರಿಗೆ ಹಕ್ಕುಂಟು. ಧರ್ಮ ವಿಷಯಗಳಲ್ಲಿಯೂ ಇತರ ವಿಷಯಗಳಲ್ಲಿಯೂ ಗಂಡಸರಂತೆ ಹೆಂಗಸರಿಗೆ ಸಮಾಜ ಸತ್ತಾವಾದದಲ್ಲಿ ಹಕ್ಕು ಕೊಡಲ್ಪಟ್ಟಿದೆ. ಈ ಕಾರ್ಯಕ್ರಮವನ್ನು ಮುಂದರಿಸುವದಕ್ಕಾಗಿ ಬೇಸಾಯಗಾರರ ಹಾಗು ಕೂಲಿಕಾರರ ಮಂಡಳಗಳು ಘಟಿಸಲ್ಪಡಬೇಕು” ಈ ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಾಂತತೆಗೆ ಭಂಗ ಬರುವಂಥ ವಿಷಯವೇನಿದೆ? ಮೇಲಾಗಿ, ಸಮಾಜ ಸತ್ತಾವಾದ ಪಕ್ಷವು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬೇಕಾಗಿಯೂ ನಮೂದಿಸಿದೆ. ಹೀಗೆಲ್ಲ ಕಾರ್ಯಕ್ರಮಕ್ಕೆ ಪಟ್ಟಹಾಗುವ ಯೋಜನೆಯಿಂದ ದೇಶದ ಸುರಕ್ಷಿತತೆಯು ನಷ್ಟವಾಗುತ್ತದೆಯೋ? ಸಂಘಟನೆಯಾಗುತ್ತಿದೆಯೋ ?

⁂

ಭಾಗ್ಯಶಾಲಿ ಪುರುಷ!

ಅಮೇರಿಕೆಯಲ್ಲಿ ಸಾವಿರಾರು ಲಕ್ಷಾಧೀಶರಿದ್ದಾರೆ! ಅವರಲ್ಲಿ ಜೇ. ಡಿ. ರಾಕ್‌ಫೆಲರ ಎಂಬವರು ಐಶ್ವರ್ಯವಂತರು. ಇದೇ ಕಳೆದ ಜುಲಾಯಿ ತಿಂಗಳಲ್ಲಿ ಇವರು ೮೯ ನೇ ವರ್ಷ ಮೆಟ್ಟಿದರು. ಆ ಕಾಲಕ್ಕೆ ಇವರ ವರ್ಧಂತಿ ಮಹೋತ್ಸವವಾಯಿತು. ಇವರಿಗೆ ಮಕ್ಕಳಿದ್ದಾರೆ; ಮೊಮ್ಮಕ್ಕಳಿದ್ದಾರೆ, ಮರಿ ಮಕ್ಕಳಿದ್ದಾರೆ. ಆರೋಗ್ಯವು ಈಗಲೂ ಕೆಟ್ಟಿಲ್ಲ. ರಾಕ್‌ಫೆಲರರವರಿಗೆ ಭೂತಲದೊಳಗಿನ ದೊಡ್ಡ ದೊಡ್ಡವರ ಕಡೆಯಿಂದ ದೀರ್ಘಾಯುಷ್ಯದ ಬಗ್ಗೆ ಅಭಿನಂದನವಾಯಿತು. “ನನ್ನ ಆರೋಗ್ಯವು ಬಹಳ ಚಲೋದಿದೆ; ನನಗೆ ಯಾವಾಗಲೂ ನಿಶ್ಚಿತ ಕಾರ್ಯಕ್ರಮದಂತೆ ಕೆಲಸ ಮಾಡುವ ಪರಿಪಾಠವಿಲ್ಲ. ನಿದ್ದೆ ಬಂದಾಗ ನಿದ್ದೆ ಹೋಗುತ್ತೇನೆ; ಎಚ್ಚತ್ತ ಕೂಡಲೆ ಏಳುತ್ತೇನೆ. ಇದರಿಂದ ನನಗೆ ಸಮಾಧಾನಪ್ರಾಪ್ತಿಯಾಗುತ್ತದೆ.” ಇತ್ಯಾದಿ ಹೇಳಿದರು. ರಾಕ್‌ಫೆಲರರವರಿಗೆ ಡಾಕ್ಟರರು ನೋಡಿ ಅಚ್ಚರಿಗೊಳ್ಳುತ್ತಾರೆ. ಈ ಪ್ರಾಯದಲ್ಲಿ ಇಷ್ಟು ಚಲೋ ಆರೋಗ್ಯವಿದ್ದವರು ಶತಾಯುಗಳಾಗಬಹುದೆಂದು ಅವರ ಅಭಿಪ್ರಾಯ. ಇವರಿಗೆ ಮನೆಯ ಮಕ್ಕಳೊಡನೆ ಆಡುವದೆಂದರೆ, ಹುರುಪು! ಸುದೈವದಿಂದ ಮನೆಯಲ್ಲಿ ಬೇಕಷ್ಟು ಮಕ್ಕಳಿದ್ದಾರೆ. ಮರಿಮಕ್ಕಳಾದ ಮಿಲ್ಟನ್‌ಳ ಮೇಲೆ ರಾಕ್‌ಫೆಲರರವರ ಅಕ್ಕರತೆ ಹೆಚ್ಚು! ಇವರಷ್ಟು ದಾನಧರ್ಮ ಮಾಡಿದವರು ಲೋಕದಲ್ಲಿ ಇನ್ನಾರಿಲ್ಲವಂತೆ. ಈ ತನಕ ಇವರು ೧೧ ಕೋಟಿ ಪವನು ಧರ್ಮ ಮಾಡಿದ್ದಾರೆ. ಅಂದ ಮೇಲೆ ಇವರ ಸಂಪಾದನೆಯ ಕಲ್ಪನೆ ಬರಬಹುದೇ?

⁂

ಪಾಪಕ್ಕೆ ಪ್ರಾಯಶ್ಚಿತ್ತ ಸಿಕ್ಕಿತು.

ಸಂಯುಕ್ತ ಪ್ರಾಂತದ ದಿವಾಣರಾದ ರಾಜಾ ಜಗನ್ನಾಥ ಬಕ್ಷಸಿಂಗರವರು ಮಾಡಿದ ಪಾಪಕ್ಕೆ ಸಂಯುಕ್ತ ಪ್ರಾಂತದ ಕೌನ್ಸಿಲಿನಲ್ಲಿ ಪ್ರಾಯಶ್ಚಿತ್ತ ಕೊಡೋಣಾಯಿತು. ರಾಜಾ ಜಗನ್ನಾಥ ಬಕ್ಷಸಿಂಗರವರು ಸೈಮನ್ ಬಹಿಷ್ಕಾರದ ಪ್ರಮುಖ ಪಾಲಕರು. ಕೌನ್ಸಿಲಿನಲ್ಲಿ ರಾಷ್ಟ್ರೀಯ ಪಕ್ಷದ ಉಪನಾಯಕರಾಗಿ ಲಖನೌದಲ್ಲಿ ಬಹಿಷ್ಕಾರದ ಠರಾವನ್ನು ಸೂಚಿಸಿದ ಮಹಾನುಭಾವರು ಇವರೇ. ಕಳೆದ ಫೆಬ್ರುವರಿ ತಿಂಗಳಲ್ಲಿ ಸೈಮನ್ ಕೂಟವನ್ನು ಬಹಿಷ್ಕರಿಸಬೇಕೆಂಬ ಠರಾವನ್ನು ಕೌನ್ಸಿಲಿನ ಕಡೆಯಿಂದ ಮನ್ನಿಸಿಕೊಳ್ಳಲು ಇವರೇ ಕಾರಣರು. ಮುಂದೆ ಸ್ಥಿತ್ಯಂತರವಾಯಿತು. ಜಗನ್ನಾಥಸಿಂಗರವರಿಗೆ ದಿವಾಣಪದ ಕೊಡೋಣಾಯಿತು. ಈ ತಿಂಗಳಲ್ಲಿ ಸೈಮನ್ ಕೂಟವನ್ನು ಪುರಸ್ಕರಿಸಬೇಕೆಂಬ ಠರಾವು ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಗೆ ಬಂತು. ಜಗನ್ನಾಥ ಸಿಂಗರವರು ಅದಕ್ಕೆ ಬೆಂಬಲ ಕೊಡುತ್ತಾರೆ! ಠರಾವು ಮಂಜೂರಾಯಿತು; ಕೂಡಲೆ ರಾಷ್ಟ್ರೀಯ ಪಕ್ಷದ ನಾಯಕರಾದ ನಾ| ಚಿಂತಾಮಣಿಗಳು ಜಗನ್ನಾಥ ಸಿಂಗರವರ ವರ್ತನವನ್ನು ನಿಷೇಧಿಸುವ ಠರಾವನ್ನು ಸೂಚಿಸಿದರು; ಜಗನ್ನಾಥ ಸಿಂಗರವರು ಹೀಗೆ ಒಂದರ ಮೇಲೊಂದು ಲಾಗು ಹೊಡೆಯುತ್ತಿರುವಾಗ, ಅವನ್ನು ನಿಷೇಧಿಸದಿದ್ದರೆ, ಸಾರ್ವಜನಿಕ ವ್ಯವಹಾರದಲ್ಲಿ ನೀತಿಗೆಟ್ಟವರು ಸೇರಿ ದೇಶಕ್ಕೆ ನಾಚಿಕೆಯಾಗುವದೆಂದರು. ಈ ಸೂಚನೆಯು ಚರ್ಚೆಯಾಯಿತು.; ಮತ ಎಣಿಕೆಯಾಯಿತು; ರಾಜಾ ಜಗನ್ನಾಥ ಸಿಂಗರವರು ಮತಕೊಡಹೋದರು, ಸಭಾಸದರು ಆಕ್ಷೇಪಿಸಿದರು. ಜಗನ್ನಾಥ ಸಿಂಗರ ವರ್ತನದ ಮೇಲೇ ಈ ಠರಾವಿರುವದರಿಂದ, ಅವರಿಗೆ ಮತ ಕೊಡುವ ಅಧಿಕಾರವಿಲ್ಲವಾಗಿ ಸಭಾಸದರ ಆಕ್ಷೇಪ ಬಂತು. ಅಧ್ಯಕ್ಷರು ಈ ವಿಷಯ ನುಡಿದದ್ದೇನಂದರೆ,— “ರಾಜಾ ಜಗನ್ನಾಥ ಸಿಂಗರವರು ದಿವಾಣರಿದ್ದಾಗ್ಯೂ ಕೌನ್ಸಿಲಿನ ಸಭಾಸದರಿದ್ದಾರೆ. ಅವರಿಗೆ ಸಭಾಸದರ ಮತಾಧಿಕಾರವಿದೆ. ಇಂಥ ಪ್ರಸಂಗಗಳಲ್ಲಿ ಅವರಿಗೆ ಮತ ಕೊಡಲು ಅಧಿಕಾರವಿದೆಯೇನೆಂಬ ಕುರಿತು ಕೌನ್ಸಿಲಿನ ಅಧ್ಯಕ್ಷರ ಪರಿಷತ್ತಿನಲ್ಲಿ ಚರ್ಚೆಯಾಗಿ ಅವರಿಗೆ ಅಧಿಕಾರವಿರುವದೆಂದು ನಿರ್ಣಯವಾಗಿದೆ” ಬಳಿಕ ಮತ ಎಣಿಕೆಯಾಯಿತು. ರಾಜಾ ಜಗನ್ನಾಥಸಿಂಗರವರು ಮತ ಕೊಟ್ಟರು; ತಮಗೇ ಮತ ಕೊಟ್ಟರು. ಮತ ಎಣಿಸಲು, ೫೭ ಅನುಕೂಲ, ೫೭ ಪ್ರತಿಕೂಲ ಮತಗಳು ಬಿದ್ದವು. ಅಧ್ಯಕ್ಷರ ಕಡೆಗೆ ಎಲ್ಲರದೂ ಲಕ್ಷ್ಯ; ದಿವಾಣರ ಬದಿಗೆ ಅಧ್ಯಕ್ಷರು ಮತಕೊಡುವರೆಂದು ಅನೇಕರು ಎಣಿಸಿದ್ದರು. ತಮ್ಮ ಮತ ಕೊಡುವ ಮುಂಚೆ ಅಧ್ಯಕ್ಷರು ಪ್ರಸ್ತಾಪಿಸಿದ್ದೇನಂದರೆ.— “ದಿವಾಣರು ಮತಕೊಡದಿದ್ದರೆ, ನಾ| ಚಿಂತಾಮಣಿಗಳ ಸೂಚನೆಯು ಮಂಜೂರಾಗುತ್ತಿತ್ತು. ಇದರ ಮೇಲಿಂದ ಕೌನ್ಸಿಲಿನ ಅಭಿಪ್ರಾಯವು ರಾಜಾ ಜಗನ್ನಾಥರಿಗೆ ಅನುಕೂಲವಿಲ್ಲ. ನಾನು ಕೌನ್ಸಿಲಿನ ಅಭಿಪ್ರಾಯವನ್ನು ಸ್ಪಷ್ಟಗೊಳಿಸುವದಕ್ಕಾಗಿ ನನ್ನ ಮತವನ್ನು ನಾ| ಚಿಂತಾಮಣಿಯವರ ಸೂಚನೆಗೆ ಕೊಡುತ್ತೇನೆ.” ಹೀಗೆ ಹೇಳಿ, ಅಧ್ಯಕ್ಷರು ರಾಜಾ ಜಗನ್ನಾಥರವರ ಮೇಲಿನ ನಿಷೇಧವನ್ನು

ಕೌನ್ಸಿಲಿನಲ್ಲಿ ಮುಚ್ಚಿಸಿಕೊಂಡರು. ಇಷ್ಟಾದರೂ ಅವರಿಗೆ ಪತಿತ ಮಾಡಬಾರದೆಂದು ಸರಕಾರವು ಬಹು ಪ್ರಯತ್ನ ಮಾಡಿತು, ಆದರೆ, ಅದೇನು ಸಾಧ್ಯವಾಗಲಿಲ್ಲ. ಮಾರನೇ ದಿನ ದಿವಾಣರ ಆಸನದಲ್ಲಿ ರಾಜಾ ಜಗನ್ನಾಥರವರನ್ನು ನೋಡಿದ ಕೂಡಲೆ ದಿವಾಣರನ್ನು ಕಾರವು ಪದಭ್ರಷ್ಟ ಮಾಡುತ್ತದೋ, ಇಲ್ಲವೋ ಎಂದು ಬೆಂಚಾವಣಿಗಳು ಪ್ರಶ್ನೆ ಮಾಡಿದರು. "ದಿವಾಣರನ್ನು ತೆಗೆದು ಹಾಕುವ ಅಥವಾ ಇಡುವ ಕೆಲಸವು ಸರಕಾರದ್ದಲ್ಲ; ಪ್ರಾಂತಾಧಿಪರದು. ಅವರು ಏನು ಮಾಡಬಯಸುತ್ತಾರೋ ನಮಗೆ ಗೊತ್ತಿಲ್ಲ." ಹೀಗೆ ಗಾಳಿ ಮಾತಿನ ಉತ್ತರ ಕೊಟ್ಟು ಸರಕಾರವು ತಪ್ಪಿಸಿಕೊಳ್ಳಬಯಸಿತು. ಸಭಾಸದರು ಆಗ್ರಹ ಹಿಡಿದರು. ಜವಾಬದಾರ ಸ್ವರಾಜ್ಯದ ಡೆಂಬು ಪೂರಾ ಹೊರಬಿದ್ದು ಕಪಟ ನಾಟಕವೆಲ್ಲ ಬೈಲಿಗೆ ಬೀಳಬಹುದೆಂದು ಆಲೋಚಿಸಿ, ಕೊನೆಗೆ ರಾಜಾ ಜಗನ್ನಾಥರವರಿಗೆ ಪದಭ್ರಷ್ಟ ಮಾಡಿದ ಇತ್ಯರ್ಥವು ಕೌನ್ಸಿಲಿನಲ್ಲಿ ಹೇಳಲಾಯಿತು. ಹೀಗೆ ರಾಜಾ ಜಗನ್ನಾಥ ಬಕುಶಸಿಂಗರವರಿಗೆ ಪಾಪಕ್ಕೆ ಪ್ರಾಯಶ್ಚಿತ್ತ ಶಿಕ್ಷೆತು.

* * *

ಗೋಧ್ರಾದೊಳಗೆ ಮುಸಲ್ಮಾನರ ದೊಂಬಿ.

ಕಳೆದ ಮಂಗಳವಾರ ತಾ. ೧೬ನೇಗೆ ಇಲ್ಲಿಯ ಜೈನರು ಪರ್ಯೂಷಣದ ಮೆರವಣಿಗೆ ತೆಗೆದರು. ಈ ಮೆರವಣಿಗೆಯಲ್ಲಿ ಸುಮಾರು ೫೦೦ ಜನರಿದ್ದರು. ೧೫ ದಿವಸಗಳ ತನಕ ಉಪೋಷಣ ಮಾಡಿದ ೨೫-೩೦ ಮಂದಿ ಪ್ರತಿಷ್ಠ ಜೈನರೂ, ಇತರ ಸ್ತ್ರೀ-ಪುರುಷರೂ ಮೆರವಣಿಗೆ ತೆಗೆದುಕೊಂಡು ಹೊರಟಿದ್ದರು. ಮುಸಲ್ಮಾನರಿಗೆ ಕೆಣಕಬಾರದೆಂದು ಜೈನರು ಅವರ ಮಸೀದಿಯ ಮುಂದೆ ವಾದ್ಯಗಳನ್ನು ಸಹ ಬಾರಿಸಲಿಲ್ಲ. ದಂಗೆ ಮಾಡುವದಕ್ಕಾಗಿ ಮುಂಚಿನಿಂದಲೇ ಮುಸಲ್ಮಾನರು ಹೊಂಚುಹಾಕಿದ್ದರು. ಮುಂಜಾವಿಗೆ ಮಾರ್ಗದಲ್ಲೆಲ್ಲ ಗೋವುಗಳಿಗೆ ಕಟ್ಟಿದ್ದರು. ಗೋವುಗಳ ಮೇಲೆ "ಶಾಫರಕೆ ಮಾ" "ಗಾಯಿಕೆ ಕುರ್ಬಾನಿ" ಹೀಗೆ ಶಬ್ದಗಳನ್ನು ಬರೆದಿದ್ದರು. ಜೈನರು ನೆರ ಕೂಡದ ಬಳಿಕ, ಇವರು ಜೈನರ ಮೇಲೆ ಕಲ್ಲುಗಳನ್ನು ಎಸೆದರು; ಗಡಿಬಿಡಿಯಾಯಿತು. ಮನೆಗುಳ್ಳದ್ದ ಗಂಡಸರು ಓಡಿಬಂದರು. ಮುಸಲ್ಮಾನರು ಒಳಸೇರಿ ಹೆಂಗಸರಿಗೂ, ಮಕ್ಕಳಿಗೂ ಬಡಿದರು. ಶ್ರೀ|| ವಾಮನರಾವ ಮುಕಾದಮ, ಪುರುಷೋತ್ತಮದಾಸ ಶಹಾ ವಕೀಲ, ಚುನಿಲಾಲ ಬಾಪುಜಿ, ಚಂದುಲಾಲ ದ್ವಾರಕದಾಸ ಇವರು ಡಿ|| ಮೆಜಿಸ್ಟ್ರೇಟರಿಗೆ ಈ ಸುದ್ದಿ ತಿಳಿಸಹೋದರು. ಇವರು ಹೋಗುವಾಗ ಸುಮಾರು ೨೦೦-೩೦೦ ಮುಸಲ್ಮಾನರು ಇವರ ಮೈಮೇಲೆ ಬೀಳಹೋದರು. "ನಾವು ನಿರಾಯುಧರು; ನಮ್ಮ ಮೇಲೆ ನೀವು ಬಂದು ಬೀಳುವದು ನಿಮ್ಮ ಹೇಡಿತನವು; ನಿಮಗೆ ನಾವು ಹೆದರಿ ಓಡಿಹೋಗುವದಿಲ್ಲ. ಹಿಂದು ಧರ್ಮಕ್ಕಾಗಿ ದೇಹಗಳನ್ನು ಸಮರ್ಪಿಸಲು ನಾವು ತಯಾರಿದ್ದೇವೆ," ಎಂದು ಶ್ರೀ|| ಪುರುಷೋತ್ತಮದಾಸ ಶಹಾರವರು ಜಾಗ್ರತೆ ಕೊಟ್ಟಾಗ್ಯೂ, ನಾಲ್ವರಿಗೂ ಮುಸಲ್ಮಾನರು ದೊಣ್ಣೆಯಿಂದ ಹೊಡೆದರು. ಎಲ್ಲರೂ ನಿಶ್ಚೇಷ್ಟರಾದರು. ಶ್ರೀ|| ಶಹಾರವರು ತೀರಿಕೊಂಡರು, ಉಳಿದವರು ಉಪಚಾರ ಹೊಂದುತ್ತಲಿದ್ದಾರೆ. ಸರಕಾರದ ಕಡೆ ಈ ವಿಷಯ ಕೇಳಿದರೆ, ಅವರಿಗೆ ಇನ್ನೂ ಈ ಸುದ್ದಿ ತಲ್ಪಲಿಲ್ಲವಂತೆ! ಮುಸಲ್ಮಾನರು ಬಹು ದಿನಗಳಿಂದ ಹಿಂದುಗಳ ಮೇಲೆ ಸಾಗಿಹೋಗಲು ತಯಾರಿ ನಡಿಸಿದ್ದರಾಗಿ ಪುಣೆ-ಕೇಸರಿಯ ಸುದ್ದಿಗಾರರು ಬರೆಯುತ್ತಾರೆ. ರಾ|| ಪುರುಷೋತ್ತಮದಾಸ ಶಹಾರವರು ಗೋಧ್ರಾದೊಳಗಿನ ದೊಡ್ಡ ವಕೀಲರು; ದೇಶಕಾರ್ಯಕರ್ತರಾಗಿದ್ದರು

ದಾವಣಗೆರೆಯಲ್ಲಿ ಮುಸಲ್ಮಾನರ ಧೊಂಬಿ.

ಮುಸಲ್ಮಾನರ ಅತ್ಯಾಚಾರ; ಹಿಂದುಗಳ ಸೈರಣೆ-ಬಹಿಷ್ಕಾರ.

ಮೈಸೂರ ಸಂಸ್ಥಾನದ ದಾವಣಗೆರೆಯಲ್ಲಿ ಗಣಪತಿಯ ಉತ್ಸವದ ಸಮಯ ಮುಸಲ್ಮಾನರು ಪುಂಡಾಟಿಕೆಯಿಂದ ಅನರ್ಥ ಮಾಡಿದರು. ದಾವಣಗೆರೆಯ ಮಿಡ್ಲ ಸ್ಕೂಲಿನ ವಿದ್ಯಾರ್ಥಿಗಳು ಗಣಪತಿಯನ್ನು ಪೂಜಿಸಿದ್ದರು. ಆ ಗಣಪತಿ ವಿಸರ್ಜನದ ಉತ್ಸವವು ೧೪ನೇ ತಾರೀಖಿಗೆ ಜರುಗಿತು. ಆ ಸಮಯ ದೊಂಬಿಯಾಗದಂತೆ ಸಂರಕ್ಷಣ ಮಾಡಲು ಫೌಜದಾರರಾದ ಮಿ|| ಪುಟ್ಟಸಿಂಗರವರು ಉತ್ಸವದಲ್ಲಿ ಹಾಜರಿದ್ದರು. ಮೆರವಣಿಗೆಯು ದೊಡ್ಡ ಪೇಟೆಯಲ್ಲಿ ಬಂತು. ದೊಡ್ಡ ಪೇಟೆಯು ಒಂದು ಬದಿಗೆ ಸಣ್ಣ ಅಡ್ಡ ಓಣಿ ಇದೆ. ಆ ಓಣಿಗೆ ಮಸೀದಿಯ ಹೆಬ್ಬಾಗಿಲು ಉಂಟು. ಫೌಜದಾರರು ತಾವಾಗಿಯೇ ಇಲ್ಲಿ ವಾದ್ಯ ನಿಲ್ಲಿಸಬೇಕೆಂದರು. ಬಾಲಕರೊಪ್ಪಲಿಲ್ಲ. ವಾದ್ಯ ನಿಲ್ಲಿಸುವ ಪರಿಪಾಠವಿಲ್ಲವಾಗಿ ಜನರು ಹೇಳಿದರು. ಆದರೂ, ಫೌಜದಾರರು ಮುಸಲ್ಮಾನರನ್ನು ಕರೆದು ಅವರ ಕಡೆಯಿಂದ ವಾದ್ಯ ನಿಲ್ಲಿಸಲು ಹೇಳಿಸಿದರು. ಬಹಳ ವಾದವಾಗಿ ವಾದ್ಯ ನಿಲ್ಲಿಸೋಣಾಯಿತು. ಗಣಪತಿಯನ್ನು ವಿಸರ್ಜಿಸಿ ಮೆರವಣಿಗೆಯು ತಿರುಗುವಾಗಲೂ ಇದೇ ದಾರಿಯಿಂದ ಬರಬೇಕಾಗುತ್ತದೆ. ಬಾಲಕರು ತಿರುಗುವಾಗ ವಾದ್ಯ ನಿಲ್ಲಿಸಲೊಪ್ಪಲಿಲ್ಲ. ಮುಸಲ್ಮಾನ ಪುಂಡರು ಅವರ ಮೇಲೆ ಕಣ್ಣಿಟ್ಟರು. ಇನ್ನೆರಡು ದಿನಗಳಲ್ಲಿ ಅಂದರೆ ಶುಕ್ರವಾರ ತಾರೀಖು ೧೯ನೇಗೆ ಚೌಕಿ ಪೇಟೆಯಲ್ಲಿರುವ ಹಳ್ಳಿ ಶಾಲೆಯ ಮಕ್ಕಳು ತಮ್ಮ ಗಣಪತಿಯನ್ನು ವಿಸರ್ಜಿಸುವ ಉತ್ಸವ ಹೊರಡಿಸಿದರು. ಶ್ರೀ ಬಕ್ಕೇಶ್ವರ ದೇವಸ್ಥಾನದಿಂದ ಪಲ್ಲಕ್ಕಿ ತಂದರು. ಅದರೊಳಗೆ ಗಣಪತಿ ಮೂರ್ತಿಯನ್ನಿಟ್ಟರು. ಇದುರಿಗೆ ಶ್ರೀ ಮನ್ಮಹಾರಾಜರವರ ಭಾವಚಿತ್ರವನ್ನಿಟ್ಟರು. ಮುದದಿಂದ ಮೆರವಣಿಗೆಯನ್ನು ಹೊರಡಿಸಿದರು. ವಾದ್ಯ ಘೋಷ ನಡೆದಿತ್ತು. ಉತ್ಸವವು ದೊಡ್ಡಪೇಟೆಯ ಮಸೀದಿಯ ಹತ್ತಿರ ಬಂತು. ಮುಸಲ್ಮಾನರು ತಡೆದರು. ಅಂಗಡಿಗಳಲ್ಲಿದ್ದ ಮುಸಲ್ಮಾನರು ತಂಡುಗಟ್ಟಿ ಮಸೀದಿಯಲ್ಲಿ ಮೊದಲೇ ಬಂದು ಕೂತುಕೊಂಡಿದ್ದರು. ಗಾಡಿ ತುಂಬ ಕಲ್ಲುಗಳೂ, ದೊಣ್ಣೆಗಳೂ, ಹಳೇ ಜೋಡುಗಳೂ, ಕತ್ತಿ, ಬರ್ಚಿ, ತುಬಾಕಿಗಳೂ ಸಂಗ್ರಹಿಸೋಣಾಗಿದ್ದವು. ಉತ್ಸವಕ್ಕೆ ತಡೆದಿದ್ದ ಸಂಗತಿಯನ್ನು ಹುಡುಗರು ಪೋಲೀಸರಿಗೆ ತಿಳಿಸಿದರು. ಪೋಲೀಸರು ಬರೀ ಕೈ ಹಿಡಿದು ಮಸೀದಿಯ ಕಡೆ ಬಂದರು. ಮಾಮೂಲಿನ ವಿಚಾರ ಮಾಡಿದರು. ವಾದ್ಯ ನಡಿಸುವ ಮಾಮೂಲ ಇಲ್ಲವಾಗಿ ವಿಚಾರವಂತ ಪ್ರಮುಖರೇ ಒಪ್ಪಿದರು. ಅಷ್ಟರಲ್ಲಿ ಪೋಲೀಸ ಸುಪರಿಂಟೆಂಡೆಂಟರಾದ ಮಿ|| ಶೇಷಾದ್ರಿಯವರೂ, ಅಸಿ|| ಪೋ|| ಸುಪರಿಂಟೆಂಡೆಂಟರಾದ ಮಿ|| ವೆಂಕಟಾಚಾರ್ಯರೂ ಬಂದರು. ಅವರದೂ ಚೌಕಶಿ ನಡೆಯಿತು. ಅವರ ಚೌಕಶಿಯಲ್ಲಿಯೂ ಮಾಮೂಲ ಇಲ್ಲವಾಗಿ ಹೊರಬಿತ್ತು. ಆದರೂ ಅವರು ಉತ್ಸವಕ್ಕೆ ಹೋಗಗೊಡಲಿಲ್ಲ. ಹಿಂದುಗಳಿಗೇ ಸುಮ್ಮನಿರಲು ಅವರು ಹೇಳುತ್ತ ಉಳಿದರು. ಪೋಲೀಸರ ದುರ್ಬಲತನ ನೋಡಿ ಮುಸಲ್ಮಾನರು ಉಬ್ಬಿದರು. ಕೆಲವು ಸಮಯದಲ್ಲಿ ಡಿ|| ಮೆಜಿಸ್ಟ್ರೇಟರಾದ ಮಿ|| ಕೃಷ್ಣಸ್ವಾಮಿ ಅಯ್ಯಂಗಾರರೂ, ಸಬ್ ಡಿ|| ಆಫೀಸರರಾದ ಮಿ|| ಅಬ್ದುಲ್ ಖಾಲಿಕರವರೂ ಬಂದರು. ಇವರೂ ಹಿಂದುಗಳಿಗೇ ಸುಮ್ಮನಿರಲು ಹೇಳುತ್ತಿದ್ದರು. ಹಿಂದುಗಳು ಮುಂಚಿನಿಂದಲೇ ಸುಮ್ಮಗೆ ಉಳಿದಿದ್ದರು. ಹಿಂದುಗಳ ಮೈಮೇಲೆ ಮುಸಲ್ಮಾನ ಪುಂಡರು ಹಾರಿ ಬರುತ್ತಿದ್ದರು. ಪೋಲೀಸರು ಅವರಿಗೆ ತಡೆಯುತ್ತಿದ್ದರು. ಕೆಲ ಮುಸಲ್ಮಾನರು ಮಸೀದಿಯ ಗೋಡೆಯ ಮೇಲೆ ನಿಂತು ಹಳೇ ಜೋಡು-ದೊಣ್ಣೆಗಳನ್ನು ಪ್ರಹರಿಸುತ್ತಿದ್ದರು. ಡಿ|| ಮೆಜಿಸ್ಟ್ರೇಟರಿಗೆ ಸಹ ಬಿಗಿ ಹಿಡಿಯುವ ಶಕ್ತಿ ಇಲ್ಲದ್ದು ನೋಡಿ ಮುಸಲ್ಮಾನರಿಗೆ ಹುಕ್ಕೇರಿ ಬಂತು. ಪಲ್ಲಕ್ಕಿ ದೂರ ಇತ್ತು. ಮುಸಲ್ಮಾನರು ಕಲ್ಲು-ಹಳೇ ಜೋಡುಗಳ ಮಳೆಗರೆಯಲಾರಂಭಿಸಿದರು. ದೊಣ್ಣೆಗಳನ್ನೆಸೆದರು. ಮಸೀದಿಯ ಇದಿರಿನ ಹಂಚಿನ ಮನೆಗಳನ್ನು ಹತ್ತಿ ಹೋಗಿ ಬುಟ್ಟಿ ತುಂಬ ಕಲ್ಲುಗಳನ್ನು ಕೆಳಕ್ಕೆ ಒಗೆಯುತ್ತಿದ್ದರು. ಮುಸಲ್ಮಾನ ಹೆಂಗಸರು ಬುರುಕಿಯನ್ನು ತೆಗೆದು ಕಲ್ಲು ತುಂಬಿ ಬುಟ್ಟಿ ಕೊಡುತ್ತಿದ್ದರು. ಈ ಪ್ರಕಾರದಿಂದ ಹಿಂದುಗಳಿಗೂ, ಪೋಲಿಸರಿಗೂ ಘಾಯಗಳಾದವು; ಹಿಂದುಗಳು ಸ್ವಲ್ಪ ಹಿಂಜರಿದರು. ಕ್ಷಣಾರ್ಧದಲ್ಲಿ ಮುಸಲ್ಮಾನರಿಗೆ ಅತ್ಯಾಚಾರದ ಭೂತಸಂಚಾರವಾಯಿತು. ಸೀಮಣೆ ಎಣ್ಣೆ, ಪೆಟ್ರೋಲ್‌ಗಳನ್ನು ತಂದು ಪಲ್ಲಕ್ಕಿಯ ಮೇಲೆ ಸುರಿದರು; ಬೆಂಕಿ ಹಚ್ಚಿದರು. ಬೆಳ್ಳಿಯ ಪಲ್ಲಕ್ಕಿಯಾಗಿತ್ತು. ಗಣಪತಿಯ ಮೂರುತಿ, ಶ್ರೀಮನ್ಮಹಾರಾಜರವರ ಭಾವಚಿತ್ರಗಳೆಲ್ಲವೂ ಹೋಳಿಯಾದವು. ಮುಸಲ್ಮಾನರು "ದೀನ್ ದೀನ್" ಎಂದು ಕೂಗುತ್ತ ಕಲ್ಲುಗಳನ್ನು ಒಗೆಯುತ್ತಿದ್ದರು; ಜೋಡುಗಳನ್ನು ಎಸೆಯುತ್ತಿದ್ದರು; ದೊಣ್ಣೆಗಳಿಂದ ಹೊಡೆಯುತ್ತಿದ್ದರು. ಚೂರಿಗಳಿಂದ ತಿವಿಯುತ್ತಿದ್ದರು; ಜನರ ರಕ್ಷಣೆಗಾಗಿ ಬಂದ ಮುಸಲ್ಮಾನ ಪೋಲೀಸರು ಸಹ ಈ ಅತ್ಯಾಚಾರಗಳನ್ನಾಚರಿಸುತ್ತಿದ್ದರು. ಡಿ|| ಮೆಜಿಸ್ಟ್ರೇಟರಿದ್ದರು; ಸುಪರಿಂಟೆಂಡೆಂಟರಿದ್ದರು; ಅವರು ಮಿಕಿ ಮಿಕಿ ನೋಡುತ್ತಿದ್ದರೇ ಹೊರತು ಏನೂ ಮಾಡಲಿಲ್ಲ. ಯಾರಿಗೂ ಸೆರೆಹಿಡಿಯಲಿಲ್ಲ. ಗುಂಡು ಹಾರಿಸಲು ಅಪ್ಪಣೆ ಕೊಡಲಿಲ್ಲ; ಮಸೀದಿಯ ಒಳಕ್ಕೆ ಹೋಗಿ ನೋಡಲೂ ಇಲ್ಲ. ಜೊತೆಗೆ ಪೋಲೀಸರನ್ನು ಕರಕೊಂಡು ಸ್ವಸ್ಥಾನಕ್ಕೆ ತೆರಳಿದರು. ಆ ಮೇಲೆ ಪುಂಡರದೇ ರಾಜ್ಯ. ಪುಂಡರು ಅಂಗಡಿಗಳನ್ನು ನುಗ್ಗಿದರು; ಸುಲಿಯಲೆಳಸಿದರು; ಅಂಗಡಿಗಳಿಗೆ ಬೆಂಕಿ ಹಚ್ಚುತ್ತೇವೆಂದೂ ಗದ್ದರಿಸಿದರು. ಅಂಗಡಿಗಳೆಲ್ಲ ಪಾಲಾಗಿವೆ. ಹಿಂದು ಅಂಗಡಿಗೆ ಬೆಂಕಿ ಹತ್ತಿತೆಂದರೆ ಇಡೀ ಪೇಟೆಯೇ ಸುಟ್ಟು ಬೂದಿ; ದಾವಣಗೆರೆಯೆಂಬ ಹೆಸರೇ ನಾಶ! ಈ ಸ್ಥಿತಿ ನೋಡಿ ಹಿಂದುಗಳಿಗೆ ವೀರಶ್ರೀ ಬಂತು. ರೇಗಿ ಕೆಲವು ಹಿಂದುಗಳು ತಂಬಾಕುಪೇಟೆ, ಮಂಡಿಪೇಟೆಗಳಲ್ಲಿರುವ ಮುಸಲ್ಮಾನ ಪುಂಡರ ೮-೧೦ ಬೀಡಿ ಅಂಗಡಿಗಳನ್ನು ನುಗ್ಗಿ ಸಾಮಾನನ್ನು ರಾಸ್ತೆಯ ಮೇಲೆ ತಂದು ಸುಟ್ಟುಬಿಟ್ಟರು. ಈ ಅವತಾರ ನೋಡಿ

ಮುಸಲ್ಮಾನರು ಹಿಂಜರಿದರು. ಹೀಗೆ ಶುಕ್ರವಾರ ಕಳೆಯಿತು. ಶನಿವಾರದಿಂದ ದಾವಣಗೆರೆ ಊರಲ್ಲೆಲ್ಲ ಹರತಾಳ! ದಾವಣಗೆರೆಯಲ್ಲಿ ಹಿಂದುಗಳ ಪ್ರಾಬಲ್ಯ! ಪೇಟೆ ಮುಚ್ಚಿಕೊಂಡು ಜನರೆಲ್ಲರೂ ದಿಕ್ಕು ಕಾಣದೆ ರಾಜಮಾರ್ಗದಮೇಲೆ ಅಲೆದಾಡುತ್ತಿದ್ದರು. ಮುಸಲ್ಮಾನರು ಪರಊರಿಂದ ತಂಡುಗಟ್ಟಿಕೊಂಡು ದಾವಣಗೆರೆಗೆ ಬಂದರು. ಸರಕಾರಿ ಅಧಿಕಾರಿಗಳೆಲ್ಲ ದಿಗಿಲು ಬಿದ್ದಿದ್ದರು. ಏನೂ ಮಾಡದೆ ಕೈಕಾಲು ಮುದುಗಿಸಿಕೊಂಡು ಕೂತಿದ್ದರು. ಹಿಂದುಗಳಿಗೆ ಈ ಸಮಯ ಆತ್ಮ ಸಾಕ್ಷಾತ್ಕಾರವಾಯಿತು. ಬಹಿಷ್ಕಾರದ ನಿರ್ಧಾರ ಮಾಡಿದರು. ತಮ್ಮ ಹಕ್ಕು ಪ್ರಸ್ಥಾಪನೆಯಾಗುವ ವರೆಗೆ ಪೇಟೆ ತೆರೆಯಲಿಕ್ಕಿಲ್ಲೆಂಬ ಪ್ರತಿಜ್ಞೆ ಮಾಡಿದರು. ಹಿಂದು ಸರೆ ಉಪ್ಪಿಲ್ಲ; ಕಪ್ ಕಾಫಿ ಇಲ್ಲ. ಪರ ಊರಿಂದ ಬಂದ ಮಾಲು ಮಾರುವವರಿಲ್ಲ; ಕೊಂಡುಕೊಳ್ಳುವವರಿಲ್ಲ. ದಿನಾ ಬರುತ್ತಿದ್ದ ಮಾಲೆಲ್ಲ ರಾಶಿಯಾಗಿ ಬಿದ್ದಿದೆ. ಸರಕಾರವೂ ಹೆದರಿತು. ಹಿಂದುಗಳೂ ರೇಗಿಗೆದ್ದಿದ್ದರು ಮುಸಲ್ಮಾನರೂ ರೇಗಿಗೆದ್ದಿದ್ದರು. ಹಿಂದು ಧರ್ಮದ ಮೇಲೆಯೇ ಹಿಂದು ಆಘಾತ ಬಿದ್ದಂತಾಯಿತು. ಗಣಪತಿ ಮೂರ್ತಿ ಇಟ್ಟು ಹೋದ್ದರಿಂದ ಹಿಂದು ಧರ್ಮಕ್ಕೆ ಅಪಮಾನವಾಯಿತೆಂದು ಧಾರ್ಮಿಕ ಹಿಂದುಗಳ ಭಾವನೆಯಾಗಿ ಗಣಪತಿ ಮೂರ್ತಿಯ ಉತ್ಸವವಾಗುವ ವರೆಗೆ ಅನ್ನಕ್ಕೆ ಮುಟ್ಟಲಿಕ್ಕಿಲ್ಲವಾಗಿ ಭೀಷನಾದುಯು ಹಿಂದುಗಳು ಆಣೆ ಮಾಡಿದರು ಶ್ರೀ| ಇ| ಜನರಲ್‌ರವರು ಬಂದರು. ಮುಂದೇನು ಮಾಡಬೇಕೆಂದು ಅವರಿಗೆ ತೋಚಲಿಲ್ಲ. ಮುಸಲ್ಮಾನರಿಗೂ ವಿಚಾರ ಬರಹತ್ತಿತು. ಹಿಂದುಗಳು ಮುಸಲ್ಮಾನರಿಗೆ ಬಹಿಷ್ಕಾರ ಹಾಕಿದರೆ, ಮುಸಲ್ಮಾನರು ದಾವಣಗೆರೆಯೊಳಗಿಂದ ಗಂಟು ಮೂಟೆ ಕಟ್ಟಿಕೊಂಡು ಹೋಗಬೇಕಾದದ್ದೇ! ಬಹುತರವಾಗಿ ಮುಸಲ್ಮಾನರು ಹಿಂದುಗಳ ನೌಕರಿಗಿದ್ದರು. ಅದರಿಂದ ಮುಸಲ್ಮಾನರ ಅತ್ಯಾಚಾರಕ್ಕಿಂತ ಹಿಂದುಗಳ ಬಹಿಷ್ಕಾರವೇ ಮೇಲಾಯಿತು. ಮುಸಲ್ಮಾನ ಹಿರಿಯರು ಎಚ್ಚತ್ತರು. ಧರ್ಮ ಬಾಂಧವರಿಗೆ ನಾನಾ ಪ್ರಕಾರದಿಂದ ಬುದ್ಧಿ ಹೇಳಿ ಅವರಿಗೆ ಸರಿ ದಾರಿಗೆ ತಂದರು. ಮಸೀದಿಯ ಮುಂದೆ ವಾದ್ಯ ಬಾರಿಸಿಕೊಂಡು ಹಿಂದುಗಳು ಹೋಗುತ್ತಿರುವಾಗ ಅದಕ್ಕೆ ವಿರೋಧ ಮಾಡಬಾರದೆಂದರು. ಹಿಂದುಗಳೂ ಸಂಧಾನ ಮಾಡಲು ತಯಾರಿದ್ದರು. ಹಿಂದಿನ-ಮುಂದಿನ ವಿಚಾರವಿಲ್ಲದೆ ಅಜ್ಞ ಮುಸಲ್ಮಾನರು ಮಾಡಿದ ಅತ್ಯಾಚಾರದಿಂದ ಇಡೀ ಮುಸಲ್ಮಾನ ಸಮಾಜದ ಮೇಲೆ ಸೇಡು ತೀರಿಸಲು ಅವರು ಹವಣಿಸುತ್ತಿರಲಿಲ್ಲ. ಶ್ರೀ ಗಣೇಶನ ಉತ್ಸವವು ರೀತಿಯಂತೆ ಸಾಂಗವಾಗಬೇಕೆಂದು ಮಾತ್ರ ಅವರ ಆಗ್ರಹವಿತ್ತು. ಹಿಂದು ಮುಸಲ್ಮಾನ ಪ್ರಮುಖರ ಸಭೆಯಾಯಿತು. ಇನ್ಸಪೆಕ್ಟರ ಜನರಲ್‌ರವರು ಅಧ್ಯಕ್ಷರಾಗಿದ್ದರು. ಮುಸಲ್ಮಾನರ ಪರವಾಗಿ ಮಿ| ಅಜೀಜ ಸಾಹೇಬ ಇಜಾರದಾರರವರು ಮುಸಲ್ಮಾನ ಪುಂಡರ ಪುಂಡಾಟಿಕೆಯಿಂದ ತಮಗೂ, ಸ್ವಸಮಾಜಕ್ಕೂ ಪಶ್ಚಾತ್ತಾಪವಾಗಿರುವದಾಗಿ ಹೇಳಿದರು. ಹಿಂದುಗಳ ಧರ್ಮಭಾವನೆಗಾದ ನೋವನ್ನು ಗ್ರಹಿಸಿ ಹಿಂದುಗಳು ಔದಾರ್ಯವಂತರಾಗಿ ಕ್ಷಮಿಸಬೇಕೆಂದರು. ಮಸೀದಿಯ ಮುಂದೆ ಹಿಂದುಗಳು ಎಂದಿನಂತೆ ಮುಂದೆಯೂ ವಾದ್ಯ ಬಾರಿಸುತ್ತ ತಮ್ಮ ಉತ್ಸವಗಳನ್ನೆಲ್ಲ ಸುಖವಾಗಿ ನಡಿಸಬಹುದೆಂದೂ, ಮುಸಲ್ಮಾನರು ವಿರೋಧಿಸಲಿಕ್ಕಿಲ್ಲೆಂದೂ ಹೇಳಿದರು. ೨೩| ಊರೆಕೊಂಡ ಚನ್ನಬಸಪ್ಪನವರು ಹಿಂದುಗಳ ಕಡೆಯಿಂದ ಸಮಾಧಾನಪಟ್ಟರು. ಮಾರನೇ ದಿನ ಸೋಮವಾರಕ್ಕೆ ಗಣಪತಿಯ ಉತ್ಸವಗಳಾದವು. ೧೫-೨೦ ಸಾವಿರ ಜನಸಮುದಾಯ ಸೇರಿತ್ತು. ತಾಳ, ಮೃದಂಗ, ಡೇಂಡ, ಹಲಿಗೆ, ಡೊಳ್ಳು ಮುಂತಾದ ವಿಧ ವಿಧದ ವಾದ್ಯಗಳಿಂದ ಭೂಮ್ಯಾಕಾಶವೆಲ್ಲ ತುಂಬಿ ಹೋಗಿತ್ತು. ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಜಯದೇವ ಮುರುಘಾರಾಜೇಂದ್ರ ಮಹಾಸ್ವಾಮಿಗಳವರು ಪೀಠದ ಎರಡು ಆನೆಗಳನ್ನು ಉತ್ಸವಕ್ಕಾಗಿ ಕಳುಹಿದ್ದರು. ಉತ್ಸವ ಸಾಗುತ್ತಿದ್ದ ರಾಜಮಾರ್ಗಗಳೆಲ್ಲ ಜನರಿಂದ ಕಿಕ್ಕಿರಿದು ಹೋಗಿದ್ದವು. ಮಂಡಿ ಪೇಟೆಯಿಂದ ತಂಬಾಕು ಪೇಟೆಗೆ ಬಂದು ಉತ್ಸವವು ದೊಡ್ಡ ಪೇಟೆಗೆ ಸಾಗಿತು. ಮಸೀದಿಯ ಮುಂದೆ ಮುಸಲ್ಮಾನರು ಬಂದು ಶ್ರೀ ವಿನಾಯಕ ಮೂರ್ತಿಗೂ, ಶ್ರೀಮನ್ಮಹಾರಾಜರವರ ಭಾವಚಿತ್ರಕ್ಕೂ ಹೂವಿನಹಾರಗಳನ್ನರ್ಪಿಸಿ ಬಂಧುಭಾವವನ್ನು ವ್ಯಕ್ತಪಡಿಸಿದರು. ಆಗ ಜನರಿಗಾದ ಆನಂದೋದ್ರೇಕವನ್ನು ಬಣ್ಣಿಸಬರದು. ಉತ್ಸವವು ಕೊಂಡಕ್ಕೆ ತಲ್ಪಿತು. ಗಣಪತಿ ವಿಸರ್ಜನವಾಯಿತು. ಜನರು ದುಗ್ಗಮ್ಮನ ಗುಡಿಗೆ ಸೇರಿ ಗುಡಿಯ ಪಟಾಂಗಣದಲ್ಲಿ ಸಭೆ ಸೇರಿಸಿದರು. ಹುಬ್ಬಳ್ಳಿಯ 'ಲೋಕಮತ' ಪತ್ರಿಕೆಯ ಸಂಪಾದಕರಾದ ಶ್ರೀ| ವಿ. ಬಿ. ಪುರಾಣಿಕರವರು ನಾಲ್ಕು ಮಾತಾಡಿದರು. ಮುಸಲ್ಮಾನ ಪುಂಡರ ಅತ್ಯಾಚಾರಕ್ಕೆ ಪ್ರತಿಯಾಗಿ ಹಿಂದುಗಳು ಅತ್ಯಾಚಾರ ಮಾಡದಿದ್ದ ಬಗ್ಗೆ ಹಿಂದು ಜನಸಾಮಾನ್ಯರನ್ನು ಅವರು ಅಭಿನಂದಿಸಿದರು; ಹಾಗೆಯೇ ಹಿಂದುಗಳು ದುರ್ಬಲಮನಸ್ಕರಾಗದೆ ಐಕ್ಯದಿಂದಲೂ, ಮನೋನಿಶ್ಚಯದಿಂದಲೂ ಬಹಿಷ್ಕಾರಶಸ್ತ್ರವನ್ನು ಉಪಯೋಗಿಸಿ ಕೊನೆಗೆ ಗೆದ್ದ ಬಗ್ಗೆ ಅಭಿನಂದಿಸಿದರು. ಹೀಗೆ ಉತ್ಸವವನ್ನು ವಿಘ್ನರಾಜನು ನಿರ್ವಿಘ್ನತೆಯಿಂದ ಪಾರ ಮಾಡಿಕೊಂಡನು.

— ಪಂಡಿತ ಜವಾಹಿರಲಾಲ ನೆಹರೂರವರಿಗೆ ಸಂಯುಕ್ತ ಪ್ರಾಂತದ ರಾಜಕೀಯ ಪರಿಷತ್ತಿನ ಅಧ್ಯಕ್ಷರನ್ನಾಗಿ ಆರಿಸಿದ್ದಾರೆ.

— ಸೂರತ ಮುನಿಸಿಪಾಲಿಟಿಯು ಕಾರಭಾರವು ಪಕ್ಷಭೇದದ ಕಲಹಗಳ ಮೂಲಕ ಸುಸೂತ್ರವಾಗಿ ನಡೆಯದ್ದರಿಂದ ಅಲ್ಲಿಯ ಮುನಿಸಿಪಾಲಿಟಿಯು ರದ್ದು ಮಾಡೋಣಾಗಿದೆ

— ಪುಣೆ ಶಹರ ಮುನಿಸಿಪಾಲಿಟಿಯಲ್ಲಿ ಅಧ್ಯಕ್ಷರ ನಿರಂಕುಶ ಕಾರಭಾರಕ್ಕೆ ನಿಷೇಧವೆಂದು ರಾಷ್ಟ್ರೀಯ ಪಕ್ಷದ ೧೦-೧೨ ಮಂದಿ ಸಭಾಸದರು ಸಭಾಮಂದಿರದೊಳಗಿಂದ ಎದ್ದು ನಡೆದರು ಈ ಪ್ರಕರಣವು ಬಿಗಿಯಾಗುವದಂತೆ !

— ಮುಂಬಯಿಯ ಡಾ| ದಿನಕರ ಧೋಂಡೋ ಕಾರ್ವೇಯವರು ತಮ್ಮ ತೀರ್ಥರೂಪರ ಸ್ಮಾರಕಕ್ಕಾಗಿ ಪುಣೆಯೊಳಗಿನ ತಮ್ಮ ಮನೆಯಲ್ಲಿ ನೇತ್ರ ಚಿಕಿತ್ಸಾಲಯವೊಂದು ಸ್ಥಾಪಿಸೋಣಾಗಿದೆ. ಬಡಬಗ್ಗರಿಗೆ ಉಚಿತವಾಗಿ ಇಲ್ಲಿ ಉಪಚಾರವಾಗುತ್ತದೆ.

— ಅಮೇರಿಕೆಯೊಳಗೆ ದೊಡ್ಡ ಬಿರುಗಾಳಿ ಬೀಸಿ, ೨೦೦೦ ಜನರು ಮಡಿದರು. ಫ್ಲೋರಿಡಾ ಪ್ರಾಂತದಲ್ಲಿ ೨ ಕೋಟಿ ಡಾಲರುಗಳ ನಷ್ಟ. ೧೦ ಲಕ್ಷ ಜನರು ನಿರಾಶ್ರಿತರಾಗಿದ್ದಾರೆ.

— ಜಪಾನ ಹೆಸ್ತಯ ಕಾಪದ ಊರಲ್ಲಿ ಉಲ್ಕಾಪಾತವಾಯಿತು ಉಲ್ಕಾ ಅಂದರೆ ದೊಡ್ಡ ಚುಕ್ಕೆ. ಒಂದು ನಕ್ಷತ್ರದ ಒಂದು ದೊಡ್ಡ ಕಲ್ಲು ಬಿತ್ತು. ಅದು ೫೦ ಮಣ ಭಾರವಿತ್ತು ೨೦ ಮೈಲುಗಳ ತನಕ ಅದರ ಸಪ್ಪಳ ಕೇಳಿತು. ಇಬ್ಬರು ಮಡಿದರು.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ

ಆಯುರ್ವೇದಿಕ] ಅನುಭವಿಕ ಔಷಧಗಳು! [ಮಲಬಾರಿ ಕೃತಿ!

೧. ಮದನಕಾಮೇಶ್ವರಿ ಲೇಹ- ಧಾತುಪುಷ್ಟಿಕ, ವೀರ್ಯ—ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನಕಾಮೇಶ್ವರ- ಗುಣ ಮೇಲಿನಂತೆ. ಡ. ೧ ಕ್ಕೆ ೨ ರೂ. ೩ ಕ್ಕೆ ೫ ರೂ. [ಡ. ೧ ಕ್ಕೆ ೨|| ರೂ.
೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರ. ಇಂದ್ರಿಯದ ಹುಣ್ಣು, ಪರಮಾ ಯಾವದೇ ತರದ ಕಠಿಣ ರೋಗವಾದರೂ ಮರಣೋನ್ಮುಖ ಸ್ಥಿತಿಯಲ್ಲಿದ್ದರೂ ೭ ದಿವಸದಲ್ಲಿ ಗುಣ ಹೊಂದುವರು.
೪. ಗರ್ಮಿ ರೋಗಕ್ಕೆ ಮಲ್ಲಮು- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ
೫. ಯೋಗರಾಜ ಗುಗ್ಗುಳ- ಅರ್ಧಾಂಗವಾಯು, ಕೋಷ್ಠವಾತ, ಕಿರುಗಳ ಇ. ೮೦ ತರದ ವಾತರೋಗಕ್ಕೆ ಸಿದ್ಧೌಷಧಿ ರೂ. |||, ೧|, ೨
೬. ಕೆಮ್ಮಿನ ಗುಳಿಗೆ- ಕ್ಷಯ, ದಮ್ಮ, ಕೆಮ್ಮು ಇ. ಮೇಲೆ ರಾಮಬಾಣ. ಡ. ೧೦ ಆಣೆ ರೂ. ೧, ೧|||
೭. ವಾತ-ಪಿತ್ತ-ಕಫನಾಶಕ ಜುಲಾಬಿನ ಗುಳಿಗೆ- ೨೫ ರ ಡ. ೮ ಆ; ೧೦೦ ಕ್ಕೆ ೧|| ರೂ.
೮. ಸಂಜೀವನಿ- ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಸನ್ನಿಪಾತ ಇ. ಜ್ವರಗಳ ಮೇಲೆ. ೨೫ ರ ಡ. ೧ ರೂ; ೧೦೦ ರ ೩ ರೂ.
೯. ಚಂದ್ರಪ್ರಭಾ ಮಾತ್ರೆ- ೨೦ ತರದ ಮೇಹ, ಮೂತ್ರದಾಹ, ಅಶ್ಮರಿ, ಧಾತುಕ್ಷಯ, ಸ್ವಪ್ನಾವಸ್ಥೆ, ಇ. ಡ. ೨ ರೂ.
೧೦. ದಂತಮಂಜನ- ಹಲ್ಲು ನೋವು, ಹುಳ, ಕೀವು, ಅಲುಗಾಡುವಿಕೆ ಇ. ಪೂರ್ಣ ಗುಣವಾಗುವವು. ಡ ೨ ಆಣೆ, ೧೨ ಕ್ಕೆ ೨| ರೂ.
೧೧. ಜಂತುನಿನ್ನ ಔಷಧ- ಹೊಟ್ಟೆ-ಹುಳಗಳ ಮೇಲೆ ರಾಮಬಾಣ ಪುಡಿ ೧ ಕ್ಕೆ ೧|| ಆಣೆ, ೨೫ ಕ್ಕೆ ೧|| ರೂ. ೧೦೦ ಕ್ಕೆ ೫| ರೂ.
೧೨. ಖಜ್ಜಿಯ ಮಲಮು- ಡ ೪ ಆಣೆ, ೧೨ ಕ್ಕೆ ೨||| ರೂ; ಸೋಮಶೇಖರ ಮಾತ್ರೆ ಪಿತ್ತಕ್ಕೆ ಡ ರೂ. ೧|| ೨|||, ೫
೧೩. ವಾತಸಂಹಾರಿ ತೈಲ- ನಾರಾಯಣ ತೈಲ, ಅರ್ಧಾಂಗ ವಾತಾರಿ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು ಬಾಟ್ಲಿ ರೂ. ೧||, ೨|||
೧೪. ವಾಕ್‌ಸಂಜೀವನಿ ಗುಟಿಕಾ- ಮಾತು ತಡೆಯುವಿಕೆ. ತುತು ಆಗುವಿಕೆ ಇ. ಡ ೨ ರೂ.
೧೫. ಪುತ್ರಜೀವನ ಲೇಹ- ಗರ್ಭಪಾತವಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು ಡ ೪ ರೂ ಟ. ಖರ್ಚ ಬೇರೆ; ಅನುಪಾನ ಪತ್ರ ಔಷಧದ ಸಂಗಡ; (ಆಯುರ್ವೇದೌಷಧಿ ಗುಣರತ್ನಮಾಲಾ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ಟಾಂಪ ಇಟ್ಟು ಪತ್ರದ್ವಾರಾ ಯಾ ಸಮಕ್ಷ ತಿಳಕೊಳ್ಳಬಹುದು:

ಪತ್ತೆ:- ಮೆನೇಜರ, ಆರ್ಯಚಿಕಿತ್ಸಾಮಂದಿರ, ಪೋ. ಚೆಂಡಿಯೆ ತಾ. ಕಾರವಾರ.

ಮುಂಬಯಿ ಏಜಂಟ:- R. C. KAMAT, *Teashop, Store Lane, Fort Bombay.*

ಕಾನಡಾ ವೃತ್ತ.

ಮಿತಿ ವಿಭವ ಸಂ। ಭಾದ್ರಪದ ಬ। ೨ಗ, ಸೋಮವಾರ.

ಲೋಕಶಾಹಿ ಸಂಚಾರ.

ಕಳೆದ ವಾರ ಹಿಂದುಸ್ಥಾನದಲ್ಲಿ ಲೋಕಶಾಹಿಯು ಸಂಚಾರವು ನಾಲ್ಕು ಕಡೆಗೆ ತಲೆದೋರಿತು. ಸಾಯಮನ್ ಕೂಟದ ನೇಮಣೂಕಿಯಿಂದ ಹಿಂದುಸ್ಥಾನದಲ್ಲಿ ಸ್ವಾಭಿಮಾನದ ಗಾಳಿಯು ಬೀಸಿದೆ. ಬ್ರಿಟಿಶರ ರಾಜನೀತಿಯು ಸತ್ಯಸ್ಥಿತಿಯು ಗೋಚರವಾಗಿದೆ. ವರಿಷ್ಠ ಕಾಯಿದೆ ಕೌನ್ಸಿಲಿನ ಅಧಿವೇಶನದಲ್ಲಿಯೂ, ಸಂಯುಕ್ತ ಪ್ರಾಂತದ ಕೌನ್ಸಿಲಿನಲ್ಲಿಯೂ, ನಮ್ಮ ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿಯೂ ಸರಕಾರವು ಲೋಕಮತಕ್ಕೆ ತಲೆಬಗ್ಗಿಸಿ ಮೊಗ್ಗಾಲು ಊರಬೇಕಾಯಿತು. ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿ ಹಿಂದಿನ ಅಧಿವೇಶನದಲ್ಲಿ ಹಿಂತೆಗೆದುಕೊಂಡ ತೀರ್ವೆ ವಿಧಿಕೆಯ ಕಾನೂನನ್ನು ಸರಕಾರವು ಕಳೆದ ಸೋಮವಾರದಲ್ಲಿ ನಡೆದ ಅಧಿವೇಶನದಲ್ಲಿ ಮುಂದೂಡಲೆತ್ನಿಸಿತ್ತು. ಈ ಕುರಿತು ಅಲ್ಲಲ್ಲಿ ನಿಷೇಧವಾಗುತ್ತಿತ್ತು. ಲೋಕಮತದ ಬಲ ನೋಡಿ ಸರಕಾರವು ಈ ಕಾನೂನನ್ನು ಈ ಅಧಿವೇಶನದಲ್ಲಿ ಸೂಚಿಸಬಯಸಲಿಲ್ಲ. ನೆವ ಮಾತ್ರ ಬೇರೆ ಹೇಳಲ್ಪಟ್ಟಿದೆ. ಸಾಯಮನ್ ಕೂಟವು ಹಿಂದುಸ್ಥಾನದ ರಾಜ್ಯಘಟನೆಯನ್ನು ವಿಚಾರಿಸುತ್ತಿದೆ. ಆ ಕಾರ್ಯವು ಸಧ್ಯಕ್ಕೇ ಪ್ರಾರಂಭವಾಗುವದು. ಸಾಯಮನ್ ಕೂಟದ ವಿಚಾರಕಕ್ಷೆಯಲ್ಲಿ ಭೂಮಿ ತೀರ್ವೆಯ ವಿಷಯವು ಸೇರಿಕೊಂಡಿದೆ. ಅದರಿಂದ ಸರಕಾರವು ಈಗಲೇ ಆ ವಿಷಯವನ್ನು ಕಾಯಿದೆ ಕೌನ್ಸಿಲಿನಲ್ಲಿ ಪ್ರಸ್ಥಾಪಿಸಬಯಸುವದಿಲ್ಲ. ಭಾಪುರೆ! ಅಧಿವೇಶನದ ಕಾರ್ಯಕ್ರಮವನ್ನು ತಯಾರಿಸುವಾಗ ಸ್ಯಾಮನ್ ಕೂಟದ ನೇಮಣೂಕಿಯಾಗಿದ್ದಿಲ್ಲವೇನು! ಆ ಕೂಟದ ವಿಚಾರವೆಷ್ಟೆಂಬದು ಸರಕಾರಕ್ಕೆ ಗೊತ್ತಿದ್ದಿಲ್ಲವೇನು! ಲೋಕಮತಕ್ಕೆ ತಲೆಬಗ್ಗಿತೆಂದು ಹೇಳಲು ಸರಕಾರವು ನಾಚುವದರಿಂದ ಈ ನೆವ ಹೇಳಲಾಗುತ್ತದೆಂದು ಬಲ್ಲವರು ಬಲ್ಲರು!

ಸಂಯುಕ್ತ ಪ್ರಾಂತದಲ್ಲಿಯೂ ಸರಕಾರದ ಕುತಂತ್ರಕ್ಕೆ ಚಲೋ ಪ್ರಾಯಶ್ಚಿತ್ತ ಸಿಕ್ಕಿತು. ಸ್ಯಾಮನ್ ಕೂಟದ ಬಹಿಷ್ಕಾರ ಚಳವಳಿಯ ಪ್ರಮುಖರಾದ ರಾಜಾ ಜಗನ್ನಾಥ ಬಕ್ಷ ಸಿಂಗರವರಿಗೆ ಸಂಯುಕ್ತ ಪ್ರಾಂತಿಕ ಸರಕಾರದ ದಿವಾಣಪದದ ಮರುಳು ಹಾಕಿ ಅವರಿಗೆ ದಿವಾಣರನ್ನಾಗಿ ಮಾರ್ಪಡಿಸಿ ಸ್ಯಾಮನ್ ಕೂಟದ ತೀರ್ಮಾನವನ್ನು ಮನ್ನಿಸಿಕೊಂಡಿತು. ಈ ಕುಟಿಲ ಕುಹಕಗಳಿಗೆಲ್ಲ ನೇಮಸ್ತರಾದ ನಾ। ಚಿಂತಾಮಣಿಯವರು ಸಹ ಹೇಸಿದರು. ಇಂಥ ಕುತಂತ್ರಗಳಿಂದ ಸರ್ವನಾಶವಾಗುವದೆಂದು ಅವರು ಶಾಪಜಲವನ್ನೂ ಬಿಟ್ಟರು; ಇಷ್ಟಕ್ಕೇ ಅವರು ತಡೆಯಲಿಲ್ಲ. ಹೊತ್ತಿಗೊಂದು ರೂಪ ಮಾಡುವ ರಾಜಾ ಜಗನ್ನಾಥರವರ ಮೇಲೆ ನಿಷೇಧಪ್ರದರ್ಶಕ ಠರಾವನ್ನು ಕೌನ್ಸಿಲಿನಲ್ಲಿ ತಂದು ಬಹು ಆವೇಶದಿಂದ ಮಾತನಾಡಿದರು. ಕೊನೆಗೆ ದಿವಾಣರಿಗೆ ಪದಭ್ರಷ್ಟ ಮಾಡಲು ಕಾರಣರಾದರು. ಈ ಸಂಗತಿಯು ಅಲ್ಪವಲ್ಲ. ನಾ। ಚಿಂತಾಮಣಿಯವರೆಂದರೆ, ಸಂಯುಕ್ತ ಪ್ರಾಂತದೊಳಗಿನ—ಏಕೆ!—ಇಡೀ ಹಿಂದುಸ್ಥಾನದೊಳಗಿನ ನೇಮಸ್ತ ಪಕ್ಷದ ಪ್ರಮುಖರು. ಮೊಂಟೆಗ್ಯೂ ಸ್ವರಾಜ್ಯವನ್ನು ಅಂಗೀಕರಿಸಿ ದಿವಾಣರಾಗಿ ಇವರು ಕೆಲಸ ಮಾಡಿದ್ದಾರೆ. ಇಂಥ ವಿಚಾರವಂತರು ಸಹ ಈ ಆಡಳಿತೆಗೆ ಬೇಸರಪಟ್ಟ ಬಳಿಕ, ಹಿಂದುಸ್ಥಾನದಲ್ಲಿ ಲೋಕಶಾಹಿಯು ಸ್ಥಾಪನೆಯಾಗಲು ಇನ್ನು ಅವಕಾಶವಿಲ್ಲೆಂದು ಯಾರೂ ಹೇಳಬಹುದು. ಪಂಡಿತ ಮದನಮೋಹನ ಮಾಲವೀಯರಂತೂ ಇನ್ನೆರಡೇ ವರ್ಷಗಳಲ್ಲಿ ಸ್ವರಾಜ್ಯ ಸ್ಥಾಪನೆಯಾಗುವದೆಂಬ ಸ್ಫೂರ್ತಿ ವಚನವನ್ನು ಉಚ್ಚರಿಸಹತ್ತಿದ್ದಾರೆ ಮುಂದಿನ ಶುಭಕಾರ್ಯದ ಇದೊಂದು ಶುಭ ಲಕ್ಷಣವು.

ವರಿಷ್ಠ ಕಾಯಿದೆ ಕೌನ್ಸಿಲಿನೊಳಗಿನ ಸಂಗತಿಗಳಿಂದಲೂ ಹಿಂದೀ ಲೋಕನಾಯಕರ ಪ್ರತಿಷ್ಠೆಯು ಬೆಳೆಯಿತು. ಪ್ರಾಮುಖ್ಯವಾಗಿ ಈ ವಾರದಲ್ಲಿಯೇ ಅವಕ್ಕೆ ವಿಶೇಷ ಕಳೆಯೇರಿತೆಂದು ಹೇಳಲು ಯಾವದೇ ಅಡ್ಡಿಯಿಲ್ಲ. ಹಿಂದುಸ್ಥಾನ ಸರಕಾರವು ತಪ್ಪು ಒಪ್ಪಿ ಕ್ಷಮಾಯಾಚನೆ ಮಾಡಬೇಕಾಯಿತು. ವಿಷಯವು ತೀರ ಸಣ್ಣದು! ಅಧ್ಯಕ್ಷರಾದ ನಾ। ಪಟೇಲರು ಲೋಕಪಕ್ಷದ ಮುಖಂಡರಾದ ಪಂಡಿತ ಮೋತಿಲಾಲ ನೆಹರೂರವರ ಪಕ್ಷಪಾತಿಯಾಗಿ ಅಧ್ಯಕ್ಷಸ್ಥಾನದ ಅಧಿಕಾರವನ್ನು ಉಪಯೋಗಿಸುತ್ತಾರೆಂದು ಅವರ ಮೇಲೆ ಆರೋಪ! ಈ ವಿಷಯದ ಸಂಗತಿಗಳನ್ನು ಕಳೆದ ಸಂಚಿಕೆಯಲ್ಲಿ ವಿವರಿಸಿದ್ದೇವೆ. ಸರಕಾರದ ಅಧಿಕಾರಿಗಳ ಬೆಂಬಲದಿಂದ ಈ ಚಳವಳಿ ನಡೆದದಾಗಿ ಪಂಡಿತ ಮೋತಿಲಾಲರವರು ವರ್ತಮಾನ ಪತ್ರಿಕೆಗಳೊಳಗಿನ ಉಲ್ಲೇಖ ಹೇಳಿ ಪ್ರತಿಪಾದಿಸಿದರು. ಈ ಸಮಯ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳಾದ ಮಿ। ಕ್ರೇರಾರವರು ವಿಕ್ಷಿಪ್ತ ಭಾಷಣ ಮಾಡಿದರು. ವರ್ತಮಾನಪತ್ರದೊಳಗಿನ ಆರೋಪಗಳು ತಮಗೆ ಮಾನ್ಯವೂ ಇಲ್ಲ; ಅಮಾನ್ಯವೂ ಇಲ್ಲ. ಸರಕಾರಿ ಅಧಿಕಾರಿಗಳು ಕೌನ್ಸಿಲಿನ ಹೊರಗೆ ಅಧ್ಯಕ್ಷರ ಮೇಲೆ ಬೇಕಾದ ಆರೋಪ ಹೊರಿಸಲು ಅಧಿಕಾರಪಟ್ಟವರಿದ್ದಾರೆ; ಎಂಬರ್ಥದ ನುಡಿಗಳನ್ನೂ ಆಡಿಬಿಟ್ಟರು. ಅಧ್ಯಕ್ಷರಾದ ಶ್ರೀ। ಪಟೇಲರು ಭಾರತವಾಸಿಗಳಾದ್ದರಿಂದ ಅವರ ಅಧಿಕಾರವು ದೊಡ್ಡದಾಗಿದ್ದರೂ, ಈ ನೀಚ ಆರೋಪಗಳು ಅವರ ಮೇಲೆ ಹೇರಲ್ಪಡುತ್ತವೆಂದು ಅಜ್ಞ ಬಾಲಕರಿಗೆ ಸಹ ತಿಳಿದ ವಿಷಯ. ಶ್ರೀ। ಪಟೇಲರು ಇಂಥ ಗರ್ವಿಷ್ಠರಿಗೆ ಶಾಸನ ಮಾಡಲು ಸಿದ್ಧರಿದ್ದ ಪುರುಷರು. ಶ್ರೀ। ಪಟೇಲರಿಗೂ, ಸರ್ವಾಧಿಪತಿಗಳಿಗೂ ಮಾತುಕಥೆಯಾಯಿತು. ಮಿ। ಕ್ರೇರಾರವರು ಕೌನ್ಸಿಲಿನಲ್ಲಿ ಮಾಫ ಬೇಡಿದರು. ಅಧ್ಯಕ್ಷರ ಗೌರವವನ್ನೂ, ಪ್ರತಿಷ್ಠೆಯನ್ನೂ, ಸ್ವಾತಂತ್ರ್ಯವನ್ನೂ ಕಾಪಾಡುವ ಕರ್ತವ್ಯವು ಸರಕಾರದ್ದೆಂದು ಅವರೊಪ್ಪಿದರು. ಹಿಂದೆ ತಾವು ಆಡಿದ ಮಾತುಗಳು ವಾದದ ಆವೇಶದ ಭರದಲ್ಲಿ ಆಡಿಹೋದದ್ದಾಗಿಯೂ ಹೇಳಿದರು. ಸರಕಾರಿ ಅಧಿಕಾರಿಗಳು ಅಧ್ಯಕ್ಷರ ಮೇಲೆ ಅಪ್ರಾಮಾಣಿಕತನದ ಆರೋಪ ಹೊರಿಸಿದರೆ ಕರ್ತವ್ಯಪರಾಙ್ಮುಖರಾಗುತ್ತಾರಾಗಿಯೂ ಹೇಳಿ, ಹಾಗೆ ಅವರು ಆರೋಪ ಹೊರಿಸಿದ ಬಗ್ಗೆ ಅವರ ತರ್ಫೆನಿಂದಲೂ ಕ್ಷಮೆ ಬೇಡಿದರು. ಅಧ್ಯಕ್ಷರು ಈ ತನಕ ನಿಷ್ಪಕ್ಷಪಾತದಿಂದ ಕಾಯಿದೆ ಕೌನ್ಸಿಲಿನ ಕೆಲಸವನ್ನು ನಡಿಸಿದ್ದಾರಾಗಿಯೂ ಅಭಿಪ್ರಾಯಪಟ್ಟರು. ನೀಚ ಆರೋಪ ಹೊರಿಸಿದ ವರ್ತಮಾನಪತ್ರಿಕೆಗಳ ಮೇಲೆ ಬೇಕಾದ ಇಲಾಜು ನಡಿಸಿದ್ದಲ್ಲಿ ಅದಕ್ಕೆ ಸರಕಾರವು ಬೆಂಬಲ ಕೊಡುವದಾಗಿಯೂ ಆಶ್ವಾಸನವನ್ನೀಯಬೇಕಾಯಿತು. ಶ್ರೀ। ಪಟೇಲರು ಸರಕಾರದ ಕ್ಷಮೆಯನ್ನು ಸೌಜನ್ಯದಿಂದ ಅಂಗೀಕರಿಸಿ, ಮುಂಬಯಿಯ 'ಟೈಮ್ಸ ಅಫ್ ಇಂಡಿಯಾ' ಪತ್ರಿಕೆಯ ಪ್ರತಿನಿಧಿಗಳಿಗೂ, ಲಂಡನಿನ 'ಡೇಲಿ ಟೆಲಿಗ್ರಾಫ' ಪತ್ರಿಕೆಯ ಪ್ರತಿನಿಧಿಗಳಿಗೂ ತಾವು ಹೇಳುವ ನಮೂನೆಯಲ್ಲಿ ಮಾಫಿ ಬೇಡುವ ವರೆಗೆ ಕೌನ್ಸಿಲು ಸಭಾಮಂದಿರದಿಂದ ಹೊರತಳ್ಳಿಬಿಟ್ಟಿದ್ದಾರೆ. ಈ ಸಂಗತಿಯಿಂದ ಲಂಡನಿನಲ್ಲಿಯೂ ಹಿಂದುಸ್ಥಾನದ ವಿಷಯ ಹೆದರಿಕೆ ಹುಟ್ಟಿದೆ. 'ಟೆಲಿಗ್ರಾಫ' ಪತ್ರಿಕೆಯು ಸ್ಯಾಮನ್ ಕೂಟದ ಸಭಾಸದರಾದ ಬರ್ನ್ಹಾಮ ದೊರೆಗಳ ಆಶ್ರಯದ್ದು. ಲಂಡನಿನಲ್ಲಿ ಇದಕ್ಕೆ ಚಲೋ ಪ್ರತಿಷ್ಠೆ ಇದೆ. ಇಂಥ ಪತ್ರಿಕೆಯ ಪ್ರತಿನಿಧಿಗಳನ್ನು ಹಿಂದುಸ್ಥಾನ ಸರಕಾರದ ಅನುಮತಿ ಪಡೆದು ಹೊರನೂಕುವದು ಸಾಮಾನ್ಯ ಮಾತಲ್ಲ. ಲೋಕಶಾಹಿಯ ಸ್ವೈರ ಸಂಚಾರದ ಇದೊಂದು ಶುಭ ಲಕ್ಷಣ!

ಇನ್ನೊಂದು ಸಣ್ಣ ಸಂಗತಿಯನ್ನು ನಮೂದಿಸಿ, ಈ ಲೇಖವನ್ನು ಮುಗಿಸುವೆವು. ಸಾರ್ವಜನಿಕ ಸುರಕ್ಷಿತತೆಗಾಗಿ ಲೋಕೋಪಕಾರಿ ವಿದೇಶೀಯರನ್ನು ವಿಚಾರವಿಲ್ಲದೆ ಹೊರತಳ್ಳುವ ಕಾನೂನು ಅಧ್ಯಕ್ಷರ ಮತದಿಂದ ತಿರಸ್ಕರಿಸಲ್ಪಟ್ಟಿರುವದಷ್ಟೇ. ಮತ ಎಣಿಕೆಯಾಗುವಾಗ

ಒಂದು ಸಣ್ಣ ಸಂಗತಿ ಸಂಭವಿಸಿತು. ಮತ ಕೊಳ್ಳುವಾಗ ಗಡಿಬಿಡಿಯಾಗದಂತೆ ಕೌನ್ಸಿಲು ಸಭಾಮಂದಿರದ ಭಾಗಗಳನ್ನು ಮುಚ್ಚುತ್ತಾರೆ. ಸರ್ ಜೇಮ್ಸ ಸಿಂಪಸನ್‌ರೆಂಬ ಮದ್ರಾಸದ ಯುರೋಪಿಯನ್‌ರು ಹೊರಗಿದ್ದರು. ಅವರಿಗೆ ಒಳಬರಲನುಕೂಲವಿಲ್ಲ. ಅಧ್ಯಕ್ಷರಾದ ಶ್ರೀ|| ಪಟೇಲರು ಸಭಾಮಂದಿರದಲ್ಲಿ ಸೇರುವ ಭಾಗಿಲು ತೆರೆದುಕೊಂಡಿತ್ತು. ಅದರೊಳಗಿಂದ ಅವರು ಒಳಸೇರಿದರು. ಸರಕಾರಕ್ಕೂ ಲೋಕಪಕ್ಷಕ್ಕೂ ಸರಿ ಮತಗಳಾದ್ದರಿಂದ ಸರ್ ಜೇಮ್ಸ ಸಿಂಪಸನ್‌ರವರ ಮತವನ್ನೊಂದು ಸೇರಿಸಿಕೊಳ್ಳಲು ಸರಕಾರ ತರ್ಫಿನ ಕಾರ್ಯದರ್ಶಿಗಳು ಮುಂದಾದರು. ಶ್ರೀ|| ಪಟೇಲರು ಸರ್ ಜೇಮ್ಸ ಸಿಂಪಸನ್‌ರವರಿಗೂ, ಸರಕಾರಿ ಕಾರ್ಯದರ್ಶಿಗಳಿಗೂ ಅಪ್ರಶಸ್ತ ನಡತೆಯ ಕುರಿತು ಛೀ ಹೇಳಿದರು. ಮಾರನೇ ದಿನ ಈರ್ವರೂ ಕ್ಷಮಾಯಾಚನೆ ಮಾಡಿಕೊಂಡ ಬಳಿಕ, ಈ ಪ್ರಕರಣವು ಅಷ್ಟಕ್ಕೇ ಮುಗಿಯಿತು.

ಹೀಗೆಲ್ಲ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸ್ವಾಭಿಮಾನದ ಜ್ಯೋತಿಯು ಬೆಳಗಹತ್ತಿದೆ. ಯುರೋಪಿಯನ್‌ರಿಗಾಗಲಿ, ಸರಕಾರಕ್ಕಾಗಲಿ ಕಾಯಿದೆಗೆ ಮಿಕ್ಕಿದ ಅಧಿಕಾರಗಳು ಸಿಗುವದಿಲ್ಲ. ಮೇರೆದಪ್ಪಿ ನಡೆದ ಕೂಡಲೆ ಶಾಸನವಾಗುತ್ತಲಿದೆ. ಹಿಂದುಸ್ಥಾನದಲ್ಲಿ ಲೋಕಶಾಹಿಯು ಅವತಾರವಾಗುವ ಪೂರ್ವ ಚಿನ್ಹಗಳು ಈಗ ತೋರಹತ್ತಿವೆ. ಇದೇ ತಿಂಗಳಲ್ಲಿ ಸ್ಯಾಮನ್ ಕಮಿಟಿಯ ಆಗಮನವಾಗುವದಿದೆ; ಆ ಸಮಯ ಲೋಕಶಾಹಿಯು ಪ್ರತ್ಯಕ್ಷ ಅವತರಿಸಿ ಆರ್ಭಾಟ ಮಾಡುವದೆಂದು ಈಗಲೇ ಹೇಳಬಹುದಲ್ಲವೇ!

ಸ್ಫುಟ ಸೂಚನೆಗಳು.

೧. ಏಶಿಯಾ ಖಂಡದ ತುರ್ಕಸ್ಥಾನದಲ್ಲಿಯೂ ಶಾಂತತೆಯಿಲ್ಲ. ಒಳಗಿಂದೊಳಗೇ ಗುಡುಗುಡಿಸುತ್ತಿದೆ. ಇರಾಕ-ನೇಜ್ದ ಪ್ರದೇಶದ ಅಧಿಪತಿಗಳಲ್ಲಿ ವಾದವಿದ್ದಿದೆ. ನೇಜ್ದ ಪ್ರದೇಶದ ಸುಲ್ತಾನರು ಇಬ್ನಸೂದರು. ಇರಾಕ ಪ್ರದೇಶದ ಪ್ರತ್ಯಕ್ಷ ಒಡೆಯರು ಫೈಸಲ್ ಅರಸರು; ಸೂತ್ರಚಾಲಕರು ಬ್ರಿಟಿಶರು. ಇರಾಕ—ನೇಜ್ದ ರಾಜ್ಯಗಳ ಸರಹದ್ದಿಯು ೭೫ ಮೈಲು ಪ್ರದೇಶದ ಮೇಲೆ ಪೋಲೀಸ ಠಾಣ್ಯಗಳನ್ನು ಮಾತ್ರ ರಚಿಸದೇ ಕೆಂದು ಇರಾಕ-ನೇಜ್ದ ರಾಜ್ಯಗಳಲ್ಲಾದ ತಹನಾಮೆಯಲ್ಲಿ ಶರ್ತಿದೆ. ಬ್ರಿಟಿಶರೇ ಮಾಡಿದ್ದಿದು! ಈಗ ಬ್ರಿಟಿಶರ ಬೆಂಬಲದಿಂದಲೇ ಇರಾಕ ಸರಕಾರವು ಆ ಪ್ರದೇಶದಲ್ಲಿ ಕೋಟೆಗಳನ್ನು ಕಟ್ಟಲಾರಂಭಿಸಿತ್ತು. ಇಬ್ನಸೂದರು ಕೂಡಲೆ ವಿರೋಧಿಸಿದರು. ಒಂದೆರಡು ಕೋಟೆಗಳು ನೆಲಸಮವಾದವು. "ಅವು ಕೋಟೆಗಳಲ್ಲ; ಕರಾರಿನಂತೆ ಪೋಲೀಸ ಠಾಣ್ಯಗಳು; ಅವಕ್ಕೆ ವಿರೋಧಿಸಬರುವದಿಲ್ಲ" ಎಂದು ಬ್ರಿಟಿಶ ಮುತ್ಸದ್ದಿಗಳು ಅರ್ಥ ಹೇಳಿದರು. ಆದರೆ, ಇಬ್ನಸೂದರಿಗೆ ಕಣ್ಣುಗಳಿದ್ದಾವೆ; ಬ್ರಿಟಿಶರ ಕನ್ನಡಕ ಅವರಿಗೆ ಬೇಡ! ಪೋಲೀಸ ಠಾಣ್ಯಗಳಲ್ಲಿ ಮದ್ದು ಗುಂಡು ಶಸ್ತ್ರಾಸ್ತ್ರಗಳಿಂದ ತುಂಬಿದ ವಾಹನಗಳೇಕೆ? ಅದಕ್ಕೊಪ್ಪಿದ ಪರಿವಾರವೇಕೆ? ವೈಮಾನಿಕ ಸೈನಿಕರಿಗೆ ಆಶ್ರಯ ಕೊಡುವ ವ್ಯವಸ್ಥೆ ಏಕೆ? ಇವನ್ನೆಲ್ಲ ಇಬ್ನಸೂದರು ಒಂದೊಂದಾಗಿ ಎತ್ತಿ ತೋರಿಸಲು, ಬ್ರಿಟಿಶರ ವಿದ್ಯೆಯು ಬೈಲಿಗೆ ಬಿತ್ತು. ಹೊಸ ಹಾದಿ ಹಿಡಿದರು; "ನಿಮಗೆ ನಾವು ನೇಜ್ದ ಪ್ರದೇಶದ ಸುಲ್ತಾನರೆಂದು ಅಚ್ಚು ಹೊಡೆಯುತ್ತೇವೆ. ಕೋಟೆ ಕಟ್ಟಿದರೇನಾಯಿತು? ನಿಮ್ಮ ಮೇಲೆ ನಾವು ದಂಡೆತ್ತಿ ಬರದಂತೆ ಕರಾರು ಬರೆಕೊಡುತ್ತೇವೆ ಏನು ಬೇಕಾದ್ದನ್ನು ಮಾಡುತ್ತೇವೆ;" ಎಂದು ಆಶ್ವಾಸನ ಕೊಡಹತ್ತಿದರು. ಹಿಂದುಸ್ಥಾನದಲ್ಲಿ ರಾವಸಾಹೇಬ, ರಾವಬಹಾದ್ದೂರ ಎಂಬ ೫-೬ ಪೊಳ್ಳು ಅಕ್ಷರಗಳಿಗಾಗಿ ಸ್ವಾಭಿಮಾನವನ್ನು ಸಹ ತೊರೆದು, ಬಾಲ ಬಡಿಯುವ ಜನರಲ್ಲಿ ಇಬ್ನಸೂದರಿಗೆ ಬ್ರಿಟಿಶರು ಸೇರಿಸಿದರೆಂಬಂತೆ ಕಾಣುತ್ತದೆ. ಇಬ್ನಸೂದರು ನೇಜ್ದ ಸುಲ್ತಾನರೇ ಇದ್ದಾರೆ; ಅವರಿಗೆ ಬ್ರಿಟಿಶರ 'ಸುಲ್ತಾನ' ಮುದ್ರೆಯಿಂದಾಗುವದೇನು? ಕೋಟೆ ಕಟ್ಟಿಕೊಂಡು, ಆ ವೇಳೆ ಮುಂದೆ ಭದ್ರತೆಯ ಆಶ್ವಾಸನ ಕೊಡುವದಕ್ಕಿಂತ, ಕೋಟೆ ಕಟ್ಟಲಿಕ್ಕೆ ಕೊಡದಿರುವಷ್ಟು ಸಾಮರ್ಥ್ಯವಿರುವಾಗ, ಅದನ್ನು ಕಳಕೊಂಡು ಮುಂದೆ ಬಾಯಿ ತೆರೆಯುತ್ತ ಕೊಡುವ ಮೂರ್ಖರಲ್ಲಿ ಇಬ್ನಸೂದರು ಸೇರಬಹುದೇ? ಕರಾರಿನ ಪಾಲನವನ್ನು ಬ್ರಿಟಿಶರು ಎಷ್ಟರ ಮಟ್ಟಿಗೆ ಮಾಡುವರೆಂದು ಪೋಲೀಸ ಠಾಣ್ಯದ ಇಂಬಿನ ಮೇಲೆ ಕೋಟೆಗಳನ್ನು ರಚಿಸುತ್ತಿದ್ದ ಬ್ರಿಟಿಶರೇ ಪ್ರತ್ಯಕ್ಷ ಹೇಳಿದ್ದಾರೆ. ಅವರನ್ನು ನಂಬಿಕೊಂಡವರಿಗೆ ಎಂದೂ ಸುರಕ್ಷಿತತೆಯಿಲ್ಲ. ಇದೆಲ್ಲ ಕಂಡು ಇಬ್ನಸೂದರು ಈ ಬಣ್ಣಕ್ಕೆ ಬಲಿಬೀಳಲಿಲ್ಲ. ಆದರಿಂದ ಇರಾಕ-ನೇಜ್ದ ಪ್ರದೇಶದಲ್ಲಿ ಅಸಮಾಧಾನ ಹಬ್ಬಿಕೊಂಡಿದೆ. ಇಬ್ನಸೂದರ ಪ್ರಜೆಗಳಾದ ವಹಾಬಿಯರು ಇರಾಕ ಸರಕಾರದ ಮೇಲೆ ಸಾಗಿ ಹೋಗಲಿಕ್ಕೂ ಸಿದ್ಧರಾಗಿದ್ದಾರೆ. ಇಬ್ನಸೂದರು ಸಮಾಧಾನ ಹೇಳಿದ್ದರಿಂದ ಇಷ್ಟಕ್ಕೆ ತಡೆದಿದೆ.

೨. ಮುಸಲ್ಮಾನರ ಅತ್ಯಾಚಾರಕ್ಕೆ ಬಹುತರವಾಗಿ ಸ್ಥಳೀಕ ಅಧಿಕಾರಿಗಳೇ ಕಾರಣರೆಂದು ದಾವಣಗೆರೆ ಹಾಗು ಪಂಚಮಹಾಲ ಜಿಲ್ಲೆಯೊಳಗಿನ ಗೋಧ್ರಾದಲ್ಲಿ ಒದಗಿದ ಪ್ರಕಾರಗಳಿಂದ ನಿಃಸಂಶಯವಾಗಿ ಹೇಳಬಹುದು. ಸ್ವಭಾವತಃ ಹಿಂದುಗಳು ಎಂದೂ ಕಾಯಿದೆಯನ್ನು ಉಲ್ಲಂಘಿಸಲು ಮುಂದಾಗುವದಿಲ್ಲ. ಆದಷ್ಟರ ಮಟ್ಟಿಗೆ ಕಾಯಿದೆಯ ಉಪಾಯಗಳನ್ನೇ ಕೈಕೊಳ್ಳುತ್ತಾರೆ. ದಾವಣಗೆರೆಯಲ್ಲಿ ಡಿ| ಮೆಜಿಸ್ಟ್ರೇಟರ ತನಕ ಅವರು ತಮ್ಮ ದೂರುಗಳನ್ನು ಒಯ್ದು ಅವರಿಗೆ ಕರತಂದರು. ಪೋಲೀಸ ಸಿಬಂದಿಯೂ ಬಂತು. ವಾದ ವಿಷಯದ ಗುಣ-ದೋಷಗಳನ್ನು ವಿಚಾರಿಸದೆ ಅಧಿಕಾರಿಗಳು ಹಿಂದುಗಳಿಗೇ ಸುಮ್ಮನಿರಲು ಆಜ್ಞಾಪಿಸಿದ ನೋಟ ನೋಡಿದ ಮೇಲೆಯೇ ಅಧಿಕಾರಿಗಳು ನಿರಾಧಾರಿ ಪುಕ್ಕರೆಂದು ಮುಸಲ್ಮಾನರಿಗೆ ಸಿದ್ಧವಾಗಿ ಅವರಿಗೆ ಕಳೆ ಏರಿತು. ಕಲ್ಲು, ಹಳೇ ಜೋಡು, ಬರ್ಚಿ ಮುಂತಾದ ಆಯುಧಗಳನ್ನು ಒಗೆದುಹಾಕಲು ಆಶ್ರಯವಿತ್ತ ಪುಣ್ಯಾತ್ಮರು ಪೋಲೀಸರೇ! ಗೋಧ್ರಾದಲ್ಲಿಯೂ ಇದೇ ಕಥೆ! ಪೋಲೀಸರು ನ್ಯಾಯಾನ್ಯಾಯ ವಿಚಾರ ಮಾಡದೆ ಮುಸಲ್ಮಾನರ ಪುಂಡಾಟಿಕೆಗೆ ಇಂಬುಗೊಟ್ಟರು. ರಾಜ್ಯ ಮಾರ್ಗದ ಮೇಲೆ ಆಕಳುಗಳನ್ನು ಹಿಂದುಗಳಿಗೆ ಚೇತರಿಸುವದಕ್ಕಾಗಿ ಯಜ್ಞ ಪಶುಗಳಂತೆ ಕಟ್ಟಿದರೂ ಆ ಕಡೆ ಅಧಿಕಾರಿಗಳ ಲಕ್ಷ ಹೋಗುವದಿಲ್ಲ ಏನು ಕುರುಡ ದರ್ಬಾರವಿದು! ಊರೊಳಗೆ ಕಾಲಕಾಲಕ್ಕೆ ಸಂಭವಿಸುವ ಗುಟ್ಟನ್ನರಿತುಕೊಂಡ. ಅದರ ನಿವಾರಣೆಗಾಗಿ ಕೂಡಲೆ ಉಪಾಯಗಳನ್ನು ಕಾಯಿದೆಯಂತೆ ಕಲ್ಪಿಸಲು ಪೋಲೀಸರು ನಿಷ್ಣಾತರೆಂದು ಇಡೀ ಹಿಂದುಸ್ಥಾನದಲ್ಲಿ ಖ್ಯಾತಿ! ಇಂಥ ಮಹಾನುಭಾವರಿಗೆ ರಾಜಮಾರ್ಗದ ಮೇಲೆ ಹಗಲಿಗೆ ಗೋವುಗಳನ್ನು ಕಟ್ಟಿದ ದೊಂಬಿಯ ತಯಾರಿ ನಡೆದ ಸಂಗತಿ ತಿಳಿಯಲಿಲ್ಲೆಂದು ಯಾರು ತಾನೇ ಗ್ರಹಿಸುವರು? ದಾವಣಗೆರೆಯೊಳಗಂತೂ ಪ್ರತ್ಯಕ್ಷ ಪೋಲೀಸರೇ ಮುಸಲ್ಮಾನ ಪುಂಡರಿಗೆ ಪುಂಡಾಟಿಕೆಗೆ ಇಂಬು ಕೊಟ್ಟ ಸಂಗತಿ ಸ್ಪಷ್ಟವಾಗಿದೆ. ಗೋಧ್ರಾದೊಳಗೆ ಅಷ್ಟು ಪ್ರತ್ಯಕ್ಷ ಪುರಾವೆ ಸಿಗದಿದ್ದರೂ ಸಂಭವಿಸಿದ ಸಂಗತಿಗಳ ಮೇಲಿಂದ ಪೋಲೀಸಾದಿ ಅಧಿಕಾರಿಗಳ ಬೆಂಬಲವಿಲ್ಲದಿದ್ದರೆ ದಂಗೆಯಾಗುತ್ತಿದ್ದಿಲ್ಲವೆಂದು ಹೇಳಲು ಯಾವ ಪ್ರತ್ಯವಾಯವೂ ಇಲ್ಲ. ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ|| ವಾಮನರಾವ ಮುಕಾದಮರಿಗೂ ಹೆಸರಾದ ವಕೀಲರಾದ ಶ್ರೀ|| ಪುರುಷೋತ್ತಮ ದಾಸ ಶಹಾರವರಿಗೂ ನಿರ್ದಯತನದಿಂದ ಬಡಿಯುವಷ್ಟು ಪರಿಸ್ಥಿತಿಯುಂಟಾಗದೇಕಾದರೆ ಅದೆಲ್ಲ ನಿಮಿತ್ತಾರ್ಥದಲ್ಲಿ ನಡೆದಿತ್ತೆಂದು ಯಾರೂ ಹೇಳಬಹುದೇ? ಕಾಯಿದೆ ಕೌನ್ಸಿಲಿನಲ್ಲಿ ಈ ಪ್ರಶ್ನೆ ಕೇಳಿದರೆ, ಪುರುಷೋತ್ತಮ ದಾಸ ಶಹಾರವರು ಸತ್ತ ಸುದ್ದಿಯೇ ಸರಕಾರಕ್ಕೆ ಹತ್ತಿಲ್ಲ; ನಿರಾಧಾರ ಸುದ್ದಿಗಳೆಂದು ಡಿ| ಮೆಜಿಸ್ಟ್ರೇಟರೇ ಸರಕಾರಕ್ಕೆ ಸೌಮ್ಯ ತಂತಿ ಕೊಡುತ್ತಾರೆ. ಈ ನೋಟವು ನಿಜವಾಗಿ ಕ್ಷೇಮಪ್ರದವಲ್ಲ. ಪ್ರಜಾನೆಮ್ಮದಿಗಾಗಿ ಅಧಿಕಾರಿಗಳು ದುಡಿಯುವದಿಲ್ಲೆಂಬ ಬಗ್ಗೆ ಇದೊಂದು ಪ್ರತ್ಯಕ್ಷ ಪುರಾವೆ!

೩. ಹಿಂದುಗಳ ವರ್ತನವು ಪ್ರಶಂಸನೀಯವಿತ್ತೆಂದು ನಮೂದಿಸಲು ಸಂತೋಷವಾಗುತ್ತದೆ. ಗೋಧ್ರಾದೊಳಗಿನ ಜೈನರಂತು ಬಹು ಹಿಂದೆ ಸರಿದರು. 'ವಾದ್ಯ ಬಾರಿಸಬೇಡಿ' ಎಂದ ಕೂಡಲೆ ವಾದ್ಯ ಬಾರಿಸಲಿಲ್ಲ. ನಿರ್ವಿಘ್ನದಿಂದ ದೇವಕಾರ್ಯವಾದರಾಯಿತು! ಎಂಬುದೇ ಅವರ ಚಿಂತೆ. ಶ್ರೀ|| ವಾಮನರಾವ ಮುಕಾದಮ ಪ್ರಭೃತಿಗಳು ದೊಂಬಿಯ ಸುದ್ದಿ ಕೇಳಿದೊಡನೆ ಅತ್ಯಾಚಾರ ಮಾಡಲೋಸುಗ ಆ ಕಡೆ ಹೋಗದೆ ನೆಟ್ಟಗೆ ಡಿ| ಮೆಜಿಸ್ಟ್ರೇಟರ ಕಡೆಗೆ ಆತ್ಮಸಂರಕ್ಷಣೆಯ ಉಪಾಯಕ್ಕಾಗಿ ಹೋದರು. ಹಾದಿಯಲ್ಲಿ ೩೦೦-೪೦೦ ಮುಸಲ್ಮಾನರು ಇದಿರಾದಾಗ್ಯೂ ಎದೆಗುಂದದೆ ಓಡಿಹೋಗಲಿಲ್ಲ. ಇದು ನಿಜವಾಗಿ ಪ್ರಶಂಸನೀಯವಿದೆ. ಶ್ರೀ|| ಪುರುಷೋತ್ತಮದಾಸ ಶಹಾರವರು ಹಿಂದುಧರ್ಮದ ಮಾನರಕ್ಷಣಕ್ಕಾಗಿ ಪ್ರಾಣಾರ್ಪಣ ಮಾಡಲು ಸಿದ್ಧರಾದರು; ಪ್ರತ್ಯಕ್ಷ ಪ್ರಾಣಗಳನ್ನೇ ಅರ್ಪಿಸಿಬಿಟ್ಟರು. ಯಜ್ಞಕಾರ್ಯಕ್ಕಾಗಿ ದಧೀಚಿ ಮಹರ್ಷಿಯು ತನ್ನ ಅಸ್ಥಿಗಳನ್ನು ಕೊಟ್ಟು ದೇವಕಾರ್ಯಕ್ಕೆ ನೆರವಾದ ಸ್ಮರಣೆಯಾಗುತ್ತದೆ. ಶ್ರೀ|| ಪುರುಷೋತ್ತಮದಾಸರವರ ಪ್ರಾಣಾರ್ಪಣೆಯಿಂದ ಹಿಂದು ಸಮಾಜಕ್ಕೆ ನಿಜವಾಗಿಯೂ ಅಭಿಮಾನವುಂಟಾಗಿದೆ. ದಾವಣಗೆರೆಯೊಳಗಿನ ಹಿಂದುಗಳು ಸಂಖ್ಯಾಬಲದಿಂದಲೂ, ಬಾಹುಬಲದಿಂದಲೂ ಸಮರ್ಥರಿದ್ದಾಗ್ಯೂ ಅವರು ಹಿಂಸೆಗೀಡಾಗಲಿಲ್ಲ; ಬಹಿಷ್ಕಾರವನ್ನಾಚರಿಸಿದರು. ದೇವದ್ರೋಹ-ರಾಜದ್ರೋಹಗಳಂಥ ಮಹಾಪಾತಕಗಳನ್ನಾಚರಿಸಿದ ಮುಸಲ್ಮಾನರಿಗೆ ಶಾಸನವಾಗಬೇಕಾಗಿಯೂ ಅವರು ಹಟ ಹಿಡಿಯಲಿಲ್ಲ. ಮಾಮೂಲಿನಂತೆ ಗಣಪತಿ ಮೂರ್ತಿಯ ಮೆರವಣಿಗೆಯು ಜರುಗಿದರೆ ತಮ್ಮ ಸಂತೋಷವಾಯಿತೆಂದು

ಅವರು ಹೇಳಿದರು. ಈ ಔದಾರ್ಯವು ನಿಜವಾಗಿ ಪ್ರಶಂಸನೀಯವಿದೆ. ಮುಸಲ್ಮಾನರು ಇದನ್ನೆಲ್ಲ ವಿಚಾರಿಸಿ ಹಿಂದುಗಳ ಮೇಲೆ ಅನ್ಯಾಯದಿಂದ ಹಾವಳಿ ಹಾಕಬಾರದೆಂದು ಕೋರುವೆವು.

೪. ಪೋಪ ಗುರುಗಳು ಹಿಂದುಸ್ಥಾನದೊಳಗಿನ ತಮ್ಮ ಧಾರ್ಮಿಕ ರಾಜ್ಯದಲ್ಲಿ ಉಂಟುಮಾಡಿದ ಕ್ರಾಂತಿಕ ವ್ಯವಸ್ಥೆಯನ್ನು ಕಳೆದ ಸಂಚಿಕೆಯಲ್ಲಿ ವಿವರಿಸಿದ್ದೇವೆ. ಈ ವ್ಯವಸ್ಥೆಯಿಂದ ಮುಂಬಯಿ ಕಡೆ ಕ್ರೈಸ್ತರ ಮಟ್ಟಿಗೆ ಇಷ್ಟು ವ್ಯವಸ್ಥೆಯಾಯಿತೇ ಹೊರತು, ಉಳಿದ ಕಡೆ ಅವ್ಯವಸ್ಥೆಯು ಹಾಗೇ ನಡೆದದೆ. ಕೊಂಕಣಪಟ್ಟಿಯೊಳಗಿನ ಕ್ರೈಸ್ತರೂ, ನಮ್ಮ ಉತ್ತರ ಕನ್ನಡ ಜಿಲ್ಹೆಯೊಳಗಿನ ಕ್ರೈಸ್ತರೂ ಗೋವಾಂತಕ ಪಾದ್ರಿಗಳು ನಡಿಸುವ ಅನ್ಯಾಯವನ್ನು ಪರಿಹರಿಸುವದಕ್ಕಾಗಿ ಈಗ ಬಹುಕಾಲದಿಂದ ಹೆಣಗಾಡುತ್ತಿದ್ದಾರೆ; ಅವರಿಗೆ ಹೊಸ ವ್ಯವಸ್ಥೆಯಲ್ಲಿ ಬಿಡುಗಡೆಯಾಗಲಿಲ್ಲ. ಈ ಕುರಿತು ಇನ್ನು ಆಕ್ಷೇಪ ಮಾಡಿದರೆ ಪೋಪರು ಇವರಿಗೆ ಪಾಪಿಗಳೆಂದು ಸಂಬೋಧಿಸುತ್ತಾರೆ. ಇಂಥ ಸ್ಥಿತಿಯಲ್ಲಿ ಅವರೇನು ಮಾಡತಕ್ಕದ್ದು? ಆಳವಾಗಿ ವಿಚಾರಿಸಿದರೆ ನೂತನ ವ್ಯವಸ್ಥೆಯಿಂದ ಗೋವಾಂತಕ ಪಾದ್ರಿಗಳ ಬಿರುದಾವಳಿಯು ಹೆಚ್ಚಿತು; ಅದರ ಜೊತೆಗೆ ಪ್ರತಿಷ್ಠೆಯೂ ಹೆಚ್ಚಿತು. ಮುಂಬಯಿ ಕಡೆಗಳಲ್ಲಿ ಪೋರ್ತುಗೀಸ, ಬ್ರಿಟಿಶ ಪಾದ್ರಿಗಳ ಇಮ್ಮಡಿ ಆಡಳಿತೆಯಿಂದ ಕ್ರೈಸ್ತರಿಗೆ ಕಷ್ಟ-ನಷ್ಟವಾಗುತ್ತಿದ್ದರೆ ಕೊಂಕಣಪಟ್ಟಿಯಲ್ಲಿಯೂ, ನಮ್ಮ ಜಿಲ್ಹೆಯಲ್ಲಿಯೂ ಇದೇ ಸ್ಥಿತಿಯಿಲ್ಲವೇ? ಪೋಪ ಗುರುಗಳು ಪರ್ಯಾಲೋಚಿಸಬೇಕಾದ ವಿಷಯವಿದು. ಪೋಪರ ಪ್ರತಿನಿಧಿಗಳಾಗಿ ಇಲ್ಲಿ ಬಂದ ಪ್ರತಿನಿಧಿಗಳೂ ಇದನ್ನು ಆಲಿಸತಕ್ಕದ್ದು. ಕ್ರೈಸ್ತರು ಸುಮ್ಮನೆ ಕೂಡ್ರದೆ ಚಳವಳಿ ನಡಿಸಿ ತಮ್ಮ ದೂರುಗಳನ್ನು ಪರಿಹರಿಸುವದಕ್ಕಾಗಿ ಪ್ರಯತ್ನಪಡಬೇಕು. ಈ ಪ್ರತ್ಯಕ್ಷ ಕಾರ್ಯಕ್ಕೆ ಪೋಪ ಗುರುಗಳು ಪಾಪವೆಂದು ಎಣಿಸಲಿಕ್ಕಿಲ್ಲ.

ವಾಚಕ ಮಹಾಶಯರಿಗೆ ವಿನಂತಿ.

ಇನ್ನು ೨ ಸಂಚಿಕೆಗಳನ್ನು ಹೊರಡಿಸಿದರೆ, 'ವೃತ್ತ'ದ ೧೨ನೇ ವರ್ಷವು ಮುಗಿಯುತ್ತದೆ. ಈ ೧೨ ವರ್ಷಗಳಲ್ಲಿ 'ವೃತ್ತ'ವು ಕಾಲಕಾಲಕ್ಕೆ ಸಮಯೋಚಿತವಾಗಿ ಪ್ರಜೆಗಳ ದೂರುಗಳನ್ನು ಧ್ವನಿಸಲು ಶಕ್ತಿಮೀರಿ ದುಡಿದದೆಂದು ನೀವು ಬಲ್ಲವರಿದ್ದೀರಿ. ಅದಕ್ಕೆ ತಕ್ಕದ್ದಾಗಿ ಲೋಕಾಶ್ರಯವು 'ವೃತ್ತ'ಕ್ಕೆ ದೊರಕಲಿಲ್ಲ. ಇನ್ನು ಮುಂದೆ ವಿಶೇಷ ಸೇವೆ ಮಾಡಬೇಕೆಂಬ ಸಂಕಲ್ಪವಿದೆ. ಪುಟ ಹೆಚ್ಚಿಸಿ, ವಿವಿಧ ವಿಷಯಗಳ ಮೇಲೆ ಸವಿಸ್ತರ ಲೇಖಗಳನ್ನು ಪ್ರಕಟಿಸಬೇಕಾಗಿ ನಮ್ಮ ಕಡೆ ಹಿತಚಿಂತಕರು ಸೂಚನೆ ಸಹ ಮಾಡಿದ್ದಾರೆ. ಸುಧಾರಣೆ ಮಾಡುವ ಕೆಲಸವು ಸಂಪೂರ್ಣವಾಗಿ ಲೋಕಾಶ್ರಯದ ಮೇಲೆ ಅವಲಂಬಿಸಿದೆ ಚಂದಾದಾರರು ಇದನ್ನು ವಿಚಾರಿಸಿ, ನಮಗೆ ವಿಶೇಷ ಸಹಾಯ ಮಾಡಬೇಕಾಗಿ ಅರಿಕೆಯಿದೆ. ಚಂದಾದಾರರು, ಹಿತಚಿಂತಕರು ಸ್ವಲ್ಪ ಪ್ರಯತ್ನ ಮಾಡಿ ಲೋಕಾಶ್ರಯವನ್ನು ಬೆಳಿಸಿದರೆ, 'ವೃತ್ತ'ದೊಳಗಿನ ನ್ಯೂನತೆಗಳನ್ನು ಪರಿಹರಿಸಲಿಕ್ಕೆ ಬಹಳ ಅನುಕೂಲವಾಗುವಂತಿದೆ. ಕಾರಣ ಚಂದಾದಾರರೂ, ಹಿತಚಿಂತಕರೂ ತಮ್ಮ ತಮ್ಮ ಗೆಳೆಯರ ಮನವೊಲಿಸಿ ಚಂದಾದಾರರನ್ನು ಶೇಖರಿಸಬೇಕಾಗಿ ನಮ್ಮದೊಂದು ಬಿನ್ನಹವಿದೆ.

ವರ್ಷಾರಂಭದ ಚಂದಾದಾರರು ತಮ್ಮ ವರ್ಗಣಿ ರೂ. ೩-೦-೦ನ್ನು ಮುಂಗಡ ಮನಿಆರ್ಡರಿನಿಂದ ಕಳಿಸುವದು, ಯಾವದೇ ಕಾರಣದಿಂದ ಚಂದಾದಾರರಾಗಲಾರದವರು ಹಾಗೆಯೇ ಮುಂಚಿತವಾಗಿ ತಿಳಿಸತಕ್ಕದ್ದು.

ಇತಿ, ಮೆನೇಜರ, ಕಾ. ವೃ.]

ಸ್ಥಾನಿಕ ವೃತ್ತಾಂತ.

ಕುಮಟಾ — ನಿನ್ನ ರಾತ್ರಿಯಿಂದ ತೆರಪಿಲ್ಲದೆ ಮಳೆ ಬೀಳಲಾರಂಭಿಸಿದೆ. ಹಬ್ಬಿಗೆ ಸಿಕ್ಕಿದ್ದ ಮಳೆ ಈಗ ಬೀಳುತ್ತದಾಗಿ ತಕರ! ಈ ಮಳೆಯಿಂದ ಬೆಳೆಗೆ ನಷ್ಟವಿದೆ. ಊರಡಿಕೆ ಒರಹತ್ತಿದ ಮೋರಿಯ ಮೇಲೆ ನೀರು ಸಾಗಿ ಹೋಗುವದರಿಂದ ಗಾಡಿಕಾರರು ಗತಿಗೆಟ್ಟಿದ್ದಾರೆ. ಒಡಿಗರಿಗೂ ಕೆಲಸವಿಲ್ಲ. ಮುಂಬಯಿ ಕಡೆ ನೀರು ದೀವಗಿಗೆ ಬಂದು ಉಪ್ಪಿನಪಟ್ಟಣದ ತನಕ ಹೋಗುವದಿಲ್ಲ, ದೀವಗಿಯಿಂದಲೇ ಸಾಗಿಹೋಗಲಾರಂಭಿಸಿದೆ. ದೋಣಿಯವರು ಕಾಗೆ ಗೂಡ್ಸಿನವರು ಗೋಕರ್ಣದ ಬಂದರಿನಿಂದ ಉಂಟಾದ ಅವಸ್ಥೆ! ಈ ವಾರದಲ್ಲಿ ೨—೪ ಇಂಚು ಮಳೆ ಬಿತ್ತು. ಒಟ್ಟು ೧೮೦—೧೦ ಇಂಚು ಮಳೆಯಾಯಿತು.

ತಾರೀಖು ೨೭ನೇಗೆ ಹಳೇ ಮುನಿಸಿಪಾಲಿಟಿಯ ಕೊನೆ ಸಭೆಯಾಯಿತು. ಕೋಡ್ಕಣಿ ಕಸ್ಬಾ ಬಂದರದ ಬಳಿ ನಾಕೆ ಕಟ್ಟುವದಕ್ಕಾಗಿ ೧೧೦೦ ರೂಪಾಯಿ ಮಂಜೂರಾಗಿದೆಯಂತೆ. ಮುನಿಸಿಪಾಲಿಟಿಗೆ ಸಭಾಮಂಟಪ ಕಟ್ಟಲು ೨॥ ಸಾವಿರ ರೂಪಾಯಿ ಮಂಜೂರಾಗಿವೆ. ವರ್ತಕರು ಸೂಚನಾ. ತಾರ ಒಳಕ್ಕೆ ತೆರಿಗೆ ಈ ತನಕ ವಸೂಲಾಗುತ್ತಿತ್ತು. ಈಗ ಆ ಪದ್ಧತಿ ರದ್ದುಪಡಿಸಿ ಕಸ್ಬಾದ ನಾಕೆಯ ಹೊರಗೆ ಮಾಲು ಒಯ್ಯಬೇಕಾದರೆ ನಾಕೆದಾರರು ಅಂದಾಜಿನಿಂದ ಹೇಳಿದಷ್ಟು ರಕಮನ್ನು ಮುಂಗಡ ಕೊಟ್ಟು ಮಾಲು ತರಬೇಕೆಂದೂ ಆ ಮೇಲೆ ಲೆಖ್ಖಾಚಾರವಾಗಬೇಕೆಂದೂ ನಿರ್ಣಯಿಸಲಾಗಿದೆ. ಹಳೆ ಮುನಿಸಿಪಾಲಿಟಿಯ ಹೊಸ ಕ್ರಮವಿದು. ಈ ಹೊತ್ತಿನಿಂದ ಹೊಸ ಮುನಿಸಿಪಾಲಿಟಿ, ಇನ್ನ್ಮೇಲೆ ಹೊಸ ಹೊಸ ಕ್ರಮಗಳು ಬರುತ್ತವೆ. ನೋಡಬೇಕು. ಮುನಿಸಿಪಾಲಿಟಿ ಸಭೆಯಲ್ಲಿ ಕೈಫಿಯತು ಸಾದರಾಯಿತು.

ಮೊಗಲಾಯಿಗಳ ಹಾವಳಿ ಜೋರಿನಿಂದ ನಡೆದದೆ. ಹಗಲಿರುಳು ಸೋರ್ತಿಯೋ? ಜೂಗಾರೋ? ನಡೆದದೆ. ಪೋಲೀಸರ ಕಡೆಯಿಂದ ಆ ಯಸನ್ನು ಕ್ಕಿದೆ ರಿಯರು ಕೊಟ್ಟು ಕೀವಟಿಗೆ! ಊರಿಗೆಲ್ಲ ಚಿಂತೆ!! ಮೊಗಲಾಯಿಗಳಿಗೆ ಹೀಗೆ ಹಾವಳಿ ಹಾಕಲು ಸ್ಥಳೀಕ ಅಧಿಕಾರಿಗಳು ಅಪ್ಪಣೆ ಕೊಡುವದರ ಕಾರಣವೇನು?

ಇಲ್ಲಿಯ ಶ್ರೀ ಶಾಂತಿಕಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ಸಪ್ತಾಹ ಮಂಗಲೋತ್ಸವವು ರೀತಿಯಂತೆ ಜರುಗಿತು.

ರಾ| ಕೃಷ್ಣಾ ಕೇಶವ ಗಾಯತೊಂಡೆ ಇವರು ತಿಳಿಸುವದೇನೆಂದರೆ:— "ಕಳೆದ ಗುರುವಾರ ತಾರೀಖು ೨೭ನೇಗೆ ನನ್ನ ಆಕಳನ್ನು ಪೋಲೀಸರು ಹಿಡಿದು ದೊಡ್ಡಿಗೆ ಹಾಕಿದರು. ಆಕಳು ಬಹು ಸಭ್ಯವಾದದ್ದು, ಗೋಳಿಗೆ ಹೋಗುವ ಆಕಳು ಮಾತ್ರ ಕೊಟ್ಟಿಗೆಯೊಳಗಿಂದ ಬಿಟ್ಟಿತ್ತು, ಪೋಲೀಸರು ಹಿಡಿದು ದೊಡ್ಡಿಗೆ ಒಯ್ದರು. ದೊಡ್ಡಿಗೆ ಒಯ್ಯುವಾಗ ಆಕಳಿಗೆ ಮನಸೇಚ್ಛೆ ಹೊಡೆದರು. ನಾನು ಕೂಡಲೆ ಆಕಳಿಗೆ ತಂದು ಇಲ್ಲಿಯ ದನಗಳ ದವಾಖಾನೆಯಲ್ಲಿ ಅಸಿ| ಸರ್ಜನರಾದ ಮಿ| ಶಹದೇವರವರಿಗೆ ತೋರಿಸಿದೆನು. ಅವರು ಪೆಟ್ಟಿನ ಬಗ್ಗೆ ಸರ್ಟಿಫಿಕೇಟು ಕೊಟ್ಟಿದ್ದಾರೆ (ಸರ್ಟಿಫಿಕೆಟನ್ನು ರಾ| ಗಾಯತೊಂಡೆಯವರು ನಮ್ಮ ಕಡೆಗೆ ಕಳುಹಿಸಿದ್ದಾರೆ. ಬಾಹ್ಯ ಹಿಂಸೆಯಿಂದ ಬೆನ್ನಿನ ಒಡಿಗೆ ಹಿಂಗಾಲಿನ ತೊಡೆಗೆ ಪೆಟ್ಟಾಗಿದೆಂದು ಡಾಕ್ಟರರು ನಮೂದಿಸಿದ್ದಾರೆ. ಸಂ) ಮೇಲಧಿಕಾರಿಗಳು ಇತ್ತ ಲಕ್ಷ ಕೊಡಬೇಕು. ಪೋಲೀಸರಿಗೆ ಬುದ್ಧಿ ಹೇಳಬೇಕು." ಗೋಳಿಗೆ ಹೋಗುವ ದನಗಳನ್ನು ಹೀಗೆ ವಿಚಾರವಿಲ್ಲದೆ ಹಿಡಿಯಹತ್ತಿದರೆ ಜನರು ಬಾಳ್ವೆ ಮಾಡುವ ಬಗೆ ಹೇಗೆ?

ಗೋಕರ್ಣ ಮುನಿಸಿಪಾಲಿಟಿಯ ಹದ್ದಿನೊಳಗಿನ ಭಂಡಿಕೇರಿಗೆ ಹೋಗುವ ಮಾರ್ಗದ ಮೇಲೆ ಹೊಂಡ-ಕೊರಕಲು ಬಿದ್ದು ಇತ್ತ ನಡೆದಾಡುವದು ಅಪಾಯಕರವಾಗಿದೆ ದೀಪಗಳನ್ನು ಹಚ್ಚುತ್ತಾರೆ, ಆದರೆ ಅವುಗಳಿಂದ ಪ್ರಯೋಜನವಾಗುವದಿಲ್ಲ ಬಹು ದೂರ ಈ ಕಂಬಗಳಿವೆ. ಮುನಿಸಿಪಾಲಿಟಿಯು ಸುತ್ತು ಮುತ್ತು ಬೇಕಷ್ಟು ಕಂಬಗಳಿವೆ ಅವುಗಳೊಳಗಿನ ಕೆಲವನ್ನು ಈ ರಸ್ತೆಯ ಬದಿಗೆ ತಂದು ಹಾಕಿದರೆ ಪ್ರಯಾಣಿಕರಿಗೆ ಅನುಕೂಲವಾಗುವದಾಗಿ ಒಬ್ಬರು ತಿಳಿಸುತ್ತಾರೆ.

ಹೊನ್ನಾವರ— ನಮ್ಮಲ್ಲಿಯ ಈಗಿನ ಸಬಜಡ್ಜರ ವಿಚಿತ್ರ ಲೀಲೆಗಳ ಕುರಿತು ಹಿಂದೊಮ್ಮೆ ಬರೆಯುವ ಪ್ರಸಂಗ ಬಂದಿತ್ತು. ಈಗ ಪುನಃ ಇವರ ದಿನಚರಿ ಚರಿತ್ರೆ ಬಣ್ಣಿಸುವ ಸಂಧಿ ಬಂದಿದೆ. ಇಲ್ಲಿಯ ವ್ಯಾಪಾರಿ ವರ್ಗದ ಮೇಲೆ, ಹೆಚ್ಚಾಗಿ ಒಬ್ಬಿಬ್ಬರ ಮೇಲೆ ನಂಮ ಮುನ್ಸಿಫ ಮಹಾಶಯರ ವಕ್ರದೃಷ್ಟಿ ಬಿದ್ದಿರುವದಾಗಿ ತೋರುತ್ತದೆ, ಯಾಕಂದರೆ ಮೊನ್ನೆ ಅಂದರೆ ಕಳೆದ ಗುರುವಾರ ದಿವಸ ಇಲ್ಲಿಯ ಪ್ರಮುಖ ಜವಳೀ ವ್ಯಾಪಾರಸ್ಥರಲ್ಲೊಬ್ಬರ ಚಿಲ್ಲರೆ ರಕಮಿನ ದಾವೆ ಇತ್ತು. ಈ ದಾವೆ ಆಸಾಮಿ ಸ್ವತಃ ದಾಖಲು ಮಾಡಿದ್ದರು ವಕೀಲರನ್ನು ಕಟ್ಟಿದ್ದಿಲ್ಲ. ರೀತಿಯಂತೆ ವಾದಿಗಳ ಪರ ಸರಿ ವ್ಯಾಪಾರಸ್ಥರು ಸಾಕ್ಷಿದಾರರ ಪಂಜರವನ್ನೇರಿದರು ಖಾತೇ—ಶೀಟ ಬುಕ್ಕುಗಳನ್ನು ಒಂದು ಹೊಸ ವಸ್ತ್ರದಲ್ಲಿ ಕಟ್ಟಿಕೊಂಡಿದ್ದರು. ಮುನ್ಸಿಫ ಮಹಾಶಯರ ದೃಷ್ಟಿ ಮೊದಲು ಈ ಅರಿವೆ ತುಂಡಿನ ಮೇಲೆ ಹೋಯಿತು *Red rag to the Bull* ಎಂಬ ಇಂಗ್ಲಿಷ ಗಾದೆಯಂತೆ ಈ ಅರಿವೆ ತುಂಡು ಕಂಡೊಡನೆ ಅವರ ಗತ್ತಿಯಾಯಿತು, "ಇಂಥ ಹೊಲಸು ವಸ್ತ್ರದಲ್ಲಿ ಬುಕ್ಕುಗಳನ್ನು ಕಟ್ಟಿಕೊಂಡು ನಂಮ ಮುಂದೆ ಬರಬಾರದು- ಅದನ್ನು ಹೊರಗೆ ಬಿಸಾಡು" ಎಂಬ ವಾಕ್ಯಗಳು ಹೊರಬಿದ್ದವು- ವ್ಯಾಪಾರಸ್ಥರು ಕೂಡಲೆ ಈ ಹುಕುಂ (?) ಮಾನ್ಯ ಮಾಡಿದರು! ಆದರೂ ನ್ಯಾಯಾಧೀಶರ ಕೋಪವು ಶಾಂತವಾಗಲಿಲ್ಲ- ದಾವಾ ರಕಮಿನಲ್ಲಿ ಕೆಲವು ಬಡ್ಡಿ ಜೋಡಿಸಿತ್ತು. ಈ ಸಂಗತಿ ನಜರಿಗೆ ಬಂದ ಕೂಡಲೆ, "ಈ ಮನುಷ್ಯನಿಗೆ ಫಕ್ತ ಬಡ್ಡಿ ರಕಮಿನಿಂದಲೇ ಜೀವನ ನಡಿಯುತ್ತದೋ" ಎಂತ ರೇಗಿ ಹೇಳಿದರು. ವಾದಿಗಳು ಸಮಾಧಾನ ಮಾಡಹೋದರು. ತಮಗೇ ಹೊರಗೆ ಬಡ್ಡಿ ಕೊಡಬೇಕಾಗುತ್ತದೆ ಅಂದರು. ಆಗ "ಮೊನ್ನೆ ನೀವು ೧೦-೧೫ ಸಾವಿರ ರೂಪಾಯಿಗಳ ಭೂಮಿ ಕ್ರಯಕ್ಕೆ ಕೊಂಡಿದ್ದ ಎಂತ ಸಾಕ್ಷಿ ಹೇಳಿದೆಯಲ್ಲ, ಅದು ಎಲ್ಲಿಂದ?" ಎಂತ ಮುನ್ಸಿಫ ಮಹಾಶಯರು ಕೇಳಿದರು. ಮತ್ತು "ಮುಂದಿನ ಬಡ್ಡಿ ಕೊಡಿಸುವದಿಲ್ಲ, ಜವಳಿ ಮಾರುವಾಗಲೇ ಮುನಾಫೆ ತಗೋತೀರಿ, ಪುನಃ ಬಡ್ಡಿ ಆಕರಣೆ ಮಾಡ್ತೀರಿ." ಇತ್ಯಾದಿ ಮಹಾವಾಕ್ಯಗಳನ್ನು ಉಚ್ಚರಿಸಿದರು.

ವಾದಿಗಳಾಗಿ ಕೋರ್ಟಿಗೆ ಹೋಗುವವರೇ ಮೂರ್ಖರು. ಯಾಕಂದರೆ ಫಕ್ತ ಸಂಬಳದ ಮೇಲೇನೇ ಉದರನಿರ್ವಾಹ ಮಾಡುವ ಸರಕಾರಿ ಅಧಿಕಾರಿಗಳ ಕಟುಉಕ್ತಿಗಳನ್ನು ನಿರುಪಾಯದಿಂದ ಕೇಳಿಕೊಳ್ಳುವ ದುರ್ಧರ ಪ್ರಸಂಗ ಒದಗಿರುವದು! ಈ ಅಧಿಕಾರಿಗಳಿಗೆ- ವ್ಯಾಪಾರಸ್ಥರ ಗತಿಯ ನಿಜಸ್ಥಿತಿ ತೋರುವದಿಲ್ಲ— ಸಾಲದೆ ಹೋಗುವ ಅರೆಗೆ ಸಾಮಾನ್ಯನಿದ್ದರೂ ಗಿರಾಕಿಗಳು ಹಣ ಕೊಡದೇ ಇದ್ದಲ್ಲಿ ವ್ಯಾಪಾರಿಗೆ ಹೆಚ್ಚು ಖರ್ಚು ತೋರಬಾರದೆಂಬ ಸದುದ್ದೇಶದಿಂದ ವಕೀಲರನ್ನು ಸಹ ಕಟ್ಟದೆ ದಾವೆ ಮಾಡಿದ ಈ ವ್ಯಾಪಾರಸ್ಥರಿಗೆ ಈ ತರದ ಅಸಹ ಶಬ್ದಗಳನ್ನು ಅಹಂಮನ್ಯ ಸರಕಾರಿ ಅಧಿಕಾರಿಗಳಿಂದ ಕೇಳಿಕೊಳ್ಳುವ ಪ್ರಸಂಗ ಬಂತಲ್ಲವೇ?

ಇದೇ ರೀತಿ ನಂಮ ಮುನ್ಸಿಫ ಮಹಾಶಯರು ನ್ಯಾಯಾಧೀಶರಿಗೆ ಯೋಗ್ಯವಲ್ಲದ ಮಾತುಗಳನ್ನಾಡಹತ್ತಿದರೆ—

ಸ್ವಾಭಿಮಾನವುಳ್ಳವರು ಈ ಕುರಿತು ಯೋಗ್ಯ ಇಲಾಜ ಮಾಡ್ಯಾರೆಂತ ಪೇಟೆಯಲ್ಲಿ ಗುಜುಗುಜು ಮಾತಾಡುತ್ತಿರುವದನು ಸುದ್ದೀ ಮುದ್ರಣಾನು ಕೇಳಿಕೊಂಡು ಅವನು ಏಕದಮ್ಮಿಗೆ ಅವರ ಚರ್ಚೆ ಮಾಡಿದನು! ನಾವು ಸಹ ಮುಚ್ಚಿಕಯಿಂತ ಈ ಸುದ್ದಿ ಎಲ್ಲರಿಗೂ ಗೊತ್ತಾಗಲೆಂದು ಪತ್ರಕಾರರಿಗೆ ತಿಳಿಸುತ್ತೇವೆ. ಮತ್ತು ಇನ್ನು ಮುಂದೆ ಸಹಾ ಪ್ರತಿ ವಾರದಲ್ಲೂ ನಮ್ಮಲ್ಲಿಯ ಕೋರ್ಟು ಕಚೇರಿಗಳಲ್ಲಿ ನಡೆಯುವ ಚಿತ್ರವಿಚಿತ್ರ ವಿಚಾರಗಳನ್ನು ಕೊಡುತ್ತಾ ಬರಬೇಕೆಂದು ನಿಶ್ಚಯಿಸಿದ್ದೇವೆ—ಆಗಬಹುದಲ್ಲವೇ?

ಹೊಸಾಕುಳಿಯ ನಾಗಪ್ಪಾ ಭಲಪರಮಯ್ಯಾ ಹೆಗಡೆ ಮುಷ್ಕಾರೆ ಅವರು ತಿಳಿಸುವದೇನಂದರೆ:—ಅಡ್ಕೆ ಮರಗಳಿಗೆ ಹತ್ತುವ ಕೊಳೆ ರೋಗವು ಬೇಸಾಯ ಮಾಡುವ ಪದ್ಧತಿಯಿಂದ ಪರಿಹಾರವಾಗುತ್ತದೆ ೧೯೨೪ ನೇ ಇಸ್ವಿಯಿಂದ ನಾನು ಈ ಪ್ರಯೋಗ ಮಾಡುತ್ತಿದ್ದೇನೆ ಎಗ್ರಿಕಲ್ಚರ ಕಾಮಗಾರರಾದ ಮಿ| ಕೇ. ಎಲ್. ಹೆಗಡೇಕರ ಅವರು ಮದ್ದಿನ ಪ್ರಯೋಗ ಮಾಡಿ ತೋರಿಸಿದರು ಮಳೆ ಜಾಸ್ತಿಯಾದಾಗ ಪಂಪಿನಿಂದ ಎರಡಾವರ್ತಿ ಮದ್ದನ್ನು ಮರಗಳಿಗೆ ಹೊಡಿಸಿದ್ದೇನೆ. ಕೊಳೆ ರೋಗ ಸೋಂಕಲಿಲ್ಲ, ಮರಗಳ ಮೇಲಿದ್ದ ಎಲೆ ಬಳ್ಳಿಗಳಿಗೂ ಅಪಾಯವಾಗಲಿಲ್ಲ. ಬೊಟ್ಟಿ ಕಟ್ಟುವ ಅರ್ಧಾಂಶದ ಖರ್ಚು ಈ ಮದ್ದಿಗೆ ಬೀಳುತ್ತದೆ. ಕೊಳೆ ರೋಗದಿಂದ ನಷ್ಟಪಡುವವರು ಇದನ್ನು ಉಪಯೋಗಿಸಿ ಲಾಭಹೊಂದಬೇಕು. ಇತ್ಯಾದಿ

ಕೆನರಾ ಕೋಸ್ಟ ಡಿವಿಜನಲ್ ಫೋರೆಸ್ಟ ಆಫೀಸರರಾದ ಮಿ| ಎಮ್. ಎಸ್. ತಗ್ಗರ್ಸಿಯವರು ತಿಳಿಸುವದೇನಂದರೆ:—ಗುಂಡಬಾಳೆಯ ಸುತ್ತು ಮುತ್ತು ೧೩.೨ ಫೂಟುಗಳ ಅಗಲದ ಶಿರಯಾಣಿಯನ್ನು ಜಂಗಲಕ್ಕೆ ಬೆಂಕಿ ಹೋಗದಂತೆ ಊರವರು ಸುಡಲು ಸರಕಾರ ಕರಾರ ಆಗಿರುತ್ತದೆ. ಅಜಾಗ್ರತೆಯಿಂದ ಬೆಂಕಿ ಹಗಲಿದರೆ, ಊರವರು ಜವಾಬದಾರರಿದ್ದಾರೆ. ಅಕ್ಟೋಬರ ತಿಂಗಳಲ್ಲಿ ಶಿರಯಾಣಿ ಕಡಿದು ಹಾಕಿ ಜನವರಿ ತಿಂಗಳಲ್ಲಿ ಅದನ್ನು ಸುಟ್ಟರೆ, ಜಂಗಲಿಗೆ ಬೆಂಕಿ ಹತ್ತುವ ಭೀತಿಯಿಲ್ಲವಾಗಿ ಮಿ| ತಗ್ಗರ್ಸಿಯವರ ಸೂಚನೆ

ಭಟಕಳ— ೩-೪ ದಿವಸಗಳಿಂದ ಹೆಚ್ಚಿನ ಮಳೆ. ಬೇಸಾಯಕ್ಕೆ ಅದರಿಂದ ಹಿತವಿಲ್ಲ. ಈ ವಾರದಲ್ಲಿ ಹೆಚ್ಚಿನ ಶಿಶು ಮರಣಗಳಾದವು.

ಸಿಗರೇಟು ಕಂಪನಿಯವರು ಮೋಟಾರು ತುಂಬ ಸಿಗರೇಟು ತಂದು ಅದನ್ನು ಸೇದಲು ನಮೂನೆ ನಮೂನೆಯಿಂದ ಹೇಳಿದರು ಅಂಗಡಿಕಾರರಿಗೆ ಅದನ್ನು ಮಾರಾಟ ಮಾಡಲು ಉಪದೇಶಿಸಿದರು ಯಾರೂ ಕಿವಿಗೊಡಲಿಲ್ಲ ಮಹಾತ್ಮರ ಉಪದೇಶವು ಇಲ್ಲಿ ನಾಟಿದೆ.

ಇಲ್ಲಿ ಹಾ. ಒತಿಸೇಗಿ ಕರಾಣಿರ ಸಂಘ ಸ್ಥಾಪಿಸಲ್ಪಟ್ಟಿದೆ. ಈ ಸಂಘದವರು ಈಕೊತ್ತು ಸೋಮವಾರದಿಂದ ವಾಚನಾಲಯವನ್ನು ಹೊಂದಿಸುವವರಿದ್ದಾರೆ. ಜನರು ಉದಾರಾಶ್ರಯವನ್ನೀಯಬೇಕು.

ಮಧ್ಯ ಪೇಟೆಯಿಂದ ಹಡೀಲಕ್ಕೆ ಒಂದು ಮಾರ್ಗ ಹೋಗುತ್ತದೆ ಈ ಮಾರ್ಗದ ದುರುಸ್ತಿ ನಡೆದದೆ. ಈ ದುರುಸ್ತಿಯಿಂದ ಅಷ್ಟು ಪ್ರಯೋಜನವಿಲ್ಲ ಮಾತ್ರ ಭಟಕಳ ಸಂಕದಿಂದ ಸ್ಮಶಾನದ ಮೂಲೆಕಟ್ಟೆ ಕನಕಮಗ್ಗಲಿಗೆ ೨ ಫರ ಕಾಲಗಳು ಕಟ್ಟಿ ಮಣ್ಣು ಹರವಿದರೆ ಕಾಲುವೆಯಿಂದ ನೀರು ಹೋಗಲು ಅಡ್ಡಿಯಾಗದು. ಮುಂದೆ ದುರುಸ್ತಿ ಬಗ್ಗೆ ಹೆಚ್ಚಿನ ಖರ್ಚು ತಗಲಲಿಕ್ಕಿಲ್ಲ

ಈ ಭಾಗದ ಹಿಂದು ದೇವಾಲಯ ಕಮೀಟಿಯವರು ಕಣ್ಮುಚ್ಚಿಕೊಂಡು ಸ್ವಸ್ಥ ಕುಳಿತುಕೊಂಡಿದ್ದಾರೆ. ಜನರು ಬರಕೊಂಡ ಅರ್ಜಿಗೆ ಇನ್ನೂ ಉತ್ತರವಿಲ್ಲ. ಜನರು ಪ್ರಾರ್ಥಿಸಿ ಪ್ರಾರ್ಥಿಸಿ ಬೇಸತ್ತರು. ಇಷ್ಟು ಪ್ರಾರ್ಥನೆ ಮಾಡಿದ್ದರೆ ದೇವರು ಸಹ ಪ್ರಸನ್ನನಾಗುತ್ತಿದ್ದನು.

ಬೆಳಕೆ, ಹಡವು, ಎಲವದಿಕೋಪ್ಪರ ಈ ೩ ಗ್ರಾಮಗಳುಬಂದರಕ್ಕೆಂದು ಹೊಂದಿಕೆಯಾಗಿವೆ, ಇಲ್ಲಿ ಶಾಲೆ ಇದೆ ಬೋರ್ಡಿನ ಶಾಲೆ ಅಲ್ಲ; ಸರಕಾರಿ ಶಾಲೆ ಅಲ್ಲ; ರಾ| ಶಿಷಿಯವರು ಶಾಲೆ ತೆರೆದು ಶಿಕ್ಷಣ ಕೊಡುತ್ತಾರೆ. ಫೀಯಿಂದ ಅವರ ಖರ್ಚುವೆಚ್ಚ ಸಾಗುವದಿಲ್ಲ. ಬೋರ್ಡಿನವರು ಈ ಶಾಲೆಯ ಉಪಯುಕ್ತತೆಯನ್ನು ಪರಾಂಬರಿಸಿ ಅದನ್ನು ತಮ್ಮ ಶಾಲೆಯ ಯಾದಿಯಲ್ಲಿ ಸೇರಿಸಿಕೊಂಡು ರಾ| ಶಿಷಿಯವರಿಗೆ ಉತ್ತೇಜನ ಕೊಡಬೇಕು.

ರಾ| ಹಂದಿಗೋಣ ಹೆಗಡೆರು ೮ ದಿವಸಗಳಿಂದ ಇಲ್ಲಿ ಹರಿಕೀರ್ತನೆ ಮಾಡುತ್ತಿದ್ದಾರೆ. ಜನರ ತುಂಬಾ ಆಶ್ರಯವಿದೆ

ಕುಮಟೆಯ ರಾ| ಗಣೇಶ ಭಟಕಳಕರರವರು ಬಿಡಿಕೆದು ಮನೆಮನೆಗೆ ಹೋಗಿ ಮಾರುತ್ತಾರೆ ಇದು ಸ್ತುತ್ಯವು! ಸ್ಥಳೀಕ «ತರುಣ ಸಂಘವು ಈ ಕಾರ್ಯವನ್ನು ಕೈಕೊಳ್ಳಬಹುದು. ಅನಂತ ಪ್ರಭುದ ಗುಣವರ್ಣನೆಯನ್ನು ಇಲ್ಲಿಯ ಕನ್ನಡ ಶಾಲೆಯ ರಾ| ತೋಕಣಯವರು ಭಕ್ತಿಯಿಂದ ಮಾಡಿದರು ಆ ಮೇಲೆ ಶಾಲೆಯ ಇನ್ಸ್ಪೆಕ್ಟರರಾದ ರಾ| ಕಾಮತ ಮುಂತಾದವರು ಭಾಷಣ ಮಾಡಿದರು ಸಭೆಗೆ ಊರಪ್ರಮುಖರೂ, ವಿದ್ಯಾರ್ಥಿಗಳೂ ಸೇರಿದ್ದರು ಧಾರ್ಮಿಕ ಉತ್ಸವಗಳ ಕಥೆಗಳನ್ನು ಹೇಳುವ ಈ ಶಾಲೆಯ ಶಿಕ್ಷಕರ ಪರಿಪಾಠವು ಅನುಕರಣೀಯವಿದೆ

ಮಂಜೇಶ್ವರದಿಂದ ಇಲ್ಲಿ ದೊಡ್ಡ ಅಕ್ಕಿಯ ಗಿರಣಿಯೊಂದು ಬರಲಿಕ್ಕಿದೆ ಈ ಅಕ್ಕೀ ಗಿರಣಿಗೆ ೩೦೦ ಹಚ್ಚ ನೀರು ಬೇಕಂತೆ! ಭತ್ತ ಕುಟ್ಟಿ ಅಕ್ಕಿ ಮಾಡಿ ಹೊಟ್ಟೆ ಹೊರಕೊಳ್ಳುವ ಬಡಬಗ್ಗರ ಮೇಲೆ ದೊಡ್ಡದೊಂದು ಆಪತ್ತು ಬಂತು

ಒಬ್ಬರು ತಿಳಿಸುವದೇನಂದರೆ:—«ಇಲ್ಲಿಯ ಗಣಪತಿ ವ್ರತದ ಒಂದು ಸಂಗತಿ ನಮೂದಿಸತಕ್ಕಂಥಾದ್ದಿದೆ ವ್ಯಕ್ತಿರು ಪಕ್ಷಭೇದಪ್ರೇರಿತರಾಗಿ ಸೋಮವಾರಕ್ಕೆ ಗಣೇಶ ಮೂರ್ತಿಯ ಪ್ರಾಣಪ್ರತಿಷ್ಠೆ ಮಾಡಿದರು, ಆದರೂ ಅದಿ ಇದ್ದಿಲ್ಲ ಕ್ಷಯಸೂತಕವಿದ್ದ ೩ ವ್ಯಕ್ತಿ ಮನೆಯವರು ಅದನ್ನು ಲಕ್ಷಿಸದೆ ಸೂತಕದ ೩ನೇ ದಿನ ಸೋಮವಾರಕ್ಕೆ ಮುದ್ದಾಂ ಗಣಪತಿಗೆ ತಂದರು ಕ್ಷಯ ಸೂತಕದಲ್ಲಿ ಗಣಪತಿ ಆವಾಹನದಂಥ ಧರ್ಮಕಾರ್ಯ ಮಾಡಲು ಶಾಸ್ತ್ರಾಧಾರವೆಲ್ಲಿದೆ?" ಇತ್ಯಾದಿ

ಮುರ್ಡೇಶ್ವರ— ಉರ್ದು ಶಾಲೆಯ ಹಿತಚಿಂತಕರು ಬರೆಯುವದೇನಂದರೆ.—«ಇಲ್ಲಿಯ ಉರ್ದು ಶಾಲೆಯಲ್ಲಿ ೧೦೧ ಮಂದಿ ಹುಡುಗರಿದ್ದಾರೆ ಇಬ್ಬ ಅಂಟ್ರೇಂಡ ಶಿಕ್ಷಕರು ೬ ಇಯತ್ತೆಗಳ ಪಾಠ ಕಲಿಸುತ್ತಾರೆ ಇನ್ನೊಬ್ಬ ಶಿಕ್ಷಕಬೇಕಾಗಿ ಸ್ಕೂಲ ಬೋರ್ಡಿಗೆ ಬರೆಯಲಾಯಿತು ಎಡ್ಮಿನಿಸ್ಟ್ರೇಟಿವ ಆಫೀಸರರು ಬಂದು ನೋಡಿ ಹೋದರು ಆದರೆ ವ್ಯವಸ್ಥೆಯಾಗುವದಿಲ್ಲ ೧೩೦ ವಿದ್ಯಾರ್ಥಿಗಳಾದರೆ ೩ನೇ ಶಿಕ್ಷಕ ಸಿಗುವರೆಂದು ಹುಕೂಮು ಬಂದಿದೆ ಪ್ರಾಥಮಿಕ ಶಿಕ್ಷಣ ಕಾನೂನಿನಂತೆ ೩೦ಕ್ಕೆ ಕಡಿಮೆಯಾಗದಂತೆ ಒಬ್ಬೊಬ್ಬ ಶಿಕ್ಷಕರ ಪಲಾಗಿ ಬಂದರಾಯಿತು ಹೀಗಿದ್ದು ಎಡ್ಮಿನಿಸ್ಟ್ರೇಟಿವ ಆಫೀಸರರು ಹೀಗೆ ಕೈ ಬಿಗಿಹಿಡಿಯುವದೇಕೆ? ಶಾಲೆಯ ಕಟ್ಟಡವು ಇಷ್ಟು ಮಂದಿ ವಿದ್ಯಾರ್ಥಿಗಳಿಗೆ ಸಾಲುವದಿಲ್ಲ ನಕಾಶೆ ಮುಂತಾದ ಸಾಮಾಗ್ರಿಗಳಿಲ್ಲ ವಿದ್ಯಾಧಿಕಾರಿಗಳು ಇತ್ತ ಲಕ್ಷ ಕೊಡಬೇಕು ಇತ್ಯಾದಿ

ಶಿರಸಿ—ಇರಾಣಿಯರ ತಂಡೋಪತಂಡಗಳು ಹೂಡು ಮಾಡುತ್ತಲಿವೆ. ಅವರ ಅಪರಾತಿಥ್ಯಕ್ಕಾಗಿ ಸರಕಾರವು ಪೋಲೀಸ ಅಂಗರಕ್ಷಕರನ್ನು ಕಳಿಸಿ ಧನ ಖರ್ಚ ಮಾಡುತ್ತಲಿದೆ. ಮುನಸಿಪಾಲಿಟಿಯ ಆಫೀಸೂ, ಜನರಲ್ ಲೈಬ್ರರಿಯೂ ಸಹ ಇರಾಣೀಯರಿಗೆ ಧರ್ಮಶಾಲೆಗಳಾಗಿವೆ! ಇಮಾರತುಗಳಲ್ಲಿ ಸಾಮಾನ್ಯ ಹಳ್ಳಿಗರಿಗೆ ಆಶ್ರಯ ಸಿಗುವದೇ ದುರ್ಲಭ! ಇರಾಣೀಯರು ಸಾರ್ವಜನಿಕ ಸ್ಥಳಗಳಲ್ಲಿ ಹಗಲಿರುಳು ವಿಧವಿಧದ ಇಸ್ಪೀಟು ಮುಂತಾದ ಜುಗಾರಿನಾಟಗಳನ್ನು ಹೂಡಿಕೊಂಡು ಕೂಡ್ರುತ್ತಾರೆ!! ಅಶಿಕ್ಷಿತರು ಶಿಕ್ಷಿತರು, ಬಾಲಕರು ಎಲ್ಲರೂ ಈ ವ್ಯಸನದಲ್ಲಿ ತಲ್ಲೀನರಾಗಿ ಮುತ್ತುತ್ತಾರೆ ಪ್ರತ್ಯಕ್ಷ ಪೋಲೀಸರು ಬಂಗು ಬಿಡಿಸದವರಂತೆ ಮಿಕಿಮಿಕಿ ನೋಡುತ್ತ ಮಾತ್ರ ಕೂಡುತ್ತಾರೆ. ಸದ್ರೀ ಇರಾಣೀಯರು ಹಳ್ಳಿಹಳ್ಳಿಗಳಲ್ಲಿಯೂ ಹೋಗಿ ಉಪದ್ರವ ಕೊಡುತ್ತಾರೆಂದು ಸುದ್ದಿ ಇಂಥ ಇಲ್ಲದ ಪಿಡುಗನ್ನು ತಂದು ಊರಲ್ಲಿ ಬಿಡುವ ಸರಕಾರದ (ಅಧಿಕಾರಿಗಳ) ಪ್ರಜಾಹಿತದಕ್ಷತೆಗೆ ಏನನ್ನಬೇಕು?

ಪೋಲೀಸರು ದನಗಳನ್ನು ದೊಡ್ಡಿಗಟ್ಟುವದೂ, ಹಿಂದಿನಿಂದ ಬಿಟ್ಟು ಕೊಡುವದೂ ನಡೆದೇ ಇದೆ. ಹಾಗು ಇತರ ಜನರು ಇತರರ ದನಗಳನ್ನು ಕಂಡುಗಟ್ಟಿ ೪-೮ ಮೈಲುಮೇಲಿನ ಹಳ್ಳಿಗಳಲ್ಲಿಯ ಕೊಂಡವಾಡಗೆ ಸೇರಿಸುವ ಕ್ರಮವೂ ನಡೆದದೆ! ಇದರಿಂದ ಹಲವರ ದನಗಳೇ ಪತ್ತೆ ಹತ್ತದಿಲ್ಲ ಪತ್ತೆ ಕೊಡುವವರಾದರೂ ಯಾರ? ಇನ್ನು ಕೆಲವರು ಸಂಶಯದ ಮೇಲೆ ಹಳ್ಳಿಗಳಲ್ಲಿಯ ದೊಡ್ಡಿಗಳನ್ನು ಹುಡುಕಾಡಿ ಕೈಬಿಟ್ಟುಕೊಂಡು ಮನೆಗೆ ಬರಬೇಕಾಗುತ್ತದೆ! ಇಂಥ ಕಾಯಿದೆಯನ್ನು ಯಾವ ಪುಣ್ಯಾತ್ಮರು ಸೂಚಿಸಿರಬಹುದು?

ಸಾಲದುದಕ್ಕೆ ದಶಾವತಾರ ಆಟಗಳೂ ನಡೆಯುತ್ತಲಿವೆ. ಅಲ್ಲಿಯೂ ಇರಾಣೀಯರ ಜುಗಾರ ಏಜಂಟರ ಕಾಟ ಇದ್ದೇ ಇರುತ್ತದೆ!

ಬೈರಾಗಿ ವೇಷದಲ್ಲಿದ್ದ ನಾರಾಯಣ ಪ್ರಭುಗಳ ಮಗನು ಗೃಹಸ್ಥಾಶ್ರಮದಲ್ಲಿ ಪ್ರವೇಶ ಮಾಡಿದನು.

ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಭಜನೆ ಸಪ್ತಾಹವು ವಿಶೇಷ ಉತ್ಸಾಹದಿಂದಲೂ,ಐಕ್ಯಮತ್ಯದಿಂದಲೂ ಅನುಕರಣೀಯವಾಗಿ ನೆರವೇರಿತು. ಆದರೆ ಹಲವರು ಉತ್ಸಾಹದ ಅತಿರೇಕದಿಂದ ಮೊಸರು ಗಡಿಗೆಗೆ ಕಟ್ಟಿದ ಗಡಗಡಿಯಿಂದ ಕಮಲಮೋಕ್ಷ ಮಾಡಿಕೊಂಡದ್ದಲ್ಲದೆ, ಪೇಟೆಯಲ್ಲಿ ಖಾದ್ಯ ವಸ್ತುಗಳ ಲೂಟಿ ಮಾಡಿದ್ದು ಉಚಿತವಲ್ಲ.

ಸಿದ್ದಾಪುರ— ಇಲ್ಲಿ ಮಳೆ ವಿಶೇಷವಿಲ್ಲ. ಪೋಲೀಸರು ದನಕರುಗಳನ್ನು ದಡ್ಡಿಗೆ ಹಾಕಿ ಡಿಸ್ಟ್ರಿಕ್ಟ ಪೋಲೀಸ ಆಕ್ಟ ಕಲಂ ಪ್ರಕಾರ ಫಿರ್ಯಾದ ಮಾಡುವ ಕೆಲಸ ಜೋರಿನಿಂದ ನಡದದೆ.

ಇಲ್ಲಿಂದ ೧-೧|| ಮೈಲ ದೂರ ಇದ್ದ ಅವರಗುಪ್ಪೆ ಎಂಬಲ್ಲಿ ಆದ ಖೂನಿ ಖಟ್ಲೆಯು ಈವರೆಗೂ ತಪಾಸ ಆಗಲಿಲ್ಲವಂತೆ ಶೋಧನೆಯು ಸಮಾಪ್ತಿಯಾಗಿದೆ ಸದ್ಯಾ ಸಣ್ಣ ಹುಲಿರಾಯನು ಊರಲ್ಲಿಬಂದು ಒಂದು ದನವಕರುವಿಗೆ ಘಾಯ ಮಾಡಿದ

ಇಲ್ಲಿ ಮೊನ್ನೆ ತಾ| ೨೧-೯-೨೮ನೇ ದಿನ ಬೆಳಿಗ್ಗೆ ಇರಾಣಿ ಜನರು ಸೊರಬದಿಂದ ಇಲ್ಲಿಗೆ ಬಂದಿರುತ್ತಾರೆ, ಸದ್ರಿಯವರು ಪೇಟೆಯಲ್ಲಿ ಕವ / ಪ್ಲೇ ಎಂಬ ಮಾದ್ರಿಯ ಆಟ ಹಚ್ಚಿರುವರು,

ಸದ್ರಿ ಆಟದ ಬಗ್ಗೆ ಲಾಯಸನ್ಸ ತೆಗೆದುಕೊಂಡಿರುವರಂತೆ, ನಿನ್ನೆ ಶಿರ್ಸಿಯಿಂದ ಇನ್ನೊಂದು ಇರಾಣಿಯರ ಗುಂಪು ಇಲ್ಲಿಗೆ ಬಂದಿರುವದು,

ದನಕರಗಳನ್ನು ಹಟ್ಟಿಗೆ ಹಾಕುವ ಕಾಯ್ದೆ ನಿಷೇಧ ಮಾಡಲು ೩ ಗ್ಗ ಕಾಂಗ್ರೆಸ ಕಮಿಟಿಯವರ ೨ ಜಾಹೀರ ಸಭೆ ಕರೆಯುವರಂತೆ, ಸ್ತುತ್ಯ,

ಯಲ್ಲಾಪೂರ— ಮಳೆ ತೀರ ಕಡಿಮೆ ಪ್ರಮಾಣದಿಂದ ಬೀಳುತ್ತದೆ, ಈವರೆಗೆ ೮೫-೮೬ ಇಂಚ ಮಳೆಯಾಯಿತು,

ಮುಂಡಗೋಡ ಕಡಿಂದ ೪೦-೫೦ ಮಂದಿ ಇರಾಣಿ ಜನರು ಇಲ್ಲಿಗೆ ಬಂದು ೪-೫ ದಿವಸ ಇದ್ದು ತಮ್ಮ ವ್ಯಾಪಾರದ ಜಾನುವಾರ ಸಹಿತ ಅಂಕೋಲೆ ಕಡೆಗೆ ಹೋಗಿರುತ್ತಾರೆ, ಸದ್ರಿ ಜನರು ಮಾರಾಟಕ್ಕೆ ತಂದ ಚಷ್ಮೆ ಮೊದಲಾದ ವಸ್ತುಗಳು ಚೆನ್ನಾಗಿ ಪರೀಕ್ಷಿಸಿ ಮೋಸಹೋಗದಂತೆ ಯೋಗ್ಯ ಬೆಲೆ ಕಟ್ಟಿಕೊಳ್ಳಬೇಕಾಗಿ ಜನರಿಗೆ ಸೂಚನೆಯಿದೆ,

---

— ನಾಶಿಕ ಜಿಲ್ಲಾಬೋರ್ಡಿನಲ್ಲಿ ಅಸ್ಪೃಶ್ಯರುಗಳನ್ನಾದರಿಸಿ ಸಾರ್ವಜನಿಕ ಬಂದೋಬಸ್ತವ್ಯಯ ಮಾಡಿದಬಗ್ಗೆ ಮುಂಬಯಿ ಸರಕಾರವು ಖಟ್ಲೆ ಪತ್ರಕ ನಡಿಸಲಿಕ್ಕೆ ಸಂಕ್ಷನ್ ಕೊಟ್ಟಿರುತ್ತದೆ,

ಮಹಾತ್ಮರ ಆತ್ಮಚರಿತ್ರ.

(೨೨) ಖೇಡಾ ಸತ್ಯಾಗ್ರಹ.

ನನಗೆ ಅವಕಾಶ ಸಿಗಬಾರದೆಂದಿತ್ತೋ ಏನೋ, ಅಹಮದಾಬಾದದ ಗಿರಣಿ ಕೂಲಿಕಾರರ ಸಂಪು ಮುಗಿಯುವದರೊಳಗೆ ಖೇಡಾ ಸತ್ಯಾಗ್ರಹದ ಕಾದಾಟದಲ್ಲಿ ನಾನು ಸೇರಿಕೊಳ್ಳಬೇಕಾಯಿತು. ಖೇಡಾ ಜಿಲ್ಲೆಯಲ್ಲಿ ಬಹಳ ಬೆಳೆ ನಷ್ಟವಾಯಿತು. ಅಲ್ಲಿಯ ಪಟಿದಾರರು ಸಹ ತೀರ್ವೆ ತಹಕೂಬಿ ಪಡೆಯುವದಕ್ಕಾಗಿ ಪ್ರಯತ್ನಪಡುತ್ತಿದ್ದರು. ಕಷ್ಟಮುಟ್ಟಿಗೆ ಬರಗಾಲದ ಸ್ಥಿತಿಯೇ ಆಗಿತ್ತು.

ಶ್ರೀ ಅಮೃತಲಾಲ ಠಕ್ಕರರು ಈ ವಿಷಯವನ್ನು ವಿಚಾರಿಸಿ ರಿಪೋರ್ಟನ್ನು ಮಾಡಿದ್ದರು, ಸ್ವತಃ ಕಮೀಶನರರ ಕಡೆ ಚರ್ಚೆ ಸಹ ಮಾಡಿದ್ದರು. ಆ ಮೇಲೆ ಬೇಸಾಯಗಾರರಿಗೆ ನಾನು ನಿಶ್ಚಿತ ಮಾರ್ಗದರ್ಶಕನಾಗಬೇಕಾಯಿತು. ಶ್ರೀ ಮೋಹನಲಾಲ ಪಂಡ್ಯಾರವರೂ, ಶಂಕರಲಾಲ ಪರೀಖರವರೂ ಈ ಕಾದಾಟದಲ್ಲಿ ಪ್ರವೇಶಗೊಂಡಿದ್ದರು. ಶ್ರೀ ವಿಠ್ಠಲಭಾಯಿ ಪಟೇಲ ಹಾಗೂ ಮಾ॥ ಗೋಕುಲದಾಸ ಖಾನದಾಸ ಪರೀಖರವರ [illegible] ಮುಂಬಯಿ ಕಾಯಿದೆ ಕೌನ್ಸಿಲಿನಲ್ಲಿಯೂ ಚಳವಳಿ ನಡೆಯಿತು. ಈ ಸಂಬಂಧ ಗವ್ಹರ್ನರರ ಕಡೆ ಕೆಲ ನಿಷ್ಟಮಂಡಳಗಳೂ ಭೆಟ್ಟಿಯಾಗಿದ್ದವು.

ಈ ಸಮಯ ನಾನು ಗುಜರಾಥ ಸಭೆಯ ಅಧ್ಯಕ್ಷನಾಗಿದ್ದೆ. ಈ ಸಭೆಯು ಸರಕಾರಕ್ಕೆ ಅರ್ಜಿಗಳನ್ನೂ, ತಂತಿಗಳನ್ನೂ ಕಳುಹಿತು. ಕಮೀಶನರರಿಂದ ಸಿಕ್ಕಿದ ಅಪಮಾನಗಳನ್ನೂ, ಬೆದರಿಕೆಗಳನ್ನೂ ಸಹಿಸಿಕೊಂಡಿತು. ಈ ಪ್ರಸಂಗದಲ್ಲಿ ಅಧಿಕಾರಿಗಳ ವರ್ತನವು ತೀರ ಹಾಸ್ಯಾಸ್ಪದವಿತ್ತು ಅಸಭ್ಯವೂ ಇತ್ತು. ಈಗ ಅದನ್ನು ಹೇಳಿದರೆ, ಯಾರೂ ನಂಬರು

ಬೇಸಾಯಗಾರರ ಹೇಳಿಕೆಯು ತೀರ ಸ್ಪಷ್ಟವಾಗಿತ್ತು, ಹಾಗು ನೇರವಾಗಿತ್ತು, ಒಪ್ಪಿಕೊಳ್ಳಲು ತೀರ ಯೋಗ್ಯವಿತ್ತು. ಬೆಳೆಯು ೪ ಆಣೆಯಿದ್ದರೆ, ಅಥವಾ ಅದಕ್ಕೂ ಕಡಿಮೆಯಾಗಿದ್ದರೆ, ಬೇಸಾಯಗಾರರಿಗೆ ಆ ವರುಷದ ಸಂಪೂರ್ಣ ತೀರ್ವೆಯನ್ನು ತಹಕೂಬು ಪಡೆಯುವ ಹಕ್ಕು ರೆವಿನ್ಯೂ ಕಾನೂನುಗಳನ್ವಯ ಬೇಸಾಯಗಾರರಿಗುಂಟು. ಸರಕಾರ ಲೆಕ್ಕದಂತೆ ಬೆಳೆಯು ೪ ಆಣೆಗೆ ಮಿಕ್ಕಿತ್ತು, ಬೇಸಾಯಗಾರರು ೪ ಆಣೆಗಿಂತ ಕಡಿಮೆಯೆಂದು ಆಕ್ಷೇಪಿಸುತ್ತಿದ್ದರು. ಆದರೆ, ಸರಕಾರವು ಬೇಸಾಯಗಾರರ ಹೇಳಿಕೆಯನ್ನು ಕೇಳಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಮಧ್ಯಸ್ಥಿಕೆಯ ಸೂಚನೆಯಿಂದ ತಮ್ಮ ದೊಡ್ಡಸ್ತಿಕೆಗೆ ಭಂಗ ಬರುತ್ತದೆಂದು ಅವರ ಗ್ರಹಿಕೆಯಾಗಿತ್ತು. ಅರ್ಜಿ-ಬಿನ್ನಹಗಳೆಲ್ಲ ನಿರರ್ಥಕವಾದ ಬಳಿಕ, ಜೊತೆಗಾರರೊಡನೆ ಆಲೋಚಿಸಿ ಪಟಿದಾರರಿಗೆ ಸತ್ಯಾಗ್ರಹ ಕೈಕೊಳ್ಳಹೇಳಿದೆನು

ಈ ಕಾಲದಲ್ಲಿ ಖೇಡಾ ಜಿಲ್ಲೆಯೊಳಗಿನ ಸ್ವಯಂಸೇವಕರಂತು ನನ್ನ ಜೊತೆಗಾರರಿದ್ದರು. ಅದಲ್ಲದೆ, ಶ್ರೀ ವಲ್ಲಭಭಾಯಿ ಪಟೇಲ, ಶಂಕರಲಾಲ ಬೇಂಕರ, ಶ್ರೀಮತಿ ಅನಸೂಯಾ ಬೇನ ಶ್ರೀ ಇಂದುಲಾಲ ಯಾಜ್ಞಿಕ, ಮಹಾದೇವ ದೇಸಾಯಿ ಮುಂತಾದ ಪ್ರಮುಖರು ನನ್ನೊಡನೆ ಕೆಲಸ ಮಾಡುತ್ತಿದ್ದರು. ಈ ಕೆಲಸದಲ್ಲಿ ಸೇರಿದ ಮೂಲಕ ಶ್ರೀ ವಲ್ಲಭಭಾಯಿಯವರು ತಮ್ಮ ಪ್ರಚಂಡ ವಕೀಲಿ ಧಂದೆಯನ್ನು ತಹಕೂಬು ಮಾಡಬೇಕಾಯಿತು. ಈಗ ಈ ತನಕ ಆ ಧಂದೆಯನ್ನು ಅವರಿಂದ ಪುನಃ ಪ್ರಾರಂಭಿಸಲಾಗಲಿಲ್ಲ.

ನಡಿಯಾದದೊಳಗಿನ ಅನಾಥಾಶ್ರಮದಲ್ಲಿ ನಾವು ನಮ್ಮ ಕಛೇರಿಯನ್ನು ಮಾಡಿದೆವು. ನಮಗೆಲ್ಲರಿಗೆ ಕೂಡುವದಕ್ಕೆ ಬೇರೆ ಇದಕ್ಕಿಂತ ಪ್ರಶಸ್ತ ಸ್ಥಳ ಸಿಗಲಿಲ್ಲ

ಸತ್ಯಾಗ್ರಹಿಗಳು ಈ ಕೆಳಗಿನಂತೆ ಪ್ರತಿಜ್ಞೆ ಮಾಡಿದರು. "ನಮ್ಮ ಗ್ರಾಮಗಳ ಬೆಳೆಯು ೪ ಆಣೆಗೆ ತಗ್ಗಿ ಬಂದುದಾಗಿ ನಮ್ಮ ಮನದಟ್ಟಾಗಿದೆ ಮುಂದಿನ ವರುಷದ ತನಕ ತೀರ್ವೆಯನ್ನು ತಹಕೂಬು ಇಡಬೇಕಾಗಿ ಬಿನ್ನೈಸಿಕೊಂಡೆವು ಆದರೆ, ಸರಕಾರವು ನಮ್ಮ ಬಿನ್ನಹವನ್ನು ಮನ್ನಿಸಲಿಲ್ಲ. ಅದರಿಂದ ಈ ಕೆಳಗೆ ಸಹಿ ಮಾಡುವವರು ಈ ವರುಷದ ಬಾಕಿಯಿರುವ ತೆರಿಗೆಯನ್ನಾಗಲಿ, ಪೂರ್ಣ ತೆರಿಗೆಯನ್ನಾಗಲಿ ಸ್ವಸಂತೋಷದಿಂದ ಸರಕಾರಕ್ಕೆ ತೆರಲಿಕ್ಕಿಲ್ಲವಾಗಿ ಈ ಮೂಲಕ ಪ್ರತಿಜ್ಞೆ ಮಾಡುತ್ತೇವೆ. ಸರಕಾರವು ಕಾಯಿದೆಯಂತೆ ನಮ್ಮ ಮೇಲೆ ಬೇಕಾದ ಇಲಾಜನ್ನು ಕೈಕೊಳ್ಳಬಹುದು. ತೀರ್ವೆ ಕೊಡದ ಬಗ್ಗೆ ಸಿಗುವ ಪರಿಣಾಮಗಳನ್ನು ಅನುಭವಿಸಲು ನಾವು ಸಂತೋಷದಿಂದ ಸಿದ್ಧರಾಗಿರುವೆವು. ನಮ್ಮ ಭೂಮಿಗಳು ಸರಕಾರ ಜಪ್ತಮಾಡಿದರೆ ಅಡ್ಡಿಯಿಲ್ಲ. ನಾವಾಗಿ ತೀರ್ವೆ ಕೊಟ್ಟರೆ ನಮ್ಮ ಹೇಳಿಕೆಯು ಸುಳ್ಳಾಗುತ್ತದೆ, ಸ್ವಾಭಿಮಾನವೂ ನಷ್ಟವಾಗುತ್ತದೆ. ಹಾಗೆ ಮಾಡಿಕೊಳ್ಳಲು ನಾವು ತಯಾರಿಲ್ಲ. ಸರಕಾರವು ತೀರ್ವೆಯ ಎರಡನೇ ಹಪ್ತೆಯನ್ನು ಇಡೀ ಜಿಲ್ಲೆಯಲ್ಲಿ ತಹಕೂಬು ಮಾಡಿದರೆ ತೀರ್ವೆಯನ್ನು ಈ ವರುಷ ಪೂರ್ಣವಾಗಿ ಅಥವಾ ಅಂಶತಃ ತೆರಲು ಸಾಧ್ಯವಿದ್ದವರು ತೆರಲೊಪ್ಪುತ್ತಾರೆ. ತೀರ್ವೆ ತೆರುವ ಸಾಮರ್ಥ್ಯವಿದ್ದವರು ಈಗಲೇ ತೆರದಿರಲು ಕಾರಣವಿದೆ ಅವರು ತೀರ್ವೆ ಕೊಟ್ಟಲ್ಲಿ ಬಡ ರೈತರು ಗಾಬರಿ ಪಡಿ ತಮ್ಮ ಜಿಂದಿಗೆಯನ್ನು ಮಾರಿ ಅಥವಾ ಸಾಲ ತೆಗೆದು ತೀರ್ವೆ ತೆರುವರು ಹೀಗೆ ಅವರು ಕಷ್ಟಕ್ಕೊಳಗಾಗುವರು ಇಂಥ ಸಂಗತಿಗಳಲ್ಲಿ ಬಡಬಗ್ಗರಿಗಾಗಿ ಸಮರ್ಥರು ಸಹ ತೀರ್ವೆ ತೆರದಿರುವದು ಕರ್ತವ್ಯವಾಗುತ್ತದೆ"

ಈ ಕಾದಾಟದ ಕಥೆಗಾಗಿ ಬಹಳ ಅಧ್ಯಾಯಗಳನ್ನು ನಾನು ಬರೆಯಲಾರೆ ಅದರಿಂದ ಈ ಪ್ರಸಂಗದೊಳಗಿನ [illegible] ಸಂಗತಿಗಳನ್ನು ಇಲ್ಲಿಂದ ಉಲ್ಲೇಖಿಸಲಾಗದು ಈ ಮಹತ್ವದ ಕಾದಾಟದ ವಿಷಯ ಸಂಪೂರ್ಣ ಅಭ್ಯಾಸ ಮಾಡಬೇಕಾದವರು ಕಥಲಾಲ ಗ್ರಾಮದ ಶ್ರೀ ಶಂಕರಲಾಲ ಪರೀಖರವರು ಬರೆದ 'ಖೇಡಾ ಸತ್ಯಾಗ್ರಹ'ದ ಪ್ರಮಾಣಭೂತ ಗ್ರಂಥವನ್ನು ಓದಬಹುದು

ವೃತ್ತಸಾರ.

— ಮಹಾತ್ಮರು ಬರೆದ ಆತ್ಮಚರಿತ್ರೆಯ ಇಂಗ್ಲಿಷ ಗ್ರಂಥದ ಪ್ರತಿಗಳನ್ನು ಮುದ್ರಿಸಿ ಇತರ ದೇಶಗಳಲ್ಲಿ ಮಾರುವ ಹಕ್ಕನ್ನು ಒಂದು ಇಂಗ್ಲಿಷ ಕಂಪನಿಯವರು ಮಹಾತ್ಮರ ಕಡೆಯಿಂದ [illegible] ಪಡೆದಿದ್ದಾರೆ. ಮಾರಾಟದ ಮೌಲ್ಯ ೧ ಲಕ್ಷ ರೂಪಾಯಿ. ಈ ರಕಮನ್ನು ಖಾದಿಯ ಸಿದ್ಧಿಗೆ ಮಹಾತ್ಮರು ವಿನಿಯೋಗಿಸುವವರಿದ್ದಾರೆ.

— ವರಿಷ್ಠ ಕಾಯಿದೆ ಕೌನ್ಸಿಲಿನ ಅಧ್ಯಕ್ಷರಾದ ಶ್ರೀ ವಿಠ್ಠಲಭಾಯಿ ಪಟೇಲರವರ ಮೇಲೆ ಪಕ್ಷಪಾತದ ನೀಚ ಆರೋಪವನ್ನು ಹೊರಿಸಿದ ಬಗ್ಗೆ ಮುಂಬಯಿಯ 'ಟೈಮ್ಸ' ಪತ್ರಿಕೆಯ ಪ್ರತಿನಿಧಿಗಳಾದ ಮಿ॥ ಬಟರವರಿಗೂ, ಲಂಡನಿನ 'ಡೇಲಿ ಟೆಲಿಗ್ರಾಫ' ಪತ್ರಿಕೆಯ ಪ್ರತಿನಿಧಿಗಳಾದ ಮಿ॥ ದ್ಯಾಸರವರಿಗೂ ಕಾಯಿದೆ ಕೌನ್ಸಿಲಿನೊಳಗಿಂದ ಹೊರತಳ್ಳಲಾಯಿತು.

— ನಾ॥ ಪ್ರಧಾನರಿಗೆ ಗವ್ಹರ್ನರರ ಮಂತ್ರಿಮಂಡಲದಲ್ಲಿ ಸ್ಥಾನ ಕೊಟ್ಟ ಮೂಲಕ ಮಂತ್ರಿ ಮಂಡಲದಲ್ಲಿ ಬದಲಾವಣೆಗಳಾಗಿವೆ. ನಾ॥ ಭಾಸ್ಕರರಾವ ಜಾಧವರಿಗೆ ಕೃಷಿ ಖಾತೆಯ ಮಂತ್ರಿಯಾಗಿ ನೇಮಕ ಮಾಡಿದ್ದಾರೆ ಮಾ॥ ದೇಸಾಯಿಯವರು ಸ್ಥಾನಿಕ ಸ್ವರಾಜ್ಯ ಖಾತೆಯ ಮಂತ್ರಿಯಾಗಿದ್ದಾರೆ. ಮೌ॥ ರಫಿಉದ್ದಿನ ಅಹಮ್ಮದರಿಗೆ ಶಿಕ್ಷಣ ಖಾತೆ ಕೊಟ್ಟಿದ್ದಾರೆ

— ಎಲಪ್ಪೆಯಲ್ಲಿ ಕೆಲವು ಕಾಲದ ಮುಂಚೆ ಸಮುದ್ರವು ಹಿಂದೆ ಸರಿದುಹೋಗಿತ್ತು. ಈಗ ಸಮುದ್ರಕ್ಕೆ ಮತ್ತೆ ಪುನಃ ನೀರಿನ ಅಲೆಯು ಮುಂದೆ ಬಂದು ಒಮ್ಮೆಗೇ ಅನೇಕ ತೆಂಗಿನಮರಗಳನ್ನೂ, ಅಂಬಿಗರ ಗುಡಿಸಲುಗಳನ್ನೂ ತೊಳಕೊಂಡು ಹೋಯಿತು. ಪ್ರಾಣಹಾನಿ ಆಗಿಲ್ಲ. ಕಲಿಯುಗದ ಮಹಾತ್ಮೆಯಿಂದ ಸಾಗರವು ಮೇರೆದಪ್ಪಿ ನಡೆಯದೆ ಮತ್ತೇನು ಮಾಡೀತು?

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪಾಕೀಟುಗಳಿಗೆ ರೂ. ೬
(ಎಕ್ಸೆಲ್ಸಿಯರ ಮಿಕ್ಸ್) ೨೫ ... ... ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೨॥
ಇಂಗ್ಲಿಷ ತರಕಾರಿ ಬೀಜಗಳು೧೬ ,, ,, ೪॥
ನಾಟಿ ೧೬ ,, ,, ೨॥
ಸಿಲ್ವರ ಪಿಶ ೧ ರತ್ತಲಿಗೆ ... ,, ೨॥
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ತಲಿಗೆ . ೨॥
ಹರಿವೆ ಸೊಪ್ಪು ೧ ರತ್ತಲಿಗೆ ... ೪
ಕಸೂರಿ ಮ ಸಾಲೆ ಬೀಜ ೧ ರತ್ತಲಿಗೆ ... ೩
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಚಲೋಕ್ರೋಟನ್ಸ ಗಿಡ ೧೨ ಕ್ಕೆ ... ೩ ರಿಂದ ೧೨
ಅಂದವಾದ ಹೂ ಗಿಡ (ಜಿರೇನಿಯಂ)
೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ
ಗಿಡಗಳು ೧೨ ಕ್ಕೆ ... ೭ ರಿಂದ ೧೨
ಕೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ)
೧೨ ಗಿಡಕ್ಕೆ ... ೧॥ಯಿಂದ ೨
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨
ಕಟ್ಟಡದ ಹೂವಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨
ಸೇವು ಗಿಡಗಳು ೧೦ ಕ್ಕೆ... ... ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ . ...೧೨ರಿಂದ೨
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೩ ಜಾತಿ, ಕಿತ್ತಳೇ ಗಿಡಗಳು, ಚಕ್ಕೋತ್ರ, ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ, ರಾಜಬೇರ, ಪನ್ನೇರಲ, ಕಂಚಿಕಾಯಿ, ಲಕ್ಯಾಟ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ ... ೨
ವೊಲಿಂಗಟನ ಕಿತ್ತಳೇ ಹಣ್ಣು ೧ ಕ್ಕೆ ...
೧ ಬುಟ್ಟಿ ಹಂಬು ತರಕಾರಿ ...೫ ರಿಂದ
ಕ್ರಿಸಾಂತಿಮಮ್ ಗಿಡ ೧೦೦ ಕ್ಕೆ ... ೧
ಡೇಲಿಯಾ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ನೆರಳು ಕೊಡುವ ಹಾಗೂ ಎಲೆಯು ಹಾಳಿಲ ನಮೂನೆ ಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೭ ರಿಂದ ೧೨
ಗಡ್ಡೆಗಳು ೧೨ ಕ್ಕೆ ರೂ. ೭ ರಿಂದ ೯
ಎರೋಕೇರಿಯಾ ಕುಕ್ಕಿ ೧೨ ಗಿಡಗಳಿಗೆ
ರೂ. ೬—೧೨—೨
ಅಲಂಕಾರವಾದ ಗಿಡ ೧೦ ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

— ಆಗ್ರಾಕಡೆಯ ಪೀಟರ ಫಿಲಿಪ್ ಸುಲ್ತಾನಾ ಎಂಬ ಕ್ರಿಸ್ತಿಯರು ೧ ತಿಂಗಳಲ್ಲಿ ೨ ಮದುವೆ ಮಾಡಿಕೊಂಡ ಬಗ್ಗೆ ಆತನ ಹೆಂಡತಿಯು ಗಂಡನ ಮೇಲೆ ಖಟ್ಲೆ ಮಾಡಿದಳು. ಮುಂದೆ ಗಂಡ-ಹೆಂಡರಿಗೆ ರಾಜಿಯಾಯಿತು. ಹಿಂದಿನ ಮದುವೆ ಒತ್ತಾಯದಿಂದ ರಾಜು ಆಗಿತ್ತೆಂದು ಗಂಡ-ಹೆಂಡರು ಮೆಜಿಸ್ಟ್ರೇಟರಿಗೆ ತಿಳಿಸಿ ಖಟ್ಲೆ ತೆಗೆದು ಹಾಕಲಿಚ್ಛಿಸಿದರು. ಮೆಜಿಸ್ಟ್ರೇಟರು ಅಪ್ಪಣೆ ಕೊಡಲಿಲ್ಲ ಖಟ್ಲೆ ಮುಂದರಿಸಬಯಸಿದರು, ರಾಜಿಯಾಗುವ ಖಟ್ಲೆ ಅಲ್ಲವಾಗಿ ಮೆಜಿಸ್ಟ್ರೇಟರು ತಿಳಿಸಿದರು. ಹ್ಯಾಕೋರ್ಟಿಗೆ ಗಂಡನು ಅಪೀಲ ಅರ್ಜಿ ಮಾಡಿದನು. ಅದು ತಿರಸ್ಕಾರವಾಗಿ ಮೆಜಿಸ್ಟ್ರೇಟರ ತೀರ್ಮಾನ ಖರೆ, ರೀತಿಯಿಂದ ಅಪ್ಪು ಕಡೆ ಬರಲು ನ್ಯಾಯಮೂರ್ತಿಗಳು ಗಂಡನಿಗೆ ಹೇಳಿದ್ದಾರೆ. ಗಾಬರಿಯು ಫಲ!

— ಮುಸೂರ ಬ್ರಹ್ಮಚರ್ಯಾಶ್ರಮದ ಚಾಲಕರಾದ ಶ್ರೀ ಧೋಂಡೋ ಕ್ಷೀರಸಾಗರರವರು ಗೋವೆಯೊಳಗಿನ ಹಿಂದುಗಳು ಲಂಚ ತಿಂದು ಹಿಂದು ಮಹಾಸಭೆಯಿಂದ ನಡೆಯುತ್ತಿರುವ ಶುದ್ಧಿ ಸಂಘಟನೆ ಕಾರ್ಯಕ್ರಮಕ್ಕೆ ತಡೆಹಾಕಿದರೆಂದು ತಮ್ಮ 'ಶ್ರೀ ದಾಸಬೋಧ' ಮಾಸಿಕದಲ್ಲಿ ಬರೆದಿದ್ದಾರೆ. ಈ ವಿಧಾನಗಳನ್ನು ಸರಿಯಾಗಿ ಹೊರಪಡಿಸಿ ನಿಜಸ್ಥಿತಿಯನ್ನು ತಿಳಿಸಬೇಕೆಂದು ಗೋವೆಯೊಳಗಿನ ಹತ್ತಿರ ಹತ್ತು ಪ್ರಮುಖ ಹಿಂದು ನಾಯಕರು ಅವರಿಗೆ ಆವ್ಹಾನ ಮಾಡಿದ್ದಾರೆ

— ಕಲಕತ್ತೆಯಲ್ಲಿ ೩೦ ಮೈಲು ದೂರ ಈಸುವ ಶರ್ಯತ್ತು ಗವಿಮಾದ ತಾರೀಖು ೨೩ನೇಗೆ ನಡೆಯಿತು. ಅಖಿಲ ಭರತ ಖಂಡದೊಳಗಿನ ಈಜುಗಾರರಿಗೆ ಈ ಶರ್ಯತ್ತಿನಲ್ಲಿ ಪ್ರವೇಶವಿತ್ತು. ೧೫ ಮಂದಿ ಭಾರತೀಯರು ಈ ಶರ್ಯತ್ತಿಗಾಗಿ ಹೋಗಿದ್ದರು. ಹುಗ್ಲಿ ಸಂಕದಿಂದ ಶ್ಯಾಮಬಜಾರ ಕಾಲಿಘಾಟದ ವರೆಗೆ ಈಸಿ ಹೋಗಬೇಕು. ಬೆಳಿಗ್ಗೆ ೬॥ ಘಂಟೆಗೆ ಶರ್ಯತ್ತಿಗೆ ಪ್ರಾರಂಭವಾಯಿತು, ಸಾಯಂಕಾಲ ೪ ಘಂಟೆಗೆ ಶರ್ಯತ್ತು ಮುಗಿಯಿತು. ಘೋಷಚಂದ್ರ ಚಕ್ರವರ್ತಿಯವರು ಮೊಟ್ಟಮೊದಲು ಈಸಿ ಹೋಗಿ ಬಹುಮಾನ ಪಡೆದರು. ೧೦ ಮಂದಿಗಳು ಮಾತ್ರ ಶ್ಯಾಮಬಜಾರ ಕಾಲಿಘಾಟದ ವರೆಗೆ ಈಸಿಹೋಗಿದ್ದರು. ಉಳಿದವರು ಮಧ್ಯದಲ್ಲಿಯೇ ಶರ್ಯತ್ತನ್ನು ಬಿಟ್ಟರು. ಈ ಕ್ಷೇತ್ರದಿಂದ ೭ ವರ್ಷದ ಬಾಲಕನೊಬ್ಬನು ಈ ಶರ್ಯತ್ತಿನಲ್ಲಿ ಸೇರಿದ್ದನು ಆತನನ್ನು ನೋಡಿ ಎಲ್ಲರೂ ಕೌತುಕಪಡುತ್ತಿದ್ದರು. ಈ ಹುಡುಗನು ೧೫ ಮೈಲು ಈಸಿದನು; ಬಳಿಕ ಆತನಿಗೆ ಮೇಲಕ್ಕೆ ತೆಗೆದು ಆತನ ಸಾಹಸದ ಬಗ್ಗೆ ೨ನೇ ಇನಾಮು ಕೊಡಲಾಯಿತು.

— ಸರ್ವಾಧಿಪತಿಗಳ ಹೆಂಗಂಡಿರಾದ ಅಫ್ಘಾನ್ ರಾಣಿ ಸಾಹೇಬರು ಹಿಂದುಸ್ಥಾನದೊಳಗಿನ ಸ್ತ್ರೀಯರೊಳಗೆ ಶಿಕ್ಷಣ ಪ್ರಸಾರ ಮಾಡುವದಕ್ಕಾಗಿ ಇಂಗ್ಲಂಡದಲ್ಲಿ ಅನುಭವಿಕ ಶಿಕ್ಷಣಾಧಿಕಾರಿಗಳ ಆಲೋಚನೆ ಕೇಳಿಕೊಳ್ಳುತ್ತಿದ್ದಾರೆ. ಆಲೋಚನೆ ಮುಗಿಯುವದರೊಳಗೆ ಸರ್ವಾಧಿಪತಿಗಳ ಸರ್ವಾಧಿಪತಿತ್ವವು ತಪ್ಪಿಹೋದರೆ, ಶಿಕ್ಷಣ ಪ್ರಸಾರವಾಗದೆ ರಾಣಿಸಾಹೇಬರಿಗೆ ಸ್ತ್ರೀ ಶಿಕ್ಷಣಪ್ರೇಮಿಗಳೆಂಬ ಕೀರ್ತಿ ಪಡೆಯಲಿಕ್ಕೆ ತೊಂದರೆಯೇನಿಲ್ಲ

S. U. Narayanacharya & CO.
Chaukamba, BENARES CITY,

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಭರವಾದ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ. ಕ್ಯಾಟಲಾಗು ಕೇಳುವವರಿಗೆ ಉಚಿತವಾಗಿ ಕಳಿಸಲಾಗುವದು.

ವಿಳಾಸ—ಶಿರೋಳ ಎಸ್. ನಾರಾಯಣಾಚಾರ್ಯ,
ಮತ್ತು ಕಂಪನಿ, ಚೌಕಂಬಾ, ಕಾಶಿಕ್ಷೇತ್ರ.

— ಚೀನ ದೇಶದೊಳಗಿಂದ ಅಫೀಮಿನ ವ್ಯಾಪಾರವನ್ನು ಹೊರತಳ್ಳುವದಕ್ಕಾಗಿ ಅಲ್ಲಿಯ ರಾಷ್ಟ್ರೀಯ ಸರಕಾರವು ಬಹಳ ಪ್ರಯತ್ನಪಡುತ್ತಿದೆ. ಆ ಕಾರ್ಯಕ್ಕೆ ಯಶಸ್ಸು ಪ್ರಾಪ್ತವಾಗಿದೆ. ಇನ್ನು ಸ್ವಲ್ಪ ದಿವಸಗಳಲ್ಲಿಯೇ ಈ ವ್ಯಸನವು ಸಂಪೂರ್ಣವಾಗಿ ಹೊರತಳ್ಳಲ್ಪಡುವದಾಗಿ ಚೀನ ದೇಶದೊಳಗಿನ ರಾಷ್ಟ್ರಸಂಘದ ಪ್ರತಿನಿಧಿಗಳು ರಾಷ್ಟ್ರಸಂಘದ ಸಭೆಯಲ್ಲಿ ಹೇಳಿದರು.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ
ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ
ಶ್ರೀ ತುಳಸಿದಾಸ
ರಾಮಾಯಣ.
ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ| ಎ. ರಂಗನಾಥಂ
ಅವರ ಮುನ್ನುಡಿ ಸಹಿತ
ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ
ಇತ್ಯಾದಿ ಸಹಿತ.
ಅನುವಾದಕ:— ಶ್ರೀ| ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦; ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ
(ಶಾ) ೧೭೨ ಚಾಮರಾಜಪೇಟೆ, ೫ನೇ ಬೀದಿ,
ಬೆಂಗಳೂರು ಸಿಟಿ.

ಟಿ. ಎಸ್. ಮೋಟರ ಸರ್ವಿಸ, ಶಿವಮೊಗ್ಗಾ.

ಗೆರಸಪ್ಪಾ
ಜೋಗಿಗೆ
ರೆಗ್ಯುಲರ್
ಸರ್ವಿಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು-

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ. ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವಿಸ ನಡೆಯುತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಪಕ್ಕಾ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ
ದ್ರಾಕ್ಷಾರ್ಕಮಧು
ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದಲ್ಲದೆ ೬೦-೭೦ ವರ್ಷದ ಮುದುಕರ ಶಾಮವಿಕಾರ ಕೂಡ ತರುಣರಂತೆ ಬಲವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ನಾಶವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು — ಜರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರೋಗಿಯಾಗುವದು. ಮೂರೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮುಂತಾದ ಇವುಗಳು ನಾಶವಾಗುವದು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಶೌಚ ಸಾಫ ಆಗುವದು. ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಬೇನೆ ಇದ್ದರೆ ೧೫ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧॥ ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚು ಹೆಚ್ಚು ಬೀಳುವದಿಲ್ಲ. ಆರು ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲಿ ಪುಕ್ಕಟೆ ಸಿಗುವದು. ಟಪಾಲ ಖರ್ಚು ಬೇರೆ ಬೀಳುವದು. ಏಜೆಂಟರ ಕಡೆಯಿಂದ ೧ ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಡಜನಿಗೆ ೧೪-೦-೦

— ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

झंडूचें

द्राक्षासव – मृद्विकारिष्ट –
शारंगधर म. अ. १०

रामबाण औषध

सर्दि घालविणारें,
खूक वाढविणारें
शौच्यास साफ करणारें
झोंप आणणारे
शक्ति देणारें
तेजस्वीपणा आणणारें

पिण्यास रुचिकर
किंमत- एक रत्तलास १॥ रुपये.
कॅटालाग मागवा

झंडु फार्मास्युटिकल वर्क्स लिमिटेड
मुंबई नं: १४
ऐजंट— मेसर्स पंडित आणी कंपनी,
तीर्थहळ್ಳी
सिर्सि एजंट- एस्. एल्. धाकप्पा आणि ब्रदर

ಇಂಗ್ಲಂಡದಲ್ಲಿ ಸಿದ್ಧವಾದ

ರಾಯಲ್ ಆರ್ಚರ

ಸಾಯಕಲ್.
(ಸಾಯಕಲ್ಲಿನ ಪ್ರತಿ ಭಾಗದ ಮೇಲೂ
" ಆರ್ಚರ " ಎಂಬ ಗುರುತಿರುವದು.)
ಚೆನ್ನಾಗಿ ಪೆಟ್ಟಿಗೆಯಲ್ಲಿಟ್ಟು ರೇಲ್ವೆ ಚಾರ್ಜ
ತುಂಬಿ ನಿಮ್ಮೂರ ಸ್ಟೇಶನ ಮೇಲೆ
೮೫ ರೂ. ೮ ಆ. ಗೆ ಮಾತ್ರ.

ಇದರ ಕೂಡ ಡನ್‌ಲಾಪ್ ಕೋರ್ಡ ಟಾಯರ್ಸ, ಫ್ರೀವ್ಹೀಲ, ೨ ರಿಮ್ ಬ್ರೇಕ್ಸ, ಮಡಗಾರ್ಡ್ಸ, ಸೊಗಸಾದ ಸ್ಪ್ರಿಂಗಸೀಟ, ರಬರ ಪ್ಯಾಡಲ್ಸ, ಲೂಕಸ್ಸಿನ " ಪಾಥ ಫಾಯಿಂಡರ" ದೀಪ, ಉತ್ತಮ ಘಂಟೆ, ಡನ್‌ಲಾಪ್ ಪ್ಲೇಟೆಡ್ ಪಂಪ, ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಆಯಿಲರ ಕಳಿಸಲಾಗುತ್ತೆ. ಆರ್ಡರಿನ ಕೂಡ ರೂ. ೧೫ ಮುಂಗಡ, ಉಳಿದ ಹಣವನ್ನು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು.

ವೆಲಿಂಗ್ಟನ್ ಸಾಯಕಲ್
ಎಂಡ್ ಮೋಟರ ಕಂಪನಿ,
ಮುಂಬಯಿ— ಹಾರ್ನಬೀ ರೋಡ,
ಪುಣೆ— ಅರ್ನೆವಲ್ ರೋಡ.

ರೇಶ್ಮೆ ವಸ್ತ್ರ ಇನಾಂ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ವಸ್ತ್ರಗಳು, ರೇಶ್ಮೆ ಸೀರೆ, ಪೀತಾಂಬರ, ಮಗುಟ, ರವಕೆ ಖಣ, ಎಲವಸ್ತ್ರ, ಪೇಟಾ, ಕಾಶ್ಮೀರ್ ಮತ್ತು ಕಾನಪುರ್ ಶಾಲು, ಧಾವಳಿ, ಸಾಮಗ್ರಿ, ರುದ್ರಾಕ್ಷಿ, ಸ್ಫಟಿಕ ಸರ, ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ ಪಚ್ಚ ಕರ್ಪೂರ, ಕೇಸರಿ, ಶಿಲಾಜಿತು, ಅತ್ತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವದು. ಇಪ್ಪತ್ತೈದು ರೂಪಾಯಿ ಕ್ರಯ ಬಾಳುವ ಸಾಮಾನುಗಳಿಗೆ ಆರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮವಾಗಿ ದೊರೆಯುವದು. ಪತ್ತೆ:—

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ,
ದುರ್ಗಾ ಘಾಟ, ಶ್ರೀ ಕಾಶೀ ಯು. ಪಿ.

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಶಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾದೀತು

(Registered Trade Mark.)

ಬುಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೨-೮-೦. ವ್ಹಿ. ಪಿ. ೦-೮-೦ ದಯವಿಟ್ಟು ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಆಂಡ್ ಕಂಪನಿ ಲಿಮಿಟೆಡ್ ಪ್ರೋ, ಬಾ ೫೧೦, **ಪಾರ್ಕಟೌನ, ಮದರಾಸ**

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್.

ವೀರ್ಯವು ತೆಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ ಹಳೇ ಪರ್ಮ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವಯಾಗಿ ಶರೀರಕ್ಕೆ ಕಾಂತಿ ಬರುತದ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ ರತಿಸುಖ ಬಯಸುವಂಥವರು ಒಂದು ವರ್ತಿ ತಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತ್ತು ಭಸ್ಮಗಳು "ಮೈಸೂರ ಸ್ಟಾರ" ಪತ್ರಿಕೆಯಲ್ಲಿ ಪ್ರಕಾಶ ಮಾಡಿತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲಿಯು ೧ ವಡಿ, ರಾತ್ರಿಯ ಭೋಜನವಾದ ನಂತರ ೨ ತೊಲಿಯ ಒಂದು ವಡಿಯನ್ನು ತಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ ೩೧ ದಿವಸ ಸಾಕಾಗುವಷ್ಟು ೬೪ ತೊಲೆಯ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವ್ಹಿ. ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ ಮಿರಜ.**

ಅಮೃತಾಂಜನ

ನೋವು ಪಹಾರಕ್ಕೆ ದಿವ್ಯೌಷಧ.
ಈ ಮದ್ದು ಅತ್ಯಂತ ಅವಶ್ಯವಾದದ್ದು;
ಬಾಳಿಕೆಗೆ ತೀರ ಅನುಕೂಲ, ಮನೆತನದವರೆಂತು ಇಟ್ಟು ಕೊಳ್ಳಲೇ ಬೇಕು; ಬಿದ್ದ-ಸುಟ್ಟ ಘಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದ್ದಲ್ಲಿ ಸಿಗುತ್ತೆ.
ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.
ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta.

MONDAY, OLTOBER 8TH 1928.

ವರ್ಷ ೧೨

ಸಂಚಿಕೆ ೫೨

ಕಾನಡಾವೃತ್ತ.

THE KANARA NEWS.

ಪತ್ರದ ವರ್ಗಣಿ.
ಕುಮಟೆಯಲ್ಲಿ ಆಗಾವು;
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಜಾಹೀರಾತುಗಳ ದರ.
ಕನಡ, ಇಂಗ್ಲಿಷ ಸ್ಮಾಲ ಪೈಕಾ ಟೈಪಿನ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-
ಆ ನಂತ್ರ ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವದೋ ಆ ಮಾಪದಿಂದ ಅಷ್ಟುಸಾಲುಗಳು ಹಿಡಿಯಲ್ಪಡುವವು.
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೮ ಮಾಹೆ ಅಕ್ಟೋಬರ ಸನ್ ೧೯೨೮ನೇ ಇಸವಿ.)—

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಮಾದರಿಯ ಸಾಮಾನುಗಳು ಸಿಗುತ್ತವೆ.— ಕಬ್ಬಿಣ ಮೊಳೆಗಳು, ಮೋಟಾರ ಉಪಯೋಗದ ಬೋಲ್ಟುಗಳು, ಪಿನ್ ವೊಶರ, ಡಿಸ್ಟಿಲ್ಡ ವೋಟರ ಸಿಗುತ್ತವೆ; ಬಣ್ಣ ಸಿಗುತ್ತದೆ; ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಎಲ್ಲ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ ! ಕಾಟೂನುಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತ್ತವೆ ! ಎಲ್ಲ ಸಾಮಾನು ಅಗ್ಗ ! ಕಿರಕೋಳ ವ್ಯಾಪಾರಸ್ಥರು ತೋಕ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—
ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ (ಉ. ಕನಡ)

ಪ್ರೆಸಿಡೆನ್ಸಿ ಪ್ರೋವಿಡೆಂಟ ಎಂಡ್ ಜನರಲ್ ಇನ್ಶುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ:- ಅನ್ನಪೂರ್ಣ ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಭದ್ರತೆ ಇದೆ.

ಮನುಷ್ಯನ ಆಯುಷ್ಯಕ್ರಮದಲ್ಲಿ ಎಲ್ಲವೂ ಅನಿಶ್ಚಿತವಿದ್ದರೂ, ಸಾವು ಮಾತ್ರ ಖಂಡಿತವಾಗಿ ಬಂದೇ ಬರುವದು! ಆದ್ದರಿಂದ ಜೀವವಿಮೆ ಇಳಿಸುವ ಅವಶ್ಯಕತೆ ಪ್ರತಿಯೊಬ್ಬನಿಗೂ ಇರುತ್ತದೆ. ಪ್ರತಿಯೊಬ್ಬನೂ ವಿಮೆ ಇಳಿಸಿ ತನ್ನ ಕುಟುಂಬದ ಗೋಳನ್ನು ಕಡಿಮೆ ಮಾಡುವದಕ್ಕೆ ಪ್ರಯತ್ನಿಸಲೇಬೇಕು. ವಿಮೆ ಕಂಪನಿಗಳು ಅನೇಕ ಇರುವವು; ಆದರೆ ಎಲ್ಲಾ ಬಗೆಯಿಂದಲೂ ನಮ್ಮ ಕಂಪನಿಯಷ್ಟು ಉತ್ತಮವೂ ಎಲ್ಲ ಜನರಿಗೆ ಅನುಕೂಲವೂ ಆದ ಕಂಪನಿಯು ಬೇರೆ ಇಲ್ಲಾ. ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬಲು, ೧೫ ವರ್ಷಗಳಲ್ಲಿ ೨೫೦ ರೂಪಾಯಿಗಳಿಗಿಂತ ಹೆಚ್ಚು ಅಂದರೆ ೫೦೦ ರೂಪಾಯಿಗಳ ತನಕ ಸಿಗುವದು!! ಪ್ರತಿ ತಿಂಗಳಿಗೆ ೨ ರೂಪಾಯಿಗಳಂತೆ ತುಂಬಿ ೧೦ ವರ್ಷ ಮುದ್ದತಿನ ವಿಶೇಷ ಸವಲತ್ತಿನ ಸ್ಪೇಶಲ್ ಪೊಲಿಸಿಗಳನ್ನು ಹೊಂದಲು ಬರುತ್ತದೆ! ಕಂಪನಿಯಲ್ಲಿ ಹೆಂಗಸರಿಗೂ ವಿಮೆ ಇಳಿಸಲು ಬರುತ್ತದೆ. ಡಾಕ್ಟರರ ತಪಾಸು ಇಲ್ಲ! ಎಲ್ಲ ಕಡೆಯಲ್ಲಿಯೂ ಏಜಂಟರು ಬೇಕು! ವಿಶೇಷ ಮಾಹಿತಿಯ ಬಗ್ಗೆ ನಮ್ಮ ಕಂಪನಿಯ ಆರ್ಗನೈಜರ ಮಿ|| ಎನ್. ಟಿ. ನಾಯ್ಕ, ಆಫೀಸ-ಅಂಕೋಲಾ, ಜಿಲ್ಲಾ ಉ ಕನ್ನಡ, ಇವರಕಡೆಗೆ ಬರೆದುಕೊಳ್ಳಬೇಕು..



ತ್ವರೆ ಮಾಡಿರಿ ! ತ್ವರೆ ಮಾಡಿರಿ !!
ಚವತಿಹಬ್ಬದ ಲಾಗಾಯ್ತು
ದೀಪಾವಳಿಹಬ್ಬದ
ವರೆಗೆ ಮಾತ್ರ
ನಮ್ಮ ಅಂದವಾದ
ಶೀಶೆ ಕಟ್ಟಿಗೆಯ ನಡಚಲಿಕ್ಕಾಗುವಂಥ
ದೇವರ ಮಂಟಪಗಳು
ಕಿಮ್ಮತ್ತು ಕಡಿಮೆ ಮಾಡಿರುತ್ತದೆ.
ನಮ್ಮ ವಿಳಾಸ:—
ದಿ ಕರ್ನಾಟಕ ಟ್ರೇಡಿಂಗ ಕಂಪನಿ,
ಶಾಂತಿ ಭುವನ, ಕಾರವಾರ.

“ಔಷಧ ಸೀಸೆಗಳಿಗಿಂತ ಬರೇ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು!”

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ “ಆರೋಗ ಚಂದ್ರಿಕೆ” ಎಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯ ವೃದ್ಧಿಕಾರಕರಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿರುವಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ.

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

ವಿವಿಧ ಸಂಗ್ರಹ.

ಅಫಘಾಣಿಸ್ಥಾನದ ತಯಾರಿ.

ಅಫಘಾನ ಸರಕಾರವು ಅಲ್ಲಿಯ ಹುಡುಗರಿಗೆ ಮಾಧ್ಯಮಿಕ, ಔದ್ಯೋಗಿಕ ಹಾಗು ಸೈನಿಕ ಶಿಕ್ಷಣವನ್ನು ಕೊಡಲುದ್ಯುಕ್ತವಾಗಿದೆ. ಪ್ರತಿ ವರ್ಷ ೧೦೦ ವಿದ್ಯಾರ್ಥಿಗಳು ತುರ್ಕಸ್ತಾನಕ್ಕೆ ಕಳಿಸಲ್ಪಡುವರು. ಎಲ್ಲರ ಖರ್ಚನ್ನು ಅಫಘಾನ ಸರಕಾರವು ಪೂರೈಸುವದು. ಹುಡುಗರು ೧೫ ವರ್ಷಕ್ಕೆ ಮಿಕ್ಕಬಾರದು. ೫ ರಿಂದ 2 ವರ್ಷಗಳ ತನಕ ತುರ್ಕಸ್ತಾನದ ಶಿಕ್ಷಣಾಲಯಗಳಲ್ಲಿ ಬಾಲಕರು ಉಳಿದು ವಿದ್ಯೆಯನ್ನು ಸಂಪಾದಿಸಬೇಕು. ಈ ವರುಷದಿಂದಲೇ ಈ ಕ್ರಮಕ್ಕೆ ಪ್ರಾರಂಭವಾಗಿದೆ. ಕೆಲ ಹುಡುಗರಿಗೆ ಮೋಟಾರಿನಿಂದ ಕಳಿಸೋಣಾಯಿತು. ಮಧ್ಯದಲ್ಲಿ ಒಂದು ಅಪಘಾತ ಸಂಭವಿಸಿದ್ದರಿಂದ ಪೂರಾ ೧೦೦ ವಿದ್ಯಾರ್ಥಿಗಳನ್ನು ಕಳಿಸಲಾಗಲಿಲ್ಲ; ಅವರೆಲ್ಲರೂ ಮುಂಬಯಿಗೆ ಬಂದು ಅಲ್ಲಿಂದ ಹಡಗ ಹತ್ತಿ ತುರ್ಕಸ್ತಾನಕ್ಕೆ ಹೋಗುವರು. ಇದು ಅಮೀರರಾದ ಅಮಾನುಲ್ಲಾಖಾನರವರ ಕರ್ತೃತ್ವ.

⁂

ಬ್ರಿಟಿಶರಿಗೆ ಹಿಂದುಸ್ಥಾನವು ಯಾಕೆ ಬೇಕು?

ತಾ. ೨-೧೦-೧೯೨೮ನೇಗೆ "ಲಂಡನ್ ಟ್ಯಾಮ್ಸ" ಪತ್ರಿಕೆಯಲ್ಲಿ ಹಿಂದುಸ್ಥಾನದ ಸರ್ವಾಧಿಪತಿಗಳಾಗಿದ್ದ ಕರ್ಝನ್ ದೊರೆಗಳು ಬರೆದದ್ದೇನಂದರೆ:– "ಹಿಂದುಸ್ಥಾನವು ನಮ್ಮ ಸಾಮ್ರಾಜ್ಯದ ಮರ್ಮಸ್ಥಾನವು; ನಮ್ಮ ಬ್ರಿಟಿಶ ಸಾಮ್ರಾಜ್ಯದ ಯಾವದೊಂದು ಪ್ರದೇಶವನ್ನು ನಾವು ಕಳಕೊಂಡಾಗ್ಯೂ, ನಮ್ಮ ಬಾಳ್ವೆಯಾಗಬಲ್ಲದು; ಹಿಂದುಸ್ಥಾನವು ಕೈತಪ್ಪಿದರೆ, ನಮ್ಮ ಸಾಮ್ರಾಜ್ಯದ ವೈಭವವು ಹಿಮ್ಮೆಲೇ ಕಳೆಗುಂದಿತೆಂದು ತಿಳಿಯುವದೇ. ೧೯೨೬-೨೭ನೇ ಇಸ್ವಿಯಲ್ಲಿ ಹಿಂದುಸ್ಥಾನದಿಂದ ೬೦ ಕೋಟಿ ಬೆಲೆಯ ಅಕ್ಕಿ, ಗೋದಿ, ನೆಲಗಡ್ಲೆ, ಕಾಳು-ಕಡಿ ಮೊದಲಾದ ಜಿನಸುಗಳು ರಫ್ತಾದವು; ೩೯ ಕೋಟಿ ಬೆಲೆಯ ಅರಿವೆಯು ಆಮದಾಯಿತು." ೧೯೨೮ನೇ ಇಸ್ವಿಯ ಫೆಬ್ರುವರಿ ೧೨ನೇ ತಾರೀಖಿನ ಲಂಡನಿನ "ಡೇಲಿ ಮೇಲ" ಪತ್ರಿಕೆಯಲ್ಲಿ ಬರೆದದ್ದೇನಂದರೆ:–"ಇಂಗ್ಲಂಡದಲ್ಲಿ ತರತರದ ಕೈಗಾರಿಕೆಯ ಕಾರಖಾನೆಗಳಿವೆ. ಅದರೊಳಗೆ ಅರಿವೆಯ ಗಿರಣಿಗಳೇ ಪ್ರಾಮುಖ್ಯವಾದವುಗಳು. ಇಂಗ್ಲಂಡದಿಂದ ರಫ್ತಾದ ಎಲ್ಲ ಸಾಮುಗ್ರಿಗಳ ವಿಚಾರ ಮಾಡಿದರೆ, ಅರಿವೆಯ ರಫ್ತಿಯು ಚತುರ್ಥಾಂಶವಾಗುತ್ತದೆ. ಕೈಗಾರಿಕೆಗಳ ಸಾಮಾನಿನ ವಿಚಾರ ಮಾಡಿದರೆ, ಇದು ೩ನೇ ೧ ಅಂಶವಾಗುತ್ತದೆ. ಅದರಿಂದ ಈ ಉದ್ಯೋಗವನ್ನು ಅಭಿವೃದ್ಧಿಗೈಯುವದು ಬ್ರಿಟಿಶ ದೇಶದವರ ಆವಶ್ಯಕರ್ತವ್ಯವು. ಈ ಉದ್ಯೋಗವು ಅಭಿವೃದ್ಧಿ ಹೊಂದಿದರೆ ಮಾತ್ರ ಇಲ್ಲಿ ಸಾಗುವ ಕಾಳು-ಕಡಿಗಳನ್ನು ಕೊಂಡುಕೊಳ್ಳಲು ಉಪಾಯವಾಗುತ್ತದೆ." ಇದಕ್ಕಾಗಿಯೇ ಮಹಾತ್ಮರು ಪರದೇಶಿ ಬಟ್ಟೆಗಳ ಬಹಿಷ್ಕಾರವನ್ನು ಅಸಹಕಾರದ [illegible]ಕ್ಕೆ ಪುರಸ್ಕರಿಸಿದರು; ಖಾದಿಯ ಪುರಸ್ಕಾರವನ್ನು ಶಕ್ತಿಮೀರಿ ಕೈಕೊಂಡಿದ್ದಾರೆ; ಖಾದಿಯ ಪ್ರಸಾರದಿಂದಲೇ ಹಿಂದುಸ್ಥಾನಕ್ಕೆ ಕಲ್ಯಾಣವಾಗುವದೆಂದೂ ಬೋಧಿಸುತ್ತಾರೆ. ಬ್ರಿಟಿಶರ ಅರಿವೆಯ ವ್ಯಾಪಾರವು ಹಿಂದುಸ್ಥಾನದಲ್ಲಿ ಕಟ್ಟಾದರೆ, ಹಿಂದುಸ್ಥಾನದಲ್ಲಿ ಸ್ವಾತಂತ್ರ್ಯವನ್ನು ಕಾಪಾಡುವದರಿಂದ ಬ್ರಿಟಿಶರಿಗೆ ಲಾಭವೇನಿದೆ?

⁂

ನ್ಯಾಯ ಖಾತೆಯಿಂದ ಬಿಡುಗಡೆ ಮಾಡಿ.

ಕಲಕತ್ತೆಯ ಹೈಕೋರ್ಟಿನ ನ್ಯಾ| ಮೂ| ಕೊಸ್ಟೆಲೋ ಹಾಗು ಲೋರ್ಟ ವಿಲಿಯಮ್ಸ್‌ರವರ ಕೋರ್ಟಿನಲ್ಲಿ ಒಂದು ಖಟ್ಲೆ ವಿಚಾರಕ್ಕೆ ಬಂತು. ರಿಜಿಸ್ಟ್ರಿ ಆಫೀಸಿನಲ್ಲಿ ಮುಸಲ್ಮಾನ ಹೆಂಗಸಿನಂತೆ ಹಿಬ್ಬನು ನಟಿಸಿ ವಂಚಿಸಿದ ಬಗ್ಗೆ ಫೇಣಿಯೊಳಗಿನ ಸಬಡಿವ್ಹಿಜನಲ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಫ್ರೋಬಲ ರಹಮಾನ್‌ರವರ ಮೇಲೆ ಖಟ್ಲೆ ನಡೆದಿದೆ. ಇವರ ತರ್ಫೆನಿಂದ ಶ್ರೀ ಸುರೇಶಚಂದ್ರ ತಾಲೂಕದಾರ ವಕೀಲರು ಖಟ್ಲೆಯನ್ನು ಟ್ರಾನ್ಸಫರ ಮಾಡಬೇಕಾಗಿ ಅರ್ಜಿ ಮಾಡಿದ್ದಾರೆ. ಭಗಲನ್ನೈಯ ಗ್ರಾಮದ ಸಬ್‌ರಿಜಸ್ಟ್ರಾರರು ಫೇಣಿಯ ಸಬ್‌ಡಿವ್ಹಿಜನಲ್ ಮೆಜಿಸ್ಟ್ರೇಟರ ಕಡೆ ರಿಪೋರ್ಟ ಮಾಡಿ ತಮ್ಮ ಕಚೇರಿಯಲ್ಲಿ ಆರೋಪಿಯು ಮುಸಲ್ಮಾನ ಹೆಂಗಸಿನ ವೇಷಮಾಡಿ ಸುಳ್ಳು ದಾಖಲೆಗಳನ್ನು ತಯಾರಿಸಿದನೆಂದು ತಿಳಿಸಿದರು. ಸಬ್‌ಡಿವ್ಹಿಜನಲ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು!

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ರೋಮರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತ್ತದೆ.
ಅಥವಾ
ನಮಗೇ ಬರೆದು ತರಿಸಿಕೊಳ್ಳಿ.

ಬಾಟ್ಲಿ ೧ಕ್ಕೆ ರೂ. ೧—೦—೦
ಅಂಚೆವೆಚ್ಚ ,, ೦—೬—೦
೩ ಬಾಟಗಳಿಗೆ ,, ೨—೧೦—೦
ಅಂಚವೆಚ್ಚ ,, ೦—೧೨—೦

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ.

—:o:—

½ ಔಂಸಿಗೆ ರೂ. ೨—೦—೦
¼ ಔಂಸಿಗೆ ,, ೧—೪—೦
೧ ಡ್ರಾಮಿಗೆ , ೦—೧೨—೦
ಅಂಚೆವೆಚ್ಚ ,, ೦—೬—೦

ಒಟ್ಟೋ-ದಿಲ್ ಬಹಾರ
ಹೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್!! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಅಲ್ಕೋಹೋಲ ಜಾತಿ ಮದ್ಯವು ಸೇರಿರುತ್ತದೆ. ಅದರಿಂದ ಹೂವಿನ ಸಹಜ ಪರಿಮಳವು ಸಿಗುವದು-ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.
POST BOX, 2082 BOMBAY No. 2.

ಮೆಜಿಸ್ಟ್ರೇಟರು ಕಾಯಿದೆ ಇದಾವನ್ನು ಕೈಕೊಂಡರು. ಕಾಯಿದೆಯಂತೆ ಮೆಜಿಸ್ಟ್ರೇಟರು ಖಟ್ಲೆಯ ವಿಚಾರವನ್ನು ಬೇರೆ ಕಡೆ ವರ್ಗಾಯಿಸಬೇಕಾಗಿದ್ದಿತ್ತಾಗಿ ರಾ| ತಾಲೂಕದಾರ ವಕೀಲರು ವಾದಿಸಿದರು. ಮೆಜಿಸ್ಟ್ರೇಟರು ಧಿಕ್ಕರಿಸಿದರು. ಮೆಜಿಸ್ಟ್ರೇಟರಿಗೆ ನ್ಯಾಯ ಹಾಗು ಅಮಲಬಜಾವಣೆ ಹೀಗೆ ಎರಡೂ ಅಧಿಕಾರಗಳಿವೆ. ಒಂದು ಅಧಿಕಾರದಿಂದ ಈ ಖಟ್ಲೆಯ ಫಿರ್ಯಾದಿಸ್ಥಾನವನ್ನು ಕೈಕೊಂಡು, ಇನ್ನೊಂದು ಅಧಿಕಾರದಿಂದ ನ್ಯಾಯಪತಿಯಾಗುವದು ಪ್ರಶಸ್ತವಲ್ಲೆಂದು ರಾ| ತಾಲೂಕದಾರರು ವಾದಿಸಿದರು. ಇದನ್ನು ಕೇಳಿ ನ್ಯಾ| ಮೂ| ಕೊಸ್ಟೆಲೋರವರು ಉದ್ಗರಿಸಿದ್ದೇನೆಂದರೆ:— ಹಿಂದುಸ್ಥಾನದಲ್ಲಿ ಇದೊಂದು ವಿಚಿತ್ರ. ಒಮ್ಮೆ ಒಬ್ಬ ಅಧಿಕಾರಿಯು ನ್ಯಾಯಪತಿಯಾಗುತ್ತಾನೆ. ಅದೇ ಪ್ರಕರಣದಲ್ಲಿ ಇನ್ನೊಂದು ಸರ್ತಿ ಅಮಲಬಜಾವಣೆ ಅಧಿಕಾರಿಯಾಗುತ್ತಾನೆ. ನ್ಯಾಯಾಧಿಕಾರಿಗಳನ್ನೂ, ಅಮಲಬಜಾವಣೆ ಅಧಿಕಾರಿಗಳನ್ನೂ ಪೃಥಕ್ಕರಿಸಿದ ಹೊರತು, ಯಾವ ನಾತೆಯಿಂದ ಯಾವ ಕೆಲಸವಾಯಿತೆಂದು ತಿಳಿಯುವದು ಕಷ್ಟವಾಗುತ್ತದೆ. ರಾ| ತಾಲೂಕದಾರರು ಉತ್ತರಕೊಟ್ಟಿದ್ದೇನೆಂದರೆ:— ಇದೇ ನಮ್ಮ ದೊಡ್ಡ ಕಷ್ಟವಾಗಿದೆ. ಇದರ ದೇಶವೇ ನಾಶಕ್ಕಾಗಿ ಪ್ರಯತ್ನಪಡುತ್ತಿದೆ. ನ್ಯಾಯಮೂರ್ತಿಗಳು ಅರ್ಜಿಯ ವಿಚಾರದ ತನಕ ಪ್ರಕರಣದ ವಿಚಾರಕ್ಕೆ ತಡೆಹಾಕಿದರು.

⁂

ಸಾಧುಸೇವಕರಿಗೆ ಎಚ್ಚರಿಕೆ.

ಮುಂಬಯಿಯ ವರ್ತಮಾನಪತ್ರಿಕೆಗಳಲ್ಲಿ ಒಬ್ಬ ಸಾಧುವಿನ ದುಷ್ಟ ಚೇಷ್ಟೆಗಳು ಪ್ರಕಟಹೊಂದಿವೆ. ಒಬ್ಬ ಸಾಧುಗಳು ಬಂದರು; ಪುಷ್ಟ ಕಾಯದವರು; ಉದ್ದ ಗಡ್ಡದವರು; ಉಪ್ಪರಿಗೆಯ ಮನೆಯಲ್ಲಿ ವಾಸ; ದೊಡ್ಡ ದೊಡ್ಡವರು ಇವರ ಭಕ್ತರು; ಭಕ್ತರಲ್ಲಿ ಜಾತಿಭೇದವಿಲ್ಲ. ಪ್ರತಿ ಗುರುವಾರಕ್ಕೆ ಗುರು ಮಹಾರಾಜರು ಜನಸಿಯನ್ನು ಸೇರಿಸಿ, ಪ್ರವಚನ ಕೊಡುತ್ತಾರೆ; ಮಿಠಾಯಿ ಹಂಚುತ್ತಾರೆ; ಹೀಗೆ ನಡೆದದೆ ಕಾರಭಾರ. ಕಳೆದ ಅಕ್ಟೋಬರ ತಿಂಗಳಿನಲ್ಲಿ ಪಾರ್ಸಿದ ದಂಪತಿಗಳು ಈ ಗುರು ಮಹಾರಾಜರ ಸನ್ನಿಧಿಗೆ ಬಂದರು. ಸಾಧುಗಳ ಅನುಗ್ರಹವಾಗಬೇಕೆಂದು ಇವರು ಸೇವೆ ನಡಿಸಿದರು. ಹೀಗೆ ಕಳೆದ ಜೂನ ತಿಂಗಳ ವರೆಗೆ ಸೇವೆಯಾಯಿತು. ಗುರು ಮಹಾರಾಜರು ಇವರ ಮನೆಗೆ ಹೋಗಹತ್ತಿದರು. ಹೀಗೆ ಜೂನ ತಿಂಗಳ ವರೆಗೆ ನಡೆಯಿತು. ದಂಪತಿಗಳೀರ್ವರೂ ಮಹಾರಾಜರ ಏಕನಿಷ್ಠ ಭಕ್ತರಾದರು. ಹೆಂಡತಿ ರೂಪವತಿ; ಸೊಬಗಿನವಳು. ಅವಳ ಮೇಲೆ ಸಾಧುಗಳ ಕೃಪಾಕಟಾಕ್ಷವಾಯಿತು. ಸಾಧುಗಳಿಗೆ ಭೂತಕಾಲ ಸ್ಮರಣೆಯಾಯಿತು. "ನಾನು ನೇಪಾಳದ ಅರಸನಿದ್ದೆ; ಅರಸನಿಗೊಂದು ಅರಸಿ ಬೇಕಲ್ಲವೇ? ಗ್ರಹಿಸಿ ನೋಡು; ನೀನೇ ಆ ಅರಸನ ಅರಸಿಯಾಗಿದ್ದೆ! ಆ ಅರಸನೂ, ಅರಸಿಯೂ ಸುಖದಿಂದ ರಾಜ್ಯವಾಳಿದರು. ಈಗ ನನಗೆ ಪೂರ್ವಜನ್ಮದ ಸ್ಮರಣೆಯಾಗಿದೆ. ನಾವು ಪುನಃ ಒಂದಾಗುವಾ." ಆ ಸ್ತ್ರೀಯು ಮರುಳಾದಳು. ಸಾಧುಗಳ ಬಳಿ ಉಳಕೊಳ್ಳಲೊಪ್ಪಿದಳು. ಸಾಧುಗಳು ಗಂಡನಿಗೆ ಹೇಳಿದ್ದೇನೆಂದರೆ:— "ನಿನ್ನ ಹೆಂಡತಿಯೊಡನೆ ಮಾಡಿದ ವಿವಾಹವನ್ನು ತೊರೆದು ಬಿಡು; ನನ್ನ ಬಗ್ಗೆ ತೊರೆದು ಬಿಡು," ಎಂದರು. ಗಂಡನಿಗೆ ಒಪ್ಪಿಗೆಯಾಗಲಿಲ್ಲ. ಆತನು ಅನುಮಾನ ಮಾಡಿದನು. ಗುರು-ಮಹಾರಾಜರು ಹಿತ್ತಾಳಿಯ ಮಾಡಿದರು:- "ಬೇರೆ ಮದುವೆ ಮಾಡಿಕೊ; ಬೇಕಾದಷ್ಟು ಹಣ ಕೊಡುತ್ತೇನೆ," ಎಂದು ಹೇಳಿದರು. ಆದರೂ ಗಂಡನಿಗೆ ಒಪ್ಪಿಗೆಯಾಗಲಿಲ್ಲ. ಹೀಗೆ ವಾಕ್ಕಲಹ ನಡೆಯುತ್ತಿರುವಾಗಲೇ ಜುಲೈ-ಅಗಸ್ಟ ತಿಂಗಳುಗಳು ಕಳೆದವು. "ಸರ್ವಸಂಗಪರಿತ್ಯಾಗ ಮಾಡಿದ ಪರಮಹಂಸ ಮಹಾರಾಜರನ್ನು ಶ್ರೇಷ್ಠ ಮಾಡುತ್ತಾರೆ, ನನಗೆ! ಸತಿಭಕ್ತಿಯು ನಿನ್ನಲ್ಲಿಲ್ಲದ್ದೆಂದು ಪರೀಕ್ಷಿಸುತ್ತಾರೆ" ಎಂಬುದು ಗ್ರಹಿಸಿ ಸುಮ್ಮಗಾದರು. ಆದರೂ, ಸಾಧುಗಳು ಚಿತ್ರಾಂಗ ಮಾಡಿದರು. ಗಂಡನಿಗೆ ಏನು ಮಾಡಬೇಕೆಂದು ಸೂಚಿಸಲಿಲ್ಲ. ತಂದೆಗೆ ತಂತಿ ಮಾಡಿದನು. ತಂದೆಯು ಮಗನಿಗೆ ಬುದ್ಧಿ ಹೇಳಿ ಇಂಥ ಕೆಟ್ಟ ಕೆಲಸ ಮಾಡಬಾರದೆಂದು ಎಚ್ಚರಿಕೆ ಕೊಟ್ಟನು. ಆದರೆ ಆಗ ಸಮಯ ಮೀರಿತ್ತು. ಮೂಲಮುಹೂರ್ತವೂ ಹಬ್ಬ; ಹಗಲು ೯ ಘಂಟೆಯಾಗಿದೆ; ಹೆಂಡತಿಯು ಯಾರ ಮಾತೂ ಕೇಳುವದಿಲ್ಲ. ಒಬ್ಬಳೇ ಎದ್ದು ಮಹಾರಾಜರ ಮನೆಗೆ ಹೋಗಲು ಸಿದ್ಧಳಾದಳು. ಮೋಟಾರು ತಯಾರಾಗಿ ಬಂದಿತ್ತು. ಅದನ್ನು ಹತ್ತಿ ಅವಳು ಹೋದಳು. ಎಲ್ಲಿ ಹೋದಳೆಂದು ಪತ್ತೆಯಾಗಲಿಲ್ಲ. ಪೋಲೀಸರಲ್ಲಿ ಫಿರ್ಯಾದಾಗಿದೆ. ಅವರು ಈ ವಿಷಯ ಪರಿಶ್ರಮಪೂರ್ವಕವಾಗಿ ಹುಡುಕುವವರಿದ್ದಾರಂತೆ. ಸಾಧುಗಳ ಸಂಸಾರದ ಕಥೆಯೇ ದೊಡ್ಡದಾಗಿ ಹೋಗಿದೆ !

⁂

ಹಿಂದುಸ್ಥಾನದ ಬಡತನದ ಕಾರಣ.

ಮಹಾತ್ಮರು ಹಿಂದುಸ್ಥಾನದ ಬಡತನದ ವಿಷಯಕ್ಕೆ ಪ್ರೊಫೆಸರ್ ಸಿ. ಎನ್. ವಕೀಲರವರ ಕಡೆಯಿಂದ ಕೆಲವು ಲೇಖಗಳನ್ನು ಬರೆಸಿ ತಮ್ಮ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಿದರು. ಅವುಗಳ ಮೇಲೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. ಪ್ರೊ| ವಕೀಲರವರು ಭಿನ್ನ ಭಿನ್ನ ಪ್ರಕಾರಗಳಿಂದ ವಿಚಾರಿಸಿ ಹಿಂದುಸ್ಥಾನ ಸರಕಾರವು ೫೫ ವರ್ಷ ಮೊದಲಿಗಿಂತ ಇತ್ತ ಬಡದಿದ್ದಿದೆಂದು ಅಭಿಪ್ರಾಯಪಟ್ಟಿದ್ದಾರೆ. ೪೦ ವರ್ಷಗಳ ಹಿಂದೆ ಹಿಂದುಸ್ಥಾನದವರ ಉತ್ಪನ್ನವೆಷ್ಟಿತ್ತೋ ಅದ್ದರೆ, ಈಗ ಉತ್ಪನ್ನದ ಮಾನವು ತ್ರಿಪ್ಪಟ್ಟು ಏರಿದೆ; ಇದು ನಿಜ. ಆದರೆ, ಖರ್ಚಿನ ಮಾನವನ್ನು ವಿಚಾರಿಸಿದರೆ, ನಮ್ಮ ಬಡತನವು ತಿಳಿಯುವಹಾಗಿದೆ. ೪೦ ವರ್ಷಗಳ ಹಿಂದೆ ೧ ರೂಪಾಯಿಯಿಂದ ನಮ್ಮ ಖರ್ಚು ಸಾಗುತ್ತಿತ್ತು. ಈಗ ೩|| ರೂಪಾಯಿ ಬೇಕು; ಅಂದರೆ, ಉತ್ಪನ್ನಕ್ಕಿಂತ ಖರ್ಚಿನ ಮಾನವು ಹೆಚ್ಚಾಗಿದೆ. ಜನಸಂಖ್ಯೆಯ ಮಾನದಿಂದ ವಿಚಾರಿಸಿದರೂ, ಜನರು ಬಡವರಾಗಿದ್ದಾರೆ. ಪ್ಲೇಗು, ಚಳಿಜ್ವರ ಮುಂತಾದವುಗಳಿಂದ ಲಕ್ಷಾವಧಿ ಜನರು ಸತ್ತಾಗ್ಯೂ ಉಳಿದವರಿಗೆ ಸಾಕಷ್ಟು ತಿನ್ನಲು ತಿನಸು ಸಿಗದೆ ಬಹು ಕಠಿಣವಾಯಿತು. ಉದ್ಯೋಗಗಳು ಕ್ರಮವಾಗಿ ಕಳೆಗುಂದಿ ಎಲ್ಲ ಜನ ಬೇಸಾಯದ ಮೇಲೆಯೇ ಅವಲಂಬಿಸಿರುವ ಪ್ರಸಂಗ ಬಂದಿದೆ. ೧೮೯೧ನೇ ಇಸ್ವಿಯಲ್ಲಿ ಶೇಕಡಾ ೬೧ ರಷ್ಟು ಮಂದಿಗಳು ಬೇಸಾಯದಿಂದ ಜೀವಿಸುತ್ತಿದ್ದರು. ಉಳಿದವರು ಬೇರೆ ಬೇರೆ ವ್ಯವಸಾಯ ಮಾಡಿ ಹೊಟ್ಟೆ ತುಂಬಿಕೊಳ್ಳುತ್ತಿದ್ದರು. ಆ ಉದ್ಯೋಗಗಳು ಕ್ರಮವಾಗಿ ನಷ್ಟಹೊಂದಿ, ಈಗ ಶೇಕಡಾ ೭೫ ರಷ್ಟು ಮಂದಿಗಳು ಬೇಸಾಯದ ಮೇಲೆ ಅವಲಂಬಿಸಿಕೊಳ್ಳಬೇಕಾಗಿದೆ. ಬಡತನವು ಎಲ್ಲ ಸಮಾಜಗಳಲ್ಲಿಯೂ ಹಬ್ಬಿದೆ. ಬೇಸಾಯಗಾರರಿಗೆ ಪುರಸತ್ತಿನ ಸಮಯ ಕಳೆಯಲು, ಉದ್ಯೋಗ ಸಿಗುವದಿಲ್ಲ. ಸಾಧು ವೇಷ ತಾಳಿ ವ್ಯಕ್ತಿಗಳು ಸರಿಯಿದ್ದವರು ಉಂಡಾಡಿಗರಾಗಿ ತಿರುಗಾಡುತ್ತಾರೆ. ದೈವವಾದಿಗಳಾಗಿ ಅನೇಕರು ತಮ್ಮ ಸ್ಥಿತಿ ಸುಧಾರಿಸಿಕೊಳ್ಳಲು ಪ್ರಯತ್ನಪಡುವದಿಲ್ಲ. ಶಿಕ್ಷಣಕ್ರಮವು ಸದೋಷವಿದೆ. ಇತ್ಯಾದಿ ಕಾರಣಗಳನ್ನು ಪ್ರೊಫೆಸರ ವಕೀಲರವರು ನಮೂದಿಸಿದ್ದಾರೆ. ಈ ಕಾರಣಗಳಿಗೆ ಮಹಾತ್ಮರು ಒಂದು ಮುಖ್ಯ ಕಾರಣವನ್ನು ಜೋಡಿಸಿದ್ದಾರೆ. ಪರದೇಶಿ ರಾಜ್ಯಕಾರಭಾರದಿಂದ ಹಿಂದುಸ್ಥಾನದ ಸುಲಿಗೆಯಾಗಿ ಹಿಂದುಸ್ಥಾನವು ಬಡದಿದ್ದಿದೆ. ಈ ರಾಜ್ಯಕಾರಭಾರದ ಸುಲಿಗೆಯ ಪ್ರಕಾರಗಳು ಭಿನ್ನ ಭಿನ್ನವಿವೆ. ಉಗಿಹಡಗ, ಉಗಿಬಂಡಿ, ಕರವಸೂಲಿ ಮುಂತಾದ ಪ್ರಕಾರಗಳಿಂದ ಸರಕಾರವು ಪ್ರಜೆಗಳ ಸತ್ವವನ್ನು ಹೀರಿಕೊಳ್ಳುತ್ತದೆ. ಇತ್ಯಾದಿ ಕಾರಣಗಳನ್ನು ಮಹಾತ್ಮರು ಬರೆದಿದ್ದಾರೆ.

⁂

ಕಂಪನಿ ಸರಕಾರದ ಆಟ.

ಈಸ್ಟ ಇಂಡಿಯಾ ಕಂಪನಿಯ ಕಾರಭಾರದ ಒಂದು ಪ್ರಕಾರವನ್ನು "ಕಂಟೆಂಪರರಿ ರಿವ್ಯೂ" ಪತ್ರಿಕೆಯಲ್ಲಿ ವರ್ಣಿಸಲಾಗಿದೆ. ಈಸ್ಟ ಇಂಡಿಯಾ ಕಂಪನಿಯ ಇಲ್ಲಿಯ ಚಾಲಕರು ಕೆಲ ಕೆಲವರಿಗೆ ಅಧಿಕಾರಗಳನ್ನು ಕೊಟ್ಟಿದ್ದರು. ಹೀಗೆ ೨೪ ಜಾಗೆಗಳು ನಿರ್ಮಾಣವಾಗಿದ್ದವು. ಕಂಪನಿಯ ಡಾಯರೆಕ್ಟರರು ಸಭೆ ಸೇರಿದರು. ೨೪ ಜಾಗೆಗಳನ್ನು ರದ್ದುಪಡಿಸಬೇಕಾಗಿ ಠರಾಯಿಸಿ ೨೪ ಮಂದಿ ಡಾಯರೆಕ್ಟರರು ಸಹಿ ಹಾಕಿ ಒಂದು ದೊಡ್ಡ ಖಲಿತೆಯನ್ನು ಇಲ್ಲಿಯ ಪ್ರಭುಗಳಾದ ವಾರನ್ ಹೇಸ್ಟಿಂಗ್ಸರವರಿಗೆ ರವಾನಿಸಿದರು; ಅದೇ ಟಪಾಲಿನಲ್ಲಿ ೨೪ ಖಾಸಗಿ ಪತ್ರಗಳು ಬಂದವು. ವಾರನ್ ಹೇಸ್ಟಿಂಗ್ಸರು ಒಂದೊಂದಾಗಿ ನೋಡಿದರು. ಅವೆಲ್ಲ ೨೪ ಮಂದಿ ಡಾಯರೆಕ್ಟರರು ವ್ಯಕ್ತಿಶಃ ಬರೆದ ಪತ್ರಗಳಾಗಿದ್ದವು. "ಕಡಿಮೆ ಮಾಡಬೇಕಾದ ೨೪ ಜಾಗೆಗಳಲ್ಲಿ ಒಬ್ಬೊಬ್ಬರನ್ನು ತಮ್ಮ ಬಗ್ಗೆ ನೇಮಿಸಿಕೊಳ್ಳತಕ್ಕದ್ದು. ಅವರಿಗೊಬ್ಬರಿಗೆ ಬಡತರ್ಫ ಮಾಡಬಾರದು." ಹೀಗೆ ೨೪ ಮಂದಿಗಳ ತರ್ಫೆಯಿಂದ ೨೪ ಡಾಯರೆಕ್ಟರರ ಖಾಸಗಿ ಪತ್ರಗಳು ಬಂದವು. ಖಲಿತೆಯನ್ನು ಮನ್ನಿಸುವದೋ, ಖಾಸಗಿ ಪತ್ರಗಳನ್ನು ಮನ್ನಿಸುವದೋ? ಈ ಸುದ್ದಿ ಹೇಳುವಾಗ ಕೋಮಟಿಗರದೊಂದು ಕಥೆಯು ನೆನಪಾಗುತ್ತದೆ. ಒಂದೂರಲ್ಲಿ ೧೦೦ ಮಂದಿ ಕೋಮಟಿಗರ ಮನೆಗಳಿದ್ದವು. ಕೋಮಟಿಗರೆಂದರೆ ತಕ್ಕುತನದಲ್ಲಿ ಕುಶಲರಂತೆ. ಒಂದು ದಿನ ಅರಸರಿಗೆ ಇವರ ತಕ್ಕುತನದ ಪರೀಕ್ಷೆ ಮಾಡಬೇಕೆಂದೆನಿಸಿತು. ಒಂದು ಹಂಡೆ ತಂದು ರಾಜಸ್ಥಾನದಲ್ಲಿ ಹೋಣಿಸಲಾಯಿತು; ಡಂಗುರ ಸಾರಲಾಯಿತು; "ನಾಳೆ ದಿನ ಮನೆಗೊಂದು ಚಂಬು ಹಾಲನ್ನು ಕೋಮಟಿಗರು ಹಂಡೆಯಲ್ಲಿ ತಂದು ತುಂಬಬೇಕು" ಕೋಮಟಿಗನು ವಿಚಾರಿಸಿದನು; ತನ್ನಷ್ಟಕ್ಕೆ ವಿಚಾರಿಸಿದನು. ಯಾರಿಗೂ ತನ್ನ ಆಲೋಚನೆ ಹೇಳಲಿಲ್ಲ. "ಹ್ಯಾಗೂ ೯೯ ಮಂದಿಗಳು ಹಾಲು ತುಂಬುತ್ತಾರೆ; ನಾನೊಬ್ಬ ನೀರು ಹೊಯ್ದರೆ, ಅದೆಲ್ಲಿ ಬಹಿರಂಗಕ್ಕೆ ಬರುವದು?" ಮಾರನೇ ದಿನ ಕೋಮಟಿಗರು ಒಬ್ಬೊಬ್ಬರಾಗಿ ಬಂದು ಹಂಡೆಯಲ್ಲಿ ಹಾಲು ಹೊಯ್ದರು; ಯಾರಿಗೂ ಕಾಣಗೊಡದಂತೆ ಸದ್ದಿಲ್ಲದೆ ಹೊಯ್ದು ಹೋದರು. ರಾಜಾಜ್ಞೆಯಂತೆ ಸೂರ್ಯಾಸ್ತಕ್ಕೆ ಹಂಡೆಯ ಬಾಯಿ ತೆರೆಯಲಾಯಿತು; ನೋಡಿದರೆ, ಹಂಡೆ ತುಂಬ ನೀರೇ ನೀರು! ಹಾಲಿನ ಸ್ಪರ್ಶ ಸಹ ಇಲ್ಲ. ಎಲ್ಲ ಮಹಾರಾಯರೂ ಹೀಗೆಯೇ ಆಲೋಚಿಸಿ ನೀರು

ಹೊಯ್ದು ಹೋಗಿದ್ದರಂತೆ. ಹೀಗೆ ಕಂಪನಿ ಸರಕಾರದ ಆಡಳಿತೆ ನಡೆದಿತ್ತು.

⁂

ಸರ್ ಜಗದೀಶಚಂದ್ರ ಬೋಸರವರ ಶೋಧಗಳು.

ವನಸ್ಪತಿಶಾಸ್ತ್ರಜ್ಞರಾದ ಸರ್ ಜಗದೀಶಚಂದ್ರ ಬೋಸರವರು ಯುರೋಪ ಖಂಡದ ಸಂಚಾರ ಮುಗಿಸಿ ಹಿಂದ ಸ್ಥಾನಕ್ಕೆ ಮರಳಿ ಬಂದರು. ಅವರು ಶನಿವಾರ ತಾರೀಖು ೬ನೇ ದಿನ ರಾತ್ರಿ ಮುಂಬಯಿ ವಿಶ್ವವಿದ್ಯಾಲಯದ ಸಭಾಮಂದಿರದಲ್ಲಿ ಅದ್ಭುತ ಪ್ರಯೋಗಗಳನ್ನು ಮಾಡಿ ತೋರಿಸಿದರು ಸರ್ ಚಿಮಣಲಾಲ ಸೆಟಲವಾಡರವರು ಅಧ್ಯಕ್ಷರಿದ್ದರು. ಸರ್ ಜಗದೀಶರವರು ತಮ್ಮ ಭಾಷಣದಲ್ಲಿ ಇಡೀ ಸೃಷ್ಟಿಯೆಲ್ಲಿ ಒಮ್ಮನಸ್ಸಿನಿಂದ ಚಟುವಟಿಕೆ ಮಾಡುತ್ತದಾಗಿಯೂ, ಸಮಸ್ತ ಜೀವಜಂತುಗಳೂ, ವನಸ್ಪತಿಗಳೂ ಒಂದೇ ಭಾವವನ್ನು ತಾಳುತ್ತವೆಂದೂ ನುಡಿದರು. ಮಾನವರಿಗಿಂತ ವನಸ್ಪತಿಗಳ ಜೀವನದಲ್ಲಿ ಭಾವನಾ ಶಕ್ತಿಯು ಹೆಚ್ಚಿದೆಂದು ಉದ್ಗರಿಸಿದರು ಉದಾಹರಣೆಗಾಗಿ ಒಂದು ವನಸ್ಪತಿಗೆ ತೀರ ಚಿಕ್ಕದಾದ ವಿದ್ಯುತ್ತಿನ ಸ್ಪರ್ಶ ಮಾಡಿದರು, ಕುಮಾರಿ ಸವಾಹಿಬಾಯಿ ಕಂಟ್ರಾಕ್ಟರ ಹಾಗು ಡಾ। ನಾಡಗೀರರವರಿಗೂ ಇಷ್ಟೇ ವಿದ್ಯುತ್ತಿನ ಸ್ಪರ್ಶ ಕೊಟ್ಟರು ಅವರಿಗೆ ಸ್ಪರ್ಶದ ಭಾವನೆಯಾದಾಗ್ಯೂ, ವನಸ್ಪತಿಯಷ್ಟು ಅವರ ಮೇಲೆ ಪರಿಣಾಮವಾಗಲಿಲ್ಲ ಬೋಸರು ಇನ್ನೊಂದು ಚಮತ್ಕಾರ ಮಾಡಿ ತೋರಿಸಿದರು ಫಿಗ್ನೋಗ್ರಾಫ ಎಂಬುದೊಂದು ಬಹು ಸೂಕ್ಷ್ಮವಾದ ಯಂತ್ರವನ್ನು ತಯಾರಿಸಿದ್ದಾರೆ. ಇದ ವನಸ್ಪತಿಗಳಿಗೆ ಗಲ್ಲಿಗೇರಿಸುವ ಖುರ್ಚಿ. ವನಸ್ಪತಿಗಳು ಸಾಯುವಾಗ ಅನುಭವಿಸುವ ವೇದನೆಗಳನ್ನು ಈ ಯಂತ್ರದ ಸಹಾಯದಿಂದ ಕಾಣಬಹುದು. ಬೋಸರವರು ಆ ಯಂತ್ರದ ಮೇಲೆ ಒಂದು ವನಸ್ಪತಿಯನ್ನಿಟ್ಟಿದ್ದರು. ಅದರೊಳಗಿಂದ ಒಂದು ವಿದ್ಯುತ್ಪ್ರವಾಹಬಿಟ್ಟರು. ಮುಂಬದಿಗೆ ಒಂದು ಕನ್ನಡಿಯನ್ನು ತೂಗಡಿಸಿದ್ದರು. ಆ ಗಿಡಕ್ಕೂ, ಕನ್ನಡಿಗೂ ರೇಶಿಮೆ ನೂಲಿನಿಂದ ಕಟ್ಟಿದರು ಗಿಡವು ಸಾಯುವಾಗ ಹೊಂದುವ ವೇದನೆಗಳಿಂದ ಕನ್ನಡಿಯು ತಿರುಗುತ್ತಿತ್ತು. ಕೆಲ ಕಾಲದ ಮೇಲೆ ಕನ್ನಡಿಯು ಸ್ತಬ್ಧವಾಯಿತು; ಗಿಡವು ಸತ್ತು ಹೋಯಿತು. ಈ ಪ್ರಯೋಗಗಳನ್ನು ತೋರಿಸುವಾಗ ಸರ್ ಜಗದೀಶಚಂದ್ರರವರು ಮಹತ್ವದ ಭಾಷಣ ಮಾಡಿದರು. "ನನ್ನ ಪ್ರಯೋಗಕ್ಕೆ ೧೯೦೦ನೇ ಇಸ್ವಿಯಲ್ಲಿ ನಿಶ್ಚಯ ಸ್ವರೂಪ ಬಂತು. ಪಾರೀಸದೊಳಗಿನ ಅಂತರ್ರಾಷ್ಟ್ರೀಯ ಶಾಸ್ತ್ರ ಪರಿಷತ್ತಿನಲ್ಲಿ ಜಡ ಪದಾರ್ಥಗಳು ಜಡವಲ್ಲವೆಂದು ನಾನು ಹೇಳಿದೆನು. ಜಡ ಪದಾರ್ಥಗಳಿಗೆಲ್ಲ ಜೀವವಿದೆ, ವನಸ್ಪತಿಗಳಲ್ಲಿ ಎಲ್ಲ ಪ್ರಕಾರದ ಜೀವನ ವ್ಯಾಪಾರಗಳು ನಡೆಯುತ್ತವೆ. ಅದಕ್ಕಾಗಿ ನಾನು ಬಹು ಸೂಕ್ಷ್ಮವಾದ ಯಂತ್ರಗಳನ್ನು ತಯಾರಿಸಬೇಕಾಯಿತು. ಸೂಕ್ಷ್ಮದರ್ಶಕ ಯಂತ್ರದಲ್ಲಿ ೨೦೦೦ ಪಟ್ಟು ದೊಡ್ಡದಾಗಿ ವಸ್ತು ಕಾಣುತ್ತದೆ. ಕ್ರೆಸ್ಕೊಗ್ರಾಫ ಹಾಗು ಫಿಗ್ನೊಗ್ರಾಫ ಯಂತ್ರಗಳಲ್ಲಿ ವಸ್ತುಗಳು ಲಕ್ಷಾವಧಿ ದೊಡ್ಡದಾಗಿ ಕಾಣುತ್ತವೆ ವಿಯೆನ್ನಾ ಪಟ್ಟಣದಲ್ಲಿ ವನಸ್ಪತಿಶೋಧದ ವಿಶ್ವವಿದ್ಯಾಲಯವಿದೆ. ಪ್ರೊ। ಮೊಕಲಿಶ್‌ರವರು ನನ್ನ ಶೋಧಗಳನ್ನು ಕಣ್ಣಾರೆ ಕಂಡು ಮನಗಂಡಿದ್ದಾರೆ. ಇನ್ನು ಮುಂದೆ ಹಿಂದುಸ್ಥಾನದಿಂದಲೇ ಸೂಕ್ಷ್ಮವಾದ ಯಂತ್ರಗಳನ್ನು ಒಯ್ಯಬೇಕಾದೀತಾಗಿ ಅವರು ಉದ್ಗರಿಸಿದರು, ಈಜಿಪ್ತದಿಂದ ನನಗೆ ನಿಮಂತ್ರಣ ಬಂತು ಅಲ್ಲಿಯ ಬೇಸಾಯ ಖಾತೆಯ ಪ್ರಧಾನರೂ, ಮುಖ್ಯ ಪ್ರಧಾನರೂ ಅಲೆಕ್ಝಾಂಡ್ರಿಯಾ ಹಾಗು ಕ್ಯಾರೋ ಪಟ್ಟಣಗಳಲ್ಲಿ ಒಂದು ಉಪನ್ಯಾಸ ಕೊಡಬೇಕಾಗಿ ಹೇಳಿದರು ವನಸ್ಪತಿಗಳ ಶೋಧಕಾರ್ಯಕ್ಕಾಗಿ ಆ ದೇಶಗಳು ಹೇರಳ ಹಣ ಖರ್ಚ ಮಾಡುತ್ತವೆ ಈಜಿಪ್ತ ದೇಶದಿಂದ ಹೆಚ್ಚಿನ ಶಿಕ್ಷಣ ಪಡೆಯುವದಕ್ಕಾಗಿ ಪ್ರತಿ ವರ್ಷಕ್ಕೆ ವಿದ್ಯಾರ್ಥಿಗಳು ಕಳಿಸಲ್ಪಡುತ್ತಾರೆ ಅಲ್ಲಿ ಬೇಸಾಯವು ವಿಂಗಡಿಸಿಕೊಟ್ಟ ಖಾತೆಯಲ್ಲ, ಅದು ಸ್ವಾದಿಷ್ಟ ಖಾತೆಯು. ನಾನು ಆ ನಿಮಂತ್ರಣವನ್ನು ಸ್ವೀಕರಿಸಿದ್ದೇನೆ ಹಿಂದುಸ್ಥಾನದಲ್ಲಿಯೂ ಇದೇ ಪ್ರಕಾರ ಬೇಸಾಯಕ್ಕೆ ಪ್ರಧಾನಪದ ಸಿಗಬೇಕು' ಇತ್ಯಾದಿ ಮಾತುಗಳನ್ನು ಶ್ರೀ। ಜಗದೀಶಚಂದ್ರ ಬೋಸರವರು ಉದ್ಗರಿಸಿದರು ಭಾಷಣ ನಡೆಯುವಾಗ ದೂರ ಕೂತ ಕೆಲವರು ತಮಗೆ ಕೇಳಿಸುವದಿಲ್ಲವಾಗಿ ಆಕ್ಷೇಪಿಸಿದರು "ಇದು ನನ್ನ ದೋಷವಲ್ಲ ಮಂದಿರ ಕಟ್ಟಿಸುವಾಗ ಜನರಿಗೆ ಕೇಳಿಸುವಂತೆ ಶಿಲ್ಪಿಗಳು ರಚಿಸಲಿಲ್ಲ, ನಾನೇನು ಮಾಡಲಿ?" ಎಂದು ಉದ್ಗರಿಸಿ, ವಿನೋದ ಮಾಡಿದರು ಈಗಿನ ಶಿಲ್ಪಿಗಳ ಶಿಲ್ಪಜ್ಞಾನವನ್ನು ಟೀಕಿಸಿ ಬಿಟ್ಟರು

⁂

ಚಿಮಣಿ ಎಣ್ಣೆ ತುಟ್ಟಿಯಾಗುವದು!

ಚಿಮಣಿ ಎಣ್ಣೆ ದರದ ಇಳಿತವು ಮುಗಿದ ಈಗ ಏರಿಕೆಗೆ ಪ್ರಾರಂಭವಾಗಿದೆಂದು ಹೇಳಬಹುದಂತೆ! ಅಮೇರಿಕೆಯ ಸ್ಟಾಂಡರ್ಡ ಆಯಿಲ್ ಕಂಪನಿಗೂ ಬರ್ಮಾ ಆಯಿಲ್ ಕಂಪನಿಗಳಾದಿ ಬ್ರಿಟಿಶ ಕಂಪನಿಗಳಿಗೂ ಪೈಪೋಟಿ ನಡೆದಾಗ ಎಣ್ಣೆ ಅಗ್ಗವಾಗಿತ್ತು ಈಗ ಎಲ್ಲರೂ ಒಗ್ಗಟ್ಟಾಗಿದ್ದಾರೆ ಚಿಮಣಿ ಎಣ್ಣೆ ದರ ಏರುವ ಕಾರಣವೊಂದಿದೆ ಚಿಮಣಿ ಎಣ್ಣೆಯ ಹುಟ್ಟುವಳಿಯು ಬಹಳ ರಶಿಯಾ ದೇಶದಲ್ಲಿ ಇತ್ತಿತ್ತ ಈ ಎಣ್ಣೆಯು ಬಹಳ ಹುಟ್ಟುತ್ತದೆ. ಇದರಿಂದ ಈ ಎಣ್ಣೆಯ ದರ ಕುಗ್ಗಲು ಕಾರಣವಾಯಿತು. ಈಗ ಎಲ್ಲರೂ ಇದನ್ನು ಕಂಡುಕೊಂಡಿದ್ದಾರೆ. ಈಗ ಹುಟ್ಟುವಳಿಯನ್ನೇ ಕಡಿಮೆ ಮಾಡಿ ದರ ಏರಿಸಬೇಕೆಂದು ಇವರ ಹಂಚಿಕೆ. ಎಂಗ್ಲೋ ಪರ್ಶಿಯಾ ಎಣ್ಣೆ ಕಂಪನಿಯ ಚಾಲಕರಲ್ಲೊಬ್ಬರಾದ ಸರ್ ಜೊನ್ ಕೆಡಮನ್‌ರವರು ಒಂದು ಎಚ್ಚರಿಕೆ ಕೊಟ್ಟಿದ್ದಾರೆ. ಈಗ ಕೈಗೆ ಸಿಕ್ಕುತ್ತದೆಂದು ಎಣ್ಣೆಯನ್ನು ನಾವು ಸಿಕ್ಕಹಾಗೆ ಮಾರತೊಡಗಿದರೆ, ಮುಂದೆ, ಭವಿಷ್ಯದಲ್ಲಿ ಎಣ್ಣೆ ಸಿಗದೆ ಬಹಳ ಉಪದ್ರವವಾಗುವದು. ಅದರಿಂದ ಈಗ ಎಣ್ಣೆಯನ್ನು ನಿಯಮಿತವಾಗಿ ತೆಗೆದು ಮಾರತಕ್ಕದ್ದು; ಉಳಿದದ್ದನ್ನು ಕಾದಿಡತಕ್ಕದ್ದು. ಅಮೇರಿಕೆಯಲ್ಲಿಯೂ ಈ ಧೋರಣವು ನೆಲಸಿದೆ. ಕಳೆದ ೮ ತಿಂಗಳಲ್ಲಿ ೨೫–೨೬ ಲಕ್ಷ ಬ್ಯಾರೆಲು ಎಣ್ಣೆ ತೆಗೆಯಲ್ಪಟ್ಟಿತು. ಈಗ ೨೪ ಲಕ್ಷ ಬ್ಯಾರೆಲಿಗೆ ಬಂದು ಮುಟ್ಟಿದೆ ಇನ್ನೂ ಕಡಿಮೆಯಾಗುವದೆಂದು ತರ್ಕ. ಎಣ್ಣೆ ಕಂಪನಿಯ ಶೇರುಗಳನ್ನು ಕೊಳ್ಳುವವರಿದ್ದಿಲ್ಲ; ಈಗ ದರ ಏರಿ ಅವಕ್ಕೆ ಧಾರಣೆಯು ಮಿಗಿಲಾಗಿದೆ. ಸಾಮಾನ್ಯ ಪಟ್ಟಿಗೆ ದರದ ಮಾನ ಪರಾಂಬರಿಸಬಹುದು. ಬರ್ಮಾ ಆಯಿಲ್ ಕಂಪನಿಯವರು ಡಬ್ಬಿಗೆ ೩ ಆಣೆಯಿಂದ ೧೧ ಆಣೆಯವರೆಗೆ ಲಾಭ ಸಿಗುತ್ತದೆಂದು ಒಪ್ಪಿದ್ದಾರೆ. ಇದು ಕಂಪನಿಯವರ ಲೆಖ್ಖ ಅಮೇರಿಕೆಯೊಳಗಿನ ದರ, ಹಿಂದುಸ್ಥಾನದೊಳಗಿನ ದರ ಇವುಗಳ ತುಲನೆ ಮಾಡಿ, ಅಮೇರಿಕೆಗಿಂತ ಇಲ್ಲಿ ಇಷ್ಟು ಹೆಚ್ಚು ದರವಿರುವದೆಂದು ಲೆಖ್ಖ ಹಾಕಿದ್ದಾರೆ. ಬರ್ಮಾ ಆಯಿಲ್ ಕಂಪನಿಯವರು ಮಾರುವ ಎಣ್ಣೆಯು ರಶಿಯಾ ದೇಶದೊಳಗಿನದು. ಅದು ಮುಂಬಯಿಯಲ್ಲಿ ಡಬ್ಬಿಗೆ ೧ ರೂಪಾಯಿ ೧೨ ಆಣೆಯೊಳಗೆ ಒಂದು ಬೀಳುತ್ತದೆ. ಇವರು ಮಾರುವದು ರೂ ೨ ೧೪-೦ಕ್ಕೆ, ಅಂದರೆ,



ಈ ದೀಪಾವಳಿ ಹಬ್ಬದಲ್ಲಿ
ಮುದ್ದು ಮಗನಿಗೊಂದು ಬಾಳಿಕೆಗೆ ಬರುವಂಥ
ಗಡಿಯಾರ— ಅಂದರೆ,
"ಮೆಟ್‌ಲೆಸ್",
ಕೊಡಿರಿ!

ಫೆಟ್ಟಿ ಗಡಿಯಾರ,
ಕೀ ಕೊಡುವದವಶ್ಯವಿಲ್ಲ
ಲಿವ್ಹರ ಗಡಿಯಾರ!

ನಿಕಲ ಬೆಳ್ಳಿಯದು ರೂ. ೬೨–೦–೦.
ರೋಲ್ಡ ಚಿನ್ನದ್ದು ರೂ. ೩೪–೦–೦

ನಿಮಗೆ ಸಂಸಾರದಲ್ಲಿ ಮಗನು ಚಂದಾಗಿ ನಡೆಕೊಂಡು ಮಾನ್ಯ ನಾಗರಿಕನಾಗಬೇಕೆಂಬ ಅಪೇಕ್ಷೆಯು ಇಲ್ಲವೇ? ಸಮಯದ ಮಹತ್ವವನ್ನು ಮುಂದಾಗಿ ಅವನಿಗೆ ತಿಳಿಸಿಬಿಡಿ. ಕಷ್ಟಪಟ್ಟು ಆತನು ಈ ಅನುಭವ ಪಡೆಯುವಂತೆ ಮಾಡಬೇಡಿ. ಸಮಯವನ್ನು ಹಾಳು ಮಾಡುವದೆಂದರೆ, ಇಡೀ ಬಾಳ್ವೆಯನ್ನೇ ಹಾಳುಮಾಡಿಕೊಳ್ಳುವದು, ಹಣವೂ ಹಾಳಾಗುತ್ತದೆ. "ವೆಸ್ಟ ಎಂಡ್" ಗಡಿಯಾರವೊಂದಿದ್ದರೆ, ಹುಡುಗರಿಗೆ ಸಮಯದ ಮಹತ್ವ ತಿಳಿಯುತ್ತದೆ; ಆತನು ತಕ್ಕ ಕಾಲದಲ್ಲಿ ತಕ್ಕ ಕೆಲಸ ಮಾಡುತ್ತಾನೆ "ಮೆಟ್‌ಲೆಸ್" ಅಂಗ್ಯ ಗಡಿಯಾರವನ್ನು ನೀವು ಆರಿಸಿ ತೆಗೆದರೆ, ನಿಮಗೆ ಬಹು ಆನಂದವಾಗುವದು.

ಕೆಟಲಾಗು ಉಚಿತ ಸಿಗುತ್ತೆ; ಒಮ್ಮೆ ಬರೆಕೊಳ್ಳಿ!

ವೆಸ್ಟ ಎಂಡ್ ವಾಚ್ ಕಂಪನಿ,
ಮುಂಬಯಿ. ಕಲಕತ್ತಾ.

ಡಬ್ಬಿಗೆ ಇವರು ರೂ. ೧-೨-೦ ಮುನಾಫೆ ತಿನ್ನುತ್ತಾರೆ. ಇಷ್ಟು ಮುನಾಫೆ ತಿಂದರೂ ಈಗ ಸಾಲದೆ, ಇನ್ನೂ ದರ ಏರುವ ಚಿನ್ಹಗಳಾಗಿವೆ. ಹಿಂದುಸ್ಥಾನ ಸರಕಾರವು ಈ ಕಡೆ ಲಕ್ಷ ಕೊಟ್ಟು ಬಡಬಗ್ಗರಿಗೆ ಕಾಯಬೇಕೆಂದು ಹಿಂದುಸ್ಥಾನದೊಳಗಿನ ವರ್ತಮಾನ ಪತ್ರಗಳು ನುಡಿಯುತ್ತವೆ.

ವಿಮರ್ಶೆ.

ಶ್ರೀ ಶಂಕರಾಚಾರ್ಯ— (ಲೇಖಕ— ಸೂರ್ಯನಾರಾಯಣ ನಾರಾಯಣ ಹೆಗಡೆ, ಕಡತೋಕಾ. ಪ್ರಕಾಶಕ— ನಾರಾಯಣ ಸುಬ್ರಹ್ಮಣ್ಯಶಾಸ್ತ್ರಿ ಭಡತಿ. ಶ್ರೀ ನಂದಿನೀ ಮುದ್ರಣಾಲಯ ಗೋಕರ್ಣ. ಬೆಲೆ ೧೦ ಆಣೆ)

ಲೇಖಕರು ಶ್ರೀ ಶಂಕರಾಚಾರ್ಯರ ಚರಿತ್ರವನ್ನು ಹಲ ಕೆಲವು ಲೇಖಗಳಿಂದ ಸಂಗ್ರಹಿಸಿ ಬರೆದಿದ್ದಾರೆ. ಇಂಥ ಗ್ರಂಥಗಳು ಪ್ರಕಟವಾದಷ್ಟು ಕಡಿಮೆ. ಆದರೆ, ಗ್ರಂಥಕರ್ತರ ಮೇಲೆ ಮಹತ್ತರವಾದ ಜಬಾಬ್ದಾರಿಯೊಂದಿದೆ. ಇವು ಶಾಶ್ವತ ಗ್ರಂಥಗಳು. ಶ್ರೀ ಶಂಕರಾಚಾರ್ಯರು ಸನಾತನ ಧರ್ಮಕ್ಕೆ ಮಾಡಿದ ವಿಶೇಷ ಸೇವೆಯಿಂದ ಅವರ ಸುಂದರ ಚರಿತ್ರೆಯನ್ನು ಪ್ರಕಟಿಸುವ ಸಂಕಲ್ಪ ಮಾಡಿದ್ದು ಭೂಷಣವಿದೆ. ಮುನ್ನುಡಿಯಲ್ಲಿ ಹೇಳುವಂತೆ, ಸಾಕಷ್ಟು ವಿಷಯಸಂಗ್ರಹ ಮಾಡದೆ ಗ್ರಂಥ ಪ್ರಕಟಿಸಿದ್ದು ಪ್ರಶಸ್ತವಾಗಲಿಲ್ಲ. ಉಪೋದ್ಘಾತದಲ್ಲಿಯೂ, ಇತರ ಕೆಲವು ಅಧ್ಯಾಯಗಳಲ್ಲಿಯೂ ಲೇಖಕರು ಮಾಡಿದ ಐತಿಹಾಸಿಕ ವಿಧಾನಗಳಿಗೆ ಆಧಾರಗಳ್ಯಾವವೆಂದು ತಿಳಿಯುವದಿಲ್ಲ. ಆಧಾರಭೂತ ಗ್ರಂಥಗಳ ಸೂಚಿಸಿ ಕೊಟ್ಟಿದ್ದರೆ, ಒಳಿತಾಗುತ್ತಿತ್ತು. ದಂತ ಕಥೆಗಳ ಆಧಾರದಿಂದ ವಿಧಾನಗಳು ಬರೆದಿದ್ದಲ್ಲಿ ಈ ಗ್ರಂಥದಿಂದ ಪ್ರಯೋಜನವಿಲ್ಲ. ಲೇಖಕರು ಕರ್ನಾಟಕದ ಶಿಷ್ಟರ ಕಡೆ ಗ್ರಂಥವನ್ನು ಮುಂದಾಗಿ ಕಳಿಸಿ ಈ ಸಂಶೋಧನಗಳಿಗನುಸರಿಸಿ ಪ್ರಸ್ತಾವನೆಯನ್ನಾದರೂ ಬರೆದಿದ್ದರೆ ಒಳಿತಾಗುತ್ತಿತ್ತು. ಪ್ರಸಿದ್ಧಭೂತ ಶ್ರೀ ಮಾಧವಾಚಾರ್ಯ ವಿರಚಿತ ಸಂಕ್ಷೇಪ ಶಂಕರ ವಿಜಯ ಗ್ರಂಥದ ಕನ್ನಡ ಅನುವಾದವಾಗಿದ್ದರೆ ಅದೊಂದು ನಮೂನೆಯದಾಗಿತ್ತು. ಗ್ರಂಥದ ಭಾಷೆಯು ಸೊಗಸಾಗಿದೆ. ಭಾಷಾದೃಷ್ಟಿಯಿಂದ ಹೇಳಬೇಕಾದರೆ, ಈ ಗ್ರಂಥವು ವಾಚನೀಯವಿದೆ. ಪ್ರಮಾಣಭೂತ ಗ್ರಂಥವೆಂದು ಹೇಳಬರದು. ಖರೇ ಒಂದು ದಂತ ಕಥೆಯಾಗಿದ್ದರೆ ಲೇಖಕರ ಸಾಹಸವು ಅಭಿನಂದನೀಯವಾಗಿತ್ತು. ಶಂಕರ ವಿಜಯ ಗ್ರಂಥ-ಧಾರದಿಂದ ಈ ಚರಿತ್ರೆಯು ಬರೆಯಲ್ಪಟ್ಟದೆಂದು ಹೇಳಿದಾಗ್ಯೂ, ಹಲ ಕೆಲವು ಗ್ರಂಥ-ಹಲ ಕೆಲವು ವಿಧಾನಗಳಿಂದ ಶಂಕರ ವಿಜಯಕ್ಕೂ, ಇದಕ್ಕೂ ಬಹುಮಟ್ಟಿಗೆ ಭೇದವಾಗುವ ಹಾಗಿದೆ. ಗ್ರಂಥದ ಶೈಲಿ ಓದಿ ಪುರಾಣ ಓದಿದ ಭಾವನೆಯಾಗುತ್ತದೆ.

ಕನ್ನಡ ಜ್ಞಾನೇಶ್ವರಿ— [(ಅಚ್ಚಿನಲ್ಲಿದೆ.) ಲೇಖಕರು-ಜಯತಕಟ್ಟಿ ರಾಘವೇಂದ್ರರಾಯರು, ಹಾನಾಪುರ.] ಲೇಖಕರು ನಮ್ಮ ಕಡೆ ೧ನೇ ಅಧ್ಯಾಯದ ಮೊದಲಿನ ೮ ಪುಟಗಳನ್ನು ಅವಲೋಕನೆಯ ಬಗ್ಗೆ ಕಳಿಸಿದ್ದಾರೆ. ಈ ಪುಟಗಳ ಮುದ್ರಣವು ಬಲು ಚಂದಾಗಿದೆ. ಮಹಾರಾಷ್ಟ್ರದಲ್ಲಿ ಖ್ಯಾತಿಗೊಂಡ 'ಜ್ಞಾನೇಶ್ವರಿ'ಯ ವಾಚನದಿಂದ ರಾಘವೇಂದ್ರರಾಯರಿಗೆ ಶ್ರೀ ಗುರು ದತ್ತಾತ್ರೇಯರ ಪ್ರೇರಣೆಯಿಂದ ಸ್ಫೂರ್ತಿ ಬಂದು ಅವರು ಈ ಸರಸ ಕಾವ್ಯವನ್ನು ರಚಿಸಿದ್ದಾರೆ. ಪ್ರಸ್ತಾವನೆಯು ನಿಜವಾಗಿಯೂ ಸರಸವಿದೆ, ಸುಲಭವಿದೆ; ಪ್ರಾಸಾದಿಕವಿದೆ. ಗ್ರಂಥ ಪ್ರಕಟಣೆ ಮುಂಚೆ ಶ್ರೀ ರಾಘವೇಂದ್ರರಾಯರು ತಜ್ಞರಿಗೆ ತೋರಿಸಿ ತಮ್ಮ ಕಾವ್ಯವನ್ನು ಸುಧಾರಿಸಿಕೊಂಡು ಬೆಂಗಳೂರಿಗೆ ಹೋಗಿ, ತಮ್ಮ ಗುರುಗಳಾದ ಧಾ|| ಪುಂಡಲೀಕ ಬಾಳಿಗರಿಗೆ ಅರ್ಪಿಸಿ ಆ ಮೇಲೆ ಪ್ರಕಟಿಸಿದ್ದಾರೆ ಅಲ್ಲಿಯ ಕೆಲವರು ಪ್ಯಾಸ್ಕೂಲಿನಲ್ಲಿ ಈ ಅರ್ಪಣ ಸಮಾರಂಭವು ಈ ಹಿಂದೇ ಜರುಗಿಬಂದಿದೆ. ಗ್ರಂಥ ಪ್ರಕಟಣೆಯ ಮುಂಚೆ ಶ್ರೀ ರಾಘವೇಂದ್ರರಾಯರು ನಡಿಸಿದ ಪೂರ್ವತಯಾರಿಯನ್ನು ಕರ್ನಾಟಕದೊಳಗಿನ ಲೇಖಕರು ಲಕ್ಷದಲ್ಲಿಡತಕ್ಕ ವಿಷಯ! ಗ್ರಂಥ ಪ್ರಕಟಣೆಯ ಮುಂಚೆ ಹೆಚ್ಚಿನ ಜಾಗ್ರತ ಕೊಂಡಷ್ಟು ಕಡಿಮೆ! ಈ ಗ್ರಂಥದಲ್ಲಿ ೬೦೦೦ ವಾರ್ಧಿಕ ಷಟ್ಪದಿಗಳು ಬರುವವು ಭಗವದ್ಗೀತೆಯ ಮೇಲೆ ಇಷ್ಟು ಸೊಗಸಾದ ಕನ್ನಡ ಪ್ರತಿಕಾವ್ಯವಿಲ್ಲ ಕರ್ನಾಟಕಸ್ಥರೆಲ್ಲರೂ ಗ್ರಂಥಕ್ಕೆ ಹೆಚ್ಚಿನ ಆಶ್ರಯ ಕೊಡಬೇಕು. ಲೇಖಕರು ಹಾನಾಪುರದ ಮಾಮಲೇದಾರರಿದ್ದು, ಆ ಸಮಯದ ಕಾವ್ಯಸ್ಫೂರ್ತಿಯಾಗಿ ಇಂಥ ಅನುಪಮ ಗ್ರಂಥ ರಚಿಸಿದ್ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ.

ರಂಗಭೂಮಿ— (ಮಾಸಿಕ. ಸಂಪಾದಕ—ಶ್ರೀ ದತ್ತಾತ್ರೇಯ ಕೃಷ್ಣಭಾರದ್ವಾಜ, ಪ್ರಕಾಶಕ- ಎಮೆಚೂರ ನಾಟಕ ಸಂಘ, ಬೆಂಗಳೂರ. ವಾರ್ಷಿಕ ಚಂದಾ ರೂ. ೩)

ಶ್ರೀ ಭಾರದ್ವಾಜರವರು ಎಮೆಚೂರ ನಾಟಕ ಮಂಡಳಿಯ ಪ್ರೋತ್ಸಾಹದಿಂದ ಕರ್ನಾಟಕ ರಂಗಭೂಮಿಯ ಏಳಿಗಾಗಿ ಪ್ರಕಟಿಸುವ ಒಂದೇ ಒಂದು ಮಾಸಪತ್ರಿಕೆಯಿದು. ಹೆಸರಿನಂತೆ ಈ ಮಾಸಿಕದ ಅಚ್ಚುಕಟ್ಟು ರಂಗಭೂಮಿಗೆ ಒಪ್ಪುವಂಥಾದ್ದೇ! ೧ನೇ ವರ್ಷದ ೩ನೇ ಸಂಚಿಕೆಯಲ್ಲಿ ದೀಪಕರಾಗವನ್ನು ಹಾಡಿರಿ, ಶ್ರೀ ಕೃಷ್ಣ ಪಾರಿಜಾತ, ರಮಣಿಯರೂ ರಂಗಭೂಮಿಯೂ ಲೇಖಗಳು ರಂಗಭೂಮಿಯೊಳಗಿನ ಅಂಗ ಉಪಾಂಗಗಳನ್ನು ಚರ್ಚಿಸುತ್ತವೆ. ದೇಶಭಕ್ತಿ ನಾಟಕದ ಪುಟವು ಪ್ರಕಟಿಸಲ್ಪಡುತ್ತಿದೆ. 'ಮಗುವಲ್ಲ, ಮಾರಿ'ಎಂಬ ಕಥೆ ಬಹು ಚಿತ್ರವೇಧಕವಾಗಿ ಬರೆಯಲ್ಪಟ್ಟಿದೆ. ಶೈಲಿಯು ಹೃದಯಂಗಮವಾಗಿದೆ. ಕಥೆ ಓದುವಾಗ ಪ್ರತ್ಯಕ್ಷ ಚಿತ್ರಗಳು ಮನೋಭೂಮಿಯ ಮೇಲೆ ಲೇಖಕನ ವಿಚಾರದಂತೆ ವ್ಯವಹಾರ ನಡಿಸುವ ಭಾಸವಾಗುತ್ತದೆ.

ಖಾದಿ ವಿಜಯ— (ಸಂಪಾದಕರು-ಶ್ರೀ ಹರ್ದೇಕರ ಮಂಜಪ್ಪನವರು; ದಿವಾಕರ ರಂಗನಾಥರಾಯರು. ವಾರ್ಷಿಕ ಚಂದಾ ಅಂಚವೆಚ್ಚ ಸೇರಿ ರೂ. ೨-೦-೦. ವೀರಶೈವ ವಿದ್ಯಾಲಯ ಆಲಮಟ್ಟಿ, ಪೋಸ್ಟ—ಜಮಲಗಿ. ವಿಜಾಪುರ.)

ಖಾದಿಯ ಪ್ರಸಾರಕ್ಕಾಗಿ ಹೊರಡಿಸಿದ ಮಾಸಪತ್ರಿಕೆ. ಕರ್ನಾಟಕ ಖಾದಿ ಸಂಘದ ಪರವಾಗಿ ಹೊರಡುತ್ತಿದೆ ಶ್ರೀ ದೇಶಪಾಂಡೇ ಗಂಗಾಧರರಾಯರು ಪತ್ರಿಕೆಯ ಪ್ರಕಟಣೆಗೆ ದ್ರವ್ಯಸಹಾಯ ಮಾಡಿ ಸಲಹೆಗಳನ್ನು ಕೂಡ ಕೊಟ್ಟಿದ್ದಾರೆ. ಖಾದೀದೇವಿಯ ಮೇಲೆ ಹಾಡು, ಖಾದಿಯ ಅರ್ಥಶಾಸ್ತ್ರ, ಕೈರಾಟಿಯ ಕಾಯಕ ಮುಂತಾದ ಮಾಹಿತಿಪೂರ್ಣ ಲೇಖಗಳಿವೆ. ಖಾದಿಯ ಮಹತ್ವವು ದೇಶೋದ್ಧಾರಕ್ಕಾಗಿ ಅವಶ್ಯವಿದೆ ಅದಕ್ಕಾಗಿ 'ಖಾದಿ ವಿಜಯ'ವನ್ನು ತರಿಸಿ ಓದಿ ಅಲ್ಲಲ್ಲಿಯ ಜನಗಳು ಖಾದಿಯ ಹುಟ್ಟುವಳಿಯನ್ನು ಬೆಳಿಸಿ ತಮ್ಮ ಸಂಪತ್ತನ್ನು ಬೆಳಿಸಿಕೊಳ್ಳಬೇಕು.

— ಬ್ರಹ್ಮದೇಶದ ದಲ್ಲಾ ನದಿಯಲ್ಲಿ ೨೦ ಮಂದಿ ಪ್ರಯಾಣಿಕರು ಕೂಡಿಹೋಗುತ್ತಿದ್ದಾಗ ಬಿರುಗಾಳಿಗೆ ದೋಣಿಯು ಕವಚಿ ಬಿದ್ದು ನಾಲ್ವರು ಕಾಣೆ; ಉಳಿದವರು ದೈವ ಬಲದಿಂದಲೇ ಬದುಕಿದರು.

— ನೆಹರೂ ಮಂಡಳವು ಕೈಕೊಂಡಷ್ಟು ರಾಜ್ಯಾಧಿಕಾರದ ಹಕ್ಕುಗಳು ಹಿಂದುಸ್ಥಾನಕ್ಕೆ ಸಿಗದಿದ್ದರೆ, ಪ್ರಜೆಗಳಿಗೆ ಅದೂ ಸಮಾಧಾನವಾಗಲಿಕ್ಕಿಲ್ಲವಾಗಿ ಪಂಜಾಬ ಪರಿಷತ್ತಿನಲ್ಲಿ ಸಾರಿಹೇಳಲಾಯಿತು.

— ಮುಂಬಯಿಯ ಕಾಯದೆ ಕೌನ್ಸಿಲಿನ ಅಧಿವೇಶನ ಸೇರಿ ಮುಗಿದು ಹೋಯಿತು. ವಿಶೇಷ ಕೆಲಸವೇನೂ ಆಗಲಿಲ್ಲ.

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ
ಆಯುರ್ವೇದಿಕ] **ಅನುಭವಿಕ ಔಷಧಗಳು!** [ಮಲಬಾರಿ ಕೃತಿ!

೧. ಮದನಕಾಮೇಶ್ವರಿ ಲೇಹ- ಧಾತುಪೌಷ್ಟಿಕ, ವೀರ್ಯ—ಶಕ್ತಿವರ್ಧಕ, ಕಾಮೋತ್ತೇಜಕ.
೨. ಮದನಕಾಮೇಶ್ವರ- ಗುಣ ಮೇಲಿನಂತೆ. ಡ. ೧ ಕ್ಕೆ ೨ ರೂ. ೩ ಕ್ಕೆ ೫ ರೂ. [ಡ. ೧ ಕ್ಕೆ ೨|| ರೂ.
೩. ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರ ಇಂದ್ರಿಯದ ಹುಣ್ಣು, ಪರಮಾ ಯಾವದೇ ತರದ ಕಠಿಣ ರೋಗವಿದ್ದರೂ ಪ್ರಾಣೋನ್ಮುಖ ಸ್ಥಿತಿಯಲ್ಲಿದ್ದರೂ ೭ ದಿವಸದಲ್ಲಿ ಗುಣ ಹೊಂದುವದು.
೪. ಗರ್ಮಿ ರೋಗಕ್ಕೆ ಮಲಮು- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ.
೫. ಯೋಗರಾಜ ಗುಗ್ಗುಳ- ಅರ್ಧಾಂಗವಾತ, ಕೋಷ್ಟವಾತ, ಲಿಂಗಕ ಇ. ೮೦ ತರದ ವಾತರೋಗಕ್ಕೆ ಸಿದ್ಧೌಷಧಿ ರೂ. |||, ೧|, ೨
೬. ಕೆಮ್ಮಿನ ಗುಳಿಗೆ- ಕ್ಷಯ, ದಮ್ಮು, ಕೆಮ್ಮು ಇ ಮೇಲೆ ರಾಮಬಾಣ ಡ ೧೦ ಆಣೆ ರೂ ೧, ೧|||
೭. ವಾತ-ಪಿತ್ತ-ಕಫನಾಶಕ ಜುಲಾಬಿನ ಗುಳಿಗೆ- ೨೫ ರ ಡ ೮ ರ, ೧೦೦ ಕ್ಕೆ ೧|| ರೂ
೮. ಸಂಜೀವನಿ- ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಸನ್ನಿಪಾತ ಇ. ಜ್ವರಗಳ ಮೇಲೆ. ೨೫ ರ ಡ. ೧ ರೂ, ೧೦೦ ರ ಡ ೩ ರೂ
೯. ಚಂದ್ರಪ್ರಭಾ ಮಾತ್ರೆ- ೨೦ ತರದ ಮೇಹ, ಮೂತ್ರದಾಹ, ಅಶ್ಮರೀ, ಧಾತುಕ್ಷಯ, ಸ್ವಪ್ನಾವಸ್ಥ, ಇ ಡ. ೧ ರೂ.
೧೦. ದಂತಮಂಜನ- ಹಲ್ಲು ನೋವು, ಹುಳ, ರಕ್ತ, ಅಲಗಾಡುವಿಕೆ ಇ. ಪೂರ್ಣ ಗುಣವಾಗುವವು ಡ ೨ ಆಣೆ, ೧೨ ಕ್ಕೆ ೨| ರೂ
೧೧. ಜಂತುವಿನ ಔಷಧ- ಹೊಟ್ಟೆ-ಹುಳಗಳ ಮೇಲೆ ರಾಮಬಾಣ ಪುಡಿ ೧ ಕ್ಕೆ ೧|| ಆಣೆ, ೨೫ ಕ್ಕೆ ೧|| ರೂ ೧೦೦ ಕ್ಕೆ ೫| ರೂ
೧೨. ಖಜ್ಜಿಯ ಮಲಮು- ಡ ೪ ಆಣೆ, ೧೨ ಕ್ಕೆ ೨|| ರೂ, ಸೂತಶೇಖರ ಮಾತ್ರೆ ಪಿತ್ತಕ್ಕೆ ಡ ರೂ ೧||| ೨|||, ೫
೧೩. ವಾತಸಂಹಾರಿ ತೈಲ- ನಾರಾಯಣ ತೈಲ, ಅರ್ಧಾಂಗ ವಾತದಿ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು ಬಾಟ್ಲ ರೂ. ೧||, ೨|||.
೧೪. ವಾಕ್‌ಸಂಜೀವನಿ ಗುಟಿಕಾ- ಮಾತು ತಡೆಯುವಿಕೆ, ತೊತ್ತು ಆಗುವಿಕೆ ಇ. ಡ ೨ ರೂ.
೧೫. ಪುತ್ರಜೀವನ ಲೇಹ- ಗರ್ಭಪತನವಾಗುವ ಸ್ತ್ರೀಯರಿಗೆ ಸಿದ್ಧೌಷಧಿಯು ಡ ೪ ರೂ ಟ. ಖರ್ಚು ಬೇರೆ; ಅನುಪಾನ ಪತ್ರ ಔಷಧದ ಸಂಗಡ, (ಆಯುರ್ವೇದ ಔಷಧಿ ಗುಣರತ್ನಮಾಲಾ ಪುಸ್ತಕ ಉಚಿತ) ಇದಲ್ಲದ ಅನೇಕ ತರದ ರೋಗಗಳ ಮೇಲೆ ಪಾಕ, ಲೇಹ, ಚೂರ್ಣ, ತೈಲ, ಮಾತ್ರೆಗಳ ಬಗ್ಗೆ ಸ್ಟಾಂಪ ಇಟ್ಟು ಪತ್ರದ್ವಾರಾ ಯಾ ಸಮಕ್ಷ ತಿಳಕೊಳ್ಳಬಹುದು.

ಪತ್ತೆ:- ಮೆನೇಜರ, ಆಯುರ್ಚಿಕಿತ್ಸಾಮಂದಿರ, ಪೋ ಚೆಂಡಿಯೆ ತಾ. ಕಾರವಾರ.
ಮುಂಬಯಿ ಏಜಂಟ- R. C KAMAT, *Teashop, Store Lane, Fort Bombay*

ಕಾನಡಾ ವೃತ್ತ.

ಮಿತಿ ವಿಭವ ಸಂ॥ ಭಾದ್ರಪದ ಬ॥ ೧೦ ಮಿ॥ ಸೋಮವಾರ.

ಪರಸ್ಪರ ಸಹಕಾರ.

ಸದ್ಯಕ್ಕೆ ಸಿಮಲಾದಲ್ಲಿ ಪ್ರಾಂತಿಕ ಸಹಕಾರಿ ತತ್ವಪ್ರಸಾರ ಸಂಘದ ಮೊದಲನೇ ಅಧಿವೇಶನ ಸೇರಿತು. ಮುಂಬಯಿಯ ಪ್ರಸಿದ್ಧ ವರ್ತಕರಾದ ಸಹಕಾರಿ ಸಂಘದ ಪ್ರಯತ್ನದಲ್ಲಿ ಆಸ್ಥೆಯಿಂದ ದುಡಿಯುವ ಸರ್ ಲಲ್ಲುಭಾಯಿ ಸಾಮಳದಾಸರವರು ಅಧ್ಯಕ್ಷರಾಗಿದ್ದರು. ಸಹಕಾರಿ ಬಿರುದು ತಾಳಿಕೊಂಡು ಹಿಂದುಸ್ಥಾನದಲ್ಲಿ ಸ್ಥಾಪನೆ ಹೊಂದಿ ಲೋಕೋಪಕಾರ ಮಾಡುವ ತರತರದ ಸಂಘಗಳು ಈ ತನಕ ನೆರವೇರಿಸಿದ ಕಾರ್ಯದ ಸ್ಥೂಲ ಸ್ವರೂಪವನ್ನು ಸಮಾಲೋಚಿಸಿ ಕೆಲವು ಮಹತ್ವದ ಸೂಚನೆಗಳನ್ನು ಅವರು ಮಾಡಿದ್ದಾರೆ. ಲೋಕೋಪಕಾರಿಗಳಾಗಿ ಈ ಚಳವಳಿಯಲ್ಲಿ ಸೇರುವ ಪುಣ್ಯಾತ್ಮರು ಈ ಭಾಷಣವನ್ನು ಅಮೂಲಾಗ್ರ ಪರಾಂಬರಿಸಬಹುದು. ಅಷ್ಟು ಅದು ಮನನೀಯವಿದೆ.

ಸಹಕಾರಿ ಸಂಘಗಳಲ್ಲಿ ವರ್ಗವಾರಿಗಳಿದ್ದಾವೆ. ಸೊಸಾಯಿಟಿಗಳು, ಅಂದರೆ ಪ್ರತ್ಯಕ್ಷ ವ್ಯವಹಾರ ನಡಿಸುವ ಸಂಘಗಳು; ಯೂನಿಯನ್ನುಗಳು ಅಂದರೆ, ಮೇಲ್ತಪಾಸ ನಡಿಸುವ ಸಂಸ್ಥೆಗಳು; ಇನ್‌ಸ್ಟಿಟ್ಯೂಟುಗಳು ಅಂದರೆ, ಸಹಕಾರದ ಮಹಿಮೆಯನ್ನು ಮನದಣಿ ವರ್ಣಿಸಿ ದಿನಾ ಹೆಚ್ಚೆಚ್ಚು ಸಂಘಗಳನ್ನು ಸ್ಥಾಪಿಸಲು ಹುರಿದುಂಬಿಸುವ ಸಂಸ್ಥೆಗಳು. ಇವುಗಳೆಲ್ಲವೂ ತಮ್ಮಷ್ಟಕ್ಕೆ ದುಡಿಯುತ್ತವೆ. ಸಹಕಾರವೆಂದು ಬಿರುದಿದ್ದಾಗ್ಯೂ, ಈ ಸಂಸ್ಥೆಗಳಲ್ಲಿ ಪರಸ್ಪರ ಸಂಬಂಧವಿಲ್ಲ. ಎಲ್ಲ ಕಾರಭಾರವು ಪರಸ್ಪರ ಸಾಗುತ್ತದೆ. ಸೊಸಾಯಿಟಿಗಳಲ್ಲಿ ಭೇದ ಹೇಳಬಹುದು. ಸೆಂಟ್ರಲ್ ಬ್ಯಾಂಕುಗಳು, ಅರ್ಬನ್ ಸೊಸಾಯಿಟಿಗಳು, ರೂರಲ್ ಸೊಸಾಯಿಟಿಗಳು, ಸೇಲ ಸೊಸಾಯಿಟಿಗಳು; ಇವೆಲ್ಲ ಸೊಸಾಯಿಟಿಗಳ ವರ್ತನವಂತು ಎಲ್ಲವೂ ಪರಸ್ಪರ. ಒಬ್ಬರಿಗೊಬ್ಬರ ಪತ್ತೆಯಿಲ್ಲ. ಕೆಲ ಬಾರಿ ಒಂದಕ್ಕೊಂದು ಇದಿರಾಗಿ ನಿಂತು ಸಹಕಾರದೊಳಗಿನ ಬಡದಾಟವನ್ನು ಇವು ಜನರಿಗೆ ತೋರಿಸಿಕೊಡುತ್ತವೆ. ಬೇಂಕುಗಳ ಆಡಳಿತೆಯು ಪ್ರಾಮಾಣಿಕತನದಿಂದಲೂ, ಸುಸೂತ್ರವಾಗಿಯೂ ನಡೆಯುವದೆಂದರೆ, ಭಾಗ್ಯ ಬೇಕು. ರೂರಲ್ ಸೊಸಾಯಿಟಿಗಳಿಗೆ ಸೆಂಟ್ರಲ್ ಬೇಂಕುಗಳಿಂದ ಸಾಲ ಸಿಗುತ್ತದೆ; ಬೇಕಷ್ಟು ಸಾಲ ಸಿಗುತ್ತದೆ. ಇವು ವಿಚಾರ ಮಾಡದೆ, ತಮ್ಮ ಗರಜೇನೆಂದು ತಿಳಕೊಳ್ಳದೆ ತುಂಬಾ ಹಣವನ್ನು ಬೇಂಕುಗಳಿಂದ ತರಿಸಿಕೊಳ್ಳುತ್ತವೆ. ತಮಗೆಷ್ಟು ಹಣ ಬೇಕು, ಯಾಕೆ ಬೇಕು, ಅದರಿಂದ ಊರಿಗೆ ಲಾಭವೋ, ನಷ್ಟವೋ ಎಂಬದರ ವಿಚಾರ ಮಾಡುವವರು ವಿರಳರು. ಸೆಂಟ್ರಲ್ ಬ್ಯಾಂಕುಗಳಲ್ಲಿಯಾದರೋ ವಿಚಾರವು ಅಷ್ಟಕ್ಕಷ್ಟೇ. ಸೊಸಾಯಿಟಿಗಳು ತಮ್ಮಕಡೆಯಿಂದ ಹಣವೊಯ್ಯುವ ಸ್ಥಿತಿಗೆ ಯಾಕೆ ಬಂದವು? ಅಲ್ಲಿ ಯಾವ ದಿಗ್ವಿಜಯ ಕಾರ್ಯ ನಡೆದಿದೆ? ಬೇಂಕುಗಳಿಗೆ ಸ್ಥಳಗಳಲ್ಲಿ ಯಾಕೆ ಹಣ ಒದಗುವದಿಲ್ಲ? ಇದರ ವಿಚಾರವಾಗುವದಿಲ್ಲ. ಸೇಲ ಸೊಸಾಯಿಟಿಗಳಿಗೂ, ಇತರ ಬೇಂಕುಗಳಿಗೂ ಇಷ್ಟೇ ಪರಸ್ಪರ ವ್ಯವಹಾರ ನಡೆಯುತ್ತದೆ. ಇದರ ಕಾರಣವೇನು?

ಲಲುಭಾಯಿ ಸಾಮಳದಾಸರವರು ಕಾರಣವನ್ನು ಹೇಳಿಬಿಟ್ಟಿದ್ದಾರೆ. ಸಹಕಾರಿ ಸಂಘಗಳ ಚಾಲಕರಲ್ಲಿ ಪ್ರಾಮಾಣಿಕತನ ಬಹು ಕಡಿಮೆ. ಹಣವನ್ನು ಚಾಲಕರೂ, ಅವರ ಗೆಳೆಯರೂ ಉಪಯೋಗಿಸಿಕೊಳ್ಳುತ್ತಾರೆ. ಕೈಗೆ ಸಿಕ್ಕಿದ ಹಣವನ್ನು ಗೆಳೆಯರೊಳಗೆ ಹಾಗು ತಮ್ಮೊಳಗೆ ಹಂಚಿಕೊಳ್ಳುವದರಲ್ಲಿ ತುಂಬಾ ಸಹಕಾರವಿದೆ. ಮೇಲೆ ಮತ್ತೊಂದು ಮಾತಿದೆ. ಹೀಗೆ ಸ್ವಾರ್ಥ ನಡೆಯುತ್ತಿದ್ದಾಗ್ಯೂ, ಮಹಾನುಭಾವರೆಂಬ ಬಿರುದು ಬೇಕು; ಲೋಕೋಪಕಾರಿಗಳೆಂದು ಹೇಳಿಸಿಕೊಳ್ಳಬೇಕು; ದೊಡ್ಡಸ್ತಿಕೆ ಬೇಕು; ಬುದ್ಧಚಾರರೆಂದು ಎಣಿಸಿಕೊಳ್ಳುವದಕ್ಕಾಗಿ ಸ್ವಾರ್ಥಪರಾಯಣರು ಸ್ವಾರ್ಥಸಾಧನೆಗಾಗಿ "ಸಹಕಾರ ಸಂಘದಲ್ಲಿ ಲೋಕೋಪಕಾರದ ಬಣ್ಣ ಬರಕೊಂಡು ಸೇರುತ್ತಾರೆ. ಪರಸ್ಪರ ಸಹಕಾರದಿಂದ ಸಹಕಾರವಾಗುವದಿಲ್ಲ; ಸಹಕಾರದ ಪ್ರಸಾರವೂ ಆಗುವದಿಲ್ಲ. ಸರಕಾರಿ ಅಧಿಕಾರಿಗಳು ಈ ಸಂಘಗಳಿಗೆ ಹೆಚ್ಚಿನ ಕೈ ಹಿಡಿಯುವ ಮೂಲಕ ಲೋಕಮತಕ್ಕೆ ಅಲ್ಲಿ ಇಂಬು ಸಿಗದು. ಇಂಥ ಧೋರಣದ ಮೂಲಕ ಸಹಕಾರದ ಲೋಕೋಪಕಾರವು ಮಾಯವಾಗಿ, ಸಾವುಕಾರರ ಸ್ವಾರ್ಥಪರಾಯಣತೆಯು ಅಲ್ಲಿ ಹಬ್ಬಿದೆ. ಹಣ ಎಷ್ಟು ಸಾಲ ಕೊಟ್ಟಿತು, ಅದಕ್ಕೆ ಬಡ್ಡಿ ಎಷ್ಟು ಸಿಕ್ಕಿತು, ಕರಾರಿನಂತೆ ವಸೂಲಾಯಿತೋ ಹೇಗೆ? ಹಾಗೆ ವಸೂಲಾಗದಿದ್ದರೆ, ಅದನ್ನು ವಸೂಲ ಮಾಡುವ ಬಗೆ ಹೇಗೆ? ಎಂಬದೊಂದೇ ಚಿಂತೆಯು ಚಾಲಕರಿಗೂ, ಆಶ್ರಯದಾತರಾದ ಸರಕಾರಿ ಅಧಿಕಾರಿಗಳಿಗೂ ವ್ಯಾಪಿಸಿಕೊಂಡಿದೆ. ಹಣ ವಸೂಲಾದರೆ, ಬಡ್ಡಿಯು ಉತ್ಪನ್ನವು ಹೆಚ್ಚಾದರೆ, (ಸಂಘದಿಂದ ಜನರು ಸುಧಾರಿಸಲಿ, ಕಂಗಡಲಿ; ಆ ಕಡೆ ಲಕ್ಷ್ಯ ಕೊಡುವವರ‍್ಯಾರಿಲ್ಲ.) ಸಂಘದ ಚಾಲಕರಿಗೆ ಸರ್ಟಿಫಿಕೇಟಿನ ಮೇಲೆ ಸರ್ಟಿಫಿಕೇಟುಗಳು ಸಿಗುತ್ತವೆ. ಈ ಸ್ಥಿತಿಯು ಸರಕಾರಕ್ಕೆ ಶೋಭಿಸದು. ಸಾವುಕಾರ ಎಂಬ ಶಬ್ದವನ್ನು ಬದಲಿಸಿ, ಅದಕ್ಕೆ "ಸಹಕಾರವೆಂದು ಹೆಸರಿಟ್ಟ ಕೂಡಲೆ, ಲೋಕಕಲ್ಯಾಣವಾಗದು. ಅದರಿಂದ ಪ್ರಾಂತ ಹಾಗು ಜಿಲ್ಹೆಗಳೊಳಗಿನ ಸಹಕಾರಿಗಳು ಪ್ರಾಮಾಣಿಕತನದಿಂದ ತಮ್ಮ ಜಿಲ್ಹೆಯೊಳಗಿನ ಸ್ಥಿತಿ-ಗತಿಗಳನ್ನು ವಿಚಾರಿಸಿ, ಅದನ್ನು ಸುಧಾರಿಸಲು ಯೋಜನೆಯನ್ನು ಕೈಕೊಳ್ಳಬೇಕು. ಆ ಯೋಜನೆಗಾಗಿ ಲೋಕಮತವನ್ನು ಸಂಗ್ರಹಿಸಿ, ಅದಕ್ಕೆ ತಗಲುವ ದ್ರವ್ಯದ ಪೂರೈಕೆಯನ್ನು ಸಂಘಗಳ ವಿದ್ಯಮಾನ ಒದಗಿಸಿಕೊಳ್ಳತಕ್ಕದ್ದು. ಲೋಕಮತ ಹೆಚ್ಚೆಚ್ಚಾಗಿ ಸಫಲವಾಗಬೇಕಾದರೆ, ಸರಕಾರಿ ಅಧಿಕಾರಿಗಳ ಆಶ್ರಯವು ಅಷ್ಟರ ಮಟ್ಟಿಗೆ ಕುಗ್ಗಬೇಕು. ಬೇಸಾಯಗಾರರ ಉನ್ನತಿಯಾಗಲು, ಸಹಕಾರದ ಪ್ರಯೋಜನ ಹೇರಳವಾಗುವದೆಂದು ಸಾರ್ವಭೌಮರು ನೇಮಿಸಿದ ಬೇಸಾಯ ಕಮೀಶನಿನ ಅಭಿಪ್ರಾಯವಾಗಿದೆ. ನಿಶ್ಚಿತ ಯೋಜನೆಯಿಲ್ಲದೆ ಶಿಕ್ಕ ಶಿಕ್ಕ ಹಾಗೆ ಹಣ ತಂದು ಶಿಕ್ಕ ಶಿಕ್ಕ ಹಾಗೆ ಸಾಲ ಕೊಡುವದರಿಂದ ಸಹಕಾರವಾಗುವದಿಲ್ಲ. ಸಹಕಾರ ಧೋರಣದಿಂದ ಚಾಲಕರು ನಡೆಯಬೇಕಾಗಿ ಸರ್ ಲಲುಭಾಯಿ ಸಾಮಳದಾಸರವರು ಬೋಧಿಸಿದ್ದಾರೆ. ಅಲ್ಲಲ್ಲಿಯ ಸಹಕಾರಿಗಳು ಇದನ್ನು ಪರಾಂಬರಿಸಿ, ಆತ್ಮಪರೀಕ್ಷಣೆ ಮಾಡಿಕೊಂಡು ತಮ್ಮ ವರ್ತನವನ್ನು ಸುಧಾರಿಸಿಕೊಳ್ಳಬೇಕು.

ವಾಚಕ ಮಹಾಶಯರಿಗೆ ವಿನಂತಿ.

ಇನ್ನೊಂದು ಸಂಚಿಕೆಯನ್ನು ಹೊರಡಿಸಿದರೆ, ‘ವೃತ್ತ’ದ ೧೨ನೇ ವರ್ಷವು ಮುಗಿಯುತ್ತದೆ. ಈ ೧೨ ವರ್ಷಗಳಲ್ಲಿ ‘ವೃತ್ತ’ವು ಕಾಲಕಾಲಕ್ಕೆ ಸಮಯೋಚಿತವಾಗಿ ಪ್ರಜೆಗಳ ದೂರುಗಳನ್ನು ಧ್ವನಿಸಲು ಶಕ್ತಿಮೀರಿ ದುಡಿದದೆಂದು ನೀವು ಬಲ್ಲವರಿದ್ದೀರಿ. ಅದಕ್ಕೆ ತಕ್ಕದ್ದಾಗಿ ಲೋಕಾಶ್ರಯವು ‘ವೃತ್ತ’ಕ್ಕೆ ದೊರಕಲಿಲ್ಲ. ಇನ್ನು ಮುಂದೆ ವಿಶೇಷ ಸೇವೆ ಮಾಡಬೇಕೆಂಬ ಸಂಕಲ್ಪವಿದೆ. ಪುಟ ಹೆಚ್ಚಿಸಿ, ವಿವಿಧ ವಿಷಯಗಳ ಮೇಲೆ ಸವಿಸ್ತರ ಲೇಖಗಳನ್ನು ಪ್ರಕಟಿಸಬೇಕಾಗಿ ನಮ್ಮ ಕಡೆ ಹಿತಚಿಂತಕರು ಸೂಚನೆ ಸಹ ಮಾಡಿದ್ದಾರೆ. ಸುಧಾರಣೆ ಮಾಡುವ ಕೆಲಸವು ಸಂಪೂರ್ಣವಾಗಿ ಲೋಕಾಶ್ರಯದ ಮೇಲೆ ಅವಲಂಬಿಸಿದೆ. ಚಂದಾದಾರರು ಇದನ್ನು ವಿಚಾರಿಸಿ, ನಮಗೆ ವಿಶೇಷ ಸಹಾಯ ಮಾಡಬೇಕಾಗಿ ಅರಿಕೆಯಿದೆ. ಚಂದಾದಾರರು, ಹಿತಚಿಂತಕರು ಸ್ವಲ್ಪ ಪ್ರಯತ್ನ ಮಾಡಿ ಲೋಕಾಶ್ರಯವನ್ನು ಬೆಳೆಸಿದರೆ, ‘ವೃತ್ತ’ದೊಳಗಿನ ನ್ಯೂನತೆಗಳನ್ನು ಪರಿಹರಿಸಲಿಕ್ಕೆ ಬಹಳ ಅನುಕೂಲವಾಗುವಂತಿದೆ. ಕಾರಣ ಚಂದಾದಾರರೂ, ಹಿತಚಿಂತಕರೂ ತಮ್ಮ ತಮ್ಮ ಗೆಳೆಯರ ಮನವೊಲಿಸಿ ಚಂದಾದಾರರನ್ನು ಶೇಖರಿಸಬೇಕಾಗಿ ನಮ್ಮದೊಂದು ಬಿನ್ನಕೆಯಿದೆ.

ವರ್ಷಾರಂಭದ ಚಂದಾದಾರರು ತಮ್ಮ ವರ್ಗಣಿ ರೂ. ೩-೦-೦ನ್ನು ಮುಂಗಡ ಮನಿಆರ್ಡರಿನಿಂದ ಕಳಿಸುವದು; ಯಾವದೇ ಕಾರಣದಿಂದ ಚಂದಾದಾರರಾಗಲಾರದವರು ಹಾಗೆಯೇ ಮುಂಚಿತವಾಗಿ ತಿಳಿಸತಕ್ಕದ್ದು.

ಇತಿ, ಮೆನೇಜರ, ಕಾ. ವೃ.]

ಸ್ಫುಟ ಸೂಚನೆಗಳು.

೧. ಸ್ಯಾಮನ್ ಕಮಿಟಿ ೨೬ನೇ ತಾರೀಖಿಗೆ ಲಂಡನಿನಿಂದ ಹೊರಟಿತು. ಇನ್ನೊಂದು ವಾರದಲ್ಲಿ ಅದು ಮುಂಬಯಿಗೆ ಬಂದಿಳಿಯುವದು. ಆ ಸಮಯ ಪುನಃ ಅದಕ್ಕೆ ಬಹಿಷ್ಕಾರದಿಂದ ಸತ್ಕರಿಸುವದಕ್ಕಾಗಿ ಅಲ್ಲಲ್ಲಿ ತಯಾರಿ ನಡೆದದೆ. ಮಹಾನುಭಾವರಿಗೆ ಸ್ವಾಗತವಾಗುವಂತೆ ಸರಕಾರದ ಪ್ರಯತ್ನ ನಡೆದದೆ. “ಹಿಂದುಸ್ಥಾನದೊಳಗಿನ ೩೨ ಕೋಟಿ ಪ್ರಜೆಗಳಿಂದ ೫೦೦ ಆಣೆಗಳು ಸ್ಯಾಮನ್ ಕಮಿಟಿಗೆ ಸಾದರರಾಗಿವೆ. ೨೦೦ ಶಿಷ್ಟಮಂಡಳಗಳು ಅವರ ದರ್ಶನ ಪಡೆಯುವವು.” ಇತ್ಯಾದಿ ಪ್ರಕಟನೆಗಳು ಹೊರಬಿದ್ದಿವೆ. ಆದರೆ, ಹಿಂದುಸ್ಥಾನದಲ್ಲಿ ವಾತಾವರಣವೇ ಭಿನ್ನವಾಗಿದೆ. ದಿನ ಹೋದ ಹಾಗೆ ಹಿಂದುಸ್ಥಾನವು ಸ್ವಾತಂತ್ರ್ಯಕಾಂಕ್ಷಿಯಾಗುತ್ತಿದೆ. ಪಂಜಾಬದ ಲಾಯಲ್‌ಪುರದಲ್ಲಿ ಪ್ರಾಂತಿಕ ಪರಿಷತ್ತಾಯಿತು. ಆ ಸಮಯ ಡಾ| ಆಲಮ್‌ರವರು ಸಂಪೂರ್ಣ ಸ್ವಾತಂತ್ರ್ಯದ ಠರಾವನ್ನು ಸೂಚಿಸಿ ಪರಿಷತ್ತಿನಲ್ಲಿ ಮನ್ನಿಸಿಕೊಂಡರು. ಲಾಲಾ ಲಜಪತರಾಯ, ಡಾ| ಅನ್ಸಾರಿಯಂಥ ದೊಡ್ಡ ದೊಡ್ಡ ಲೋಕನಾಯಕರು ಈ ಪರಿಷತ್ತಿಗೆ ಬೆಂಬಲ ಕೊಟ್ಟಿದ್ದಾರೆ. ಕಳೆದ ಗುರುವಾರಕ್ಕೆ ಮುಂಬಯಿಯೊಳಗಿನ ಜನಾಗ್ರಹ ಮಂದಿರದಲ್ಲಿ ತರುಣರ ಸಭೆಯಾಯಿತು. ಒಂದು ವಾದವಾಯಿತು. ಹಿಂದುಸ್ಥಾನಕ್ಕೆ ಸಂಪೂರ್ಣ ಸ್ವಾತಂತ್ರ್ಯವಿಷ್ಟವೋ, ಅಥವಾ ಸಾಮ್ರಾಜ್ಯ ಘಟಕಗಳ ಸ್ವರಾಜ್ಯವು ಇಷ್ಟವೋ? ಎಂಬದರ ಚರ್ಚೆಯಾಯಿತು. ಸಂಪೂರ್ಣ ಸ್ವಾತಂತ್ರ್ಯ ಬೇಕಾದರೆ, ಹಿಂದುಸ್ಥಾನದ ಸಂರಕ್ಷಣವನ್ನು ಹ್ಯಾಗೆ ಮಾಡಿಕೊಳ್ಳಬೇಕು? ಎಂಬದರ ವಿಚಾರವೂ ಆಯಿತು. ಶ್ರೀ| ನರಿಮಾನರು ಅಧ್ಯಕ್ಷರಿದ್ದರು. ಪ್ರಜೆಗಳಿಗೆ ಒತ್ತಾಯದಿಂದ ಲಷ್ಕರಿ ಶಿಕ್ಷಣ ಕೊಟ್ಟು, ಹಿಂದುಸ್ಥಾನದ ಸಂರಕ್ಷಣ ಮಾಡಿಕೊಳ್ಳಬೇಕಾಗಿ ಅಭಿಪ್ರಾಯವಾಯಿತು. ಹಿಂದುಸ್ಥಾನಕ್ಕೆ ಸಾಮ್ರಾಜ್ಯ ಘಟಕಗಳಂತೆ ಆಸ್ತಿತ್ವದಿಂದ ನಡಿಸಿಕೊಳ್ಳುವಷ್ಟು ಅಂತಃಕರಣವು ಬ್ರಿಟಿಶ ದೇಶಕ್ಕಿಲ್ಲವೆಂದು ಪ್ರತಿಪಾದಿಸಲಾಯಿತು. ಕೊನೆಗೆ ಮತ ಎಣಿಕೆ ಮಾಡಲು, ಪ್ರಚಂಡ ಬಹುಮತದಿಂದ ಸಂಪೂರ್ಣ ಸ್ವಾತಂತ್ರ್ಯದ ಠರಾವು ಮಂಜೂರಾಗಿದೆ. ತರುಣರು ಸ್ಯಾಮನ್ ಕಮಿಟಿಯ ಬಹಿಷ್ಕಾರಕ್ಕಾಗಿ ಟೊಂಕ ಕಟ್ಟಿದ್ದಾರೆ. ಮುಂಬಯಿಯೊಳಗಿನ ಎಲ್ಲ ವಿದ್ಯಾರ್ಥಿಗಳೂ ಈ ಬಹಿಷ್ಕಾರದಲ್ಲಿ ಸೇರಿದ್ದಾರೆ. ಬಹಿಷ್ಕಾರದ ಹಸ್ತಪತ್ರಿಕೆಗಳು ಹಂಚಲಾಗಿವೆ. ಹೀಗೆಲ್ಲ ಬಹಿಷ್ಕಾರದ ತಯಾರಿಯು ಭರದಿಂದ ನಡೆದದೆ. ಸ್ಯಾಮನ್ ಕಮಿಟಿಯ ನೇಮಣೂಕಿಯಿಂದ ಬ್ರಿಟಿಶ ಸಾಮ್ರಾಜ್ಯವು ಭರತಖಂಡಕ್ಕೆ ಬಹು ಉಪಕಾರ ಮಾಡಿದೆ. ಸ್ಯಾಮನ್ ಕಮಿಟಿಯ ಯೋಜನೆಯಿಂದಲೇ ಪಂಡಿತ ಮೋತಿಲಾಲರ ನೇತೃತ್ವದಲ್ಲಿ ಎಲ್ಲ ಪಕ್ಷಗಳು ಒಂದಾದವು; ಸ್ವಾತಂತ್ರ್ಯದ ಕಾಂಕ್ಷೆಯೂ ಪ್ರಸಾರವಾಗಲು ತುಂಬಾ ಇಂಬು ದೊರೆಯಿತು. ಈ ಬಗೆ ಸ್ಯಾಮನ್ ಕಮಿಟಿಯನ್ನು ಭಾರತವಾಸಿಯರು ಹರಸಬೇಕಾಗಿದೆ.

---

೨. ಪರಸ್ಪರ ಸಹಕಾರದ ವಿಷಯ ಸರ್ ಲಲ್ಲುಭಾಯಿ ಸಾಮಳದಾಸರವರ ಅಭಿಪ್ರಾಯವನ್ನು ಹಿಂದಿನ ಅಗ್ರಲೇಖದಲ್ಲಿ ವಿವರಿಸಿದ್ದೇವೆ. ಅದನ್ನು ನಮ್ಮಲ್ಲಿಯ ಸಹಕಾರಿ ಸಂಘಗಳು ಮನಸ್ಸಿಟ್ಟು ಆರಂಭಿಸತಕ್ಕದ್ದು. ಹೆಚ್ಚಿನ ಸೂಚನೆಯನ್ನೊಂದು ನಾವು ಮಾಡಬಯಸುವೆವು. ವ್ಯವಸ್ಥಾಪಕರ ದೊಡ್ಡಸ್ತಿಕೆ ಬಯಕೆಯನ್ನಾಗಲಿ, ಅಧಿಕಾರಲಾಲಸತನವನ್ನಾಗಲಿ ನಾವು ಯಾವದೇ ರೀತಿ ಧ್ವನಿಸುವದಿಲ್ಲ. ಇವು ಅಂತರಂಗದೊಳಗಿನ ವಿಷಯಗಳು. ವ್ಯವಸ್ಥಾಪಕರು ಸರ್ ಲಲ್ಲುಭಾಯಿ ಸಾಮಳದಾಸರವರ ಉದ್ಗಾರಗಳನ್ನು ಮನದಲ್ಲಿಯೇ ಚಿಂತಿಸಿ ಧ್ಯಾನಿಸಿ ಗ್ರಹಿಸಬೇಕಾದ ವಿಷಯಗಳು. ಆದರೆ, ಸಂಘದಲ್ಲಿ ಬಡ್ಡಿರೂಪದಿಂದ ಹೆಚ್ಚಿನ ಹಣ ಸಂಗ್ರಹವಾದಾಗ, ಅದನ್ನು ಶಿಕ್ಷಣ, ವಾಚನಾಲಯ, ಧರ್ಮ ಮುಂತಾದ ವಿವಿಧ ಧರ್ಮಕಾರ್ಯಗಳಿಗೆ ಹಂಚಿಹಾಕಿ ಧರ್ಮಾತ್ಮರಾಗುವದಕ್ಕಿಂತ, ಬಡ್ಡಿಯ ದರವನ್ನು ಕಡಿಮೆ ಮಾಡಲಿಕ್ಕೂ, ಸಾಲಗಾರರ ಕಷ್ಟವನ್ನು ತಗ್ಗಿಸಲಿಕ್ಕೂ ಉಪಯೋಗಿಸತಕ್ಕದ್ದು. ಕರಾರಿನಪ್ರಕಾರ ಸಾಲ ಕೊಡತಕ್ಕದ್ದ ಕೂಡಲೆ, ನಿರ್ದಯ ಮಾರವಾಡಿಗಳಂತೆ ದಂಡನೆಯ ಶರ್ತುಗಳನ್ನು ಒಮ್ಮೆಲೇ ಅಮಲಿನಲ್ಲಿ ತಂದು, ಹೆಚ್ಚಿನ ಬಡ್ಡಿ ಹೀರಿಕೊಳ್ಳುವ ಪ್ರಘಾತವನ್ನು ಒಮ್ಮೆಲೇ ನಿಲ್ಲಿಸತಕ್ಕದ್ದು. ಹಿಂದುಸ್ಥಾನದಲ್ಲಿ ಬಡತನ ಹೆಚ್ಚಿದೆ; ದಿನೇ ದಿನೇ ಹೆಚ್ಚುತ್ತ ನಡೆದಿದೆ. ಸಹಕಾರ ಸಂಘಗಳು ವಿವೇಕದಿಂದ ಸಾಲ ಕೊಡದ ಮೂಲಕ ಸಾಲಗಳು ಬಾಕಿ ಬೀಳುತ್ತವೆ. ಈ ನಿರಾಧಾರ ಸ್ಥಿತಿಯನ್ನು ಲಕ್ಷಿಸಿ ಬಡಬಗ್ಗರಿಗೆ ದಂಡನೆಯ ಶರ್ತುಗಳನ್ನು ಅಮಲಿನಲ್ಲಿ ತಂದು ಹೀರಬಿಡುವ ಮಹಾ ಪಾಪವು, ಶಿಕ್ಷಣಾಲಯಗಳಿಗೆ ಧರ್ಮ ಕೊಟ್ಟರೂ, ಸಂಘವು ಆ ಪಾಪದಿಂದ ಮುಕ್ತವಾಗಲಾರದು. ಸಹಕಾರ ಸಂಘಗಳ ಕೆಲಸವು ಸಹ ಅದಲ್ಲ. ಬಡವರ ಸಾಂಪತ್ತಿಕ ಸ್ಥಿತಿ ಬೆಳೆದರೆ, ಅದರಷ್ಟು ದೊಡ್ಡ ಧರ್ಮವು ಸಹಕಾರಕ್ಕೆ ಬೇರಿಲ್ಲ. ಇದನ್ನು ವಿಚಾರಿಸಿ, ಸಹಕಾರಿ ಸಂಘಗಳು ದುಡಿಯಬೇಕಾಗಿ ನಮ್ಮದೊಂದು ಸೂಚನೆ.

---

೩. ಮುಂಬಯಿಯ ಪ್ರಾಂತಾಧಿಪರಾದ ನಾ| ಗವ್ಹರ್ನರರು ಬಿ. ಎ., ಎಮ್. ಎ., ಮೊದಲಾದ ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ ಪದವಿಗಳನ್ನರ್ಪಿಸುವಾಗ, ಅವರಿಗೆ ದೇಸಾಯಿಯ ಕಡೆ ಲಕ್ಷ ಕೊಡಹೇಳಿದರು. ದೇಸಾಯಿಯು ಹಿಂದುಸ್ಥಾನದೇಶದ ಪ್ರಧಾನ ವ್ಯವಸಾಯವೆಂದೂ, ಅದನ್ನು ಭಾರತೀಯರು ಪುರಸ್ಕರಿಸಿ ದೇಶೋದ್ಧಾರ ಮಾಡಬೇಕಾಗಿಯೂ ಉದ್ಗರಿಸಿದ್ದರಷ್ಟೇ. ಸರಕಾರವು ಈ ಕಾರ್ಯದಲ್ಲಿ ಮುಂದಾದರೆ, ವಿದ್ಯಾರ್ಥಿಗಳೂ ಈ ಕಾರ್ಯದಲ್ಲಿ ಸೇರಬಹುದು. ಕೆಲವೆಡೆ ಸರಕಾರವು ದೇಸಾಯಿಯ ಪ್ರಯೋಗ ಹೊಲಗಳನ್ನು ಸ್ಥಾಪಿಸಿದೆ. ಅವು ಪಟ್ಟಣದಲ್ಲನೆ. ಪಟ್ಟಣದಲ್ಲಿ ಸಾಗಾಗದೆ ಹಾಳಾಗುವ ಭೂಮಿಗಳಿಲ್ಲ. ಹಳ್ಳಿಗಳಲ್ಲಿ ಹಾಳುಬಿದ್ದ ಭೂಮಿಗಳಿವೆ; ಕಾರಣಾಂತರದಿಂದ ಇನ್ನೂ ಹಾಳುಬೀಳುತ್ತಿವೆ. ಇಂಥ ದೂರ ದೂರ ಹಳ್ಳಿಗಳಲ್ಲಿ ಈ ಪ್ರಯೋಗ ಹೊಲಗಳನ್ನು ಸ್ಥಾಪಿಸಬೇಕು. ಅಂದರೆ, ಅಲ್ಲಿಯ ಅಡಚಣೆಗಳು ಸರಕಾರದ ಲಕ್ಷಕ್ಕೆ ಹೊಳೆಯುವವು; ಆ ಕುರಿತು ಸರಕಾರವು ಕೈಕೊಳ್ಳಬೇಕಾದ ಉಪಾಯಗಳೂ ಹೊಳೆಯುವವು. ಬಿನಶೇತ್ತಿ ಬೀಳುವ ಕಾರಣವೇನು? ಭೂಮಿಯು ಹಾಳು ಬೀಳುವ ಕಾರಣವೇನು? ಆ ಭೂಮಿಯಲ್ಲಿ ಯಾವ ಯಾವ ಬೆಳೆ ಬೆಳೆಯಬಹುದು? ಎಂಬದೆಲ್ಲ ಕಂಡುಹಿಡಿಯಬಹುದು. ನವ ವಿದ್ಯಾರ್ಥಿಗಳಿಗೆ ಅಲ್ಲಿ ಹೋಗಿ ಊರ ಕೊಳ್ಳಲು ಸ್ಫೂರ್ತಿಯಾಗುವದು. ಪ್ರಯೋಗ ಹೊಲದ ಚಾಲಕರು ವಿಶ್ವವಿದ್ಯಾಲಯದ ಪದವೀಧರರಾಗಿರುವ ಮೂಲಕ ಗ್ರಾಮಾಂತರದಲ್ಲಿ ಅವರೊಡನೆ ವಾಸಿಸಲು ನೂತನ ವಿದ್ಯಾರ್ಥಿಗಳಿಗೆ ನಾಚಿಕೆ ಯಾ ಕಷ್ಟವೆನಿಸಲಿಕ್ಕಿಲ್ಲ. ಪಟ್ಟಣದ ಬೆಡಗಿಗೆ ಮರುಳಾಗಿ, ವಿದ್ಯಾರ್ಥಿಗಳು ಗ್ರಾಮಾಂತರದಲ್ಲಿ ವಾಸಿಸುವವರಿದ್ದರೂ, ಪಟ್ಟಣದಲ್ಲಿ ಬಂದು ಉಳಕೊಳ್ಳಬಯಸುತ್ತಾರೆ. ಅಂಥವರಿಗೆ ಹಳ್ಳಿಯೊಳಗಿನ ಜೀವನಕ್ರಮದ ರುಚಿ ಹತ್ತಿದ ಹೊರತು, ದೇಸಾಯಿಯ ಉದ್ಧಾರವಾಗದು; ಗ್ರಾಮಗಳ ಉದ್ಧಾರವಾಗದು. ಪ್ರಾಂತಾಧಿಪರು ನುಡಿದ ವಚನಗಳು ದಿಟವಾಗಬೇಕಾದರೆ, ಸರಕಾರವು ಪ್ರಯೋಗ ಹೊಲಗಳ ಠಾಣ್ಯವನ್ನು ದೂರ ದೂರ ಹಳ್ಳಿಗಳಲ್ಲಿ ಹೂಡಿಟ್ಟರೆ, ಹಳ್ಳಿಯೊಳಗಿನ ಎಷ್ಟೋ ಬಂಜರು ಭೂಮಿಗಳು ಸಾಗುವಳಿಯಾಗಿ ಸಂಪದಭ್ಯುದಯವಾಗುವದು. ಪ್ರಯೋಗಾರ್ಥವಾಗಿ ಪ್ರಯೋಗ ಹೊಲಗಳನ್ನು ಕೆಲ ವರುಷ ಹಳ್ಳಿಗಳಲ್ಲಿ ಪರೀಕ್ಷಿಸಬಹುದಾಗಿ ಒಂದು ಸೂಚನೆ ಇದೆ. ಮುಂದೆ ಲಾಭವಾದರೆ, ಈ ಪ್ರಯೋಗವನ್ನು ಮುಂದರಿಸಬಹುದು; ಇಲ್ಲವಾದರೆ ಅಷ್ಟಕ್ಕೇ ತಡೆಯಬಹುದಲ್ಲವೇ?

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಬಹಳ ಬೀಳುತ್ತದೆ. ನಿನ್ನೆ ರಾತ್ರಿ ಮಳೆ ಬಹಳ ಸುರಿಯಿತು. ಈಗ ಮಳೆ ಬೇಡ. ಒಕ್ಕಲಿಗರು ಬೆಳೆ ಕೊಯ್ಯುವ ತಯಾರಿಯಲ್ಲಿದ್ದಾರೆ. ಅಡಿಕೆ ಬರಹತ್ತಿದೆ, ಧಾರಣೆ ಇಳಿಯಹತ್ತಿದೆ. ಈ ವಾರದಲ್ಲಿ ೩-೬೦ ಇಂಚು ಮಳೆ ಬಿತ್ತು. ಈ ವರೆಗೆ ೧೮೩-೬೦ ಇಂಚು ಮಳೆಯಾಯಿತು.

ಅಕ್ಟೋಬರ ೧ನೇ ತಾರೀಖಿಗೆ ಇಲ್ಲಿಯ ಮ್ಯುನಿಸಿಪಾಲಿಟಿಯ ಸಭೆ ಸೇರಿ ಅಧ್ಯಕ್ಷರನ್ನಾರಿಸುವ ಸಮಾರಂಭವಾಯಿತು. ಮಾಮಲೇದಾರರಾದ ರಾವಸಾಹೇಬ ಕಲಕೋಟಿಕರವರು ಸಭಾಧ್ಯಕ್ಷರಾಗಿ ನೇಮಿಸಲ್ಪಟ್ಟರು. ರಾ| ಭಾಗ್ವತರು ರಾ| ಅಣ್ಣಪ್ಪರ ಅಧ್ಯಕ್ಷ ಕಾರಭಾರದ ಗುಣವರ್ಣನೆ ಮಾಡಿ, ಅವರಿಗೇ ಹೊಸ ಮ್ಯುನಿಸಿಪಾಲಿಟಿಯ ಅಧ್ಯಕ್ಷರನ್ನಾಗಿ ಮಾಡಬೇಕಾಗಿ ಸೂಚಿಸಿದರು. ರಾ| ಗಂಗಾಧರ ಗಣಪಯ್ಯ ಶ್ಯಾನಭಾಗರೂ ರಾ| ಅಣ್ಣಪ್ಪರ ಕಾರಭಾರವನ್ನು ಬಣ್ಣಿಸಿ ಅನುಮೋದಿಸಿದರು. ಮಿ| ಆಲ್ಫ್ರೆಡ್ ಫರ್ನಾಂಡೀಸರವರು ಸರಕಾರನಿಯುಕ್ತ ಸಭಾಸದರ ತರ್ಫೆನಿಂದ ರಾ| ಅಣ್ಣಪ್ಪರ ನೇಮಣೂಕಿಗೆ ಒಪ್ಪಿಗೆಯನ್ನಿತ್ತರು. ಸಭಾಧ್ಯಕ್ಷರಾದ ರಾ| ಸಾ| ಕಲಕೋಟಿಕರವರು ರಾ| ಅಣ್ಣಪ್ಪರಿಗೆ ತಮ್ಮ ಆಸನವನ್ನರ್ಪಿಸಿದ ಬಳಿಕ, ಸಮಾರಂಭವು ನೆರವೇರಿತು. ಉಪಾಧ್ಯಕ್ಷಾದಿ ಇತರ ಅಧಿಕಾರಿಗಳನ್ನು ಆರಿಸುವ ಕೆಲಸವು ಈ ವಾರದಲ್ಲಿ ನಡೆದು, ರಾ| [illegible] ಮಾಧವ ಪೈ ಹೆಡ್ ಮಾಸ್ತರ ಗಿಬ್ಬ ಹೈಸ್ಕೂಲ ಇವರು ಉಪಾಧ್ಯಕ್ಷರಾಗಿಯೂ, ರಾ| ಜೀ. ವ್ಹಿ. ಗಾಂವಕರ ಅಸಿ| ಮಾಸ್ತರ ಗಿಬ್ಬ ಹೈಸ್ಕೂಲ ಇವರು ಮ್ಯಾನೇಜಿಂಗ ಕಮೀಟಿಯ ಚೇರಮನರಾಗಿಯೂ ನೇಮಿಸಲ್ಪಟ್ಟಿದ್ದಾರೆ. ರಾ| ಭಾಗ್ವತರಿಗೆ ಸ್ಕೂಲ ಬೋರ್ಡಿನ ಚೇರಮನಶಿಪ ಸಿಕ್ಕಿದೆ. ರಾ| ಕಾಮತ ವಕೀಲರಿಗೆ ಮಿಸ್ಸೆಲನಿ ಚೇರಮನಿ ಕೊಡಲಾಗಿದೆ. ಹೊಸ ಗ್ಯಾಸ ದೀಪಗಳಲ್ಲಿ ಒಂದು ಗುಂಡಕ್ಕೆ ಹೋಗುವ ಮಾರ್ಗದಲ್ಲಿ ಹಚ್ಚಲಾಗಿದೆ; ಇದು ಯೋಗ್ಯ. ಇನ್ನೊಂದು ರಾ| ಅಣ್ಣಪ್ಪ ತಿಮ್ಮ ನಾಯ್ಕ ಇವರ ಮನೆಯ ಮುಂದೆ ಪೇಟೆಯಲ್ಲಿ ಹಚ್ಚಲಾಗಿದೆ.

ಮೂರು ಕಟ್ಟೆಯಿಂದ ಹೂವಿನ ಕಟ್ಟೆಯ ತನಕ ಪೇಟೆಯಲ್ಲೇ ೩ ಗ್ಯಾಸ ದೀಪಗಳು! ೧೧ ಘಂಟೆಯ ಮೇಲೆ ಗ್ಯಾಸ ದೀಪಗಳೆಲ್ಲ ಅಡಗುತ್ತವೆ. ಇಡೀ ರಾತ್ರಿ ಉರಿದರೆ ಪ್ರಯೋಜನವಾಗತ್ತಿತ್ತು. ಅದಕ್ಕೆ ಖರ್ಚು ಹೆಚ್ಚು ಬೀಳುತ್ತದೆ. ದೀಪದ ಕಂಬಗಳಿದ್ದರೆ ಹಾದಿಗೆ ಸಾಕಾಗುವದಿಲ್ಲ.

ಮೋಗಲಾಯಿಗಳು ಇಲ್ಲಿಂದ ಬಿಡಾರು ಕಟ್ಟಿಕೊಂಡು ಹೋಗುತ್ತಲಿದ್ದಾರೆ. ಸೋರ್ತಿಯ ವ್ಯಾಪಾರದಿಂದ ೩-೪ ಸಾವಿರ ರೂಪಾಯಿ ಹೋಗಿರಬೇಕೆಂದು ಹೇಳುತ್ತಾರೆ. ಕೆಲವರು ಗೋಕರ್ಣ ಕ್ಷೇತ್ರದಲ್ಲಿ ದೌಡು ಬೆಳಿಸಿದ್ದಾರೆ. ಅಲ್ಲಿ ರಭಸದ ಆಟ ಆದರೂ ಜಿಲ್ಲಾಧಿಕಾರಿಗಳು ಸುಮ್ಮಗೆ. ಕೂಡಲೆ ಇವರನ್ನು ಹೊರತಳ್ಳತಕ್ಕದ್ದು.

ಹಳದೀಪುರ— ದಿನಾ ಒಂದೆರಡು ಮಳೆ ಬೀಳುತ್ತಿವೆ. ಹೊಸ ಅಕ್ಕಿ ತಯಾರಾಯಿತು. ಕೊಳಗಕ್ಕೆ ೬॥ ಆಣೆ. ಮೈಲಿ ಸ್ವಲ್ಪ ಶಾಂತವಾಯಿತು. ಮಾಮಲೇದಾರರು ಮೈಲಿ ಉಪದ್ರವ ನಿವಾರಣೆಯ ಬಗ್ಗೆ ಪ್ರಯತ್ನಪಡುತ್ತಾರೆ; ವೆಕ್ಸಿನೇಟರರೂ ಪ್ರಯತ್ನ ಮಾಡುತ್ತಾರೆ.

ಕ್ಷತ್ರಿಯ ಸಮಾಜದ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಭಜನೆ ಸಪ್ತಾಹವಾಯಿತು. ರಾ| ದಾಮು ಅಪ್ಪು ನಾಯ್ಕರು ಸಂತರ್ಪಣೆಯ ಬಗ್ಗೆ ಹೆಚ್ಚಿನ ಖರ್ಚು ಕೊಟ್ಟರು. ಕ್ಷತ್ರಿಯ ಸಂಘದ ನೇಮದಂತೆ ಕಳೆದ ೩೦ ನೇ ತಾರೀಖಿಗೆ ಕೂಡಲಿಕ್ಕಿದ್ದ ಜನರಲ್ ಕಮೀಟಿ ಕೂಡಲಿಲ್ಲ. ಸಭಾಸದರು ಬಹಳ ಅಜಾಗ್ರತೆ ಮಾಡುತ್ತಾರೆ. ರಾ| ಮಂಜುನಾಥ ಪಾಲಿಶೆಟ್ಟಿಯವರು ಈ ಕುರಿತು ತಕ್ಕ ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ, ಜನರ ಉತ್ಸಾಹವು ಬಹು ಕಡಿಮೆಯಾಗುವಂತಿದೆ.

ಹೊನ್ನಾವರ— ಮಳೆ ಬೀಳುತ್ತದೆ. ಈಗ ಮಳೆ ಬೇಡ. ಅಕ್ಕಿ ದರ ಏರುತ್ತಲಿದೆ. ರಂಗೂನ ಅಕ್ಕಿ ಬಂತು. ಮಂಗಳವಾರದಿಂದ ಇಲ್ಲಿ ಬೋಟಿ ಬಂದರ ಮಾಡಲು ಪ್ರಾರಂಭವಾಯಿತು. ಬೋಟಿ ಮಾಲು ಇಳಿಸಲು ಕಸ್ಟಮುದವರ ಗೋಡೌನ ಇಲ್ಲದ್ದರಿಂದ ಬಹಳ ಮಾಲು ಮಳೆಯಲ್ಲಿ ತೊಯ್ದು ನಷ್ಟವಾಗುತ್ತದೆ. ಒಂದು ಗೋಡೌನ ಕಟ್ಟಿಸುವ ವಿಚಾರ ಮಾಡಬಹುದು. ಕಸ್ಟಮುದವರ ಅನುಕೂಲತೆಗೆ ಬರಗಾಲವಿದ್ದರೂ, ಕಾಯಿದೆಗೇನು ಬರಗಾಲವಿಲ್ಲ. ಮೀನು ಹಿಡಿದು ಹೊಟ್ಟೆ ಹೊರೆಕೊಳ್ಳುವ ದೋಣಿಕಾರರೂ, ಲ್ಯಾಸೆನ್ಸ ಪಡೆಯಬೇಕಂತೆ! ನಾಟನು ಇಡಬೇಕಂತೆ! ಇದರಿಂದ ಚಿಕ್ಕಪುಟ್ಟ ದೋಣಿಯವರಿಗೆ ಬಹು ಕಷ್ಟ. ಕಸ್ಟಮು ಖಾತೆಯ ನೌಕರರಿಗೆ ಇವರ ಕಡೆ ಲಕ್ಷ ಕೊಡಲು ಪುರಸತ್ತು ಸಿಗದು. ಬೇರೆ ಕೆಲಸದ ಬಗ್ಗೆ ಹೊಸ ಇಸಮುಗಳನ್ನು ನೇಮಿಸಿದ್ದರೆ ದೋಣಿಕಾರರು ಕಸ್ಟಮು ಖಾತೆಗೆ ಎಡತಾಕಿ ಕಷ್ಟ-ನಷ್ಟಕ್ಕೆ ಗುರಿಯಾಗಬೇಕಾಗುತ್ತದೆ

೨-೩ ಮಂದಿ ಕಾಯಿಪಲ್ಲೆ ಮಾರುವವರ ಮೇಲೆ ಪೋಲೀಸರು ಖಟ್ಲೆ ಮಾಡಿದ್ದಾರಂತೆ. ಇವರು ಮಾರ್ಗದ ಮೇಲೆ ಕೂತು ಕಾಯಿಪಲ್ಲೆ ಮಾರುವದರಿಂದ ರಹದಾರಿಗೆ ಆತಂಕವಾಯಿತು. ಇಲ್ಲಿ ಮ್ಯುನಿಸಿಪಾಲಿಟಿಯ ಕಾಯಿಪಲ್ಲೆ ಮಾರ್ಕೇಟು ಇಲ್ಲ. ಅಂಗಡಿಯ ಮುಂದೆ ಕೂತು ಮಾರುವ ವಹಿವಾಟ ಇದೆ ಹೆಚ್ಚಿನ ಕಾಯಿಪಲ್ಲೆ ಬುಟ್ಟಿ ಬಂದರೆ, ಸ್ಥಳಾನುಕೂಲತೆ ಇಲ್ಲದೆ ಒಮ್ಮೊಮ್ಮೆ ಮಾರ್ಗದ ಮೇಲೆ ಕೂತುಕೊಳ್ಳುವ ಪ್ರಸಂಗ ಬರುತ್ತದೆ. ಮ್ಯುನಿಸಿಪಾಲಿಟಿಯವರು ಈ ಅಡಚಣೆಯನ್ನು ದೂರ ಮಾಡಬೇಕು.

ಈ ತಾಲೂಕ ತೊಳಮಕ್ಕಿಯಲ್ಲಿ ಕ್ಷತ್ರಿಯ ಸಂಘದವರ ತರ್ಫೆನಿಂದ ಸರಸ್ವತೀ ಶಾಲೆ ಎಂಬ ಕನ್ನಡ ಶಾಲೆ ಪ್ರಾರಂಭವಾಗಿದೆ. ರಾ| ಸುಬ್ರಾಯ ಹೇಮಯ್ಯ ನಾಯ್ಕ ಎಂಬವರು ಮುಖ್ಯಾಧ್ಯಾಪಕರು. ಈ ಶಾಲೆಯ ಕೆಲಸವು ಸಮಾಧಾನಕರವಾಗಿ ನಡೆದದೆಂದು ಜಿಲ್ಲಾ ಬೋರ್ಡಿನ ಮೆಂಬರರಾದ ರಾ| ಮುಕುಂದರಾವ ಉದ್ಯಾವರರವರು ಶರಾ ಕೊಟ್ಟಿದ್ದಾರೆ ಈ ಊರಲ್ಲಿ ಕ್ಷತ್ರಿಯ ಸಮಾಜದವರ ವಸ್ತಿಯು ಹೆಚ್ಚು. ಇವರು ಈ ಶಾಲೆಗೆ ತಕ್ಕ ಪ್ರೋತ್ಸಾಹ ಕೊಟ್ಟು ಲಾಭ ಹೊಂದತಕ್ಕದ್ದು

ಭಟಕಳ— ಮಳೆ ಬಹಳ ಬಿತ್ತು ಬೆಳೆಗೆ ಅಹಿತವೆಂದು ರೈತರು ಚಿಂತೆಯಲ್ಲಿ ಬಿದ್ದಿದ್ದಾರೆ. ಬೆಳೆ ತಕ್ಕ ಮಟ್ಟಿಗಿದೆ. ಅಡಿಕೆ ಕೊಯ್ಲು ಹಳ್ಳಿಗಳಲ್ಲಿ ಶುರುವಾಗಿದೆ, ಈ ಮಳೆಯಿಂದ ಅಡಿಕೆ ತೋಟದವರಿಗೆ ನಷ್ಟ.

ಕಳೆದ ಸೋಮವಾರಕ್ಕೆ ಇಲ್ಲಿ "ಭಟಕಳ ಕೊಮರ್ಶಿಯಲ್ ಯೂನಿಯನ್" ಎಂಬ ವರ್ತಕ ಸಂಘವು ಸ್ಥಾಪಿಸಲ್ಪಟ್ಟಿದೆ. ಮಿ| ಆಯ್. ಎಸ್. ಸಿದ್ದಿಕಾ, ಬಿ ಏ, ರವರು ಈ ಸಂಘದ ಚಾಲಕರು ಈ ಸಂಘಕ್ಕೆ ೪ ಜನ ಡ್ಯಾರೆಕ್ಟರರಿದ್ದಾರೆ. ಒಬ್ಬರು ಮೆನೇಜಿಂಗ ಡ್ಯಾರೆಕ್ಟರರು ೨೫ ರೂಪಾಯಿಗಳಿಗೊಂದು ಶೇರಿನಂತೆ, ೨೦೦ ಶೇರುಗಳು ತುರ್ತ ತೆಗೆಯಲ್ಪಟ್ಟಿವೆ ೫೦ ಶೇರುಗಳು ಖರ್ಚಾಗಿವೆ, ಪೂರ್ಣ ಶೇರುಗಳು ಖರ್ಚಾದ ನಂತರ ೫೦೦ ಶೇರುಗಳನ್ನು ತೆಗೆದು ವರ್ತಕ ಸಂಘದ ವ್ಯಾಪ್ತಿಯನ್ನು ಬೆಳೆಸುವ ಸಂಕಲ್ಪವಿದೆ

ಈ ಹಿಂದೆ ತಿಳಿಸಿದಂತೆ ಸೋಮವಾರ ವಾಚನಾಲಯ ಹೊರಡಲಿಲ್ಲ. ಯುವಕ ಸಂಘದ ಸಕ್ರೆಟರಿಗಳು ಸ್ವಲ್ಪ ಯುವಕರ ಹುರುಪು ತಾಳಿದರೆ, ಬೇಗನೇ ಹೊರಡುವದು. ಶೀಘ್ರವೇ ಹೊರಡಬೇಕಾಗಿ ಜನರ ಅಪೇಕ್ಷೆ.

ಶಿರ್ಶಿ— ಕಳೆದ ವಾರದಲ್ಲಿ ಒಳ್ಳೇ ಮಳೆಯಾಯಿತು. ಮಹಾತ್ಮಾ ಗಾಂಧಿಯವರ ಜನ್ಮದಿನೋತ್ಸವವು ಇಲ್ಲಿಯ ಕನ್ನಡ ಶಾಲೆಯಲ್ಲಿ ಒಳ್ಳೇ ಉತ್ಸಾಹದಿಂದ ನೆರವೇರಿಸಲ್ಪಟ್ಟಿತು.

ಇಷ್ಟೆಲ್ಲ ದಿವಗಳ ಅನುಭವದಿಂದ ಅಧಿಕಾರಿಗಳು ಇರಾಣಿಯರ ಜುಗಾರ ಆಟಗಳನ್ನು ಕೊನೆಯ ದಿನ ಬಂದು ಮಾಡಿಸಿದರಂತೆ! ಊರು ಸೂರೆಹೋದ ಮೇಲೆ ಪಟ್ಟಣದ ಬಾಗಿಲು ಇಕ್ಕಿದರೆಂದು ಗಾದೆಯೇ ಉಂಟಲ್ಲ!!

ಹಳ್ಳಿಯವರೊಬ್ಬರು ಒಂದು ಎತ್ತಿನ ಜೋಡಿಯನ್ನು ಕೊಂಡು ಬಂದಿರಲು, ಮೋಟಾರಿನ ಅವ್ವಾಹನ ಧ್ವನಿ (ಹಾರ್ನ) ಕೇಳಿ ಆ ಎತ್ತುಗಳಲ್ಲಿ ಭೂತಸಂಚಾರವಾಯಿತು! ಕೂಡಲೆ ಅವು ಯಜಮಾನನನ್ನೇ ಹೊಡೆದಟ್ಟಿ ಮನೆಯನ್ನೂ ಅಂಗಡಿಯನ್ನೂ ಹೊಕ್ಕುತ್ತ, ಕಂಡ ಕಂಡವರಿಗೆ ಇರಿಯುತ್ತ ಪೇಟೆಯ ತುಂಬ ವಾಯುವೇಗದಿಂದ ಓಡಹತ್ತಿದವು. ಒಬ್ಬಿಬ್ಬರಿಗೆ ಆಸ್ಪತ್ರಿಯನ್ನೂ ಕಾಣಿಸಿದವು. ಕೊನೆಗೆ ೬-೭ ಜನರು ಸಾಹಸಬಟ್ಟು ೬-೭ ಹಗ್ಗಗಳಿಂದ ಹಿಡಿದು ಎತ್ತಿನ ಜೋಡಿಯನ್ನು ಎಳೆತರಲು ಮಹಾ ಸಾಹಸಪಟ್ಟರು, ಸಾಧ್ಯವಾಗಲಿಲ್ಲ ಸಾವಿರದ ಮಟ್ಟಿಗೆ ಜನಸಂದೋಹ ನೆರೆಯಿತು. ಅಷ್ಟರೊಳಗಿಂದಲೂ ತಪ್ಪಿಸಿಕೊಂಡು ಓಡಿದವು. ಕೊನೆಗೆ ಮತ್ತೊಮ್ಮೆ ಸಾಹಸಮಾಡಿ ಮುನಿಸಿಪಾಲಿಟಿಯ ದೊಡ್ಡ ಕೋಣವನ್ನು ಅವುಗಳ ಜೊತೆಗೆ ಕಟ್ಟಲು ಸದ್ದಿಲ್ಲದೆ ಎತ್ತಿನ ಜೋಡಿಯನ್ನು ಅದು ಎಳಕೊಂಡು ಹೋಗಿ ಕೊಟ್ಟಿಗೆ ಕಾಣಿಸಿತು.

ಯಲ್ಲಾಪೂರ — ಮಳೆಗಾಲ ತೀರಿದರೂ ನಡ್ಡನಡುವೆ ಒಮ್ಮೊಮ್ಮೆ ಮಳೆಗರೆಯುವದು. ಕಲೆಕ್ಟರ ಮತ್ತು ಅಸಿಸ್ಟಂಟ ಕಲೆಕ್ಟರ ದೊರೆಗಳಿಬ್ಬರೂ ಇಲ್ಲಿ ಮುಕ್ಕಾಂ ಮಾಡಿದ್ದಾರೆ. ಕಲೆಕ್ಟರ ಸಾಹೇಬರವರು ಸುಪೆಯ ಮಹಾಲಕರಿಗಳಾದ ಎಲ್. ಟಿ. ಶಕೀಯವರ ಪ್ರಕರಣದ ಚೌಕಶಿ ಮಾಡಿದರು. ಅಸಿಸ್ಟಂಟ ಕಲೆಕ್ಟರ ಸಾಹೇಬರು ಮುಂಡಗೋಡದ ಕಾರಕೂನರೊಬ್ಬರ ಭತ್ತೆಯ ಮೇಲಿನ ಪ್ರಕರಣದ ಪುನರ್ವಿಚಾರಣೆ ಮಾಡಿದರು. ಇನ್ನುಳಿದ ದಿವಸಗಳಲ್ಲಿ ಏನೇನು ಮಾಡುವರೋ ನೋಡತಕ್ಕದ್ದು.

ಈ ಸಾರೆ ಇಲ್ಲಿಯ ನಂದೊಳ್ಳಿ, ಕಾಪಡಿಕೆರೆ, ಬಳ್ಗಿಮನೆ, ಹಿತ್ಲಕಾರಗದ್ದೆ, ಬಿಸಗೋಡ ಮುಂತಾದ ಊರುಗಳಲ್ಲಿಯ ಅಡಿಕೆಯ ತೋಟದಲ್ಲಿ ಕೊಳೆರೋಗದ ಔಷಧಿಯ ಪ್ರಯೋಗದಿಂದ ಒಳ್ಳೆಯ ಪರಿಣಾಮವಾಯಿತೆಂದು ತಿಳಿಸಲಿಕ್ಕೆ ಸಂತೋಷವಾಗುತ್ತದೆ ಪ್ರತಿ ವರ್ಷ ತೋಟಗರು ಈ ಪ್ರಯೋಗವನ್ನು ಮಾಡಬೇಕು.

ಮುಂಡಿಕೇರಿಯ ಜಮೀನದಾರರೊಬ್ಬರು ಬರೆಯುವದೇನೆಂದರೆ:— ಹಾಸಣ್ಗಿಯಲ್ಲಿ ಒಂದು ಸಣ್ಣ ಶಾಲೆಯಿರುತ್ತದೆ ಈ ಶಾಲೆಗೆ ಬೋರ್ಡ ಗ್ರೇಟು ಕೊಡುವ ವಿಚಾರದಲ್ಲಿರುವದಾಗಿ ತಿಳಿಯುತ್ತದೆ. ಆದರೆ ಹಾಸಣ್ಗಿಯಲ್ಲಿ ಶಾಲೆ ಅವಶ್ಯವಿಲ್ಲ. ಮುಂಡಿಕೇರಿಯಲ್ಲಿ ಎರಡು ಶಿಕ್ಷಕರುಳ್ಳ ಸರಕಾರಿ ಶಾಲೆಯಿದೆ. ಹಾಸಣ್ಗಿ ಶಾಲೆಯಿಂದ ಈ ಶಾಲೆ ನಾಲ್ಕು ಫರ್ಲಾಂಗ ಮೇಲಿದೆ. ಹಾಸಣ್ಗಿಯವರು ಚಿಕ್ಕಪುಟ್ಟ ಕೆಲಸಗಳಿಗೆ ಸಹ ಮುಂಡಿಕೇರಿಗೆ ಬರುತ್ತಿರುತ್ತಾರೆ. ಈ ಹಿಂದೆ ಹಾಸಣ್ಗಿಯಲ್ಲಿ ಶಾಲೆ ಬೇಡವಾಗಿ ಈಗಿನ ಶಾಲೆಯ ಪಂಚರು ಕಲೆಕ್ಟರರಿಗೆ ಅರ್ಜಿ ಸಹ ಮಾಡಿದ್ದುಂಟು. ಹಾಸಣ್ಗಿಯಲ್ಲಿ ಶಾಲೆಯನ್ನಿಡುವದಕ್ಕಿಂತ ಮುಂಡಿಕೇರಿ ಶಾಲೆಯಲ್ಲಿ ಇನ್ನೊಬ್ಬ ಶಿಕ್ಷಕರನ್ನಿಡಬಹುದು. ಈಗ ಮುಂಡಿಕೇರಿ ಶಾಲೆಯಿದ್ದ ಇಮಾರತಿನ ಬಗ್ಗೆ ದರಮಹಾ ರೂಪಾಯಿ ೫ರಂತೆ ಬಾಡಿಗೆ ತೆರಬೇಕು. ಮುಂಡಿಕೇರಿ ಶಾಲೆಯ ಬಗ್ಗೆ ಕೋಟೆಮನೆ—ಭರತನಹಳ್ಳಿ ದಿಕ್ಕಿಗೆ ಒಂದು ಶಾಲೆ ಇಮಾರತು ಕಟ್ಟಿಸಿದರೆ, ಆ ಕಡೆ ಮುಸಲ್ಮಾನ ವಿದ್ಯಾರ್ಥಿಗಳಿಗೆ ಶಾಲೆಗೆ ಬರಲು ಅನುಕೂಲವಾಗುವದು. ಉರ್ದು ಕ್ಲಾಸನ್ನಿಟ್ಟರೆ, ಮುಸಲ್ಮಾನ ವಿದ್ಯಾರ್ಥಿಗಳು ಶಾಲೆಗೆ ಸಿಗುವ ಹಾಗಿದೆ. ಹಾಸಣ್ಗಿ ಶಾಲೆಯ ಇಮಾರತಿಯ ಬಗ್ಗೆ ಕೆಲವು ಹಣ ಕೂಡಿಸೋಣಾಗಿದೆ. ಆ ಹಣವನ್ನೂ, ಸರಕಾರವು ಕೊಡಬಹುದಾದ ದ್ರವ್ಯಸಹಾಯವನ್ನೂ ಒಟ್ಟುಮಾಡಿ, ಹಾಸಣ್ಗಿ ಮುಂಡಿಕೇರಿಯ ಮೇರೆ ಪ್ರದೇಶದ ಮೇಲೆ ಶಾಲೆ ಕಟ್ಟುವ ವಿಚಾರ ಮಾಡಿದರೆ, ಎಲ್ಲರಿಗೂ ಲಾಭವಾಗುವಂತೆ ಇರುತ್ತದೆ, ಇತ್ಯಾದಿ.

ಅಂಕೋಲಾ— ಪ್ಲೇಗು ಬಂತು. ಶುಕ್ರವಾರಕ್ಕೆ ಹಳೇ ಮೋಟಾರ ಸ್ಟ್ಯಾಂಡಿನ ಬಳಿ ಒಂದೇ ಮನೆಯಲ್ಲಿ

ಹಿಂದೇ ದಿನ ೩ ಪ್ಲೇಗ ಕೇಸುಗಳೂ, ಪ್ಲೇಗಿನ ಮುಂಗಾಳಿ ಮುಂಚೆಯೇ ಹತ್ತಿದ್ದರಿಂದಲೋ ಏನೋ, ಪೋಲೀಸ ಸ್ಟೇಶನ್ನು ೨-೩ ದಿನಗಳ ಹಿಂದೆಯೇ ತಾಲೂಕ ಕಚೇರಿಯ ಕೆಳಗೆ ಹನುಮಪ್ಪಗೆ ಹೋಗುವ ರಸ್ತೆಗೆ ತಾಗಿದ್ದ ಕಟ್ಟಡದ ಹತ್ತರ ಒಯ್ದಿಟ್ಟಿದ್ದಾರೆ. ಊರ ತುಂಬ ಇಲಿ ಬೀಳುತ್ತಿದ್ದ ಸುದ್ದಿ ಹರಡುತ್ತಿದೆ. ಜನರು ಚಿಂತಾತುರರಾಗಿದ್ದಾರೆ. ಸ್ವಚ್ಛತೆಯನ್ನು ಕಾಪಾಡುವದಕ್ಕಾಗಿ ಡಂಗುರ ಸಾರಲ್ಪಟ್ಟಿದೆ. ಲೋಕಲ್ ಬೋರ್ಡಿನವರು ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದಾರೆ. ಚುಚ್ಚುವ ಕೆಲಸಕ್ಕೆ ಪ್ರಾರಂಭವಾಗಿದೆ. ಪ್ಲೇಗಿನ ಮೂಲಕ ಇಲ್ಲಿಯ ಡಾಕ್ಟರ ಫರೆರಾರವರಿಗೆ ಕಾರವಾರಕ್ಕೆ ವರ್ಗವಾಗಿ, ಕಾರವಾರದಿಂದ ಡಾ| ವಾಗಳೇಯವರಿಗೆ ಇಲ್ಲಿ ಕರೆಸಿದ್ದಾರೆ. ಯಾವ ವ್ಯವಸ್ಥೆಯಿಂದಾದರೂ ಪ್ಲೇಗು ಹಿಂಜರಿದರಾಯಿತು.

ಇರಾಣಿಯರ ೮ ತಂಡಗಳು ಯಲ್ಲಾಪುರ-ಕುಮಟೆ ಕಡೆಯಿಂದ ಇಲ್ಲಿ ಬಂದವು. ಮೊದಲೇ ಪ್ಲೇಗು; ಈ ಪ್ಲೇಗಿನಲ್ಲಿ ಈ ಹೊಸ ಉಪದ್ರವ ಬೇಡ. ಮಾಮಲೇದಾರರು ಇವರಿಗೆ ಬೇಗನೆ ಹೊರಸೂಡಬೇಕು.

ವೈ| ವಾ| ಮಂಜನಾಥ ದಾಮೋದರ ಪ್ರಭು ಇವರ ನಿಧನದಿಂದ ಖಾಲಿಯಾದ ಅಂಕೋಲಾ—ಕುಮಟಾ ದೇವಾಲಯದ ಕಮಿಟಿ ಮೆಂಬರಿ ಜಾಗದ ಮೇಲೆ ಡಿಸ್ಟ್ರಿಕ್ಟ ಕೋರ್ಟಿನಿಂದ ಇಲ್ಲಿಯ ರಾ| ವಿಶ್ವನಾಥ ಪಾಂಡುರಂಗ ಪ್ರಭುರವರಿಗೆ ನೇಮಿಸೋಣಾಗಿದೆ. ಇಬ್ಬ ಉಮೇದ್ವಾರರಾದ ರಾ| ಮಹಾಬಲೇಶ್ವರ ಉಪಾಧ್ಯ ಹಾಗು ರಾ| ಸೀತಾರಾಮ ಭಾಗ್ವತ ಇವರ ಉಮೇದ್ವಾರಿಯು ಕೋರ್ಟಿಗೆ ಗ್ರಾಹ್ಯವಾಗಲಿಲ್ಲ. ದೇವಾಲಯ ಕಮಿಟಿಯ ಅಧ್ಯಕ್ಷರಾದ ರಾವಬಹಾದ್ದೂರ ಕಲ್ಯಾಣಪುರಕರರಿಗೆ ಕೋರ್ಟ ತರ್ಫೆನಿಂದ ಸಾಕ್ಷಿಯಾಯಿತು. ರಾ| ಉಪಾಧ್ಯರಿಗೆ ಶ್ರೀ ಮಹಾಬಲೇಶ್ವರ ದೇವಸ್ಥಾನದಲ್ಲಿ ವೃತ್ತಿ ಇರುವದಾಗಿ ರಾವಬಹಾದ್ದೂರರು ಹೇಳಿದರು. ರಾ| ಭಾಗವತರು ತಮ್ಮ ಕೆಲ ಆಸ್ತಿಯನ್ನು ಮುದ್ದತ್ಕ್ರಯಕ್ಕೆ ಮಾರಿದ್ದಾರಾಗಿಯೂ ರಾ| ಬ|ರು ಹೇಳಿದರು. ರಾ| ಪ್ರಭುಗಳಿಗೆ ಯಾವದೇ ದೇವಾಲಯದಲ್ಲಿ ಸಂಬಂಧವಿಲ್ಲವಾಗಿ ಅವರು ಹೇಳಿದರು. ಹೀಗೆಲ್ಲ ವಿಚಾರವಾಗಿ ರಾ| ಪ್ರಭುಗಳು ಸಭಾಸದರಾಗಿ ನೇಮಿಸಲ್ಪಟ್ಟಿದ್ದಾರೆ.

ಕಾರವಾರ— ನಡುನಡುವೆ ಮಳೆ ಬೀಳುತ್ತದೆ. ಬೆಳೆಗೆ ಕಷ್ಟ! ಸದಾಶಿವಗಡದ ಶ್ರೀ ಮಹಾಮಾಯಾ ದೇವಸ್ಥಾನದ ಭಟಕರೊಳಗೆ ಅತ್ತಂಡಗಳಾಗಿವೆ. ದೇವಾಲಯಕ್ಕೆ ಕೊಡುವ ಹೆಸರಿನ ಸಂಬಂಧ ಈ ವಾದವಂತೆ! ಪ್ರಕರಣವು ದಿವಾಣಿ ಕೋರ್ಟಿನಲ್ಲಿ ಸೇರುವದು, ಹೆಸರಿಗಾಗಿ ಬಡದಾಡುವದೇಕೆ?

ಬಂಕೇರಿಯ ಮಿ| ಅಬ್ದುಲ್ ಸತಾರ್ ಅಬ್ದುಲ್ ರಹಿಮಾನರವರಿಗೆ ಪ್ರೊಬೇಶನರ ಮಾಮಲೇದಾರರಾಗಿ ನೇಮಿಸೋಣಾಗಿದೆ.

ಬಾಡದ ಪಟೇಲರಾದ ರಾ| ಸರ್ವೋತ್ತಮ ಲಕ್ಷ್ಮಣಪ್ಪಾ ತೇಲಂಗರವರು ಇಲ್ಲಿಯ ಸೂತಿಕಾಗೃಹದ ಕಟ್ಟಡಕ್ಕಾಗಿ ೨೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅವರ ಮಗಂದಿರಾದ ಕೈ| ವೆಂಕಟರಾಯರ ಸ್ಮಾರಕಕ್ಕಾಗಿ ಈ ಕಾಣಿಕೆ ಕೊಡೋಣಾಗಿದೆ.

* * *

ವೃತ್ತಸಾರ.

— ಮುಂಬಯಿ-ಕಲಕತ್ತೆಯೊಳಗಣ ಹ್ಯಾಕೋರ್ಟುಗಳಲ್ಲಿ ನ್ಯಾಯಾಧೀಶರಾಗಿ ವಿಶೇಷ ಕೀರ್ತಿಪಡೆದ ಸರ್ ಲೊರೆನ್ಸ ಜೆಂಕಿನ್ಸರವರು ಬುಧವಾರ ತೀರಿಕೊಂಡರು. ಅವರ ಪರಿಚಯವಿದ್ದ ಕಾಯಿದೆ ಪಂಡಿತರೆಲ್ಲರೂ ಪಶ್ಚಾತ್ತಾಪಪಡುತ್ತಾರೆ. ಕಲಕತ್ತೆಯ ಮುನಿಸಿಪಾಲಿಟಿಯು ದುಃಖಪ್ರದರ್ಶಕ ಠರಾವನ್ನು ಮಂಜೂರ ಮಾಡಿದೆ.

— ಮುಂಬಯಿಯ ಗಿರಣಿ ಕೂಲಿಕಾರರ ಸಂಪು ತೀರಿತು. ಕೊನೆಗೆ ಶನಿವಾರದಿಂದ ಕೂಲಿಕಾರರು ಗಿರಣಿಗಳಲ್ಲಿ ಕೆಲಸಕ್ಕೆ ಹಾಜರಾಗಿದ್ದಾರೆ. ಸರಕಾರವು ಮೂವರನ್ನು ನೇಮಿಸಿ, ಅವರ ದೂರುಗಳನ್ನು ವಿಚಾರಿಸಿ ಇತ್ಯರ್ಥಪಡಿಸುವದು.

— ಪುಣೆಯ ಮೆಜಿಸ್ಟ್ರೇಟರು ಸಾಯಮನ್ ಕಮಿಟಿಯ ಬಹಿಷ್ಕಾರವಾದಿಗಳ ಮೇಲೆ ಮಿ| ಪೋ| ಆಕ್ಟ ಕಲಮು ಕಲಂನ್ವಯ ಪ್ರಕಟನೆಯನ್ನು ಹೊರಡಿಸಿದ್ದಾರೆ. ದಬ್ಬಾಳಿಕೆಗೆ ಪ್ರಾರಂಭ!

— ತಮಿಳನಾಡಿನ ಕತಿಯನಲ್ಲೂರಿನಲ್ಲಿ ಬೆಂಕಿಹತ್ತಿ ೨ ಲಕ್ಷ ರೂಪಾಯಿಗಳ ನಷ್ಟ! ಇಬ್ಬ ಸ್ತ್ರೀಯರು ಸುಟ್ಟುಹೋದರು.

— ಚೀನ ದೇಶದ ರಾಯಭಾರಿಗಳಾದ ಮಾ| ಶ್ರೀಮನ್ ಸ್ಥೂರವರು ಅಮೇರಿಕಾ, ಯುರೋಪ ಖಂಡಗಳಲ್ಲಿ ತಿರುಗಾಡಿ ಹಿಂದುಸ್ಥಾನಕ್ಕೆ ಬಂದಿದ್ದಾರೆ; ಕವಿಶ್ರೇಷ್ಠ ರವೀಂದ್ರನಾಥ ಟಾಗೋರರವರ ದರ್ಶನಕ್ಕಾಗಿ ಬಂದಿದ್ದಾರೆ. ಪೇಕಿಂಗ ರಾಷ್ಟ್ರೀಯ ವಿದ್ಯಾಲಯದಲ್ಲಿ ಮಾ| ಶ್ರೀಮನ್ ಸ್ಥೂರರವರು ವಿದ್ಯಾಭ್ಯಾಸ ಮಾಡಿದ್ದಾರೆ, ಅವರು ಜೂನ ತಿಂಗಳಿನಿಂದ ಸಂಚಾರದ ಮೇಲಿದ್ದಾರೆ. ಚೀನ-ಹಿಂದುಸ್ಥಾನ ದೇಶಗಳ ಸಂಸ್ಕೃತಿಗಳನ್ನು ಒತ್ತಟ್ಟಿಗೆ ವಿಚಾರಿಸಿ, ಎರಡೂ ದೇಶಗಳು ಸಾಹಚರ್ಯದಿಂದ ಕೆಲಸ ಮಾಡಲು ಇವರು ಆಲೋಚಿಸುವರು.

— ಕಲಕತ್ತೆಯ 'ಫೋರವರ್ಡ' ಪತ್ರಿಕೆಯ ಸಂಪಾದಕರು ಬೇಲೂರ ಉಗಿಬಂಡಿ ಅಪಘಾತದ ಕಥೆಯನ್ನು ಪ್ರಕಟಿಸುವಾಗ ಸಮಾಜದೊಳಗೆ ದ್ವೇಷ ಹಬ್ಬುವಂತೆ ಮಾಡಿದರೆಂದು ಅವರ ಮೇಲೆ ಖಟ್ಲೆಯಾಗಿ ಸಂಪಾದಕರಿಗೆ ೩ ತಿಂಗಳ ಸಜೆ, ೧೦೦೦ ರೂಪಾಯಿ ದಂಡ ವಿಧಿಸೋಣಾಯಿತು. ಮೆಜಿಸ್ಟ್ರೇಟರ ತೀರ್ಪಿನ ಮೇಲೆ ಕೂಡಲೆ ಹ್ಯಾಕೋರ್ಟದಲ್ಲಿ ಅಪೀಲು ದಾಖಲಾಗಿ, ಸಂಪಾದಕರಿಗೆ ಜಾಮೀನಿನ ಮೇಲೆ ಬಿಡೋಣಾಗಿದೆ.

— ನೀಲಗಿರಿಯಲ್ಲಿ ನೀರಿನ ಕೊರತೆ! ಕುಡಿಯಲು ಸದ್ಯಕ್ಕೆ ನೀರು ಸಾಕು; ಆದರೆ ಮುಂದೆ ನೀರು ಸಿಗದೆ ತೊಂದರೆಯಾಗುವದಂತೆ.

— ಸರ್ವಾಧಿಪತಿಗಳು ಕುರುಕ್ಷೇತ್ರಕ್ಕೆ ಚಿತ್ತೈಸಿದ್ದರು. ಅಲ್ಲಿಯ ಕೆರೆಗಳನ್ನೂ ಅತಿ ಪುರಾಣಪ್ರಸಿದ್ಧ ಸ್ಥಳಗಳನ್ನೂ ನೋಡಿ ಆನಂದಪಟ್ಟರು. ಈ ಪವಿತ್ರ ಸ್ಥಳಗಳನ್ನು ಸಂರಕ್ಷಿಸುವ ಸಂಘಕ್ಕೆ ಸರ್ವಾಧಿಪತಿಗಳು ೨೫೦ ರೂಪಾಯ ಕಾಣಿಕೆ ಕೊಟ್ಟರು.

— ಕಂಜೀವರಮ್ ದೇವರ ಮೆರವಣಿಗೆ ನಡೆದಿತ್ತು. ಆನೆಯು ಮೆರವಣಿಗೆಯಲ್ಲಿ ಸಾವಕಾಶ ಗಮನ ಮಾಡುತ್ತಿತ್ತು. ಮಾವುತನು ಏನು ಮಾಡಿದನೋ ಏನೋ! ಥಟ್ಟನೆ ಕೆರಳಿತು, ಕೋಪಾವಿಷ್ಟವಾಗಿ ಮಾವುತನಿಗೆ ಕೆಡವಿ, ದೀಪದ ಕಂಬಗಳನ್ನೂ, ಮರಗಳನ್ನೂ ಕಿತ್ತು ಬಿಸುಟು ಗೊಂದಲ ಮಾಡಿ ಬಿಟ್ಟಿತು. ಪೋಲೀಸರು ಆನೆಗೆ ಹಿಡಿದು ಆಯಕ್ಕೆ ತಂದು ಕಟ್ಟಬೇಕಾದರೆ ಸಾಕುಬೇಕಾಯಿತು.

— ಉಡುಪಿಯ ಶ್ರೀ ಕಾಣಿಯೂರು ಮಠಾಧಿಪತಿಗಳು ಶ್ರೀ ಕಾಶೀ ಕ್ಷೇತ್ರದಲ್ಲಿ ತಮ್ಮದೊಂದು ಮಠ ಸ್ಥಾಪಿಸುವ ಸಂಕಲ್ಪ ಮಾಡಿದ್ದಾರೆ. ಈ ಕಾರಣ ಅಲ್ಲಿಯ ಶ್ರೀ ಟಿಯೋವಾ ನಾರಾಯಣಾಚಾರ್ಯರಾದಿ ಪ್ರಮುಖರು ನಿಧಿಯನ್ನು ಸಂಗ್ರಹಿಸಿದ್ದಾರೆ ಧಾರ್ಮಿಕರು ಧರ್ಮಕಾರ್ಯಕ್ಕೆ ನೆರವಾಗಬೇಕು.

ಖಾತ್ರಿಯ ತಾಜಾ ಬೀಜಗಳೂ, ಸಸಿಗಳೂ.

ಸೀಮೆ ಹೂ ಬೀಜಗಳು ೧೨ ಪೆಕೆಟ ಗಳಿಗೆ ರೂ ೬
... (ಎಸೋರ್ಟಮೆಂಟು) ೨೫ .. ... ೪
ಹೂ ಬಳ್ಳಿಗಳ ಬೀಜಗಳು ೧೨ ,, ,, ೨॥
ಇಂಗ್ಲಿಷ ತರಕಾರಿ ಬೀಜಗಳು ೧೬ ,, ,, ೪॥
ನಾಟಿ ... ೧೬ ,, ,, ೨॥
ಸಿಲ್ವರ ಓಕ ೧ ರತ್ತಲಿಗೆ ... ,, ೨॥
ಬೆಂಗಳೂರ ಬಿಳೇ ಮೂಲಂಗಿ ಬೀಜ ರತ್ತಲಿಗೆ... ೨॥
ಹರಿವೆ ಸೊಪ್ಪು ೧ ರತ್ತಲಿಗೆ ೪
ಕುದುರೆ ಮಸಾಲೆ ಬೀಜ ೧ ರತ್ತಲಿಗೆ ... ೩
ಚಲೋ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಚಲೋ ಕ್ರೋಟನ್ ಗಿಡ ೧೨ ಕ್ಕೆ ... ೩ ರಿಂದ ೧೨
ಅಂದವಾದ ಹೂ ಗಿಡ (ಜೆರೇನಿಯಂ)
೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ
ಗಿಡಗಳು ೧೨ ಕ್ಕೆ ... ೩ ರಿಂದ ೧೨
ಕೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ)
೧೨ ಗಿಡಕ್ಕೆ ... ೧॥ ಯಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨
ಕಟ್ಟಿದ ಮಾವಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨
ಸೇವು ಗಿಡಗಳು ೧೨ ಕ್ಕೆ ... .. ೯ ರಿಂದ ೧೨

ತೆಂಗಿನ ಗಿಡ ೧೨ ಕ್ಕೆ ... ... ೧೨ ರಿಂದ ೩೬
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕೋತ್ರೆ
ದ್ರಾಕ್ಷೆ, ಪೇರಲ, ದಾಳಿಂಬ, ಅಂಜೀರ ರಾಸಬೆರಿ,
ಪನ್ನೇರಲ, ಕಂಚಿಕಾಯಿ, ಲಕ್ವೋಟೆ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ ... ೨೪
ವೊಶಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ ... ೫
೧ ಬುಟ್ಟಿ ತುಂಬ ತರಕಾರಿ ... ೫ ರಿಂದ ೬
ಕ್ರೈಸಾಂತಿಮಮ್ ಗಿಡ ೧೦೦ ಕ್ಕೆ ... ೧೨
ಡೇಲಿಯ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ನೆರಳು ಕೊಡುವ ಹಾಗೆ ಎಲೆಯ ಜಾತಿಯ ನಮೂನೆ
ಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡ್ಡೆಗಳು ೧೨ ಕ್ಕೆ ರೂ. ೨ ರಿಂದ ೯
ಎರೋಕೇರಿಯಾ ಕುಕ್ಕಿ ೧೨ ಗಿಡಗಳಿಗೆ
ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ್,

ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, **ಬೆಂಗಳೂರುಸಿಟಿ.**

ಮಹಾತ್ಮರ ಆತ್ಮಚರಿತ್ರೆ.

(೨೪) ಉಳ್ಳೇಗಡ್ಡೆಯ ಕಳ್ಳ.

ಚಂಪಾರಣ್ಯವೆಂದರೆ, ಹಿಂದುಸ್ಥಾನದ ಒಂದು ಮೂಲೆ. ಅಲ್ಲಿಯ ಚಳವಳಿಯಲ್ಲಿ ವರ್ತಮಾನಪತ್ರಿಕೆಗಳಿಗೆ ಅಂಟಿರಲಿಲ್ಲ. ಹೀಗಾಗಿ ಪರ ಊರುಗಳಿಂದ ಆ ಕಡೆ ಜನರು ಬರಲಿಲ್ಲ. ಖೇಡಾ ಕಾದಾಟದ ಸ್ಥಿತಿಯು ಹಾಗಿರಲಿಲ್ಲ. ಅಲ್ಲಿ ಸಂಭವಿಸಿದ ಸಂಗತಿಗಳು ದಿನಾ ವರ್ತಮಾನಪತ್ರಿಕೆಗಳಲ್ಲಿ ಪ್ರಕಟಿಸಲ್ಪಡುತ್ತಿದ್ದವು.

ಗುಜರಾಥಿಗಳಿಗೆ ಈ ಕಾದಾಟವಲ್ಲಿ ಹೆಚ್ಚಿನ ಆವೇಶ ಇದೊಂದು ನೂತನ ಉಪಕ್ರಮವಾಗಿದ್ದಿತು. ಈ ಕಾರ್ಯವನ್ನು ಸಿದ್ಧಗೊಳಿಸುವದಕ್ಕಾಗಿ ಶಕ್ತಿಮೀರಿ ದ್ರವ್ಯಸಹಾಯ ಮಾಡಲು ಅವರು ಸಿದ್ಧರಿದ್ದರು. ಹಣದಿಂದಲೇ ಸತ್ಯಾಗ್ರಹ ಕಾದಾಟವು ನೆರವೇರುವದಿಲ್ಲೆಂದು ತಿಳಿದು, ಅವರಿಗೆ ಕಷ್ಟವಾಯಿತು. ಇಂಥ ಕಾದಾಟಗಳಲ್ಲಿ ಹಣದ ಆವಶ್ಯಕತೆಯು ಹೆಚ್ಚಿನದಲ್ಲ. ನಾನು ಬೇಡೆಂದರೂ, ಮುಂಬಯಿಯೊಳಗಿನ ವರ್ತಕರು ನನಗೆ ಅನಾವಶ್ಯಕವಾಗಿ ಹಣ ಕಳುಹಿದರು. ಹೀಗೆ ಸತ್ಯಾಗ್ರಹ ಮುಗಿದ ಬಳಿಕ ನನ್ನ ಕಡೆ ಕೆಲವು ಶಿಲ್ಕು ಉಳಿಯಿತು.

ಸತ್ಯಾಗ್ರಹ ಸ್ವಯಂಸೇವಕರು ಸಾಮಾನ್ಯ ಜೀವನಕ್ರಮದ ಹೊಸ ಪಾಠವನ್ನು ಕಲಿಯಬೇಕಾಯಿತು. ಆ ಪಾಠವು ಸಂಪೂರ್ಣವಾಗಿ ಅವರ ಮನದಟ್ಟಾಗಲಿಲ್ಲ. ಆದರೆ, ಅವರ ಜೀವನ ಕ್ರಮವು ಈ ಮಾರ್ಗ ಮೂಲಕ ಬಹುಮಟ್ಟಿಗೆ ಬದಲಿಸಿತು.

ಪಟಿದಾರ ಒಕ್ಕಲಿಗರಿಗೂ ಈ ಕಾದಾಟದ ಪ್ರಕಾರವು ತೀರ ಹೊಸದಾಗಿತ್ತು. ಆದರಿಂದ ಸತ್ಯಾಗ್ರಹದ ತತ್ವಗಳನ್ನು ಊರೂರಿಗೆ ಹೇಳುತ್ತ ಹೋಗಬೇಕಾಗಿತ್ತು. ಅಧಿಕಾರಿಗಳು ಪ್ರಜೆಗಳ ಒಡೆಯರಲ್ಲ, ಆಳುಗಳು. ಯಾಕಂದರೆ ಪ್ರಜೆಗಳು ಕೊಟ್ಟ ತೆರಿಗೆಯಿಂದ ಅವರು ಸಂಬಳ ಪಡೆಯುತ್ತಾರೆ ಈ ಸಂಗತಿಯನ್ನು ಮುಖ್ಯವಾಗಿ ಜನರ ಮನಸ್ಸಿನ ಮೇಲೆ ಬಿಂಬಿಸುವ ಕೆಲಸವೇ ಮುಖ್ಯವಾಗಿದ್ದಿತು. ಈ ಕೆಲಸವಾದ ಬಳಿಕ, ಸಭ್ಯತೆಯನ್ನೂ, ನಿರ್ಭಯತೆಯನ್ನೂ ಜೋಡಿಸಿ ಸತ್ಯಾಗ್ರಹಿಗಳು ವರ್ತಿಸಬೇಕೆಂದು ತಿಳಿಸಿ ಹೇಳಲಿಕ್ಕಂತು ಹೆಚ್ಚಿನ ಕಷ್ಟವಾಯಿತು. ಅಧಿಕಾರಿಗಳ ಭೀತಿಯು ದೂರವಾದ ಕೂಡಲೆ ಅವರ ದುರುಕ್ತಿಗಳಿಗೆ ಜನರು ಪ್ರತ್ಯುತ್ತರ ಕೊಡದೆ ಸಹಿಸುವ ಬಗೆ ಹೇಗೆ? ಅಸಭ್ಯ ವರ್ತನ ಮಾಡಿದರೆ, ಸತ್ಯಾಗ್ರಹಕ್ಕೆ ಕಲಂಕ ಬರುತ್ತದೆ. ಹಾಲಿನಲ್ಲಿ ಉಪ್ಪಿನ ಅಂಶ ಬಿದ್ದಂತಾಗುತ್ತದೆ. ಸತ್ಯಾಗ್ರಹದಲ್ಲಿ ಸಭ್ಯ ವರ್ತನವನ್ನು ಪಾಲಿಸುವದು ಬಹಳ ಕಷ್ಟದ ಸಂಗತಿಯೆಂದು ನನ್ನ ಅನುಭವ. ಸಭ್ಯತೆಯೆಂದರೆ, ಪ್ರಸಂಗಕ್ಕಾಗಿ ಧರಿಸಿದ ಸಭ್ಯ ಮಾತುಗಳಲ್ಲ; ಪ್ರತಿಪಕ್ಷಿಗಳಿಗೆ ಹಿತ ಮಾಡಲು ಉಂಟಾಗುವ ಸ್ವಾಭಾವಿಕ ಸಭ್ಯತೆ ಹಾಗು ಕಲ್ಯಾಣೇಚ್ಛೆ. ಇವೆರಡೂ ಗುಣಗಳು ಸತ್ಯಾಗ್ರಹಿಯ ಪ್ರತಿಯೊಂದು ಕಾರ್ಯದಲ್ಲಿಯೂ ದೃಗ್ಗೋಚರವಾಗತಕ್ಕದ್ದು.

ಮೊದಮೊದಲು ಜನರು ಹೆಚ್ಚು ಧಿಟ್ಟತನ ತೋರಿಸಿದರು. ಆದರೆ ಸರಕಾರವು ಅವರ ಮೇಲೆ ಶಸ್ತ್ರಾಸ್ತ್ರ ಉಪಯೋಗಿಸಲು ಮನಸ್ಸು ಮಾಡಲಿಲ್ಲ. ಆದರೆ ಜನರು ಸ್ಥಿರ ಚಿತ್ತದಿಂದ ಕಾರ್ಯವನ್ನು ಪುರಸ್ಕರಿಸಹತ್ತಿದ ಬಳಿಕ ಸರಕಾರವು ದಬ್ಬಾಳಿಕೆಯನ್ನು ಕೈಕೊಂಡಿತ್ತು. ಜಪ್ತಿಯ ಅಧಿಕಾರಿಗಳು ಜನರ ದನಕರುಗಳನ್ನು ಮಾರಿದರು ಮತ್ತು ತಮ್ಮ ಕೈಗೆ ಸಿಕ್ಕಿದ ಜಿಂದಗಿಯನ್ನು ಕೈವಶ ಮಾಡಿಕೊಳ್ಳಹತ್ತಿದರು. ದಂಡನೆ ನೋಟೀಸುಗಳು ಜಾರಿಯಾದವು. ಕೆಲವೆಡೆ ನಿಂತ ಬೆಳೆ ಜಪ್ತಾಯಿತು. ಇದನ್ನು ಒಕ್ಕಲಿಗರಿಂದ ಸಹಿಸಲಾಗಲಿಲ್ಲ. ಕೆಲವರು ತಮ್ಮ ಕಂದಾಯವನ್ನು ತೆತ್ತರು; ಕೆಲವರು ತಮ್ಮ ಜಿಂದಗಿಯನ್ನು ಅಧಿಕಾರಿಗಳ ಕೈಗೆ ಸಿಲುಕುವಂತೆ ಮುಂದೆ ತಂದಿಟ್ಟರು. ಅಧಿಕಾರಿಗಳು ಅವನ್ನು ಜಪ್ತ ಮಾಡಿ ಕಂದಾಯವನ್ನು ತುಂಬಿಕೊಂಡಂತಾಯಿತು. ಕೆಲವರು ಮಾತ್ರ ಈ ಸಂಗ್ರಾಮವನ್ನು ಕೊನೆ ತನಕ ನಡಿಸಲು ಟೊಂಕಕಟ್ಟಿದರು.

ಹೀಗೆ ನಡೆಯುತ್ತಿರುವಾಗಲೇ ಶ್ರೀ ಶಂಕರಲಾಲ ಪರೀಖರವರ ಒಕ್ಕಲೊಬ್ಬನು ತನ್ನ ಕಡೆ ಇರುವ ಪರೀಖರ ಭೂಮಿಯ ತೀರ್ವೆಯನ್ನು ಕೊಟ್ಟುಬಿಟ್ಟನು. ಈ ಸುದ್ದಿಯಿಂದ ದೊಡ್ಡ ಕೋಲಾಹಲವಾಯಿತು. ಶ್ರೀ ಶಂಕರಲಾಲ ಪರೀಖರು ಕೂಡಲೆ ಈ ತಪ್ಪನ್ನು ತಿದ್ದಿಕೊಂಡರು. ತೀರ್ವೆ ತೆತ್ತ ಭೂಮಿಯನ್ನು ಅಲ್ಲಿಂದಲ್ಲೇ ಧರ್ಮ ಮಾಡಿಬಿಟ್ಟರು. ಹೀಗೆ ಅವರು ತಮ್ಮ ಮರ್ಯಾದೆಯನ್ನು ಕಾದುಕೊಂಡರು, ಪರರಿಗೆ ಮಾರ್ಗದರ್ಶಕರಾದರು. ಭಯಪಟ್ಟವರಿಗೆ ಧೈರ್ಯಕೊಡುವದಕ್ಕಾಗಿ ಅನ್ಯಾಯದಿಂದ ಜಪ್ತಿ ಮಾಡಿದ ಗದ್ದೆಯೊಳಗೆ ಬೆಳಸಿದ ಉಳ್ಳೇಗಡ್ಡೆಯ ಬೆಳೆಯನ್ನು ಶ್ರೀ ಮೋಹನಲಾಲ ಪಂಡ್ಯಾರವರ ನೇತೃತ್ವದಲ್ಲಿ ಕೊಯ್ದೊಯ್ಯಲು ನಾನು ಜನರಿಗೆ ಸೂಚಿಸಿದೆನು. ಇದು ಕಾಯಿದೆಭಂಗವೆಂದು ನನಗನಿಸಲಿಲ್ಲ. ಕಾಯಿದೆಭಂಗವಾದಾಗ್ಯೂ, ನಿಂತ ಬೆಳೆಯನ್ನು ಜಪ್ತ ಮಾಡುವದು ಅನ್ಯಾಯವೆಂದು ನನ್ನ ಗ್ರಹಿಕೆ. ಜಪ್ತಿಯು ಕಾಯಿದೆಯಂತೆ ನಡೆದಿದ್ದಿರಬಹುದು, ಆದರೂ, ಇದು ಲೂಟಿಯೆಂದೇ ನಾನು ಗ್ರಹಿಸಿದೆ. ಆದರಿಂದ ಜಪ್ತಿಯುಕ್ತವಾದಾಗ್ಯೂ ಅಲ್ಲಿ ಬೆಳೆದ ಉಳ್ಳೇಗಡ್ಡೆಯನ್ನು ಕೊಯ್ದೊಯ್ಯುವದು ಜನರ ಕರ್ತವ್ಯವೆಂದು ನನ್ನ ಅಭಿಪ್ರಾಯ. ಈ ಉಲ್ಲಂಘನದಿಂದ ದಂಡ ಅಥವಾ ಬಂದಿವಾಸವಾಗುವದು ಸಹಜ, ಜನರಿಗೂ ಇದೊಂದು ಚಲೋ ಪ್ರಸಂಗ ಮಾಡಿಕೊಟ್ಟಂತಾಗುತ್ತಿತ್ತು. ಮೋಹನಲಾಲ ಪಂಡ್ಯಾರವರಿಗೆ ಇಂಥ ಕೆಲಸವಾವುದೆಂದರೆ ಹುರುಪು. ಸತ್ಯಾಗ್ರಹ ತತ್ವಗಳನುಸರಿಸಿ ಬಂದಿವಾಸವನ್ನು ಸೇರಿ ಕಷ್ಟಗಳನ್ನು ಅನುಭವಿಸದ ಹೊರತು, ಈ ಕಾದಾಟವು ಅಂತ್ಯವಾಗಲಾರದೆಂದು ಅವರ ಅಪೇಕ್ಷೆ ಇತ್ತು. ಆದರಿಂದ ಹೊಲದೊಳಗಿಂದ ಉಳ್ಳೇಗಡ್ಡೆಯನ್ನು ಕೀಳಲು ಅವರು ಮುಂದಾದರು. ಈ ಕೆಲಸದಲ್ಲಿ ೭-೮ ಮಂದಿಗಳು ಅವರಿಗೆ ನೆರವಾದರು.

ಇವರಿಗೆ ಹೀಗೆಯೇ ಬಿಟ್ಟುಬಿಡಲು ಸರಕಾರಕ್ಕೆ ಸಾಧ್ಯವಿದ್ದಿಲ್ಲ. ಶ್ರೀ ಮೋಹನಲಾಲರವರಿಗೂ ಅವರ ಸಂಗಡಿಗರಿಗೂ ಸೆರೆಹಿಡಿದರು. ಜನರ ಉತ್ಸಾಹವು ಉಕ್ಕಿ ಬಂತು. ಕೈದುಮನೆಯ ಭಯವಿಲ್ಲದಿದ್ದರೆ ದಬ್ಬಾಳಿಕೆಯಿಂದ ಹುರುಪು ಹೆಚ್ಚುತ್ತದೆ. ಕಟ್ಲೆಯ ನಿಕಾಲ ದಿನ ಜನರು ಹಿಂಡುಗಟ್ಟಿ ಕೋರ್ಟಿನಲ್ಲಿ ಸೇರಿದರು. ಪಂಡ್ಯಾರವರೂ, ಜೊತೆಗಾರರೂ ಅಪರಾಧಿಗಳೆಂದು ನಿರ್ಣಯ ಹೊಂದಿದರು ಹಾಗು ಅವರಿಗೆ ಸ್ವಲ್ಪ ಶಿಕ್ಷೆಯಾಯಿತು. ಶಿಕ್ಷೆಯಾದದ್ದು ತಪ್ಪೆಂದು ನನ್ನ ಅಭಿಪ್ರಾಯ. ಪೀನಲ್ ಕೋಡಿನ ವ್ಯಾಖ್ಯೆಯಂತೆ ಕಳವು ಶಬ್ದದಲ್ಲಿ ಉಳ್ಳೇಗಡ್ಡೆಯನ್ನು ಕಿತ್ತುಗೆದ ಕೃತ್ಯ ಸೇರುತ್ತಿದ್ದಿಲ್ಲ. ಆದರೂ, ನಾವು ಅಪೀಲು ಮಾಡಲಿಲ್ಲ. ನ್ಯಾಯಾಸನಗಳ ಬಗ್ಗೆ ಬಹಿಷ್ಕಾರದ ಧೋರಣವಿತ್ತು.

ಜೈಲಿಗೆ ಹೋಗುವಾಗ ಅಪರಾಧಿಗಳಿಗೆ ದೊಡ್ಡದೊಂದು ಮೆರವಣಿಗೆಯಾಯಿತು. ಅದೇ ದಿನ ಶ್ರೀ ಮೋಹನಲಾಲ ಪಂಡ್ಯಾರವರಿಗೆ "ಡುಂಗ್ಲಿ ಚೋರ" ಅಂದರೆ "ಉಳ್ಳೇಗಡ್ಡೆಯ ಕಳ್ಳನೆಂಬ ಬಹುಮಾನದ ಬಿರುದು ಸಿಕ್ಕಿತು. ಈಗಲೂ ಆ ಬಿರುದನ್ನು ಅವರು ಆನಂದದಿಂದ ಅನುಭವಿಸುತ್ತಾರೆ.

ಖೇಡಾ ಸತ್ಯಾಗ್ರಹ ಮುಗಿದ ಸಂಗತಿಯನ್ನು ಮುಂದಿನ ಅಧ್ಯಾಯದಲ್ಲಿ ಹೇಳುವೆನು.

— ಮಹಾತ್ಮರ ವರ್ಧಂತ್ಯುತ್ಸವವು ಲಾಹೋರ, ಮದ್ರಾಸ, ಮುಂಬಯಿ ಕಡೆ ಪಾಲಿಸಲ್ಪಟ್ಟಿತು. ಮಹಾತ್ಮರಿಗೆ ದೀರ್ಘಾಯು ಆರೋಗ್ಯ ಪ್ರಾಪ್ತಿಯಾಗಲೆಂಬ ಈಶಪ್ರಾರ್ಥನೆಯಾಯಿತು. ಮಹಾತ್ಮರು ತಮ್ಮ ಸಾಮಾನ್ಯ ಜೀವನಕ್ರಮದಿಂದಲೂ, ನಿಸ್ವಾರ್ಥ ಲೋಕಸೇವೆಯಿಂದಲೂ, ನಿರ್ಮಲ ನಡತೆಯಿಂದಲೂ, ನಿರ್ಭಯದಿಂದಲೂ ಈಗಿನ ಯುದ್ಧದಲ್ಲಿ ಅತ್ಯಂತ ಶ್ರೇಷ್ಠ ಜಗತ್ತಿನ ಪುರುಷರಾಗಿದ್ದಾರೆಂದು ಲಜಪತರಾಯರು ಉದ್ಗರಿಸಿ, ಮಹಾತ್ಮರಿಗೆ ಹರಸಿದರು. ಏಶಿಯಾ ಖಂಡದ ಇತಿಹಾಸವನ್ನು ಒರೆಯಬೇಕಾದರೆ, ಮಹಾತ್ಮರ ಉಲ್ಲೇಖವನ್ನು ಸುವರ್ಣಾಕ್ಷರದಿಂದ ನಮೂದಿಸಬೇಕಾಗುವದೆಂದು ಮೌ॥ ಜಾಫರ ಅಲ್ಲೀಖಾನರವರು ಉದ್ಗರಿಸಿದರು. ವರ್ಣಭೇದ, ಪಕ್ಷಭೇದ ಧರ್ಮಭೇದಗಳೇನಿದ್ದಾಗ್ಯೂ ಅವೆಲ್ಲವನ್ನೂ ಮರೆತು ಸರ್ವರೂ ಮಹಾತ್ಮರಿಗೆ ಮನ್ನಿಸುವಂಥ ಪೌರುಷೇಯವನ್ನು ಮಹಾತ್ಮರು ಸಂಪಾದಿಸಿದ್ದಾರೆಂದೂ ಮೌಲಾನಾ ಜಾಫರ ಅಲ್ಲೀಖಾನರವರು ಉದ್ಗರಿಸಿದರು. ಲಜಪತರಾಯರು ಆಡಿದ ಇನ್ನೊಂದು ಮಾತು ಮನನೀಯವಿದೆ. "ಜಗತ್ತಿನಲ್ಲಿ ಯಾರೂ ಪೂರ್ಣರಲ್ಲ, ಪರಿಪೂರ್ಣತೆಯ ಸಮೀಪಕ್ಕೆ ಯಾರಾದರೂ ಹೋದದ್ದಿದ್ದರೆ, ಅವರು ಮಹಾತ್ಮರೊಬ್ಬರೇ." ಮದ್ರಾಸದ ಟಿಳಕ ಘಾಟದ ಮೇಲೆ ಮಹಾತ್ಮರ ಸತ್ಯನಿಷ್ಠೆಯ ಹೊಗಳಿಕೆಯಾಯಿತು. ಸತ್ಯವನ್ನು ಮಹಾತ್ಮರು ಅಚಲ ನಿಷ್ಠೆಯಿಂದ ಹಿಂಬಾಲಿಸಿದ್ದಾರೆಂದು ಉಪಸ್ಥಿತ ಸಭೆಯವರು ಅಭಿಪ್ರಾಯಪಟ್ಟು, ಅಂಥ ಸತ್ಯಸೇವಕರಿಗೆ ಭಗವಂತನು ವಿಶೇಷ ಆಯುರ್ದಾಯವನ್ನಿತ್ತು ಆಶೀರ್ವದಿಸಬೇಕೆಂದು ಪ್ರಾರ್ಥಿಸಿದರು.

ಪ್ರಚಂಡ ಸೋಡ್ತಿ.

ಮಂಗಳೂರದಲ್ಲಿರುವ ಕೆನರಾ ಹೈಸ್ಕೂಲ ಮತ್ತು ಕೆನರಾ ಬಾಲಕಿಯರ ಸ್ಕೂಲಿನ ಸಹಾಯಾರ್ಥವಾಗಿ ದಕ್ಷಿಣ ಕನ್ನಡ ಜಿಲ್ಹೆಯ ಮೆಜಿಸ್ಟ್ರೇಟರ ಅಪ್ಪಣೆ ಪಡೆದು ಪ್ರಮುಖ ಗೃಹಸ್ಥರ ನೇತೃತ್ವದಲ್ಲಿ ಒಂದು ಸೋಡ್ತಿ ತೆಗೆಯಲಾಗುವದು.

ಸೋಡ್ತಿಯ ಬಂಡವಲು ೧ ಲಕ್ಷ. ಇದರೊಳಗಿಂದ ಖರ್ಚಿನ ಬಗ್ಗೆ ೧೫ ಸಾವಿರ ರೂಪಾಯಿಗಳನ್ನು ವಜಾ ಮಾಡಿ, ಉಳಿದ ಹಣದೊಳಗಿಂದ ೪೦ ಸಾವಿರ ರೂಪಾಯಿಗಳನ್ನು ಶಾಲೆಗಳಿಗೆ ಕೊಟ್ಟು, ೪೫ ಸಾವಿರ ರೂಪಾಯಿ ಬೆಲೆಯ ೩೦೪೩ ಇನಾಮುಗಳು ಈ ಕೆಳಗಿನಂತೆ ಹಂಚಲಾಗುವವು.

(೧) ಮೊದಲನೇ ಬಹುಮಾನವು ರೂ. ೧೬॥ ಸಾವಿರದ್ದು;
(೨) ರೂ. ೫೦೦೦ ಸಾವಿರದ್ದು;
(೩) ೧೦೦೦ ರೂಪಾಯಿಗಳ ೨ ಇನಾಮುಗಳು;
(೪) ೫೦೦ ರೂಪಾಯಿಗಳ ೩ ಇನಾಮುಗಳು;
(೫) ೨೦೦ ರೂಪಾಯಿಗಳ ೬ ಇನಾಮುಗಳು;
(೬) ೧೦೦ ರೂಪಾಯಿಗಳ ೧೦ ಇನಾಮುಗಳು;
(೭) ೫೦ ರೂಪಾಯಿಗಳ ೨೦ ಇನಾಮುಗಳು;
(೮) ೨೦ ರೂಪಾಯಿಗಳ ೧೦೦ ಇನಾಮುಗಳು;
(೯) ೧೦ ರೂಪಾಯಿಗಳ ೮೦೦ ಇನಾಮುಗಳು;
(೧೦) ೫ ರೂಪಾಯಿಗಳ ೨೧೦೦ ಇನಾಮುಗಳು;

ಟಿಕೀಟುಗಳು ತಾ. ೪-೧-೨೯ ನೇ ತನಕ ಸಿಗುವವು. ಸೋಡ್ತಿಯು ತಾ ೩೧—೧—೨೯ ನೇಗೆ ತೆಗೆಯಲಾಗುವದು. ಟಿಕೀಟಿನ ಬೆಲೆ ಬರೇ ೧ ರೂಪಾಯಿ. ೨೪ ಟಿಕೀಟುಗಳನ್ನು ಮಾರುವವರಿಗೆ ಪರಿಶ್ರಮದ ಬಗ್ಗೆ ೧ ಟಿಕೀಟು ಉಚಿತವಾಗಿ ಕೊಡಲ್ಪಡುವದು. ಎಲ್ಲರಿಗಿಂತಲೂ ಹೆಚ್ಚು ಟಿಕೀಟುಗಳನ್ನು ಮಾರಿದವರಿಗೆ ವಿಶೇಷ ಬಹುಮಾನಗಳು ಸಿಗುವವು. ಲೋಕಾಶ್ರಯಕ್ಕೆ ಪಾತ್ರವಾದ ೨ ಸಂಸ್ಥೆಗಳಿಗೆ ನೆರವಾದ ಶ್ರೇಯಸ್ಸು ದೊರಕುವದು; ಕೆನರಾ ಹೈಸ್ಕೂಲಿನಲ್ಲಿ ಕೈಗಾರಿಕೆಯ ಶಾಖೆಯನ್ನು ಸ್ಥಾಪಿಸಲಿಕ್ಕೂ ಅನುಕೂಲತೆ ಮಾಡಿಕೊಟ್ಟಂತಾಗುವದು.

ಅಲ್ಲಲ್ಲಿ ಏಜಂಟರು ಬೇಕು. ಏಜಂಟರಾಗಲಿಚ್ಛಿಸುವರು ಈ ಕೆಳಗಿನ ಪತ್ತೆಯ ಮೇಲೆ ಬರಕೊಳ್ಳಬೇಕು.

ಮಂಗಳೂರ, | ಬಿ. ಮಂಜನಾಥ ಬಾಳಿಗಾ,
ತಾ ೧೪-೩-೧೯೨೮.| ಆನರರಿ ಸಕ್ರೆಟರಿ,
ಕೆನರಾ ಹೈಸ್ಕೂಲ ರೆಫರಿ ಕಮಿಟಿ,
ಬ್ರಿಟೋಲೇನ, ಫಳನೀರ, ಮಂಗಳೂರು,
ದಕ್ಷಿಣ ಕನ್ನಡ.

ವೃತ್ತಸಾರ.

— ಇಂಗ್ಲಂಡದೊಳಗಿನ ಸರ್ ರೊಬರ್ಟ ಸೌಸ್ಟನ್‌ರವರು ತೀರಿಕೊಂಡರು. ಇವರು ದೊಡ್ಡ ಲಕ್ಷಾಧೀಶರು. ಸಾಯುವಾಗ ೭೦ ಲಕ್ಷ ಪವನುಗಳನ್ನು ತಮ್ಮ ಹಂಡತಿಗೆ ಕೊಟ್ಟಿದ್ದಾರೆ. ಹೆಂಡತಿಯ ಕಡೆಯಿಂದ ಹಣವನ್ನು ಪಡೆಯುವದಕ್ಕಾಗಿ ಜರ್ಮನಿ, ಐರ್ಲಂಡ, ಇಂಗ್ಲಂಡ, ವೇಲ್ಸ, ಅಮೇರಿಕಾ, ಆಫ್ರಿಕಾ, ಹಿಂದುಸ್ಥಾನ ಮೊದಲಾದ ಕಡೆಯಿಂದ ಕಲಾಕೌಶಲ್ಯಕರ್ತರೂ, ಗ್ರಂಥಕರ್ತರೂ ತಮ್ಮ ತಮ್ಮ ಕಾರಣಗಳನ್ನೂ, ಗ್ರಂಥಗಳನ್ನೂ ರವಾನಿಸಿರುವರಂತೆ. ಸಾವಿರಾರು ಪತ್ರಗಳು ಹೋಗಿವೆ. ಇವೇನು ದೊಡ್ಡ ಮಾತಲ್ಲ. ಆದರೆ ಮದುವೆಯಾಗುವದಕ್ಕಾಗಿ ಕೆಲವರು ಸೂಚಿಸಿ ತಮ್ಮ ಉಮೇದ್ವಾರಿಯನ್ನು ದಾಖಲಿಸಿ ಬರೆದಿದ್ದಾರೆ ಪತ್ರಗಳನ್ನೆಲ್ಲ ಆಕೆಗೆ ಓದಿ ಬೇಸರವಾಗಿರುತ್ತದಂತೆ.

— ಮುಂಬಯಿಯಲ್ಲಿ ಆಕ್ಟೋಬರ ೧ನೇ ತಾರೀಖಿಗೆ ಬೆಝಂಟ ಅಮ್ಮನವರ ವರ್ಧಂತ್ಯುತ್ಸವವು ಜರುಗಿಸಲ್ಪಟ್ಟಿತು. ಮುಂಬಯಿಯೊಳಗಿನ ಥಿಯೊಸೊಫಿ ಸಭಾಭವನದಲ್ಲಿ ಅವರದೊಂದು ಕಲ್ಲಿನ ಮೂರ್ತಿಯ ಅನಾವರಣ ಸಮಾರಂಭವಾಯಿತು. ಮುಂಬಯಿ ಸರಕಾರದಿಂದ ನಿವೃತ್ತರಾದ ಸರ್ ಚುನಿಲಾಲ ಮೇಥಾರವರು ಅಧ್ಯಕ್ಷರಿದ್ದರು. ಬೆಝಂಟ ಅಮ್ಮನವರ ಪಾಂಡಿತ್ಯವು, ನಮ್ರತೆಯೂ ಜನರ ಕಾಳಜಿಯಿಂದ ಮನ್ನಣೆ ಸೆಳೆಕೊಳ್ಳುತ್ತವೆಂದು ಶ್ರೀ| ಜಮುನಾದಾಸ ಮೇಥಾರವರು ಉದ್ಗರಿಸಿದರು.

— ಬ್ರಹ್ಮದೇಶದ ಅಕ್ಕಿಯ ವರ್ತಕರು ದಿಗಿಲು ಬಿದ್ದಿದ್ದಾರೆ. ಅಕ್ಕಿಯ ರಫ್ತು ಕಡಿಮೆ, ೫ ತಿಂಗಳಲ್ಲಿ ೫|| ಕೋಟಿ ರೂಪಾಯಿ ನಷ್ಟ. ಈ ಅಕ್ಕಿಯ ವ್ಯಾಪಾರ ಮಾಡಿದ ಬಂಗಾಲಿ ವರ್ತಕರಿಗೂ ೬೩ ಲಕ್ಷ ರೂಪಾಯಿ ನಷ್ಟ. ಜಪಾನದವರು ಈ ಅಕ್ಕಿಯನ್ನು ಹೆಚ್ಚಾಗಿ ಖರೇದಿ ಮಾಡುತ್ತಿದ್ದರಂತೆ; ಈಗ ಅವರ ಖರೇದಿಯು ಕುಗ್ಗಿದೆ ತಮ್ಮ ದೇಶದಿಂದ ಹೊರಟ ಮಾಲಿನ ಮೇಲೆ ಕರ ಕೂಡ್ರಿಸಿದ್ದರಿಂದ ಸಿಟ್ಟಿಗೆದ್ದು ಈ ಅಕ್ಕಿಯ ಖರೇದಿ ಕಡಿಮೆಯಾಗಿರುವದಾಗಿ ಒಂದು ಸುದ್ದಿ. ಚೀನ-ಜರ್ಮನಿ-ಆಸ್ಟ್ರಿಯಾ-ಇಟಾಲಿ ಮುಂತಾದ ಕಡೆಗಳಲ್ಲಿ ಹೋಗುವ ಅಕ್ಕಿಯ ರಫ್ತು ಕಡಿಮೆಯಾಗಿರುವದಂತೆ

— ಕ್ರೈಸ್ತ ಸಂಘದ ಧರ್ಮಗುರುಗಳಾದ ೧೧ನೇ ಪಾಯಸ್ ಪೋಪ ಗುರುಗಳಿಗೆ ರೋಮನಗರದಲ್ಲಿ ವಿಶಿಷ್ಟ ಮರ್ಯಾದೆಯ ಹೊರಗೆ ಅಡ್ಡಾಡಬಾರದೆಂದು ಇಟಾಲಿಯ ಅರಸರು ವಿಧಿಸಿದ್ದಾರೆ. ಆದರಿಂದ ಪೋಪರ ಆರೋಗ್ಯವು ಕೆಟ್ಟಿದೆ. ಹೊಟ್ಟೆ ಉಬ್ಬಿ ಬಂದಿದೆ. ವಿಮಾನದ ಮೇಲೆ ಉಡ್ಡಾಣ ಹೊಡೆದು ಎಲ್ಲಿಯಾದರೂ ಹವೆ ಬದಲಾವಣೆ ಮಾಡುವದಕ್ಕಾಗಿ ಹೋಗಬಹುದೇನೆಂಬ ಪ್ರಶ್ನೆ ಕೇಳಲ್ಪಡುತ್ತದೆ. ಪೋಪರು ಇಟಾಲಿಯ ರಾಜ್ಯದಲ್ಲಿ ಕಾಲಿಟ್ಟರೆ ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಅಲ್ಲೋಲ-ಕಲ್ಲೋಲವಾಗುವದಂತೆ. ಈ ಅಂತರ್ರಾಷ್ಟ್ರೀಯ ರಾಜಕಾರಣವೆಂಬುದು ಪೋಪ ಗುರುಗಳ ಜೀವದ ಮೃತ್ಯು ಬಂತು!

— ಕಲಕತ್ತೆಯ ಪ್ರದರ್ಶನಾಲಯದಲ್ಲಿ ನೇಪಾಳದಿಂದ ತಂದ ಒಂದು ಗಂಡು ಆಡು ಇದೆ ಅದು ಪುಷ್ಟವಿದೆ. ಅದು ಹೆಣ್ಣು ಆಡಿನಂತೆ ಹಾಲು ಕೊಡುತ್ತಿದೆ. ಇದೊಂದು ದೊಡ್ಡ ಚಮತ್ಕಾರ !

— ಮುಂಬಯಿಯೊಳಗಿನ ಗಿರಣಿ ಕಾಮಗಾರರ ಸಂಪು ಇನ್ನೂ ಸಮಾಪ್ತಿಯಾಗುವದಿಲ್ಲ. ದೊಡ್ಡ ದೊಡ್ಡವರು ಪ್ರಯತ್ನಿಸಿದರೂ, ಯಾರಿಗೂ ಏನೂ ಫಲಪ್ರಾಪ್ತಿಯಾಗುವದಿಲ್ಲ

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ
ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ
ಶ್ರೀ ತುಳಸಿದಾಸ
ರಾಮಾಯಣ.
ಮದ್ರಾಸಿನ ಮಾಜಿ ಮಂತ್ರಿಗಳು ಶ್ರೀ| ಎ. ರಂಗನಾಥಂ
ಅವರ ಮುನ್ನುಡಿ ಸಹಿತ
ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ
ಇತ್ಯಾದಿ ಸಹಿತ.
ಅನುವಾದಕ:— ಶ್ರೀ| ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ. ಸಮಗ್ರ ಗ್ರಂಥವು ಏಳು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦; ರಫ್ ಪ್ರತಿ ರೂ. ೨-೦-೦. ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ. ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ. ಆದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀ ತುಳಸೀದಾಸ ರಾಮಾಯಣ ಕಾರ್ಯಾಲಯ
(ಕಾ) ೧೭೨ ಚಾಮರಾಜಪೇಟೆ, ೪ನೇ ಬೀದಿ,
ಬೆಂಗಳೂರು ಸಿಟಿ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ
ಜೋಗಿಗೆ
ರೆಗ್ಯುಲರ
ಸರ್ವೀಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಸಿರ್ಸಿ, ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ– ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತ್ತದೆ ಪ್ರಯಾಣಿಕರಿಗೆ ಉಳಕೊಳ್ಳುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ವಸ್ತಿ ಏರ್ಪಾಡು ಮಾಡಿದೆ, ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

S. U. Narayanacharya & CO.
Chaukamba, BENARES CITY,



ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಥರವಾರ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲೆಗಳು ಸಿಗುತ್ತವೆ. ಕ್ಯಾಟಲಾಗು ಕೋರುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ—ಶಿರೋಳ ಎಸ್. ಉ. ನಾರಾಯಣಾಚಾರ್ಯ,,
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೆಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ
ದ್ರಾಕ್ಷಾರ್ಕಮಧು
ರಕ್ತಶುದ್ಧಿ ಮತ್ತು ಧಾತುವೃದ್ಧಿ ಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತ್ತದೆ. ಈ ಮಧುವಿನ ಸೇವನೆಯಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು ೬೦-೭೦ ವರ್ಷದ ಮುದುಕರ ಕಾಮವಿಕಾರ ಕೂಡ ತರುಣರಂತೆ ವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ನಾಶವಾದ ಸ್ವಪ್ನಸ್ಖಲನವು ಇಲ್ಲದಂತಾಗುವದು. ಮೂತ್ರವಿಸರ್ಜನದ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ ವೀರ್ಯವು ಬಂದಾಗುವದು.— ಪರಮಾ ಹಾಗೂ ಕಾವಿನಿಂದ ದೂಷಿತವಾದ ಶರೀರವು ನಿರ್ದೋಷವಾಗುವದು. ಕೂಡಲೆ ದಿವಸದಲ್ಲಿಗುಣಬರುವದು. ತರುಣ ಸ್ತ್ರೀ-ಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಅದರೊಳಗಿನ ಗುಣ ಪರೀಕ್ಷೆ ಮಾಡಬೇಕು. ಇದರಿಂದ ಕ್ಷಯರೋಗ ಉದರರೋಗ ಮೊದಲು ಇವುಗಳು ನಾಶವಾಗುವವು ದಿವಸದಲ್ಲಿ ಮೂರಾವರ್ತಿ ಊಟಮಾಡಿದರೂ ಅನ್ನ ಪಚನವಾಗಿ ಹಸಿವೆ ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ ಬರುವದು. ಕಾಲ ಶುದ್ಧ ಆಗುವದು; ಮೈಯಲ್ಲಿ ಎಷ್ಟೇ ದಿವಸದ ಕಾವು ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. ಹೊಸ ಜೀರ್ಣ ಇದ್ದರೆ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣಬರುವದು. ಹಳೇ ರೋಗವಿದ್ದರೆ ೩ ಬಾಟಲಿಯಿಂದ ಗುಣಬರುವದು. ಒಂದು ಬಾಟ್ಲಿಯ ಕಿಮ್ಮತು ೧| ರೂಪಾಯಿ. ಮೂರು ಬಾಟಲಿಯ ಕಿಮ್ಮತ ೩—೦-೦ ಮೂರು ಬಾಟಲಿಗಳನು ಒಂದೇ ಪಾರ್ಸಲಿನಲ್ಲಿ ಕಳಿಸುವೆವು. ಅಂದರೆ, ಟಪಾಲ ಖರ್ಚ ಹೆಚ್ಚು ಬೀಳುವದಿಲ್ಲ. ಹನ್ನೆರಡು ಬಾಟಲಿಗಳ ಕಿಮ್ಮತು ೧೨—೦—೦ ಮತ್ತು ೧ ಬಾಟಲ ಪುಕ್ಕಟ ಕೊಡುವದು. ಟಪಾಲ ಖರ್ಚ ಬೇರೆ ಬೀಳುವದು. ಏಜಂಟರ ಕಡೆಯಿಂದ ಒಂದು ಬಾಟ್ಲಿಗೆ ೧-೪-೦ ೩ ಬಾಟ್ಲಿಗೆ ೩-೮-೦ ಹನ್ನೆರಡಕ್ಕೆ ೧೩-೮-೦

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

झंडूचें

द्राक्षासव - मद्रिकारिष्ट - शारंगधर म. अ. १०

शमबाण औषध

सर्दि घालविणारे
भूक वाढविणारें
शौच्यास साफ करणारें
झोंप आणणारें
शक्ति देणारें
तेजस्वीपणा आणणारें

पिण्यास रुचिकर

किंमत- एक रत्तल १॥ रुपये.
कॅटलॉग मागवा

झंडु फार्मास्युटिकल वर्क्स लिमिटेड
मुंबई नं: १४

ऐजंट— मेसर्स पंडित आणी कंपनी,
तीर्थहळ्ळी
सिर्सि एजंट- एस. एल. धाकप्पा आणि ब्रदर

ಇಂಗ್ಲಂಡದಲ್ಲಿ ಸಿದ್ಧವಾದ

ರಾಯಲ್ ಆರ್ಚರ

ಸಾಯಕಲ್.

(ಸಾಯಕಲ್ಲಿನ ಪ್ರತಿ ಭಾಗದ ಮೇಲೂ "ಆರ್ಚರ" ಎಂಬ ಗುರುತಿರುವದು)

ಚನ್ನಾಗಿ ಪೆಟ್ಟಿಗೆಯಲ್ಲಿರಿಸಿ ರೇಲ್ವೆ ಚಾರ್ಜು ತುಂಬಿ ನಿಮ್ಮೂರ ಸ್ಟೇಶನ ಮೇಲೆ

೮೫ ರೂ. ೮ ಆ ಗೆ ಮಾತ್ರ.



ಇದರ ಕೂಡ ಡನ್‌ಲಾಪ್ ಕಾರ್ಡ ಟಾಯರ್ಸ, ಫ್ರೀವ್ಹೀಲ, ೨ ರಿಮ್ ಬ್ರೇಕ್ಸ, ಮಡಗಾರ್ಡ್ಸ, ಸೊಗಸಾದ ಸ್ಪ್ರಿಂಗಸೀಟ, ರಬರ ಪ್ಯಾಡಲ್ಸ, ಲೂಕಸ್ಸಿನ "ಪಾಥ ಫಾಯಿಂಡರ" ದೀಪ, ಉತ್ತಮ ಘಂಟೆ, ಡನ್‌ಲಾಪ್ ಪ್ಲೇಟೆಡ್ ಪಂಪ, ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಆಯಿಲರ ಕಳಿಸಲಾಗುತ್ತೆ. ಆರ್ಡರಿನ ಕೂಡ ರೂ ೫ ಮುಂಗಡ, ಉಳಿದ ಹಣವನ್ನು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು

ವೆಲಿಂಗ್ಟನ್ ಸಾಯಕಲ್
ಎಂಡ್ ಮೋಟರ ಕಂಪನಿ,
ಮುಂಬಯಿ— ಹಾರ್ನಬೀ ರೋಡ,
ಪುಣೆ— ಅರ್ಸನಲ್ ರೋಡ

ರೇಶ್ಮೆ ವಸ್ತ್ರ ಇನಾಂ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ಪಸಾದ, ರೇಶ್ಮೆ ಸೀರೆ, ಪೀತಾಂಬರ, ಮುಗುಟ, ರವಕೆ ಖಣ, ಎಲವಸ್ತ್ರ ಪೇಟಾ, ಕಾಶ್ಮೀರ್ ಮತ್ತು ಕಾನಪೂರ್ ಶಾಲು, ಧಾವಳಿ, ನಾರ್ಮದಿ, ರುದ್ರಾಕ್ಷಿ, ಸ್ಫಟಿಕ ಸರ, ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ, ಪಚ್ಚ ಕರ್ಪೂರ, ಕೇಶರಿ, ಶಿಲಾಜಿತು, ಅತ್ತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವದು. ಇಪ್ಪತ್ತೈದು ರೂಪಾಯಿ ಕ್ರಯ ಬಾಳುವ ಸಾಮಾನುಗಳಿಗೆ ಆರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮಾಗಿ ದೊರೆಯುವುದು. ಪತ್ತೆ.—

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ,
ದುರ್ಗಾಘಾಟ, ಶ್ರೀ ಕಾಶೀ ಯು. ಪಿ

ಸುಲಭ ಕ್ರಯ! ಸುಲಭ ಕ್ರಯ!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ

(Registered Trade Mark)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ ೯೬ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತದೆ, ಮೂರು ಬೆಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದು

ಬುಡ್ಡಿ ಒಂದಕ್ಕೆ ಕ್ರಯ ರೂ ೦-೪-೦, ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ ರೂ. ೩-೮-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ —ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ ೫೧೦, ಪಾರ್ಕಟೌನ, ಮದರಾಸ

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್ ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ.

ವೀರ್ಯವು ತಿಳುವಾಗವದರಿಂದುಂಟಾದ ರೋಗದ ಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ, ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಪಮಾ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸ್ವಚ್ಛ ಆಗುತದೆ. ಧಾತು ಶುದ್ಧವಾಗಿ ಘಟ್ಟ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದ ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರತಿಸುಖ ಬಯಸುವಂಥವರು ಒಂದಾವರ್ತಿ ತಕ್ಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮುತು ಭಕ್ಷಿಸು "ಮೈಸೂರ ಸ್ಟಾರ್" ಪತ್ರಿಕೆಯಲ್ಲಿ ಮಿಶ್ರಾಸ್ತ್ಯಾ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲೆಯು ೧ ವಡಿ, ರಾತ್ರಿಯು ಭೋಜನಾನಂತರ ೨ ತೊಲೆಯ ಒಂದು ವಡಿಯನ್ನು ತಕ್ಕೊಂಡು ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯ ಅಥವಾ ಆಕಳ ಹಾಲನ್ನು ಕುಡಿಯ ಬೇಕು ಪಥ್ಯವಿಲ್ಲ ಸ್ತ್ರೀವರ್ಜ್ಯವಿಲ್ಲ. ೩೧ ದಿವಸ ಸಾಕಾಗುವಷ್ಟು ೮೮ ತೊಲೆಯ ಒಂದು ಡಬ್ಬಿಗೆ ೫॥ ರೂ ೩ ಡಬ್ಬಿಗೆ ೧೪॥ ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವ್ಹಿ ಪಿ ಖರ್ಚು ಬೇರೆ ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು

ಪತ್ತೆ — **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ ಮಿರಜ.**

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

ಈ ಮದ್ದು ಅತ್ಯಂತ ಅವಶ್ಯವಾದದ್ದು,

ಜಾಳಿಕೆ ತೀರ ಅನುಕೂಲ, ಮನೆತನದವರಂತು ಇಟ್ಟುಕೊಳ್ಳಲೇ ಬೇಕು; ಬಿದ್ದ-ಮುಟ್ಟ ಗಾಯಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತ್ತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Press, Kumta.

REG. NO. B. 1270

MONDAY, OCTOBER 15TH 1923.

ವರ್ಷ ೧೨

ಕಾನಡಾವೃತ್ತ.

THE KANARA NEWS.

ಸಂಚಿಕೆ ೫೩

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.

ಮುಂಚಿಯಲ್ಲಿ ಆಗಾವು,
ರೂಪಾಯಿ 2-4-0.
ಮನೆಯಾರ್ಡರಿಯಿಂದ
ರೂ. 3-0-0.
ವ್ಹಿ. ಪಿ. ಅಂಚೆವೆಚ್ಚ ಸೇರಿ
ರೂಪಾಯಿ ೩-2-0.
ಬಿಡಿ ಸಂಚಿಕೆಗೆ 0-1-0.

ಜಾಹೀರಾತುಗಳ ದರ.

ಕನಡ, ಇಂಗ್ಲಿಷ ಸ್ಮಾಲ ಪ್ಯಾಯಿಕ (೧೨ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-0. ಆ ಸಂತ್ರ ಪ್ರತಿಸಾಲಿಗೆ 0-2-0.

ಹೆಚ್ಚಿಂಗಳ ಸಾಲು ಎಷ್ಟು ದೊಡ್ಡದಿರುವದೋ ೮ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು.

ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷಮ ತಿಳಿಸಲ್ಪಡುವದು

(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೧೫ ನೆ ಅಕ್ಟೋಬರ ಸನ್ ೧೯೨೩ನೇ ಇಸವಿ)

ಹೊಸ ಅಂಗಡಿ! ಹೊಸ ಹೊಸ ಮಾಲು !!

ನಮ್ಮಲ್ಲಿ

ಬೇಕು ಬೇಕಾದ ನಮೂನೆಯ, ಹೊಸ ಹೊಸ ಜಾಡರಿಯ ಸಾಮಾನುಗಳು ಸಿಗುತ್ತವೆ — ಕನ್ನಡಿ ಪೆಟ್ಟಿಗೆಗಳು, ಮೋಟಾರ ಉಪಯೋಗದ ಬೋಲ್ಟುಗಳು, ಪಿನ್ ಪ್ರೊಶರ, ಡಿಸ್ಟ್ರಿಕ್ಟ ಪೆಂಟರ ಸಿಗುತ್ತವೆ ಬಣ್ಣ ಸಿಗುತ್ತದೆ, ಕನ್ನಡಿಯ ಸಾಮಾನುಗಳೂ ಸಿಗುತ್ತವೆ. ಇಲ್ಲಿ ನಮೂನೆಯ ಸ್ಟೇಶನರಿ ಸಾಮಾನು ಸಿಗುವ ದುಕಾನೂ ಇದೇ! ಶಾಯಿಗಳನ್ನು ಇಲ್ಲಿಯೇ ಕೊಂಡುಕೊಳ್ಳಿ !! ಎಲ್ಲಾ ಅಪ್-ಟು-ಡೇಟ ಸಾಮಾನುಗಳೂ ಇಲ್ಲಿ ಸಿಗುತ್ತವೆ! ಎಲ್ಲ ಸಾಮಾನು ಅಗ್ಗ! ಚಿಲ್ಲರೆ ವ್ಯಾಪಾರಸ್ಥರು ಥೋಕ ಮಾಲನ್ನು ಕೊಂಡರೆ, ಸವಲತ್ತು ಸಿಗುತ್ತೆ. ಒಮ್ಮೆ ಗಿರಾಕಿಯಾಗಿ ಲಾಭ ಪಡೆಯತಕ್ಕದ್ದು.

ನಮ್ಮ ಪತ್ತೆ:—

ಕೃಷ್ಣರಾವ ಕೇಶವ ಗ್ಯಾತೊಂಡೆ,
ಆಯರ್ನ ಮರ್ಚಂಟ,
ಕುಮಟಾ (ಉ. ಕನಡ

ಪ್ರೆಸಿಡೆನ್ಸಿ ಪ್ರಾವಿಡೆಂಟ ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್.

ಹೆಡ್ ಆಫೀಸ:— ಅಮೃತ ಬಿಲ್ಡಿಂಗ,
ಬೆಲಾರ್ಡ ಇಸ್ಟೇಟ, ಫೋರ್ಟ, ಮುಂಬಯಿ.
ಸರಕಾರಿ ಭದ್ರತೆ ಅದೆ

ಮನುಷ್ಯನ ಆಯುಷ್ಯಕ್ರಮದಲ್ಲಿ ಎಲ್ಲವೂ ಅನಿಶ್ಚಿತವಿದ್ದರೂ, ಸಾವು ಮಾತ್ರ ಖಂಡಿತವಾಗಿ ಬಂದೇ ಬರುವದು! ಅದ್ದರಿಂದ ಜೀವವಿಮೆ ಇಳಿಸುವ ಅವಶ್ಯಕತೆ ಪ್ರತಿಯೊಬ್ಬನಿಗೂ ಇರುತ್ತದೆ. ಪ್ರತಿಯೊಬ್ಬನೂ ವಿಮೆ ಇಳಿಸಿ ತನ್ನ ಕುಟುಂಬದ ಗೋಳನ್ನು ಕಡಿಮೆ ಮಾಡುವದಕ್ಕೆ ಪ್ರಯತ್ನಿಸಲೇಬೇಕು. ವಿಮೆ ಕಂಪನಿಗಳು ಅನೇಕ ಇರುವವು, ಆದರೆ ಎಲ್ಲಾ ಬಗೆಯಿಂದಲೂ ನಮ್ಮ ಕಂಪನಿಯಷ್ಟು ಉತ್ತಮವೂ ಎಲ್ಲ ಜನರಿಗೆ ಅನುಕೂಲವೂ ಆದ ಕಂಪನಿಯು ಬೇರೆ ಇಲ್ಲಾ. ಪ್ರತಿ ತಿಂಗಳಿಗೆ ಒಂದು ರೂಪಾಯಿ ತುಂಬಲು, ೧೪ ವರ್ಷಗಳಲ್ಲಿ ೨೫೦ ರೂಪಾಯಿಗಳಿಗಿಂತ ಹೆಚ್ಚು ಅಂದರೆ ೫೦೦ ರೂಪಾಯಿಗಳ ತನಕ ಸಿಗುವದು!! ಪ್ರತಿ ತಿಂಗಳಿಗೆ ೨ ರೂಪಾಯಿಗಳಂತೆ ತುಂಬಿ ೧೦ ವರ್ಷ ಮುದ್ದತಿನ ವಿಶೇಷ ಸವಲತ್ತಿನ ಸ್ಪೇಶಲ್ ಪೊಲಿಸಿಗಳನ್ನು ಹೊಂದಲು ಬರುತ್ತದೆ! ಕಂಪನಿಯಲ್ಲಿ ಹೆಂಗಸರಿಗೂ ವಿಮೆ ಇಳಿಸಲು ಬರುತ್ತದೆ, ಡಾಕ್ಟರರ ತಪಾಸು ಇಲ್ಲ! ಎಲ್ಲ ಕಡೆಯಲ್ಲಿಯೂ ಏಜಂಟರು ಬೇಕು! ವಿಶೇಷ ಮಾಹಿತಿಯ ಬಗ್ಗೆ ನಮ್ಮ ಕಂಪನಿಯ ಹಿರೇನ್ಯಾಯ್ಕರ ಮಿ| ಎನ್. ಟಿ. ನಾಯ್ಕ ಆಫೀಸ-ಅಂಕೋಲಾ, ಜಿಲ್ಲಾ ಉ. ಕನ್ನಡ, ಇವರ ಕಡೆಗೆ ಬರೆದುಕೊಳ್ಳಬೇಕು.

ತ್ವರೆ ಮಾಡಿರಿ! ತ್ವರೆ ಮಾಡಿರಿ!!

ಚವತಿಹಬ್ಬದ ಲಾಗಾಯ್ತು
ದೀಪವಾಳಿಹಬ್ಬದ
ವರೆಗೆ ಮಾತ್ರ
ನಮ್ಮ ಅಂದವಾದ
ಶೀಶೆ ಕಟ್ಟಿಗೆಯ ಮಡಚಲಿಕ್ಕಾಗುವಂಥ
ದೇವರ ಮಂಟಪಗಳು
ಕಿಮ್ಮತ್ತು ಕಡಿಮೆ ಮಾಡಿರುತ್ತದೆ.

ನಮ್ಮ ವಿಳಾಸ:—
ದಿ ಕರ್ನಾಟಕ ಟ್ರೇಡಿಂಗ ಕಂಪನಿ,
ಶಾಂತಿ ಭುವನ, ಕಾರವಾರ.

"ಔಷಧ ಸೀಸೆಗಳಿಗಿಂತ ಬರೀ ಜೀವನಕ್ರಮದಿಂದಲೇ ಆರೋಗ್ಯವನ್ನೂ ಸೌಖ್ಯವನ್ನೂ ಸಂಪಾದಿಸಬಹುದು!"

ಆರೋಗ್ಯಚಂದ್ರಿಕೆಯು ನಿಮಗೆ ಮಾಡುವ ಸಹಾಯವೇ ಇದು !

ಆನರೆಬಲ್ ಡಾಕ್ಟರ್ ಯು. ರಾಮರಾವ ಇವರಿಂದ ಪ್ರಕಟಿಸಲ್ಪಡುವ "ಆರೋಗ್ಯ ಚಂದ್ರಿಕೆ" ಎಂಬ ಆರೋಗ್ಯ ಬೋಧಕವಾದ ಮಾಸ ಪತ್ರಿಕೆಯು ನಿಮಗೆ ಆರೋಗ್ಯವುಳ್ಳ ಸುಖಿಗಳಾಗಿ ಜೀವಿಸುವ ಮಾರ್ಗವನ್ನೂ, ಪ್ರಸಿದ್ಧ ಡಾಕ್ಟರುಗಳಿಂದ ಹೊಸದಾಗಿ ಕಂಡುಹಿಡಿಯಲ್ಪಟ್ಟ ರೋಗವಿಚಾರವನ್ನೂ ಬೋಧಿಸುವದು.

ಈ ಆರೋಗ್ಯಚಂದ್ರಿಕೆಯು ನಿಮ್ಮ ಮನೆಯಲ್ಲಿರುವದರಿಂದ, ಬಹುಕಾಲದಿಂದ ಶಸ್ತ್ರಚಿಕಿತ್ಸೆಯಲ್ಲಿಯೂ ಔಷಧಚಿಕಿತ್ಸೆಯಲ್ಲಿಯೂ ನೈಪುಣ್ಯವುಳ್ಳ ಡಾಕ್ಟರರು ನಿಮಗೂ, ನಿಮಗೆ ಆರೋಗ್ಯ ಮಾರ್ಗಗಳನ್ನು ಸುಲಭವಾದ ರೀತಿಯಿಂದ ಬೋಧಿಸುತ್ತ, ಯಾವಾಗಲೂ ನಿಮ್ಮ ಬಳಿಯಲ್ಲಿದ್ದಂತೆ ಭಾವಿಸಬಹುದು.

ಆರೋಗ್ಯಚಂದ್ರಿಕೆ ಯೆಂಬೀ ಮಾಸಪತ್ರಿಕೆಯಲ್ಲಿ ಆಹಾರಕ್ರಮ, ರೋಗನಿವಾರಣೋಪಾಯಗಳು, ಮಕ್ಕಳ ಪೋಷಣೆ, ರೋಗಿಗಳ ಉಪಚಾರಕ್ರಮ, ಗರ್ಭಿಣಿಯರು ಅನುಸರಿಸಬೇಕಾದ ಮಾರ್ಗಗಳು, ಅಂಗಸಾಧನೆಗಳಿಂದಾಗುವ ಪ್ರಯೋಜನಗಳು, ಸೋಂಕು ರೋಗಗಳ ನಿವಾರಣೆ, ಮುಂತಾಗಿ ಅನೇಕ ವಿಷಯಗಳು ಪ್ರಕಟಿಸಲ್ಪಡುವವು. ತಾಯಿಯರು, ಉಪಾಧ್ಯಾಯರು, ಶಾಲೆಯ ಮಕ್ಕಳು, ಆರೋಗ್ಯ ಪ್ರಚಾರಕರು ಮುಂತಾಗಿ ಪ್ರತಿಯೊಬ್ಬರಿಗೂ ತಿಳಿಯಬೇಕಾದ ಆರೋಗ್ಯ ವಿಷಯಗಳು ಇದರಲ್ಲಿರುವವು.

ಆರೋಗ್ಯಚಂದ್ರಿಕೆಯನ್ನು ಸರ್ವದಾ ಮನೆಯಲ್ಲಿರುವ ಗೃಹವೈದ್ಯರಂತೆ ಭಾವಿಸಿರಿ

ವರ್ಷಕ್ಕೆ ಒಂದೂವರೆ ರೂಪಾಯಿಗಳನ್ನು ಮಾತ್ರ ಈ ಕೆಳಗಿನ ವಿಳಾಸಕ್ಕೆ ಕಳುಹಿದರೆ ಕನ್ನಡ, ತೆಲುಗು, ತಮಿಳು, ಇಂಗ್ಲೀಷು ಈ ಯಾವ ಭಾಷೆಗಳಲ್ಲಿಯಾದರೂ ಪ್ರತಿ ತಿಂಗಳಲ್ಲಿಯೂ ನಿಮ್ಮ ಮನೆಯ ಬಾಗಿಲಿಗೆ ಪತ್ರಿಕೆಯು ಬಂದು ಬೀಳುವದು. ಟಪಾಲು ಹಾಸಲು ಕೂಡ ನೀವು ಕೊಡಬೇಕಾಗಿಲ್ಲ.

ಮ್ಯಾನೇಜರ್, ಆರೋಗ್ಯಚಂದ್ರಿಕೆ, 323, ತಂಬುಶೆಟ್ಟಿ ಬೀದಿ, ಮದರಾಸು.

QUESTIONS

asked by M. D. KARKI, Esq M L C

for the next session of the

Bombay Legislative Council

Will the Government be pleased to state ?

RE MR. L. T KARKI

1. (a) Whether their attention has been drawn to the various remarks of Their Lordships of the Bombay High Court in the case of re Laxminarayan Timmana Bhat Karki reported in XXX Bombay Law Reporter, page 1050, (b) if so what action they have taken on them ? (c) if the reply to (d) is in the negative, what action they propose to to take to give effect to the orders of the High Court, (d) whether the completion of the enquiry under section 176 et the Criminal Procedure Code ordered by the High Court was entrusted to the very Disrict Magistrate who had ordered the departmental enquiry against Mr L T Karki on the strength of the report of the District Superintendent of Police, (e) if so, whether the enquiry has been completed by him and whether they will place on the Council table a copy of his report in that behalf?

2 (a) Whether they are aware that a departmental enquiry was instituted by the Collector of Kanara against Mr L T Karki in regard to his action under section 176 of the Criminal Procedure Code as second class magistrate of Supa mahal (b) whether they are aware that the Collector's order instituting such an enquiry has been held by the High Court of Bombay to be improper, illegal and without jurisdiction, (c) whether they are aware that inspite of such clear orders of the High Court, the Collector has again ordered the resumption of the said enquiry, (d) whether that enquiry is completed and, if so, whether a copy of the whole proceedings will be placed on the Council table?

3. (a) Whether Mr. L. T Karki, Mahalkari and Second Class Magistrate, Supa, was suspended for insubordination to the Assistant Collector who was deputed to hold the enquiry, (b) whether they are aware that the reasons for his suspension were held by the High Court to be insufficient and improper (c) whether in view of the ruling of the High Court, Mr L T Karki war reinstated in his office, (d) if not what the reasons for continuing his suspension are ?

4. (a) Whether a revenue departmental enquiry was instituted against Mr L T Karki, second class magistrate, Supa Mahal, for his alleged acts in the course of an enquiry under section 176 of the Criminal Procedure Code (b) whether the said enquiry was started with the approval of Government, (c) if not, whether they approve of the action taken by the Collector in respect of the alleged acts of Mr L T Karki as a magistrate (d) if they do not, whether they intend to intervene in the matter ?

5 (a) Whether a crime has been registered by the police in the Supa police station against Mr L T Karki, second class magistarate of Supa Mahal, (b) if so, when and for what offences, (c) whether these offences were investigated into by the police if so, with what result ?

RE TEMPLE COMMITTEES KANARA

1. Whether each Taluka or Mahal in the District of Kanara has got a Temple Committee to administer the temples in it (b) if not how many Committees there are in the District of Kanara and what the extent of their jurisdiction is c) when each of them came into existence for the first time after the Religious Endowment Act (No XX of 1863) was made applicable to Kanara by Bombay Act No VII of 1865 (d) whether these Committies were created by virtue of any Government Resolution or orders, (e) if so, the number and date of the orders or the resolutions in each case (f) whether they would be pleased to keep the copies of those resolutions or orders on the Council table?

2 (a) The number and name of the temples entrusted to the care of the respective Temple Committees in the district of Kanara, (b) when they were so entrusted and by virtue of what orders or resolutions of Government, (c) whether the orders or resolutions of Government if any, will be placed on the Council table ?

3. (a) Whether it is a fact that the Chairman, Temple Committee, Honavar, addressed a letter to the Collector of Kanara for favouring him with certain information about temples in the month of Jan, 1928 ? (b) if so, whether the Collector supplied the requisite information to him ? if so when, and if not, the reasons therefor ? (c) whether the letter addressed to the Collector by the said Chairman and the Collector's reply, if any, will be placed on the Council table ?

RE BHATKAL PORT PROJECT

1 (a) Whether it is a fact that Mysore Government with a view to take over Bhatkal from British Government and then make it a port town for themselves had effected a Survey to know whether Bhatkal harbour would be made a modern harbour like Bombay or Marmagoâ, (b) if so, when was that and whether it was with their previous consent, (c) whether the report of the survey made by the Mysore Government sent to them for information, (d) if so, whether they would please place a copy of the report on the Council table?

2 (a) Whether is any proposal made by the Mysore Government to British Government to transfer Bhatkal to them, (b) if so, what are terms of the proposal, (c) whether their opinion was called for by the Imperial or Home Government in the matter (d) what opinion was expressed by them in that behalf, (e) whether the proposal of the Mysore Government has been accepted, rejected or is pending consideration, (f) whether they will please place on the Council table the correspondence containing the proposal of the Mysore Government and their opinion on the subject ?

3 (a) Whether they are aware that the Mysore Government has mooted out and prepared a scheme for making Bhatkal a modern port town in the event they get it (Bhatkal) from British Government, (b) if so, when was that prepared and when they became aware of it, (c) whether they are in possession of any document containing the scheme (d) if so, whether they will place that document on the Council table (e) if not, what is the purport of the scheme in brief ?

RE INSPECTOR OF RECORDS; NEW POSTS.

1. (a) Whether two posts for Inspectors of Records have been created, one for the Southern Divison & the other for the Central Division. (b) whether it is a fact that they were given training in the office of

the Commissioner of Settlement of Land Revenue; if so, for what period; (c) the reasons which led to the creation of such posts; (d) the duties of those inspectors and their monthly pay, (e) whether the measure is a temporary or permanent one; (f) whether their main duty or one of their duties is to burn the records or otherwise destroy them, (g) if so, what those records are and why they are being so dealt with?

ನೋಟೀಸು.

ಇದರ ಮೂಲಕ ಯಾವತ್ತೂ ಜನರಿಗೆ ತಿಳಿಯಪಡಿಸುವದೇನಂದರೆ —

ಹೊನ್ನಾವರ ಅರ್ಬನ್ ಬ್ಯಾಂಕ ಎವೊರ್ಡ ನಂಬರ $\frac{9}{16\text{-}6\text{-}27}$ ನೇ ಪ್ರಕರ್ಣದಲ್ಲಿ ಬ್ಯಾಂಕಿನ ಸಾಲದ ಹಣವನ್ನು ಪಣಕೆ ಭಿಕ್ಕಭಟ್ಟನೆಂಬವನು ತೀರಿಸದ್ದರಿಂದ ಅವನ ಜಾಮೀನದಾರರಲ್ಲಿ ಒಬ್ಬನಾದ ನನ್ನ ಮಗ ಶಿವರಾಮನಿಂದ ಆ ಹಣ ವಸೂಲ ಮಾಡುವ ದೆಸೆಯಿಂದ ನನ್ನ ಸ್ವಾರ್ಜಿತವಾದ ಕೆಳಗೆ ಕಾಣಿಸಿದ ಹೊನ್ನಾವರ ಗ್ರಾಮದ ಆಸ್ತಿಯನ್ನು

ಸ ನಂ	ಕ್ಷೇತ್ರ.	ಆಕಾರ
೧೬-೨	೦-೧೬-೦	೨-೫ ೪ ಗದ್ದೆ.
೧೭-೧	೦-೩-೦	೦-೭-೬ ಮನೆ ವ ಹಿತ್ತಲು
೧೭-೨	೦-೦-೨	೦-೧-೦ ಅಂಗಡಿ

ಜಪ್ತ ಮಾಡಿ ಪಂಚನಾಮೆ ಮಾಡಲಾಗಿದೆಂದು ತಿಳಿದುಬರುತ್ತದೆ. ಆದರೆ ಆ ಸೊತ್ತು ಅವನದಲ್ಲ. ಅದರಲ್ಲಿ ಅವನಿಗೆ ಸ್ವತಂತ್ರವಾದ ಹಕ್ಕೇನೂ ಇರುವದಿಲ್ಲ ನಾನು ಅದನ್ನು ಸ್ವಾರ್ಜಿತ ಹಣದಿಂದ ಕೊಂಡು ಸಾವಿರಾರು ರೂಪಾಯಿ ಖರ್ಚು ಮಾಡಿ ದುರುಸ್ತ ಮಾಡಿದ್ದೇನೆ. ಪತ್ರ ಮಾತ್ರ ಅವನ ಹೆಸರಲ್ಲಿ ಬಿನಾಮಿಯಾಗಿ ಮಾಡಿಟ್ಟದೆ. ಸದರೀ ಸೊತ್ತು ನಾನು ಕೊಂಡ ಹಣದಲ್ಲಿ ಅವನದೊಂದು ಕವಡಿ ಸಹ ಸೇರಿರುವದಿಲ್ಲ. ಸದರೀ ಸೊತ್ತಿನ ಹಕ್ಕು ನನ್ನ ಸ್ವಂತ ಹೆಸರಿನಲ್ಲಿ ದಾಖಲಾಗುವ ಬಗ್ಗೆ ಗ್ರಾಮಸ್ತರ ಕಡೆಗೂ ಮುನಿಸಿಪಾಲಿಟಿಯವರ ಕಡೆಗೂ ಅರ್ಜಿ ಮಾಡಿರುವದಲ್ಲದೆ, ನನ್ನ ಮಕ್ಕಳಲ್ಲಿ ಕಲಹವುಂಟಾಗಬಾರದೆಂಬುದೇ ಮೊದಲಾದ ಕಾರಣಗಳಿಂದ ನನ್ನ ಸ್ವಾರ್ಜಿತ ಆಸ್ತಿಗಳನ್ನೆಲ್ಲ ವ್ಯವಸ್ಥೆ ಮಾಡಿದ್ದು ಅದರಲ್ಲಿ ಅದರಲ್ಲಿ ಈ ಆಸ್ತಿ ಸಹ ಸೇರಿದೆ.

ನನ್ನ ವಹಿವಾಟೇ ಬೇರೆ, ಮತ್ತು ಸದರೀ ಶಿವರಾಮನ ವಹಿವಾಟೇ ಬೇರೆ. ಅವನು ನನಗೆ ತನ್ನ ಧಂದೆಯ ಲಾಭನಷ್ಟವನ್ನು ಕೊಟ್ಟೇ ಇಲ್ಲ ಅದನ್ನು ಬೇಡುವ ಕಾರಣವೂ ನನಗಿಲ್ಲ. ಅವನ ಸಾಲ ತೀರಿಸುವ ಜವಾಬದಾರಿಯೂ ನನ್ನದಲ್ಲ. ಹಾಗೂ ಅವನ ಸಾಲಕ್ಕೆ ನನ್ನ ಆಸ್ತಿಗಳೂ ಜವಾಬದಾರವಲ್ಲ. ಹೀಗಿದ್ದು ಅವನ ಸಾಲದ ಬಗ್ಗೆ ನನ್ನ ಸದರೀ ಆಸ್ತಿ ಹಿಡಿದದ್ದು ಗೈರಕಾಯಿದೇಶೀರ ಇದ್ದು ತಪ್ಪು ಆದೆ. ಶಿವರಾಮನಿಗೆ ಅವನ ಉದ್ಯೋಗದ ಬಗ್ಗೆ ನಾನು ಕೊಟ್ಟ ಹಣವನ್ನು ಸಹ ಅವನು ನನಗೆ ಇನ್ನೂ ತಿರುಗಿ ಕೊಟ್ಟಿಲ್ಲ.

ಅದ್ದರಿಂದ ಸದರೀ ಶಿವರಾಮನ ಸಾಲಕ್ಕೆ ನನ್ನ ಆಸ್ತಿಯು ಜಪ್ತ ಆದದ್ದು ಲಿಲಾವು ಆದರೆ, ಅದೂ ಗೈರಕಾಯಿದೇಶೀರ ಇದ್ದು ತಪ್ಪಾಗುತ್ತದೆ. ಆ ಬಗ್ಗೆ ನಮ್ಮ ತಕ್ರಾರ ಅದೆ ಅಂಥ ಆಸ್ತಿಯನ್ನು ಯಾರಾದರೂ ಯಾವ ವಿಧದಿಂದಾದರೂ ಪಡೆದರೆ, ಅದು ಕಾಯಿದೇಶೀರ ಅನಿಸದು; ಮತ್ತು ಸಿಂಧು ಆಗಲಾರದು. ಮತ್ತು ಅದು ನಿಷ್ಫಲವಾದ ವ್ಯವಹಾರಕ್ಕೆ ಕಾರಣವಾದೀತು. ತಿಳಿಯುವದು.

ಕರ್ಕಿ, ತಾ. ೧೦—೧೦—೨೭.

Ganapat Shivaram Hegde.

ಜಗತ್ತಿನ ರಾಮಾಯಣಗಳಲ್ಲೆಲ್ಲಾ ಅತ್ಯಂತ
ಶ್ರೇಷ್ಠವೂ, ಭಕ್ತಿಪ್ರಧಾನವೂ ಆದ
ಶ್ರೀ ತುಳಸಿದಾಸ
ರಾಮಾಯಣ.
ಮದ್ರಾಸಿನ ದಿವಾನ ಮಂತ್ರಿಗಳು ಶ್ರೀ॥ ಎ. ರಂಗನಾಥಂ
ಅವರ ಮುನ್ನುಡಿ ಸಹಿತ
ಸಚಿತ್ರ-ಹಿಂದೀ ಮೂಲ, ಗೂಢಾರ್ಥಕೋಶ
ಇತ್ಯಾದಿ ಸಹಿತ.
ಅನುವಾದಕ — ಶ್ರೀ॥ ದ. ಕೃ. ಭಾರದ್ವಾಜ.

ಜಗತ್ತಿನ ಹಲವು ಭಾಷೆಗಳಲ್ಲಿ ಅನುವಾದಿಸಲ್ಪಟ್ಟಿರುವ ಈ ರಾಮಾಯಣವು ಈಗ ಸುಲಭವೂ, ಲಲಿತವೂ ಆದ ಕನ್ನಡದಲ್ಲಿ ಬರೆಯಲ್ಪಟ್ಟಿದೆ. ಬಾಲಕಾಂಡವು (ಸುಮಾರು ೫೦೦ ಪುಟ) ಶ್ರೀ ತುಳಸೀದಾಸರ ಜೀವನಚರಿತ್ರೆ ಸಹಿತ ಮನೋಹರವಾದ ಬಣ್ಣ ಚಿತ್ರ, ಭಾವಚಿತ್ರಸಹಿತ ಹಿಂದೀ ಮೂಲದೊಂದಿಗೆ ಪ್ರಕಟಿತವಾಗಿದೆ ಸಮಗ್ರ ಗ್ರಂಥವು ನಾಲ್ಕು ಭಾಗಗಳಲ್ಲಿ ಮುಗಿಯುವದು. ಈಗ ತಯಾರಾಗಿರುವ ಬಾಲಕಾಂಡದ ಬೆಲೆ ಗ್ಲೇಜ ಪ್ರತಿ ರೂ. ೨-೮-೦, ರಫ್ ಪ್ರತಿ ರೂ ೨-೦-೦ ಅಂಚೆ ವೆಚ್ಚ ೦-೮-೦ ಪ್ರತ್ಯೇಕ. ಇಷ್ಟು ಅಗ್ಗವಾದ ಪುಸ್ತಕವು ಕನ್ನಡದಲ್ಲಿಲ್ಲ ಪ್ರತಿಗಳು ಜಾಗ್ರತೆ ಮುಗಿಯುವ ಸಂಭವವಿದೆ ಅದ್ದರಿಂದ ಕೂಡಲೆ ಬರೆದು ತರಿಸಿಕೊಳ್ಳಿರಿ.

ಶ್ರೀತುಳಸೀದಾಸ ರಾಮಾಯಣ ಕಾರ್ಯಾಲಯ
(ಕಾ) ೧೭೨ ಚಾಮರಾಜಪೇಟೆ, ೪ನೇ ಬೀದಿ,
ಬೆಂಗಳೂರು ಸಿಟಿ.

ಟಿ. ಎಸ್. ಮೋಟರ ಸರ್ವೀಸ, ಶಿವಮೊಗ್ಗಾ.

ಗೆರಸಪ್ಪಾ
ಜೋಗಿಗೆ
ರೆಗ್ಯುಲರ್
ಸರ್ವೀಸ್

ಶಿವರಾತ್ರಿಯ
ಸಮಯದಲ್ಲಿ
ಗೋಕರ್ಣಕ್ಕೆ
ಸ್ಪೆಶಲ್
ಲಾರಿಗಳು.

(೧) ಹುಬ್ಬಳ್ಳಿ- ಯಲ್ಲಾಪುರ – ಅಂಕೋಲಾ ಕಾರವಾರ- (೨) ಹುಬ್ಬಳ್ಳಿ ಮುಂಡಗೋಡ- ಶಿರ್ಸಿ, ಕುಮಟಾ- ಹೊನ್ನಾವರ ಭಟ್ಕಳ- (೩) ಕುಮಟಾ ಸಿರ್ಸಿ- ಸಿದ್ದಾಪುರ- ಗೆರಸಪ್ಪಾ ಜೋಗ (Gersappa Falls) ಸಾಗರ- ಶಿವಮೊಗ್ಗಾ ಈ ಲೈನುಗಳಲ್ಲಿ ರೆಗ್ಯುಲರ್ ಸರ್ವೀಸ ನಡೆಯುತದೆ ಪ್ರಯಾಣಿಕರಿಗೆ ಅನುಕೂಲವಾಗುವದಕ್ಕೆ ಎಲ್ಲಾ ಸ್ಟೇಶನುಗಳಲ್ಲೂ ಸರಿಯಾದ ಏರ್ಪಾಡು ಮಾಡಿದೆ. ಹೆಚ್ಚಿನ ಮಾಹಿತಿಯನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು

M. Manjappa.
PROPRIETOR.

ಸರಕಾರದಲ್ಲಿ ರಜಿಸ್ಟರ ಆದಂಥ
ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣ ಪದಕಗಳು ಸಂಪಾದಿಸಿದ
ದ್ರಾಕ್ಷಾರ್ಕಮಧು
ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ.

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕರವಾಗಿಯೂ ಇರುತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು [illegible]

ವ್ಯವಸ್ಥಾಪಕ— ದ್ರಾಕ್ಷಾರ್ಕಮಧು ಆಫೀಸ, ಪೋ. ನಿಪ್ಪಾಣಿ, ಜಿ. ಬೆಳಗಾಂವ

ಸುದ್ದಿ ವಿಶೇಷ.

ಸ್ಯಾಮುನ್ ಕಮಿಟಿಯ ವಾರಿ ಶುಕ್ರವಾರಕ್ಕೆ ಮುಂಬಯಿಯಿಂದ ಪುಣೆಗೆ ಹೋಗುವದಿತ್ತು. ಆ ದಿನ ಬಹಿಷ್ಕಾರವಾಗುವದಿತ್ತು. ಅದಕ್ಕಾಗಿ ಮುಂಚಿನ ದಿನ ರಾತ್ರಿಗೇ ಅವರು ಮುಂಬೈಯಲ್ಲಿದ್ದು ಕಳ್ಳರಂತೆ ರಾತ್ರಿ ೧೧ ಘಂಟೆಗೆ ಉಗಿ ಬಂಡಿಹತ್ತಿ ಪುಣೆಗೆ ಹೊರಟುಬಿಟ್ಟರು. ಆದರೂ, ಆ ರಾತ್ರಿಗೆ ಜನರು ಠಾಣೆಗೆ ಹೋಗಿ ಸ್ಯಾಮುವೆಲರಿಗೆ ಬಂದ ಹಾದಿಯಿಂದ ಹಿಂದಿರುಗಲು ಆಜ್ಞಾಪಿಸಿದರು, ಸಾರಿಸಾರಿ ಹೇಳಿದರು.

⁂

ಸ್ಯಾಮುನ್ ಕಮಿಟಿಗೆ ಬಹಿಷ್ಕಾರ ಹಾಕುವದಕ್ಕಾಗಿ ಅಲ್ಲಲ್ಲಿ ದೊಡ್ಡ ದೊಡ್ಡ ಸಭೆಗಳಾಗುತ್ತವೆ. ಮುಂಬಯಿಯಲ್ಲಂತು ದಿನಾ ಒಂದು ಸಭೆ. ಒಂದು ಸಭೆಯಲ್ಲಿ ಸರ್ ಪುರುಷೋತ್ತಮದಾಸ ಠಾಕುರದಾಸರವರು ವೀರೋಕ್ತಿಗಳನ್ನಾಡಿದರು. ಪುರುಷೋತ್ತಮದಾಸರು ನೇಮಸ್ತ ಪಕ್ಷದವರು. "ಈಗಿನ ರಾಜ್ಯಕ್ಕಿಂತ ಅರಾಜಕತೆಯೇ ಲೇಸು" ಎಂದು ಸರ್ ಪುರುಷೋತ್ತಮದಾಸರು ಉದ್ಗರಿಸಿದರು. ನೇಮಸ್ತರಲ್ಲಿ ಸಹ ವೀರಶ್ರೀ ತುಂಬಲು ಕಾರಣವಾದ ಸ್ಯಾಮುನ್ ಕಮಿಟಿಗೆ ಧನ್ಯವಾದಗಳು!

⁂

ಶ್ರೀ|| ಸುಬ್ರಹ್ಮಣ್ಯ ಭಾರತಿ ಎಂಬುವರು ತಮಿಳನಾಡಿನ ಶ್ರೇಷ್ಠ ಕವಿಗಳು. ಇವರು ರಚಿಸಿದ ಪದ್ಯಗಳು ಉಲ್ಲಾಸಕರ, ಪ್ರಾಸಾದಿಕ; ಲೋಕಪ್ರಿಯ. ಈ ಪದಗಳನ್ನು ಮದ್ರಾಸ ಸರಕಾರವು ತಮ್ಮ ಶಾಲೆಗಳಲ್ಲಿ ಕಲಿಸಬೇಕೆಂದಿದ್ದಿತು. ಸುಬ್ರಹ್ಮಣ್ಯ ಅಯ್ಯರರ ಹೆಂಡತಿ ಮಗು ಹುಡಿಗಿಗೆ ಈ ವರೆಗೆ ಜೀವನೋಪಾಯವಿಲ್ಲ; ಈ ಪದ್ಯ ಪುಸ್ತಕಗಳನ್ನು ಮಾರಿ ಹೊಟ್ಟೆತುಂಬಿಕೊಳ್ಳುತ್ತಿದ್ದರು. ಭಗವಂತನ ಲೀಲೆ! ಬ್ರಹ್ಮದೇಶದ ಸರಕಾರಕ್ಕೆ ಈ ತಮಿಳು ಪದ್ಯಗಳಲ್ಲಿ ರಾಜದ್ರೋಹದ ಮುಂಗಾಳಿಹತ್ತಿತು. ಅದು ಈ ಪದ್ಯ ಪುಸ್ತಕಗಳನ್ನು ಜಪ್ತಮಾಡಿತು. ಮದ್ರಾಸ ಸರಕಾರವು ಅದಕ್ಕೆ ಬೆನ್ನಟ್ಟಿದೆ. ಈಚೆಗೆ ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಚರ್ಚೆಯಾಯಿತು; ಮದ್ರಾಸ ಸರಕಾರದ ನಿಷೇಧವಾಯಿತು. ಶಿಕ್ಷಣ ಖಾತೆಯ ದಿವಾನರು ಸರಕಾರದ ಬದಿಗೆ ಮತ ಕೊಡಲಿಲ್ಲ. ಯಾಕಂದರೆ, ಮೊದಲು ಶಿಕ್ಷಣ ಮಂಡಳಿಗಳಲ್ಲಿ ಈ ಪದ್ಯಗಳನ್ನು ಹಚ್ಚಲು ಯೋಗ್ಯವೆಂದು ಶಿಫಾರಸು ಮಾಡಿದವರವರು. ಹೈಕೋರ್ಟಿನ ವಕೀಲರಾದ ರಾ| ಬ| ಭಾಷ್ಯಮ್ ಅಯ್ಯಂಗಾರರವರು ಮದ್ರಾಸ ಸರಕಾರದ ತೀರ್ಮಾನವನ್ನೂ ಪೋಲೀಸರು ಜಪ್ತಿಮಾಡಿ ಒಯ್ದ ಪದ್ಯಪುಸ್ತಕಗಳ ಮೇಲೆ ದಾವೆ ದಾಖಲಮಾಡಿದ್ದಾರೆ. ತಮಿಳ ಪದ್ಯಗಳು ರಾಜದ್ರೋಹದವೆಂದು ಇನ್ನೂ ಮದ್ರಾಸ ಸರಕಾರದ ಅಭಿಪ್ರಾಯವಾಗಿಲ್ಲ. ಬ್ರಹ್ಮದೇಶದ ಸರಕಾರಕ್ಕೆ ಹಮಾಲಿಯಾಗಿ ಮದ್ರಾಸ ಸರಕಾರವು ಪುಸ್ತಕಗಳನ್ನು ಜಪ್ತಮಾಡಿದೆ. ಇದೆಂಥ ಕಾರಭಾರ?!

⁂

ಜೆರುಸಲೆಮದೊಳಗಿನ ಮುಸಲ್ಮಾನ ಜನರಲ್ಲಿ ದೊಡ್ಡ ಗಲಭೆ. ಅಫಘಾನಿಸ್ಥಾನದ ಅಮೀರರೂ, ತುರ್ಕಸ್ಥಾನದ ಕೆಮಾಲ ಪಾಶಾರವರೂ ತಮ್ಮ ರಾಜ್ಯದಲ್ಲಿ ಭಯಂಕರ ಸುಧಾರಣೆ ಮಾಡಿದ್ದಾರೆ. ಉಡಿಗೆ-ತೊಡಿಗೆಗಳಲ್ಲಿಯೂ ಸುಧಾರಣೆ! ಫೆಜ ಟೊಪ್ಪಿಗೆ ಹೋಗಿ ಯುರೋಪಿಯನ್ನರ ಹ್ಯಾಟು ಬಂತು; ಮುಸಲ್ಮಾನ ಹೆಂಗಸರ ಬುರಖೆ ಹೋಯಿತು; ಯುರೋಪಿಯನ್ ಹೆಂಗಸರಂತೆ ಅರ್ಧ ಕೈಯ ಅಂಗಿ, ಮೊಣಕಾಲುತನಕ ಗೌನು ಬಂತು! ಈ ಪ್ರಕಾರ ತೊಟ್ಟುಕೊಳ್ಳದಿದ್ದವರಿಗೆ ಭಯಂಕರ ಶಿಕ್ಷೆ. ಈ ಮಾತು ಅಫಘಾನಿಸ್ಥಾನದಲ್ಲಿ; ತುರ್ಕಸ್ಥಾನದಲ್ಲಿ, ಈ ವೇಷ ಪ್ಯಾಲೆಸ್ಟೈನದಲ್ಲಿ ನಡೆಯುವದಿಲ್ಲ! ಜೆರುಸಲೆಮದಲ್ಲಿ ಇಸ್ಲಾಮು ಗಂಡಸರಾಗಲಿ, ಹೆಂಗಸರಾಗಲಿ ಹೊಸ ವೇಷದಲ್ಲಿ ಬಂದರೆ, ಅವರಿಗೆ ಪ್ರತಿಬಂಧ. ಹೀಗೆ ಉಡಿಗೆ-ತೊಡಿಗೆಗಳಲ್ಲೂ ಸುಧಾರಣೆ; ಅಲ್ಲಿ ವಾದ!

ಬರೋಡೆ ಸರಕಾರವು ಕಾರಭಾರದ ವರದಿಗಳನ್ನು ಈ ವರೆಗೆ ಗುಜರಾಥಿ ಭಾಷೆಯಲ್ಲಿ ಪ್ರಕಟಿಸುತ್ತಿತ್ತು. ಈಗ ಇಂಗ್ಲಿಷಿನಲ್ಲಿ ಪ್ರಕಟಿಸಬೇಕೆಂದು ರಾಜಾಜ್ಞೆ. ಪರದೇಶಗಳಲ್ಲಿ ರಿಪೋರ್ಟುಗಳ ಖಬರಾಗುವದಿಲ್ಲವಂತೆ. ಜರ್ಮನಿ, ಫ್ರಾನ್ಸ ಮುಂತಾದ ದೇಶಗಳು ಇಂಗ್ಲಿಷಿನಿಂದಲೇ ರಿಪೋರ್ಟು ಪ್ರಕಟಿಸುತ್ತವೇನು?

⁂

ಮಿ| ಇಂಗಲಿಸ್ ಹಾಗೂ ಕರ್ನಲ್ ಬೇಕರ ಎಂಬ ಇಬ್ಬರು ಯುರೋಪಿಯರು 'ದಕ್ಷಿಣ ಹಿಂದುಸ್ಥಾನದೊಳಗಿನ ಪಕ್ಷಿಗಳು' ಎಂಬ ಗ್ರಂಥ ಬರೆದಿದ್ದಾರೆ. ಅದರಿಂದ ಒಕ್ಕಲಿಗರಿಗೆ ಬಹಳ ಲಾಭವಾಗುವದಂತೆ. ಮದ್ರಾಸ ಸರಕಾರವು ಅದಕ್ಕಾಗಿ ಈ ಮಹಾನುಭಾವರಿಗೆ ೪೦೦೦ ರೂಪಾಯಿಗಳ ಕಾಣಿಕೆ ಕೊಡಮಾಡಿದೆ. ಈ ಪುಸ್ತಕವು ಸರಕಾರಿ ಖರ್ಚಿನಿಂದ ಅಚ್ಚಾಗುವದು. ಇದರ ಬೆಲೆ ಬಹಳ ಅಲ್ಪ; ಒಂದು ಪವನು ಕೊಟ್ಟರಾಯಿತು. ಈ ಪುಸ್ತಕದಿಂದ ಒಕ್ಕಲಿಗರಿಗೇನೂ ಲಾಭವಿಲ್ಲವಾಗಿ ಮದ್ರಾಸ ಕಾಯಿದೆ ಕೌನ್ಸಿಲಿನ ಸಭಾಸದರಾದ ರಾ| ನಾಗಪ್ಪ ಗೌಡರು ಆಕ್ಷೇಪಿಸಿದರು. ಆದರೂ, ರಕಮು ಮಂಜೂರಾಗಿ ಹೋಯಿತು. ಒಕ್ಕಲಿಗರ ಹಿತದ ಚಿಂತೆ ಮದ್ರಾಸ ಸರಕಾರಕ್ಕೆ ಬಹಳ

⁂

ಡಸಿ ಗ್ರೇಗ ಎಂಬ ವ್ಯವಸಾಯಿಕರು ವಿಮಾನ ವೇಗದ ಪ್ರಯೋಗ ನಡೆಸುತ್ತಿದ್ದಾರೆ. ವಿಮಾನುಗಳ ಹಾರ್ರಾಟದ ವೇಗವನ್ನು ಇವರು ಬೆಳಿಸಿದರು. ತಾಸಿಗೆ ೨೯೮ ಮೈಲು ವೇಗ! ಮೋಟಾರು ೨೫೦ರ ತನಕ ಓಡುತ್ತವೆ. ಹೀಗೆ ವೇಗದಿಂದ ಓಡಿ, ಹಾರಿ ಹೋಗುವದಲ್ಲ?

⁂

ಲೊರ್ಡ ಲ್ಯೊಡರ ಪರಿಚಯವಿದೆ, ಇವರು ಮುಂಬಯಿಯ ಗವ್ಹರ್ನರರಿದ್ದರು, ಇಜಿಪ್ತ ದೇಶದ ಗವ್ಹರ್ನರರಾದರು, ಈಗ ಸ್ವದೇಶಕ್ಕೆ ಮರಳಿದ್ದಾರೆ. ಅಲ್ಲಿ ಗ್ಲೋವ್ಸ ಕಂಪನಿಯವರು ಈ ಮಹಾಶಯರಿಗೆ ಒಂದು ಮೇಜವಾನಿ ಕೊಟ್ಟರು. ಇವರು ಆ ಸಮಯ 'ಇಜಿಪ್ತ ದೇಶದಲ್ಲಿ ಈಗ ಶಾಂತತೆಯಾಗಿದೆ. ತನ್ನ ಕಾಲಕೀರ್ದಿಯೊಳಗಿನ ಅಸಂತೋಷವು ಈಗ ಕಡಿಮೆಯಾಗಿದೆ. ಈ ದೇಶದಲ್ಲಿ ತಯಾರಾಗುವ ಸರಕುಗಳಿಗೆ ಅಲ್ಲಿ ಬಹಳ ಗಿರಾಕಿ ದೊರೆಕಬಹುದು" ಇತ್ಯಾದಿ ನುಡಿದರು. ಬ್ರಿಟೀಶರ ಕಣ್ಣಲ್ಲಿ, ನೋಡಿದಿರಾ? ತಮ್ಮಲ್ಲಿಯ ಸರಕುಗಳಿಗೆ ಗಿರಾಕಿ ಹುಡುಕುತ್ತಿದ್ದಾರೆ!

⁂

ಸ್ಯಾಮುನ್ ಕಮಿಟಿಯವರು ಹಾರ್ಟೋಗ್ ಮಂಡಳವನ್ನೊಂದು ನೇಮಿಸಿದ್ದಾರೆ. ಅದಕ್ಕೆ ಬ್ರಿಟಿಶ ಹಿಂದುಸ್ಥಾನದೊಳಗಿನ ಶಿಕ್ಷಣಕ್ರಮದ ವಿಚಾರ ಮಾಡುವ ಅಧಿಕಾರ ಕೊಡಲಾಗಿದೆ. ಅಹಮದೀಯ ಸಮಾಜದವರು ಇದರ ಬಳಿಗೆ ತಮ್ಮ ಕೈಫಿಯತನ್ನು ಸಾದರಪಡಿಸಿದ್ದಾರೆ. ಅದರೊಳಗಿನ ಒಂದು ವಾಕ್ಯವು ಬ್ರಿಟಿಶ ಶಿಕ್ಷಣದ ಮರ್ಮವನ್ನರುಹುತ್ತದೆ 'ಹಿಂದುಸ್ಥಾನದೊಳಗಿನ ವಿಶ್ವವಿದ್ಯಾಲಯಗಳೆಂದರೆ, ದುರ್ಬಲ ಮಂದಿಗಳನ್ನು ತಯಾರಿಸುವ ದೊಡ್ಡದೊಡ್ಡ ಕಾರಖಾನೆಗಳು. ವಿದ್ಯಾರ್ಥಿಗಳಲ್ಲಿ ಕೆಲಸ ಮಾಡುವ ಸಾಮರ್ಥ್ಯವಿಲ್ಲ. ಅವರಿಗೆ ತಕ್ಕ ಉದ್ಯೋಗ ಸಿಗುವದಿಲ್ಲ. ಜನರಿಗೆ ನೀತಿಭ್ರಷ್ಟವಾಗಲು ಇದು ಒಂದು ಕಾರಣ." ಈ ಕರಿ ಪ್ರತ್ಯಕ್ಷವಿದೆಯಲ್ಲವೇ? ಸ್ಯಾಮುನ್ ಕಮಿಟಿಯು ಆಳವಾಗಿ ವಿಚಾರಿಸಲಿ!

⁂

ಹಿಂದುಸ್ಥಾನದಲ್ಲಿ ಎಲ್ಲಕ್ಕೂ [illegible] ದೇವರ ದಯೆಯಿಂದ ಭರತಭೂಮಿಯಲ್ಲಿ ಸೃಷ್ಟಿಸಂಪತ್ತು ಬೇಕಷ್ಟಿದೆ; ಭಾರತವಾಸಿಗಳಿಗೆ ದಾರಿದ್ರ್ಯ ಮಾತ್ರ ತಪ್ಪಹೋಗುವದಿಲ್ಲ! ಪೆಟ್ರೋಲು ಹಿಂದುಸ್ಥಾನದಲ್ಲಿ ಬೇಕಷ್ಟು ಹುಟ್ಟುತ್ತದೆ. ೫ ರಲ್ಲಿ ೧ ಪಾಲು ದೇಶದಲ್ಲಿ ಬೇಕು. ೪ ಪಾಲು ರಫ್ತಾಗುತ್ತದೆ. ದೇಶದಲ್ಲಿ ಎಣ್ಣೆ ಕೊಳ್ಳಬೇಕಾದರೆ, ಅದಕ್ಕೆ ತೆರಿಗೆ ಕೊಡಬೇಕು; ಪರದೇಶಕ್ಕೆ ಹೋಗುವ ಪೆಟ್ರೋಲ ಎಣ್ಣೆಯಮೇಲೆ ತೆರಿಗೆಯಿಲ್ಲ. ಅಲ್ಲಿ ಎಣ್ಣೆ ಅಗ್ಗ! ನಮ್ಮಲ್ಲಿ ತುಟ್ಟಿ!! ಊರಿಗೆ ಮಾರಿ! ಪರೋಪಕಾರಿ!!

⁂

ಸಿಂಧೂ ನದಿಯ ಕಂದರ ಪ್ರದೇಶದಲ್ಲಿ ಪುರಾತನ ಒಂದು ಊರಿನ ಪತ್ತೆ ಹತ್ತಿದೆ. ಅಲ್ಲಿ ಮನೆಗಳೂ, ರಸ್ತಾದಿಗಳೂ, ಪಾತ್ರೆಗಳೂ, ಶಸ್ತ್ರಾಸ್ತ್ರಗಳೂ, ಮಣ್ಣು ಪಾತ್ರೆಯ ಅಚ್ಚುಗಳೂ, ಕಲಾಕೌಶಲ್ಯ ಸಾಮಗ್ರಿಗಳೂ ದೊರೆತಿವೆ. ಅವುಗಳ ಮೇಲಿಂದ ಭರತಭೂಮಿಯು ಪ್ರಾಕ್ ಕಾಲದಲ್ಲಿ ಬಹಳ ಸುಧಾರಿಸಿದ್ದಿತ್ತೆಂದು ಸರ್ ಆರ್ಥರ ಕೀಥರವರಂಥ ಜಗದ್ವಿಖ್ಯಾತ ಶೋಧಕರು ಅಭಿಪ್ರಾಯಪಡುತ್ತಾರೆ. ಪಾಶ್ಚಾತ್ಯರ ಸುಧಾರಣೆಗೆ ಹಿರಿ ಹಿರಿ ಹಿಗ್ಗುವವರು ಈ ಅಭಿಪ್ರಾಯವನ್ನು ಪರಾಂಬರಿಸತಕ್ಕದ್ದು.

⁂

ಮುಂಬಯಿ ಹ್ಯಾಕೋರ್ಟಿನಲ್ಲಿ ಸತ್ಯಕ್ಕೊಂದು ತೀರ್ಪಾಯಿತು. ಮಿ| ಫೌಲ ಎಂಬವರು ಮೋಟಾರನ್ನು ಬಹಳ ವೇಗದಿಂದ ಓಡಿಸಿದರೆಂದು ಅವರ ಮೇಲೆ ಖಟ್ಲೆಯಾಯಿತು. ಖಟ್ಲೆಯಲ್ಲಿ ರಾ| ರಾಂಗನೇಕರರ ಸಾಕ್ಷಿಯಾಯಿತು. ರಾಂಗನೇಕರರು ಆ ಕಾಲಕ್ಕೆ ಚೀಫ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರಿದ್ದರು. ಖಟ್ಲೆ ಮಿ| ಮೇಥಾ ಎಂಬ ಅವರ ಕೈಕೆಳಗಿನ ಮೆಜಿಸ್ಟ್ರೇಟರ ಮುಂದೆ ನಡೆಯಿತು. ಆರೋಪಿಗೆ ೩೦ ರೂಪಾಯಿ ದಂಡವಾಯಿತು. ಹ್ಯಾಕೋರ್ಟಿನಲ್ಲಿ ರಾ| ರಾಂಗನೇಕರರ ಸಾಕ್ಷಿಯ ಮೇಲೆ ನ್ಯಾ| ಮೂ| ಗಳು ನಂಬಿಕೆಯಿಡಲಿಲ್ಲ. ಸಾಕ್ಷಿ ಕೊಟ್ಟ ಪ್ರಾಕೃತರ ಮೇಲೆ ನಂಬಿದರು, ಆರೋಪಿಗೆ ಬಿಟ್ಟುಕೊಟ್ಟರು. ಹ್ಯಾಕೋರ್ಟಿನಲ್ಲಿ ನ್ಯಾಯವಿದೆ!

⁂

ಶ್ರೀ| ಸುಭಾಷಚಂದ್ರ ಬೋಸರವರು ನಾಗಪುರದಲ್ಲಿ ಒಂದು ಉಪನ್ಯಾಸವನ್ನಿತ್ತರು. "ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸಿದರೆ ಹಿಂದುಸ್ಥಾನಕ್ಕೆ ಬೇಕಾದ್ದು ಸಿಗಬಹುದು ಕಾರಣವಿದೆ. ಇಂಗ್ಲಿಷರ ಸಾಮ್ರಾಜ್ಯದಲ್ಲಿ ಗೊಂದಲ ಬೇಡ, ಸಖ್ಯಕ್ಕೆ ದೊಡ್ಡ ಯುದ್ಧವಾಗುವದಿದೆ! ಬ್ರಿಟಿಶ ಸರಕುಗಳಿಗೆ ಬಹಿಷ್ಕಾರವಾದರೆ ಅಲ್ಲಿಯ ಕಾಮಗಾರರು ಹೊಟ್ಟೆಗಿಲ್ಲದೆ ಬಳಲುವರು. ಅವರಿಗೆ ಸಮಾಧಾನ ಮಾಡಲು ಬ್ರಿಟಿಶರಿಗೆ ಉಪಾಯವಾಗುವದಿಲ್ಲ." ಎಂಬ ಸಾರ್ಥಕ ಮಾತುಗಳು ನುಡಿದರು. ಜನರು ಕೇಳತಕ್ಕ ಮಾತು! ಅನುಸರಿಸತಕ್ಕ ವಿಷಯ!

⁂

ಬೆಂಗಳೂರಿನಲ್ಲಿ ಒಂದಿಲ್ಲೊಂದು ಗಡಿಬಿಡಿ. ಗಣಪತಿ ಮೂರ್ತಿಯ ಗೊಂದಲದ ವಿಚಾರ ನಡೆದಿದೆ. ಅಬ್ಬಾಸ ಖಾನರವರ ಮನೆಯೊಳಗಿಂದ ಗುಂಡು ಹಾರಿದ ಪುರಾವೆ ಸಹ ಸಿಗಹತ್ತಿದೆ. ಪೋಲೀಸರು ಬುದ್ಧ್ಯಾ ಅಲಕ್ಷ ಮಾಡಿದ ಸಂಗತಿ ಸಹ ಹೊರಬಿದ್ದಿದೆ. ಮಧ್ಯದಲ್ಲಿ ಮುಸಲ್ಮಾನರೊಳಗೆ ಇತ್ತಂಡಗಳಾಗಿ ಬಡಿದಾಟವಾಯಿತು. ಇಬ್ಬರು ಜಖಮಿಯಾದರು, ಒಬ್ಬಗೆ ಭಯಂಕರ ಅಪಾಯವಾಗಿದೆ.

⁂

— ಮುಂಬಯಿ ಮುನಿಸಿಪಾಲಿಟಿಯ ಇಲೆಕ್ಷನ ಬಂತು! ಮತದಾರರ ಯಾದಿ ತಯಾರಾಗಿದೆ. ಯಾದಿ ತಯಾರಿಸುವದಕ್ಕಾಗಿ ೬೦೦೦೦ ರೂಪಾಯಿ ಖರ್ಚು! ಮೃತಾತ್ಮರ ಹೆಸರುಗಳು ಇನ್ನೂ ಯಾದಿಯೊಳಗಿಂದ ಅದೃಶ್ಯವಾಗಿಲ್ಲ. ಹಲವು ಜೀವಂತ ಮತದಾರರ ಹೆಸರುಗಳು ಕಾಣುವದಿಲ್ಲ! ಹಣವಂತು ಖರ್ಚಾಯಿತು. ಅದರಿಂದ ಯಾದಿ ತಯಾರಿಸುವದಕ್ಕಾಗಿ ಮುನಿಸಿಪಾಲಿಟಿಯ ಕಾರ್ಯಕಾರಿ ಮಂಡಳಕ್ಕೆ ಬಹಳ ಪರಿಶ್ರಮವಾಯಿತೆಂದು ತಿಳಿಯುತ್ತದೆ.

⁂

— ವಿಲಾಯತಿಯೊಳಗಿನ ಮೋಟಾರು ಬೆಳೆಯು ೫ ವರುಷಗಳಲ್ಲಿ ಇಮ್ಮಡಿಯಾಯಿತು. ೧೯೨೩ ನೇ ಇಸ್ವಿಯಲ್ಲಿ ೬೬೪೯೬ ಹೊಸ ಮೋಟಾರುಗಳು ಹುಟ್ಟಿದವು. ಈಗ ೧೨೫೦೦೦ ಮೋಟಾರು ಹುಟ್ಟುತ್ತವೆ. ಜನರ ವೈಭವಕ್ಕೇನು ಕೊರತೆಯಿಲ್ಲ

ಸಾಬರಮತಿಯ ಆಶ್ರಮದಲ್ಲಿ ಒಂದು ಕರುವಿಗೆ! ಹಿಂಸೆಯೊಂದು ಮಹಾತ್ಮರ ಮೇಲೆ ಆರೋಪ! ಅಹಿಂಸೆಯಂತು ಮಹಾತ್ಮರ ಪ್ರತಿಪಾದನೆ. ಸಂಗತಿ ಹೀಗೆ.— ಮಹಾತ್ಮರ ಆಶ್ರಮದಲ್ಲಿ ಗೋಸೇವಾ ಸಂಘವಿದೆ. ಈ ಸಂಘದವರು ಒಂದು ಗೋಶಾಲೆಯನ್ನಿಟ್ಟಿದ್ದಾರೆ. ಸತ್ತ ದನಗಳ ಚರ್ಮದ ಹದ ಮಾಡುವ ಶಾಲೆಯನ್ನೂ ನಡೆಸಿದ್ದಾರೆ. ಒಂದು ಕರುವಿಗೆ ಅಪಘಾತ ಸಂಭವಿಸಿತು. ಆ ಕರು ಬಹು ಯಾತನೆಗಳನ್ನು ಅನುಭವಿಸಿತು. ಗೋಶಾಲೆಯವರು ಪರಿಪರಿಯ ಉಪಚಾರ ಮಾಡಿ ನೋಡಿದರು; ಪಶುವೈದ್ಯರ ಚಿಕಿತ್ಸೆಯೂ ನಡೆಯಿತು; ಆದರೂ ಕರುವಿನ ವೇದನೆಗಳು ಪರಿಹಾರವಾಗಲಿಲ್ಲ. ಕರು ಬದುಕುವದಿಲ್ಲವಾಗಿ ವೈದ್ಯರು ಅಭಿಪ್ರಾಯಪಟ್ಟರು. ಕರುವಿಗೆ ಒಂದು ಬದಿಯಿಂದ ಇನ್ನೊಂದು ಬದಿಗೆ ಸರಿಯುವದು ಕೂಡ ಕಷ್ಟವಾಯಿತು. ಆ ಕರುವಿಗೆ ಈ ವೇದನೆಗಳಿಂದ ತಪ್ಪಿಸುವ ಬಗೆ ಹೇಗೆ? ಮಹಾತ್ಮರು ವಿಚಾರ ಮಾಡಿದರು; ಆಳವಾಗಿ ವಿಚಾರ ಮಾಡಿದರು. ಹಲವು ಮಾರ್ಗವಿಲ್ಲ. ಅದಕ್ಕೆ ಒಂದು ಉಪಾಯ ಕಾಣಲಿಲ್ಲ. ಹೇಗೂ ಅದಕ್ಕೆ ಆಯುರ್ದಾಯವಿಲ್ಲವೆಂದು ವೈದ್ಯರ ಮತವಾಗಿದೆ. ಇನ್ನು ಇದು ಹ... ದುಃಖದೆಂಬುದು ... ಅದಕ್ಕೆ ಕೊಂದು ಹಾಕಿಬಿಟ್ಟರೆ, ಅದರ ವೇದನೆಗಳು ಪರಿಹಾರವಾಗುವವೆ? ಮಹಾತ್ಮರು ಗೋಸೇವಾ ಸಂಘದ ಕಾರ್ಯಕಾರಿ ಮಂಡಳದವರೊಡನೆ ವಿಚಾರಿಸಿದರು. ಎಲ್ಲರೂ ಮಹಾತ್ಮರ ಅಂಬೋಣಕ್ಕೆ ತಲೆದೂಗಿದರು. ಆಶ್ರಮದಲ್ಲಿ ವಿಚಾರಕ್ಕಾಗಿ ಈ ವಿಷಯವನ್ನಿಟ್ಟರು. ಒಬ್ಬರು ವಿರೋಧಿಸಿದರು- "ನಮ್ಮಿಂದ ಪ್ರಾಣಿಗಳಿಗೆ ಹುಟ್ಟಿಸಲಿರುವದಿಲ್ಲ; ಆದರಿಂದ ಅದನ್ನು ಕೊಲ್ಲಲಾಗದು. ನಾನು ಅದಕ್ಕೆ ಉಪಚಾರ ಮಾಡಲು ಮುಂದಾಗುತ್ತೇನೆ; ಅದರ ಮೈಮೇಲೆ ಕೂತ್ರಿನ ನೊಣಗಳನ್ನು ಓಡಿಸುತ್ತೇನೆ; ಅದರ ಪೋಷಣೆ ಮಾಡುತ್ತೇನೆ," ಎಂದು ನುಡಿದರು. ಇದರಿಂದ ಕರುವಿನ ಯಾತನೆಗಳು ತಪ್ಪುವದಿಲ್ಲೆಂಬ ಮಹಾತ್ಮರ ಅಭಿಪ್ರಾಯವು ಬಿತ್ತು. ಆಶ್ರಮದಲ್ಲಿ ಕರುವನ್ನು ಕೊಲ್ಲುವ ಮಹಾತ್ಮರ ವಿಚಾರಕ್ಕೆ ಎಲ್ಲರೂ ತಲೆದೂಗಿದರು. ವಿಷಪ್ರಯೋಗ ಮಾಡಿ ಕರುವಿನ ಐಹಿಕ ಯಾತನೆಗಳ ಪರಿಹಾರವಾಯಿತು. ಈಗ ಈ ವಿಷಯದ ದೊಡ್ಡ ಚರ್ಚೆ! ಸ್ವಾರ್ಥಕ್ಕಾಗಿ ಈ ಹಿಂಸೆಯಾಗಲಿಲ್ಲ; ಕಾರಣ ಇದು ಅಹಿಂಸೆಯೇ ಸರಿ' ಎಂದು ಮಹಾತ್ಮರು ವಾದಿಸುತ್ತಾರೆ.

⁂

ಮಹಾತ್ಮರಿಗೊಂದು ಬೇಡಿಕೆ! ಆಶ್ರಮದ ತೋಟದಲ್ಲಿ ಬೆಳೆದ ಬೆಳೆಯನ್ನು ಮಂಗಗಳು ಹೇಳದೆ ಕೇಳದೆ ತಿನ್ನುತ್ತವಂತೆ! ಬಾಣದಿಂದ ಹೊಡೆದು ಅಟ್ಟುವ ರೂಢಿಯೊಂದು ಅಲ್ಲಿದೆ. ಇದು ಮಹಾತ್ಮರಿಗೆ ಸ್ವಾಸ್ಥ್ಯವಿಲ್ಲ. ಇದರಿಂದ ಮಂಗಗಳಿಗೆ ಪೆಟ್ಟಾಗುತ್ತದೆ; ಅಹಿಂಸೆ ತತ್ತ್ವಕ್ಕೆ ಬಾಧೆ ಬರುತ್ತ ; ಎಂದು ಮಹಾತ್ಮರ ಅಂಬೋಣ! ಕೊಲ್ಲಲಿಕ್ಕೆ ಅವಕಾಶವಿಲ್ಲ. ನಮ್ಮ ಸ್ವಾರ್ಥಕ್ಕಾಗಿ ಮಂಗಗಳಿಗೆ ಕೊಲ್ಲುವದು ಹಿಂಸೆ; ಅದಾಗಬೇಡೆಂದೆನ್ನುತ್ತಾರೆ. ಫಲಗಳ ರಕ್ಷಣೆಯಾಗಬೇಕು. ಮಂಗಗಳ ಉಪದ್ರವವಾಗಬಾರದು; ಒಂದು ಯುಕ್ತಿ ಹೇಳಿರೆಂದು ಮಹಾತ್ಮರು 'ನವಜೀವನ'ದಲ್ಲಿ ಪ್ರಕಟಿಸುತ್ತಾರೆ. ಅದರೊಂದು ಮಾತು ನಮೂದಿಸಿದ್ದಾರೆ: ಜಗತ್ತಿನ ಮೇಲಿನ ಜೀವನವೆಲ್ಲ ಒಂದಿಲ್ಲೊಂದು ಹಿಂಸೆಯಿಂದಲೇ ನಡೆದಿದೆ. ಮಾನವ ದೇಹದ ಹುಟ್ಟುಗುಣವೇ ಹಿಂಸೆ. ಆದರಿಂದ ತೀರ ಕಡಿಮೆ ಹಿಂಸೆಯಾಗಿ ಮಂಗಗಳಿಗೆ ಓಡಿಸುವ ಉಪಾಯ ಮಹಾತ್ಮರಿಗೆ ಬೇಕು. 'ಅಕ್ಕಿ ಸರಿಯಾಗಬಾರದು; ಅಕ್ಕನ ಮಕ್ಕಳು ಬಡವಾಗಬಾರದು.' ಮಂಗಗಳಿಗೆ ಆಶ್ರಮದ ಹಿತ್ತಲನ್ನು ದಾನಕೊಡಬಹುದೆಂದು ಪ್ರಾಪಂಚಿಕರದೊಂದು ಸೂಚನೆ!

∴

ಲಾಹೋರ ಪಟ್ಟಣದಲ್ಲಿ ಕ್ಷಯ ರೋಗ ಚಿಕಿತ್ಸಾಲಯ ಸ್ಥಾಪಿಸುವ ಸಂಕಲ್ಪವಾಗಿದೆ. ಲಜಪತರಾಯರು ಪ್ರಮುಖ ಪ್ರವರ್ತಕರು. ಇವರು ತಮ್ಮ ತಾಯಿಯ ಸ್ಮಾರಕಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಗೆಳೆಯರ ಕಡೆಯಿಂದ ರೂ. ೧ ಲಕ್ಷ ಕೂಡಿಸಿದ್ದಾರೆ. ಇನ್ನೊಂದು ಲಕ್ಷ ಬೇಕಂತೆ! ಔದಾರ್ಯವಂತರು ನೆರವಾಗಬಹುದು.

◆

ಶಾಸ್ತ್ರೋಕ್ತ ಪದ್ಧತಿಯಿಂದ ತಯಾರಿಸಲ್ಪಟ್ಟ
ಆಯುರ್ವೇದಿಕ] ಅನುಭವಿಕ ಔಷಧಗಳು! [ಮಲಬಾರಿ ಕೃತಿ!

೧. **ಮದನಕಾಮೇಶ್ವರಿ ಲೇಹ**- ಧಾತುಪುಷ್ಟಿಕ, ವೀರ್ಯ—ಶಕ್ತಿವರ್ಧಕ. ಕಾಮೋತ್ತೇಜಕ.
೨. **ಮದನಕಾಮೇಶ್ವರ**- ಗುಣ ಮೇಲಿನಂತೆ. ತ. ೧ ಕ್ಕೆ ೨ ರೂ. ೩ ಕ್ಕೆ ೫ ರೂ [ಪ. ೧ ಕ್ಕೆ ೨।। ರೂ.
೩. **ಉಪದಂಶ- (ಗರ್ಮಿ) ರೋಗಕ್ಕೆ ಮಾತ್ರೆ**. ಇಂದ್ರಿಯದ ಹುಣ್ಣು, ಎಂಥಾ ಭಯಂಕರ ತರದ ಕಠಿಣ ರೋಗವಾದರೂ ಮರಣೋನ್ಮುಖ ಸ್ಥಿತಿಯಲ್ಲಿದ್ದವರೂ ೭-ದಿವಸದಲ್ಲಿ ಗುಣ ಹೊಂದುವರು.
೪. **ಗರ್ಮಿ ರೋಗಕ್ಕೆ ಮಲಮು**- ಈ ರೋಗದ ಯಾವದೇ ತರದ ವ್ರಣ (ಹುಣ್ಣು) ೩ ದಿನಕ್ಕೆ ಗುಣ.
೫. **ಯೋಗರಾಜ ಗುಗ್ಗುಳ**- ಅರ್ಧಾಂಗವಾತ, ಕೋಷ್ಟವಾತ, ಸಂಧಿವಾತ ಇ. ೮೦ ತರದ ವಾತರೋಗಕ್ಕೆ ಸಿದ್ಧೌಷಧ ರೂ. ।।।, ೧।, ೨
೬. **ಕೆಮ್ಮಿನ ಗುಳಿಗೆ**- ಕ್ಷಯ, ದಮ್ಮು, ಕೆಮ್ಮು ಇ. ಮೇಲೆ ರಾಮಬಾಣ. ತ. ೧೦ ಆಣೆ ರೂ. ೧, ೧।।।
೭. **ವಾತ-ಪಿತ್ತ-ಕಫನಾಶಕ ಜುಲಾಬಿನ ಗುಳಿಗೆ**- ೨೫ ರ ತ. ೮ ಆ; ೧೦೦ ಕ್ಕೆ ೧।। ರೂ.
೮. **ಸಂಜೀವನಿ**- ಏಕಾಹಿಕ, ದ್ವ್ಯಾಹಿಕ, ತ್ರ್ಯಾಹಿಕ, ಚಾತುರ್ಥಿಕ, ಸನ್ನಿಪಾತ ಇ. ಜ್ವರಗಳ ಮೇಲೆ. ೨೫ ರ ತ. ೧ ರೂ; ೧೦೦ ರ ತ. ೩ ರೂ.
೯. **ಚಂದ್ರಪ್ರಭಾ ಮಾತ್ರೆ**- ೨೦ ತರದ ಮೇಹ, ಮೂತ್ರದಾಹ, ಅಶ್ಮರಿ, ಧಾತುಕ್ಷಯ, ಸ್ವಪ್ನಾವಸ್ಥೆ, ಇ. ತ. ೨ ರೂ.
೧೦. **ದಂತಮಂಜನ**- ಹಲ್ಲು ನೋವು, ಹುಳ, ರಕ್ತ, ಅಲುಗಾಡುವಿಕೆ ಇ. ಪೂರ್ಣ ಗುಣವಾಗುವವು. ಡ ೨ ಆಣೆ, ೧೨ ಕ್ಕೆ ೨। ರೂ.
೧೧. **ಜಂತುವಿಷ ಔಷಧ**- ಹೊಟ್ಟೆ-ಹುಳಗಳ ಮೇಲೆ ರಾಮಬಾಣ ಪ್ರತಿ ೧ ಕ್ಕೆ ೧।। ಆಣೆ, ೨೫ ಕ್ಕೆ ೧।। ರೂ ೧೦೦ ಕ್ಕೆ ೫। ರೂ.
೧೨. **ಖಜ್ಜಿಯ ಮಲಮು**- ತ ೪ ಆಣೆ, ೧೨ ಕ್ಕೆ ೨।। ರೂ; ಸೂತಶೇಖರ ಮಾತ್ರೆ ಪಿತ್ತಕ್ಕೆ ತ ರೂ. ೧।। ೨।।, ೫
೧೩. **ವಾತಸಂಹಾರಿ ತೈಲ**- ನಾರಾಯಣ ತೈಲ, ಅರ್ಧಾಂಗ ವಾತಾದಿ ಅನೇಕ ವಾತ ರೋಗಕ್ಕೆ ಸಿದ್ಧ ತೈಲಗಳು ಬಾಟ್ಲಿ ರೂ. ೧।।, ೨।।।
೧೪. **ವಾಕ್‌ಸಂಜೀವನಿ ಗುಟಿಕಾ**- ಮಾತು ತಡೆಯುವಿಕೆ, ತೊತ್ತಾಗುವಿಕೆ ಇ. ತ ೨ ರೂ.
೧೫. **ಪುತ್ರಜೀವನ ಲೇಹ**- ಗರ್ಭರಕ್ಷಣವಾಗುವ ಸ್ತ್ರೀಯರಿಗೆ ಸಿದ್ಧೌಷಧವು ತ ೪ ರೂ ೬. ಔಷಧ ಬೇಕಿ; ಅನುಪಾನ ಪಥ್ಯ ಔಷಧದ ಸಂಗಡ, (ಆಯುರ್ವೇದ ಗುಣಧರ್ಮವುಳ್ಳ ಪುಸ್ತಕ ಉಚಿತ) ಇವಲ್ಲದೆ ಅನೇಕ ತರದ ರೋಗಗಳ ಮೇಲೆ ಮಾತ್ರೆ, ಲೇಹ, ಚೂರ್ಣ, ತೈಲ, ಪಾತ್ರೆಗಳ ಬಗ್ಗೆ ಸ್ಟಾಂಪ ಹಚ್ಚಿ ಪತ್ರದ್ವಾರ ಪ್ರತ್ಯಕ್ಷ ತಿಳಕೊಳ್ಳಬಹುದು.

ಪತ್ತೆ:- ಮನೇಜರ, ಆರ್ಯಚಿಕಿತ್ಸಾಮಂದಿರ, ಪೋ. ಚೆಂಡಿಯೆ ತಾ. ಕಾರವಾರ.
ಮುಂಬಯಿ ಏಜಂಟ:- R. C KAMAT, *Teashop, Store Lane, Fort Bombay.*

ಖಾತ್ರಿಯ ತಾಜಾ ಬೀಜಗಳೂ, ಶಶಿಗಳೂ.

ಸೀಮೆ ಹೂ ಬೀಜಗಳು ೧೨ ಪೇಕೆಟ ಗಳಿಗೆ ರೂ. ೬
... ([illegible]) ೨೫ ... ... ೪
ಹೂ ಬಳ್ಳಿಗಳ ಬೀಜಗಳು ೧೨ „ „ ೨।।
ಇಂಗ್ಲಿಷ ತರಕಾರಿ ಬೀಜಗಳು೧೬ „ „ ೪।।
ನಾಟಿ ... ೧೬ „ „ ೨।।
ಸಿಪ್ಪರ ಹಿಕ ೧ ರತ್ತಲಿಗೆ ... „ ೨।।
ಬೆಂಗಳೂರ ಬಿಳೀ ಮೂಲಂಗಿ ಬೀಜ ರತ್ತಲಿಗೆ... ೩।।
ಹರಿವೆ ಸೊಪ್ಪು ೧ ರತ್ತಲಿಗೆ ೪
ಕಬಾರೆ ಪಸಾರೆ ಬೀಜ ೧ ರತ್ತಲಿಗೆ ... ೩
ಜಲೋಕ ಗುಲಾಬಿ ಗಿಡ ೧೨ ಕ್ಕೆ ರೂ. ೫ ರಿಂದ ೧೨
ಹಲೋಕ ಕ್ರೋಟನ್ ಗಿಡ ೧೨ ಕ್ಕೆ .... ೩ ರಿಂದ ೧೨
ಅಂದವಾದ ಹೂ ಗಿಡ (ಜೆರೇನಿಯಂ) ೧೨ ಕ್ಕೆ ... ೩ ರಿಂದ ೬
ಅಲಂಕಾರವಾದ ಎಲೆಗಳುಳ್ಳ ಗಿಡಗಳು ೧೨ ಕ್ಕೆ ... ೨ ರಿಂದ ೧೨
ಕೇರಿನಂತೆ ಬೆಳೆಯುವ ಗಡ್ಡೆ (ಕೆನ್ನಾ) ೧೨ ಗಿಡಕ್ಕೆ ... ೧।। ಯಿಂದ ೩
ಬಳ್ಳಿ ಗಿಡ (ಕ್ರೀಪರ) ೧೨ ಕ್ಕೆ ... ೩ ರಿಂದ ೧೨
ಕಟ್ಟಿದ ಮಾವಿನ ಗಿಡಗಳು ೧೨ ಕ್ಕೆ ... ೧೦ ರಿಂದ ೧೨
ಸೇವು ಗಿಡಗಳು ೧೨ ಕ್ಕೆ... ... ೯ ರಿಂದ ೧೨
ತೆಂಗಿನ ಗಿಡ ೧೨ ಕ್ಕೆ ... ...೧೨ ರಿಂದ ೩೬
೮ ಜಾತಿಯ ಬಾಳೇ ಗಿಡ ೧೨ ಕ್ಕೆ ... ೬
ನಿಂಬೆ ಗಿಡ ೨ ಜಾತಿ, ಕಿತ್ತಳೇ ಗಿಡಗಳು, ಚಕ್ಕೋತ್ರೆ, ದ್ರಾಕ್ಷೆ, ಪೇರಲ, ದಾಳಿಂಬೆ, ಅಂಜೀರ, ರಾಸಬೆರಿ, ಪನ್ನೇರಲ, ಕಂಚಿಕಾಯಿ, ಲಕ್ಕೋಟೆ,
ಈ ಎಲ್ಲ ೧೨ ಗಿಡಗಳಿಗೆ ರೂ. ೬.

ಸೀಮೆ ಆಸ್ಟ್ರೇಲಿಯಾ ಹಣ್ಣಿನ ಗಿಡಗಳು.

ಸೇವು ಹಣ್ಣಿನ ಗಿಡಗಳು ೧೨ ಕ್ಕೆ ರೂ. ೨೪
ಪೀಚೆಸ್, ಪ್ಲಮ್ಸ್, ಪಿಯರ ಗಿಡ ೧೨ ಕ್ಕೆ... ೨೪
ವೆಲಿಂಗಟನ್ ಕಿತ್ತಳೇ ಹಣ್ಣು ೧ ಕ್ಕೆ... ೫
೧ ಬುಟ್ಟಿ ಕುಂಡ ತರಕಾರಿ ...೫ ರಿಂದ ೬
ಕ್ರಿಸಾಂತಿಮಮ್ ಗಿಡ ೧೦೦ ಕ್ಕೆ ... ೧೨
ಡೇಲಿಯಾ ಗಡ್ಡೆಗಳು ೧೨ ಕ್ಕೆ ರೂ. ೬-೯-೧೨
ನೆರಳು ಕೊಡುವ ಕಾಳಿ ಎಲೆಯ ಜಾತಿಯ ನಮೂನೆಗಳಲ್ಲಿ ಪ್ರತಿ ೧೨ ನಮೂನೆಗಳಿಗೆ ರೂ. ೩ ರಿಂದ ೧೨
ಗಡೆಗಳು ೧೨ ಕ್ಕೆ ರೂ. ೨ ರಿಂದ ೮
ಎರೊಕೇರಿಯಾ ಕುಕ್ಕಿ ೧೨ ಗಿಡಗಳಿಗೆ ರೂ. ೬—೧೨—೨೪
ಅಲಂಕಾರವಾದ ಗಿಡ ೧೨ ಕ್ಕೆ ... ೪ ರಿಂದ ೬

ಟೀಪು:- ಅರ್ಧಕ್ಕೆ ಕಡಿಮೆಯಾಗದಂತೆ ಹಣವನ್ನು ಮುಂಗಡ ಕಳಿಸಿ ಆರ್ಡರು ಕೊಡಬೇಕು.

ಎಮ್. ದೇವಪ್ಪ ಎಂಡ್ ಸನ್ಸ,
ಫಲ-ಪುಷ್ಪಗಳ ಹಾಗು ಬೀಜಗಳ ವರ್ತಕರು, ಬೆಂಗಳೂರು ಸಿಟಿ.

ಕಾನಡಾ ವೃತ್ತ.

ಮಿತಿ ವಿಭವ ಸಂ। ಅಶ್ವಿಜ ಶು। ೨ಗೆ ಸೋಮವಾರ

ಈಗಿನ ಕಾರ್ಯ.

ಹಿಂದುಸ್ಥಾನದಲ್ಲಿ ಈಗ ದೇಶತುಂಬ ಚರ್ಚೆ ನಡೆದಿದೆ. ಸ್ವಾತಂತ್ರ್ಯ ಸಾಮ್ರಾಜ್ಯ ಸ್ವಾತಂತ್ರ್ಯ, ಸಾಯಮನ್ನರ ಅನುಗ್ರಹ ಸಂಪಾದನೆ ಮುಂತಾದ ಕ್ರಮಗಳು ನಡೆದಿವೆ ಮೂರೂ ಪಕ್ಷಗಳ ಧ್ಯೇಯವೊಂದೇ; ದೇಶೋದ್ಧಾರ ಮಾಡಲು ಅಥವಾ ದೇಶೋದ್ಧಾರದ ನೆವದಿಂದ ಮೂವರೂ ತಮ್ಮ ತಮ್ಮ ವಾದಗಳನ್ನು ಮುಂದೊಡ್ಡುತ್ತಾರೆ ಸಾಮ್ರಾಜ್ಯಸರಕಾರದ ಮರ್ಜಿ ಕಾಯ್ದುಕೊಂಡರೆ ಮಾತ್ರ ಹಿಂದುಸ್ಥಾನದ ಉದ್ಧಾರವಾಗುವಂತಿದೆ ಆದ್ದರಿಂದ ಸಾಯಮನ್ನ ಕೂಟದ ಆದರಾತಿಥ್ಯವನ್ನು ಮನಗಾಣಿ ನಾವು ಮಾಡತಕ್ಕದ್ದು ಆದರ ಬಳಿಕ ಆತ್ಮೋದ್ಧಾರದ ಕಲ್ಪನೆಗಳನ್ನು ಹೇಗೆ ತಮ್ಮ ಸುಖ ಸಾಧಿಸಬೇಕು, ಎಂದು ಹಲವರು ಹೇಳುತ್ತಾರೆ ಈ ಪಕ್ಷವು ನಿರ್ಬಲವು ಇವರು ಆತ್ಮಹಿತಕ್ಕಾಗಿ ಪರರ ಮೇಲೆ ಅವಲಂಬಿಸಿರುವವರು ಸಾಯಮನ್ನ ಕೂಟವಾಗಲಿ, ಬೇರೆ ಯಾವದೇ ಕೂಟವಾಗಲಿ, ಹಿಂದುಸ್ಥಾನಕ್ಕೆ ಸ್ವರಾಜ್ಯದಾನ ಮಾಡುವದೆಂದು ತಿಳಿಯುವದು ತೀರ ತಪ್ಪು! ಪರರ ಬಾಯಿಯಿಂದ ಅನ್ನ ಉಂಡು ನಮ್ಮ ಹೊಟ್ಟೆ ತುಂಬಿಸಿಕೊಳ್ಳುವ ಉಪಾಯವನ್ನು ಪ್ರಾಣಿಶಾಸ್ತ್ರ ಸಂಶೋಧಕರು ಇನ್ನೂ ಕಂಡುಹಿಡಿಯಲಿಲ್ಲ ಕಾರಣ ಸಾಯಮನ್ ಕೂಟದ ಅನುಗ್ರಹ ಸಂಪಾದನೆಯಿಂದ ಸಾಧಿಸುವ ದೇಶೋದ್ಧಾರದ ಕಲ್ಪನೆಯನ್ನು ಹೆಚ್ಚಿನ ವಿಚಾರ ಮಾಡದೆ ಒಮ್ಮೆಲೇ ಯಾರೂ ತ್ಯಜಿಸಿಬಿಡುವರು

ಇನ್ನು ೨ ಪಕ್ಷಗಳುಳಿದವು ಶ್ರೀ। ಶ್ರೀನಿವಾಸ ಅಯ್ಯಂಗಾರ ಪ್ರಭೃತಿ ರಾಷ್ಟ್ರೀಯರ ಸ್ವಾತಂತ್ರ್ಯ ಪಕ್ಷ ಪಂಡಿತ ಮೋತಿಲಾಲ ನೆಹರು ಪ್ರಭೃತಿ ವ್ಯಾವಹಾರಿಕ ರಾಜಕಾರಣಿಗಳ ಸಾಮ್ರಾಜ್ಯ ಸ್ವರಾಜ್ಯ ಪಕ್ಷ ಎರಡೂ ಪಕ್ಷಗಳಲ್ಲಿ ಒಂದು ಮಾತು ಸಿದ್ಧವಿದೆ ಹಿಂದುಸ್ಥಾನದ ರಾಜ್ಯಕಾರಭಾರವು ಬ್ರಿಟಿಶರ ಕೈತಪ್ಪಿ ಭಾರತೀಯರ ಸ್ವಾಧೀನವಾಗುವದು, ಭರತಖಂಡದಲ್ಲಿ ಭಾರತೀಯರು ಈಗಿನಂತೆ ಪರಸ್ಥರಾಗದಿರುವದು, ಹಿಂದೀಯರಿಗಾಗಿ ಹಿಂದುಸ್ಥಾನ; ಎಂಬುದೇ ಇವೆರಡೂ ಪಕ್ಷಗಳ ಧ್ಯೇಯ ಸಂಪೂರ್ಣ ಸ್ವಾತಂತ್ರ್ಯವಾದಿಗಳು ಬ್ರಿಟಿಶರ ಹಿತ ಸಂಬಂಧವನ್ನು ಒಮ್ಮೆಲೇ ತುಂಡರಿಸಲು ಪ್ರಯತ್ನಪಡುತ್ತಿದ್ದಾರೆ. ಪಂಜಾಬದ ರಾಜಕಾರಣ ಪರಿಷತ್ತಿನಲ್ಲಿ ಬ್ರಿಟಿಶ ಸಂಬಂಧವು ಹಿಂದುಸ್ಥಾನಕ್ಕೆ ದೊಡ್ಡ ಅರಿಷ್ಟವೆಂದು ಡಾ। ಆಲಮ್‌ರವರು ಉದ್ಗರಿಸಿದರು. ಮುಂಬಯಿಯ ನಾಗರಿಕರ ಪರಿಷತ್ತಿನಲ್ಲಿಯೂ ಬ್ರಿಟಿಶ ಸಾಮ್ರಾಜ್ಯಕ್ಕೆ ಒಳಪಟ್ಟದ್ದರಿಂದ ಹಿಂದುಸ್ಥಾನಕ್ಕೆ ಕೇಡಾಗಿದೆಂದು ಹೇಳಲಾಯಿತು ಸಾಮ್ರಾಜ್ಯವು ಲೂಟಿಗಾರರ ತಂಡೆಂದೂ ಒಬ್ಬರು ಉದ್ಗರಿಸಿದರು ಇಷ್ಟು ದೊಡ್ಡ ಅವಸ್ಥಾಂತರವು ಇವೆರಡು ಪಕ್ಷಗಳಲ್ಲಿ ಹಬ್ಬಿದೆ ನೆಹರು ಪಕ್ಷವು ಸಾಮ್ರಾಜ್ಯ ಸಂಬಂಧದ ಅನಿಷ್ಟವನ್ನು ಸ್ವಾತಂತ್ರ್ಯವಾದಿಗಳಷ್ಟು ತೀವ್ರವಾಗಿ ಎಣಿಸುವದಿಲ್ಲ ಆದಷ್ಟರ ಮಟ್ಟಿಗೆ ಸರ್ವಾನುಮತಿಯಿಂದ ಹಿಂದುಸ್ಥಾನದೊಳಗಿನ ದೇಶೋದ್ಧಾರದ ಕಾರ್ಯವನ್ನು ಪುರಸ್ಕರಿಸುವದಕ್ಕಾಗಿ ಸಾಮ್ರಾಜ್ಯ ಸ್ವರಾಜ್ಯದ ಯೋಜನೆಯನ್ನು ತಯಾರಿಸಿದೆ ಈ ಯೋಜನೆಯೊಳಗೆ ಪ್ರಕೃತಿ ಭೇದದಂತೆ ಮತಭೇದವು ಸಹಜವಿದೆ ವಿವರದಲ್ಲಿ ಕೆಲ ಮಟ್ಟಿಗೆ ಮತಭೇದವುಂಟು ಆದರೆ ರಿಪೋರ್ಟಿನ ಧೋರಣವು ಸಮಸ್ತ ಪಕ್ಷಗಳ ಪ್ರವರ್ತಕರಿಗೆ ಮಾನ್ಯವಿದೆ ಸ್ವಾತಂತ್ರ್ಯವಾದಿಗಳೂ ಮನ್ನಿಸುತ್ತಾರೆ ಈ ರಿಪೋರ್ಟನ್ನು ಪ್ರಚಾರ ಮಾಡುವದಕ್ಕಾಗಿ ಮುಂದಾಳುಗಳು ದುಡಿಯುತ್ತಿದ್ದಾರೆ, ಅತ್ತ ಸ್ವಾತಂತ್ರ್ಯವಾದಿಗಳೂ ಸ್ವಾತಂತ್ರ್ಯ ವಿಚಾರವನ್ನು ಜನಗಳಲ್ಲಿ ಹಬ್ಬಿಸುವ ಸಂಕಲ್ಪ ಮಾಡಿ ದುಡಿಯುತ್ತಿದ್ದಾರೆ ವಿಚಾರ ದೃಷ್ಟಿಯಿಂದ ಈ ಪ್ರಯತ್ನಗಳೆಲ್ಲ ಪ್ರಶಸ್ತವಿವೆ ಅಭಿನಂದನೀಯವಿವೆ

ಆದರೆ ಪ್ರತ್ಯಕ್ಷ ಆಚಾರದ ಯೋಜನೆಯೇನು? ಆಚಾರದಿಂದ ನಾವು ತಯಾರಾಗದಿದ್ದರೆ ನಮ್ಮ ಉಚ್ಚ ಉಚ್ಚ ಕಲ್ಪನೆಗಳಿಗೆ ಜೀವನಕಳೆ ತುಂಬದು. ಬ್ರಿಟಿಶರು ಆಚಾರಗಳಿಗೆ ಮಾತ್ರ ತಲೆಬಗ್ಗಿಸುತ್ತಾರೆ ಅದಕ್ಕೆ ಬಾರ್ಡೋಲಿಯೇ ಪ್ರತ್ಯಕ್ಷ ಉದಾಹರಣೆ! ಅರ್ಜಿ, ಶಿಷ್ಟಮಂಡಳ ಮುಂತಾದ ಶಿಷ್ಟ ಪ್ರಕಾರಗಳು ನಡೆದಾಗ್ಯೂ ಮುಂಬಯಿ ಸರಕಾರವು ಅತ್ತ ಕಿವಿಗೊಡಲಿಲ್ಲ ಕಂದಾಯ ಕೊಡದೆ ಸರಕಾರದ ಮೂಗು ಹಿಂಡಿದ ಕೂಡಲೆ, 'ಆ' ಎಂದು ಅದು ಬಾಯಿ ತೆರೆಯಿತು ಹಾಗೆಯೇ ನಮ್ಮ ಸ್ವರಾಜ್ಯ ಪ್ರಾಪ್ತಿಯ ಮಾರ್ಗವಿದೆ ನೆಹರು ಕಮಿಟಿಯ ರಿಪೋರ್ಟಿನ ಪ್ರಚಾರ ಕಾರ್ಯವು ಅಷ್ಟೇನು ದೊಡ್ಡ ಮಾತಲ್ಲ. ಅದರೊಳಗಿನ ವಿವರಗಳ ಬಗ್ಗೆ ಹಲವರ ಮತಭೇದವಿದ್ದಾಗ್ಯೂ ಪಂಡಿತ ನೆಹರುರವರಂಥ ಪ್ರಜಾಹಿತದಕ್ಷರು ತಯಾರಿಸಿದ ಯೋಜನೆಯನ್ನು ಶಬ್ದಶಃ ಅಂಗೀಕರಿಸಲು ಹಿಂದೀ ಜನಾಂಗವು ಸಿದ್ಧವಿದೆ. ಆ ಬಗ್ಗೆ ಚರ್ಚೆ ಸಹ ಮಾಡುವದವಶ್ಯವಿಲ್ಲ ನಮಗೆ ಈಗ ಬೇಕಾದದ್ದು ಆ ಯೋಜನೆಯನ್ನು ಅಮಲಿನಲ್ಲಿ ತರುವ ಸಾಮರ್ಥ್ಯಪ್ರಾಪ್ತಿಯು ಆ ಬಗ್ಗೆ ನಾವೇನು ಮಾಡತಕ್ಕದ್ದು ಎಂಬುದೇ ನಮ್ಮ ಮುಂದಿನ ಕಾರ್ಯ. ಸಾಯಮನ್ ಕೂಟವನ್ನು ಅಲ್ಲಲ್ಲಿ ಬಹಿಷ್ಕರಿಸತಕ್ಕದ್ದು. ಆ ಕೂಟ ಬರುವ ದಿನ ಊರಲ್ಲಿ ಪಿಡುಗು ಬಂದದೆಂದು ಭಾವಿಸಿ, ಹರತಾಳದ ಆಚರಣೆಯಾಗತಕ್ಕದ್ದು. ಅವರ ಕಡೆ ಯಾರೂ ಒರೆಗಣ್ಣಿನಿಂದ ಸಹ ನೋಡಲಾಗದು ಇದು ಬಹಿಷ್ಕಾರದರ್ಶಕ ಆಚಾರವಾಯಿತು. ಆತ್ಮೋದ್ಧಾರದ ವಿಷಯವೆಂದರೆ ಖಾದಿಯ ಪ್ರಸಾರ. ಬ್ರಿಟಿಶ ಸರಕುಗಳ ಬಹಿಷ್ಕಾರ. ಖಾದಿಯ ಪ್ರಸಾರದಿಂದ ಸ್ವದೇಶದೊಳಗಿನ ದೇಶಬಾಂಧವರಿಗೆ ಕೆಲಸ ಶಿಕ್ಕಿ ಅವರ ಸಂಪತ್ತು ಬೆಳೆಯುತ್ತದೆ. ಅದನ್ನು ಧರಿಸುವದರಿಂದ ದೇಶಾಭಿಮಾನವೂ, ದೇಶೋದ್ಧಾರದ ಸ್ಫೂರ್ತಿಯೂ ಜಗುತ್ತದೆ. ಬ್ರಿಟಿಶ ಸರಕುಗಳ ಬಹಿಷ್ಕಾರದಿಂದ ಬ್ರಿಟಿಶರಿಗೆ ಹಿಂದುಸ್ಥಾನದಲ್ಲಿರುವ ಹಿತಸಂಬಂಧಗಳು ತುಂಡರಿಸಲ್ಪಡುತ್ತವೆ ಬ್ರಿಟಿಶ ದೇಶದಲ್ಲಿ ತಯಾರಾಗುವ ತರತರದ ಸರಕುಗಳಿಗೆ ಗಿರಾಕಿ ಸಿಗುತ್ತದೆಂದು ಬ್ರಿಟಿಶರು ಸ್ವಾರ್ಥಲಂಪಟರಾಗಿ ಹಿಂದೀಯರಿಗೆ ರಾಜ್ಯಾಧಿಕಾರ ಕೊಡುವದಿಲ್ಲ. ರಾಜ್ಯಾಧಿಕಾರ ಬಲದಿಂದ ಗಿರಾಕಿ ರಕ್ಷಿಸಲ್ಪಡುತ್ತದೆ. ಸರಕಾರವು ಹೀಗೆ ಹಿಂದುಸ್ಥಾನಕ್ಕೆ ನಡಿಸಿಕೊಳ್ಳುತ್ತಿದ್ದಾಗ್ಯೂ, ಹಿಂದೀ ಪ್ರಜೆಗಳು ಸ್ವಯಂಸ್ಫೂರ್ತಿಯಿಂದ ಬ್ರಿಟಿಶ ಸರಕುಗಳನ್ನು ತಮ್ಮ ಐಹಿಕ ಸುಖೋಪಭೋಗಗಳಿಗಾಗಿ ಉಪಯೋಗಿಸಲಿಕ್ಕಿಲ್ಲವಾಗಿ ಪ್ರತಿಜ್ಞೆ ಮಾಡಿದರೆ ಆ ಪ್ರತಿಜ್ಞೆಯನ್ನು ಭಂಗಪಡಿಸುವ ಶಕ್ತಿಯು ಬ್ರಿಟಿಶರಲ್ಲಿಲ್ಲ ಹಿಂದೀಯರ ಮನೋನಿರ್ಧಾರವು ಬಾಳಿದರೆ, ಅದರಂತೆಯೇ ಮುಂದೆಯೂ ಅವರು ನಡಕೊಳ್ಳುವರೆಂದು ರಾಜ್ಯಾಧಿಕಾರಿಗಳಿಗೆ ಮನೋನಿಶ್ಚಯವಾದರೆ ಬ್ರಿಟಿಶರು ಹಿಂದುಸ್ಥಾನವನ್ನು ಒಂದು ನಿಮಿಷ ಪಾರತಂತ್ರ್ಯದಲ್ಲಿಡುವದಿಲ್ಲ. ಕಾರಣ ಅವರಿಗೆ ಅಪಕೀರ್ತಿ ಬೇಡ ಸ್ವಾರ್ಥಪರಾಯಣರಾಗಿ ಅವರು ಹಿಂದುಸ್ಥಾನದಲ್ಲಿ ಈ ಪ್ರಕಾರ ನಡಕೊಳ್ಳುತ್ತಿದ್ದಾರೆ ಸ್ವಾರ್ಥ ಮೂಲವನ್ನೇ ಹಿಂದೀಯರು ಕಿತ್ತೊಗೆದರೆ ನಮಗೆ ಸ್ವರಾಜ್ಯವು ಶೀಘ್ರವೇ ಸಿಗುವದು. ಬಂಗಾಲದ ಪ್ರಸಿದ್ಧ ಲೋಕಸೇವಕರಾದ ಶ್ರೀ। ಸುಭಾಷ ಬಾಬುಗಳಾದರೂ ಹೀಗೆಯೇ ಉಪದೇಶ ಮಾಡಿದ್ದಾರೆ. 'ನಮ್ಮ ಮುಂದಿನ ಕಾರ್ಯವೆಂಬುದು ಇದೇ!

S U. Narayanacharya & CO.
Chaukamba, BENARES CITY.



ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿ ಕಣ, ಜರಿ ಸೀರೆ, ಕಾಶ್ಮೀರ್ ಶಾಲು, ಥರವಾರದ ದ್ರಾಕ್ಷಿ, ಕಸ್ತೂರಿ, ಶಿಂಗಗರೂ, ಸ್ಫಟಿಕಮಣಿ ಮೊದಲಾದ ಮಾಲುಗಳು ಸಿಗುತ್ತವೆ. ಕ್ಯಾಟಲಾಗು ಕೋರುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ— ಶಿರೋಮಣಿ ನಾರಾಯಣಾಚಾರ್ಯ,
ಮತ್ತು ಕಂಪನಿ, ಚೌಕಂಬಾ, ಕಾಶೀಕ್ಷೇತ್ರ

ಸ್ಫುಟ ಸೂಚನೆಗಳು.

೧. ಬಾರ್ಡೋಲಿಯಲ್ಲಿ ಪ್ರಜಾಸಂಘಟನೆಯು ಅತ್ಯುತ್ತಮವು ಶಿಸ್ತಿನದ ಸಾಗಿದೆಂದು ತಿಳಿಸಲು ಸಂತೋಷವಾಗುತ್ತದೆ. ಸರದಾರ ವಲ್ಲಭಭಾಯಿ ಪಟೇಲರವರು ಬಾರ್ಡೋಲಿಯಲ್ಲಿ ಠಾಣ್ಯ ಹೂಡಿದ್ದಾರೆ. ಸ್ವಯಂಸೇವಕರ ಸಾಹಾಯ್ಯದಿಂದ ಸರಕಾರಿ ನೌಕರ ಮಂಡಳದ ಬಳಿ ಸಾದರಪಡಿಸುವ ಪುರಾವೆಯನ್ನು ಸಂಗ್ರಹಿಸುತ್ತಿದ್ದಾರೆ. ಸ್ವಯಂಸೇವಕರು ಮುದ್ರಣದ ನಿಷೇಧವನ್ನು ಪ್ರಚುರಗೊಳಿಸುತ್ತಿದ್ದಾರೆ. ಇದರಿಂದ ಬಾರ್ಡೋಲಿ ತಾಲೂಕ ೫೨ ವೇರಲೂಸ್ ಪೇಟೆಗಳಲ್ಲಿ ನೆರೆ ಅಂಗಡಿಗಳಿಗೆ ಸವಾರೀ ಬರಲಿಲ್ಲ. ೩೦ ಅಂಗಡಿಗಳಲ್ಲಿ ೭ ಅಂಗಡಿಗಳನ್ನು ವಹಿಸಬೇಕಾದರೆ ಅಧಿಕಾರಿಗಳಿಗೆ ಸಾಕಾಗಬೇಕಾಯಿತು. ಚಪ್ಪರಗಳ ಸ್ಥಿತಿಯೂ ಅದೇ. ೧೦೦ ಚಪ್ಪರಗಳಲ್ಲಿ ೩೦ ಚಪ್ಪರಗಳಿಗೆ ಮಾತ್ರ ಸವಾಲು ಬಂತು. ನೆರೆಹೊರೆಯೊಳಗಿನ ಬಲಿಸಾರ, ಚಿಖಲಿ ತಾಲೂಕುಗಳಲ್ಲಿಯೂ ಇದೇ ಸ್ಥಿತಿ! ಹೀಗೆ ಸರದಾರ ವಲ್ಲಭಭಾಯಿಯವರು ಬರೇ ಲೋಕೋಪಕಾರ ತಪಸ್ಸಿನಿಂದ ಬಾರ್ಡೋಲಿಯಲ್ಲಿ ಪ್ರಜಾರಾಜ್ಯವನ್ನು ಪ್ರಸ್ಥಾಪಿಸುತ್ತಿದ್ದಾರೆ. ಸರಕಾರದ ನ್ಯೂನತೆಗಳನೇಕವಿರಬಹುದು "ರಾಜಾ ಕಾಲಸ್ಯ ಕಾರಣಂ" ಎಂಬ ಭೀಷ್ಮಾಚಾರ್ಯರ ಉಕ್ತಿಯಂತೆ ಸರಕಾರವು ಪ್ರಜಾನೆಮ್ಮದಿಗೆ ಪ್ರಮುಖ ಕಾರಣವಿರಬಹುದು. ಆದರೆ ಭಗವದುಕ್ತಿಯಂತೆ "ಆತ್ಮೈವ ಬಂಧುರಾತ್ಮನಃ" ಎಂಬ ಸಿದ್ಧಾಂತವನ್ನು ಪರಾಂಬರಿಸಿ ಸರದಾರ ಪಟೇಲರವರು ಆತ್ಮಶಕ್ತಿಯ ಬಲದಿಂದ ಪ್ರಜೆಗಳಿಗೆ ಸಂಘಟಿಸಿ ಅವರ ಕಡೆಯಿಂದ ದೇಶೋದ್ಧಾರದ ಕಾರ್ಯವನ್ನು ನಡಿಸಿಕೊಳ್ಳುತ್ತಿದ್ದಾರೆ. ಈ ಕಾರ್ಯವು ಬಹು ಕಠಿಣವಾದದ್ದು. ನಿಸ್ಪೃಹತನದಿಂದಲೂ, ನಿರ್ಭಯದಿಂದಲೂ, ಶಿಸ್ತಿನಿಂದಲೂ ಮಾಡಬೇಕಾದ ಕಾರ್ಯವಿದು. ಮಹಾತ್ಮರು ಹೇಳಿದಂತೆ ಬಾರ್ಡೋಲಿಯಲ್ಲಿ ದೇಶೋದ್ಧಾರ ಪ್ರಯತ್ನದ ಪ್ರಯೋಗ ನಡೆದಿದೆ. ಅದರಿಂದ ಆ ಕಡೆ ಜನರು ಲಕ್ಷ್ಯಗೊಟ್ಟು ವಿಚಾರಿಸತಕ್ಕದ್ದು. ಮುಂದಿನ ಮಾರ್ಗವು ಅಲ್ಲಿಯೇ ರೇಖಾಂಕಿತವಾಗುತ್ತಿದೆ.

೨. ನಮ್ಮ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಮಿ| ಶಾಸ್ತ್ರಿ ಸಾಹೇಬರಿಗೆ ಧಾರವಾಡದೊಳಗಿನ ಮುರುಳರ ಅಪ್ರೀತಿಗೆ ವರ್ಗಾಯಿಸಬೇಕಾಗಿ ಹಲವರ ಅಭಿಪ್ರಾಯ! ಮಿ| ಶಾಸ್ತ್ರಿಯವರು ಶಾಲೆಗಳ ಮೇಲ್ತಪಾಸಿಗಾಗಿ ಗದಗಿಗೆ ಹೋಗಿದ್ದರು. ಅಲ್ಲಿಯ ಹೈಸ್ಕೂಲಿನ ಮರಾಠೀ ಭಾಷೆಯ ಶಿಕ್ಷಕರಾದ ಮಿ| ಕಾಗದಗಾರರವರು ಒಂದು ಹಿಂದುಸ್ಥಾನದ ಇತಿಹಾಸವನ್ನು ಬರೆದಿದ್ದಾರೆ. ಈ ಇತಿಹಾಸವನ್ನು ಶಾಲೆಗಳಲ್ಲಿ ಹಚ್ಚಬೇಕೆಂದು ಮಿ| ಕಾಗದಗಾರ ಇವರಿಗೆ ಅಪೇಕ್ಷೆ ಇರುವದು ಸಹಜ. ಮಿ| ಶಾಸ್ತ್ರಿ ಸಾಹೇಬರು ಧರ್ಮಬಾಂಧವರಿರುವದರಿಂದ ಈ ಪುಸ್ತಕಕ್ಕೆ ಬೇಗನೇ ಸರಕಾರಿ ಮನ್ನಣೆ ಸಿಗುವದೆಂದು ಅವರ ಆಶೆ. ಗದಗಿಗೆ ಶಾಸ್ತ್ರಿ ಸಾಹೇಬರು ಹೋದಾಗ ಈ ಪುಸ್ತಕದ ಚರ್ಚೆಯಾಯಿತು. ಮಿ| ಶಾಸ್ತ್ರಿ ಸಾಹೇಬರು ಮಿ| ಕಾಗದಗಾರರವರ ಮೇಲೆ ಹಾರಿಬಿದ್ದರು. "ನೀವು ನಿಜವಾದ ಮುಸಲ್ಮಾನರಲ್ಲ; ಔರಂಗಜೇಬನ ವಿಷಯ ನೀವು ಬರೆದ ವಿಧಾನಗಳು ತೀರ ನಿಂದ್ಯವಾಗಿವೆ." ಇತ್ಯಾದಿ ಉದ್ಗರಿಸಿದರು. ಶ್ರೀ ಶಿವಾಜಿ ಮಹಾರಾಜರಿಗೂ ಸಾಹೇಬರು ಸಿಕ್ಕಹಾಗೆ ಕರೆದರು. "ಶಿವಾಜಿಯು ಗುಡ್ಡದ ಇಲಿ; ಬಹು ಕಪಟಿ; ಔರಂಗಜೇಬನ ಎದುರಿಗೆ ಬರಲಿಕ್ಕೆ ಧೈರ್ಯವಿಲ್ಲದೆ ರಾತ್ರಿ ಕನ್ನಹಾಕುವ ಅಯೋಗ್ಯ; ಔರಂಗಜೇಬ ಬಾದಶಹರ ದಯಾಬುದ್ಧಿಯಿಂದ ಶಿವಾಜಿಯ ಪ್ರಾಣ ಉಳಿಯಿತು. ಶಿವಾಜಿಯು ವಿಶ್ವಾಸಘಾತಕ" ಇತ್ಯಾದಿ ದುಷ್ಟರೋಕ್ತಿಗಳನ್ನು ಮಿ| ಶಾಸ್ತ್ರಿಸಾಹೇಬರು ಆಡಿದರೆಂದು 'ಕರ್ನಾಟಕವೃತ್ತ' ಹಾಗು 'ಕನ್ನಡಿಗ' ಪತ್ರಿಕೆಗಳು ಪ್ರಕಟಿಸುತ್ತವೆ. ಔರಂಗಜೇಬನ ವಿಷಯ ಮಿ| ಸರ್ಕಾರನ್ ಸಾಹೇಬರು ಬರೆದ ವಿಧಾನಗಳನ್ನೇ ಮಿ| ಕಾಗದಗಾರರು ಬರೆದಿದ್ದಾರೆ. ಸರ್ಕಾರನ್‌ರವರ ಇತಿಹಾಸವು ಕಾಲೇಜಿಗಳಿಗೆ ಕ್ರಮಿಕ ಪುಸ್ತಕವಾಗಿ ನೇಮಿಸಲ್ಪಟ್ಟಿದೆ. ಸರ್ಕಾರನ್‌ರವರು ಔರಂಗಜೇಬನ ಧರ್ಮಬಾಂಧವರಲ್ಲೆಂದು ಅವರ ಇತಿಹಾಸಕ್ಕೆ ತಮ್ಮ ಅಧಿಕಾರದೊಳಗಿನ ಶಾಲೆಗಳಲ್ಲಿ ಇರಗೊಟ್ಟಿದ್ದಾರೆಂದು ಹೇಳಿದರೆ, ಯಾರದೇನು ಅಪಾಯ! ಶ್ರೀ ಶಿವಾಜಿ ಮಹಾರಾಜರ ಗುಡ್ಡದ ಇಲಿಯ ಯೋಗ್ಯತೆಯ ಯುಗವು ಬಹು ಹಿಂದಾಗಿ ಹೋಯಿತು. ಶಾಸ್ತ್ರಿ ಸಾಹೇಬರ ಪರಿಷ್ಕರಣ ಕಾಲ ಈಗ ಹಾಗೆ ಅನ್ನಲು ಅಂಜುತ್ತಾರೆ. ಪ್ರಾಂತಾಧಿಪರಾಜರೂ ಪುಣೆಯಲ್ಲಿ ಶ್ರೀ ಶಿವಾಜಿ ಮಹಾರಾಜರ ಅಶ್ವಾರೂಢ ಪ್ರತಿಮೆಯ ವಾಸ್ತು ಶುಭಾರಂಭವನ್ನು ಸ್ವಹಸ್ತದಿಂದ ನೆರವೇರಿಸಿ ಈ ತನಕ ಬ್ರಿಟಿಷ ಇತಿಹಾಸಕಾರರು ಮಾಡಿದ ತಪ್ಪನ್ನು ತಿದ್ದಿಕೊಂಡಿದ್ದಾರೆ. ಹೀಗಿರಲು, ಮಿ| ಶಾಸ್ತ್ರಿ ಸಾಹೇಬರಂಥ ವಿದ್ಯಾಧಿಕಾರಿಗಳು ಧರ್ಮಾಂಧರಂತೆ ವರ್ತಿಸಿ ಲೋಕಾಪವಾದಕ್ಕೆ ಕಾರಣವಾಗುವದೇಕೆ? ಶಿವಾಜಿಯು ಗುಡ್ಡದ ಇಲಿಯೋ! ಹಾಗೆ ಅವರಿಗೆ ಹೇಳುವವರು ಊರ ಇಲಿಗಳೋ? ಎಂಬದನ್ನು ಈಗ ಸ್ಫುಟ ಮಾಡಿ ಹೇಳುವ ಗರಜಿಲ್ಲ. ವಿದ್ಯಾಖಾತೆಯು ಪವಿತ್ರವಾದದ್ದು! ಅಂಥಲ್ಲಿ ಮಿ| ಶಾಸ್ತ್ರಿ ಸಾಹೇಬರಂಥ ವಿವೇಕಹೀನರು ಅಧಿಕಾರಾರೂಢರಾಗುವದು ದೊಡ್ಡ ತಪ್ಪು! ವರಿಷ್ಠಾಧಿಕಾರಿಗಳು ವಿಚಾರಿಸಿ ಇವರಿಗೆ ಅಲ್ಲಿಂದ ಸ್ವಭಾವಕ್ಕೆ ಹಿತವಾದ ಯೋಗ್ಯ ಸ್ಥಳಕ್ಕೆ ವರ್ಗಾಯಿಸಬೇಕಾಗಿ ಸೂಚನೆ

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆ ಹಿಂದಾಯಿತು; ಹದರಿಸುತ್ತದೆ. ಅಡಿಕೆ ಬರಹತ್ತಿದೆ. ಹಿಕ್ಕಲಿಗರು ಬೆಳೆ ಕೊಯ್ಯಹತ್ತಿದ್ದಾರೆ.

ಇಲ್ಲಿಯ ಮುನಿಸಿಪಾಲಿಟಿಯ ಸಭೆಯು ಈ ವಾರದಲ್ಲಾಯಿತು. ಸಭಾಸದರು ಅಧ್ಯಕ್ಷರಿಗೆ ಒಂದು ಅರ್ಜಿಯನ್ನು ಸಾದರಪಡಿಸಿದರು: ಟರ್ಮಿನಲ್ ಟೆಕ್ಸಿನಿಂದ ಊರಿನ ವ್ಯಾಪಾರಕ್ಕೆ ಬಹಳ ಅಡ್ಡಿಯಾಗಿದೆ; ಟೆಕ್ಸಿನ ರಕಮು ನಿಶ್ಚಯಿಸುವಾಗ ತರ-ತರದ ವಿಚಾರವಾಗಲಿಲ್ಲ; ಮುನಿಸಿಪಾಲಿಟಿಯ ಸಾಂಪತ್ತಿಕ ಸ್ಥಿತಿಯು ಸುಧಾರಿಸಿದ್ದರಿಂದ ಹಿಂದಿನ ಆಕಟ್ರಾಯ ಪದ್ಧತಿಯನ್ನು ಪುನಃ ಪ್ರಾರಂಭಿಸಬೇಕು; ಟೆಕ್ಸಿನ ರಕಮನ್ನು ಮುಂಗಡ ಪಟ್ಟಕೊಳ್ಳುವ ಹೊಸ ನಿಯಮದಿಂದ ತೊಂದರೆಯಾಗಿದೆ. ಇತ್ಯಾದಿ ಹೇಳಿದರು. ಅಧ್ಯಕ್ಷರಾದ ರಾ| ಅಣ್ಣಪ್ಪೈರ ಪರ್ಥೆ ರಾ| ಗಾವಕ್ಕರರು ಮಾತಾಡಿದರು: ಆಕಟ್ರಾಯ ಪದ್ಧತಿಯನ್ನು ಸುರು ಮಾಡಿದರೆ ಮುನಿಸಿಪಾಲಿಟಿಯು ಪುನಃ ಹೀನ ಸ್ಥಿತಿಗೆ ಬರುವದೆಂದರು. [ಹೀನಸ್ಥಿತಿಗೆ ಬಂದರೆ ಪುನಃ ಟೆಕ್ಸ್ ಏರಿಸಿದರಾಯಿತೆಂದು ಒಬ್ಬರು ಗುಣುಗುಟ್ಟಿದರು. ಆದರ ಗೊಡವೆ ರಾ| ಗಾವಕ್ಕರರಿಗೆ ಇಲ್ಲ. ಹೀನ ಸ್ಥಿತಿಗೆ ಬಂದರೆ ಗಿಬ್ಬ ಮ್ಯಾಕ್ಮೋರಿಗೆ ಸಿಗುವ ಗ್ರಾಂಟು ಸಿಗಲಿಕ್ಕಿಲ್ಲವಾಗಿ ಅವರು ಹೇಳಾಡುತ್ತಾರೆ. ವ್ಯಾಪಾರಸ್ಥರ ಸ್ಥಿತಿ-ಗತಿ ಬಲ್ಲಾತ ಊರ ಪ್ರಮುಖ ರಾ| ಅಣ್ಣಪ್ಪೈರು ಸುಮ್ಮಗೇಕೆ? ಎಂದು ಈ ಮಾತ ಕೇಳುತ್ತ ಕೆಳಗೆ ನಿಂತ ಯಾರೋ ಒಬ್ಬರು ಉದ್ಗರಿಸಿ ಹಾರಾಡಿದರಂತೆ!] ಟೆಕ್ಸಿನ ಪ್ರಮಾಣವನ್ನು ಕಡಿಮೆ ಮಾಡುವ ವಿಷಯವು ಮುಂದೆ ವಿಚಾರವಾಗುವದೆಂದು ರಾ| ಗಾವಕ್ಕರರು ಮಾತುಕೊಟ್ಟರು. ಮುಂಗಡ ತೆರಿಗೆ ರಕಮು ವಸೂಲ ಮಾಡುವ ಹೊಸ ನಿಯಮವು ಸದ್ಯಕ್ಕೆ ತಹಕೂಬ ಇಡಲ್ಪಟ್ಟಿದೆ. ಹೆರವಟ್ಟೆಯ ರಾ| ಸಾಂತಯ್ಯ ಮುಪ್ಪಾಯ ಕಿಣಿರ ಮಗಂದಿರು ಒಂದು ವಿಚಿತ್ರ ಅರ್ಜಿಯನ್ನು ಸಾದರ ಮಾಡಿದ್ದರು. ಈ ಹುಡುಗನು ಮೆಟ್ರಿಕ್ ಪಾಸಾಗಿದ್ದಾನೆ. "ನಾನು ಸೆಕ್ರೆಟರಿಯ ಸಂಗಡ ಮುನಿಸಿಪಾಲಿಟಿಯ ಕೆಲಸದ ಅನುಭವ ಪಡೆಯುತ್ತೇನೆ. ನನಗೆ ಪಗಾರ ಬೇಡ; ನಾನು ಪುಣೆಗೆ ಲೋಕಲ್ ಸೆಲ್ಫ ಗವರ್ನಮೆಂಟ ಇನ್‌ಸ್ಟಿಟ್ಯೂಟದಲ್ಲಿ ಕಲಿಯಹೋಗುತ್ತೇನೆ; ಮುನಿಸಿಪಾಲಿಟಿ ತರ್ಫೆನಿಂದ ಹೋಗುತ್ತೇನೆ. ಹಣ ನೀವು ಕೊಡುವದು ಬೇಡ; ನನ್ನ ಖರ್ಚಿಯಿಂದ ನಾನು ಟರ್ಮ ಹಾಕಿ ಕಲಿಯುತ್ತೇನೆ; ಕಲಿತು ಬಂದಮೇಲೆ ನೀವು ನನಗೆ ಸೆಕ್ರೆಟರಿ ಕೆಲಸ ಕೊಡಬೇಕೆಂತಿಲ್ಲ. ಮರ್ಜಿ ಬಂದರೆ ಕೊಡಿ, ಇಲ್ಲದಿದ್ದರೆ ಬಿಡಿ. ನಿಮ್ಮ ತರ್ಫೆನಿಂದ ಹೋದರೆ ೧೫ ರೂಪಾಯಿ ಫೀ ಕೊಡುವದು ತಪ್ಪುತ್ತದೆ." ಇತ್ಯಾದಿ ಬರೆದಿತ್ತು. ಮುನಿಸಿಪಾಲಿಟಿಯಲ್ಲಿ ಈಗ ಸೆಕ್ರೆಟರಿ ಜಾಗ ಖಾಲಿಯಿಲ್ಲ; ಯಾವಾಗ ಖಾಲಿಯಾಗುವದೆಂಬದು ಗೊತ್ತಿಲ್ಲ. ಮುನಿಸಿಪಾಲಿಟಿಯವರು ಇನ್‌ಸ್ಟಿಟ್ಯೂಟಿನ ಸೆಕ್ರೆಟರಿಗಳ ಕಡೆಯಿಂದ ಒಂದು ತಿಂಗಳ ಮುಂಚೆ ಅಲ್ಲಿಯ ಸೆಕ್ರೆಟರಿ ಕ್ಲಾಸಿನ ಸಂಬಂಧ ಮಾಹಿತಿ ತರಿಸಿದ್ದರಾಗಿ ತಿಳಿಯುತ್ತಿದೆ. ಯಾವ ಬಗ್ಗೆಂದು ತಿಳಿಯಲಿಲ್ಲ. ಆ ಪತ್ರ ಬಂದ ಬಳಿಕ ಬಂದ ಅರ್ಜಿ ಇದೊಂದೇ! ಇದರ ಮೇಲಿಂದ ಮುಂದೆ ಸೆಕ್ರೆಟರಿ ಜಾಗ ಇವರಿಗೇ ಸಿಗುವದೆಂದು ಮುನಿಸಿಪಾಲಿಟಿಯ ಕಾರಭಾರ ಬಲ್ಲಾದವರು ಹೇಳುತ್ತಾರೆ. ಹೊನ್ನಾವರ ಮಾರ್ಗವನ್ನು ಖರಾಬು ಜಾಗದಮೇಲೆ ಮಾಡದೆ ಮುನಿಸಿಪಾಲಿಟಿಯವರು ಶೇತಕೀ ಜಾಗದಮೇಲೆ ಮಾಡಿದ್ದರಿಂದ ಅದನ್ನು ಕಿತ್ತುಹಾಕಬೇಕಾಗಿ ಪ್ರಾಂತ ಸಾಹೇಬರಿಂದ ಹುಕುಮು ಬಂದಿತ್ತು. ಕಲೆಕ್ಟರರಿಗೆ ಈ ಕುರಿತು ಹಿಂದೆ ಅರ್ಜಿ ಮಾಡಿಕೊಂಡಿದೆ, ಅವರ ಇತ್ಯರ್ಥದ ತನಕ ತಡೆಯ ಬೇಕಾಗಿ ಠರಾವಾಯಿತು. ಹೆರವಟ್ಟೆಯ ರಾ| ಸಾಂತಯ್ಯ ಕಿಣಿಯರ ಸೋದರ ಅಳಿಯನಾಗಿ ಅಳಿಯನಾದವನಿಗೆ ಮುನಿಸಿಪಾಲಿಟಿಯ ಆಸ್ಪತ್ರೆಯಲ್ಲಿ ಬದಲಿ ಕಂಪೌಂಡರ ಆಗಿದೆ. ಖಾಯಂ ಕಂಪೌಂಡರರಿಗೆ ಕೆಲಸ ಮಾಡುವ ಸಾಮರ್ಥ್ಯ ಇದ್ದ ಬಗ್ಗೆ ಸಿವ್ಹಿಲ್ ಸರ್ಜನರಿಂದ ಸರ್ಟಿಫಿಕೇಟು ತರಲು ಹೇಳಲಾಗಿದೆ.

ನಿನ್ನೆ ಇಲ್ಲಿಯ ದುರ್ಗಾ ದೇವಾಲಯಗಳಲ್ಲಿ ಘಟಸ್ಥಾಪನೆಯಾಯಿತು, ಪ್ರತಿವರ್ಷದಂತೆ ಕೀರ್ತನ-ಭಜನೆಗಳು ನಡೆಯುತ್ತವೆ.

ಗೋಕರ್ಣ ಮುನಿಸಿಪಾಲಿಟಿಯ ಸಭೆಯಾಗಿ ರಾ| ಗೋಪಿಮುಕರಿಗೆ ಮ್ಯಾ| ಕಮೀಟಿಯ ಚೇರಮನ್‌ರಾಗಿ ನೇಮಣೂಕಾಯಿತು.

ಮೋಗಲಾಯಿಗಳು ಇಲ್ಲಿ ಒಂದು ಮದುವೆ ಸಮಾರಂಭ ಮಾಡಿದರು. ಊರೊಳಗಿನ ಬಡೇ ಬಡೇ ಜನರು ಮದುವೆಗೆ ನಿಮಂತ್ರಿಸಲ್ಪಟ್ಟಿದ್ದರು. ಮದುಮಗನು ಹಿಂದು ಇದ್ದು ಮದುವಳಕಿಯ ರೂಪ-ಲಾವಣ್ಯಗಳಿಗೆ ಮೋಹಿತನಾಗಿ ಮೋಗಲಾಯಿಯನಾಗಿ ಸೇರಿದ ಪುಣ್ಯಾತ್ಮನಂತೆ!

ತೊರ್ಕೆಯ ಶ್ರೀ ಕೇಂಗಾಳ ಪರಮೇಶ್ವರಿ ದೇವಾಲಯದಲ್ಲಿ ಈ ವರುಷ ಕ್ರಿ. ಪ್ರೊ. ಕೋಡಗಳನ್ವಯ ಇಂಜಂಕ್ಷನ್ ನವರಾತ್ರಿ ಸೇವೆಯಾಯಿತು. ಹೊಸ ಹಳೇ ಮೊಕ್ತೇಸರರು ಪಂಚರು, ಪ್ರಸಾದ ಮುಂತಾದವುಗಳ ಮಾನ-ಮರ್ಯಾದೆ ಸಂಬಂಧ ಶಾಂತತಾಭಂಗವಾಗುವ ತನಕ ಹೋರಾಡುವ ಹುರುಪು ತೋರಿದ್ದರಿಂದ ನವರಾತ್ರಿ ಉತ್ಸವ ಕಾರ್ಯದಲ್ಲಿ ಪ್ರವೇಶಿಸದಂತೆ ಇಲ್ಲಿಯ "ಸೆ" ವರ್ಗದ ಮೆಜಿಸ್ಟ್ರೇಟರು ಇಕ್ಕಟ್ಟಿನವರ ಮೇಲೂ ಹುಕುಮನ್ನು ಹೊರಡಿಸಿದ್ದಾರೆ.

ಹಳದೀಪುರ—ಗುಡುಗು, ಮಿಂಚು, ಮಳೆ ನೋಡಿ ಒಕ್ಕಲಿಗರು ಘಾಬರಿಯಾಗುತ್ತಾರೆ. ಬೋಗಚಿಕತ್ತೆಯಿಂದ ಹಾದು ಹೋಗುವ ೩॥ ಫರ್ಲಾಂಗ ಲೋಕಲ್ಬೋರ್ಡ ಮಾರ್ಗವು ನೆಟ್ಟಗಿಲ್ಲ, ಬಹು ಕೆಟ್ಟಿದೆ. ಲೋಕಲ್ಬೋರ್ಡು ಲಕ್ಷ್ಯ ಕೊಡಬೇಕು. ಮೈಲಿಯ ಬೇನೆಯು ವೆಕ್ಸಿನೇಟರರ ತತ್ಪರತೆಯಿಂದ ಹಾಗು ಮಾಮಲೇದಾರರ ಜಾಗರೂಕತೆಯಿಂದ ಹಿಂದಾಯಿತು. ವೆಕ್ಸಿನೇಟರರೂ, ಮಾಮಲೇದಾರರೂ ಇಲ್ಲಿ ಬಂದು ಎಲ್ಲರಿಗೆ ಮೈಲಿ ಚುಚ್ಚಿಸಿದರು. ಒಂದು ಕಮೀಟಿಯನ್ನು ಸ್ಥಾಪಿಸಿದರು. ಥಕ್ಕನೆ ಮೈಲಿ ಬಂದಾಗ ಈ ಜಾಗರೂಕತೆ ಕೊಳ್ಳುವದು ಒಳ್ಳೇದು.

ಹೊನ್ನಾವರ—ಮಳೆ ಹಿಡಿಸುತ್ತಿದೆ. ಗದ್ದೆ ಕೊಯ್ಯಲಿಗೆ ತೊಂದರೆ. ಮೋಗಲಾಯಿಗಳ ಜೋರಿನ ಜುಗಾರಾಟ ನಡೆದದೆ. ಜುಗಾರದ ಹುಚ್ಚು ಜನರ ತಲೆಗೇರಿದೆ. ಹಳದೀಪುರದೊಳಗಿನ ಒಂದು ಪ್ರಕರಣವು ಹನುಮಂತನ ಬಾಲದಂತೆ ಓಹಳ ಬೆಳೆದು ಹೋಯಿತು. ಇಲ್ಲಿಯ ಮ॥ ಕೋರ್ಟಿನಲ್ಲಿ ೪ ಫಿರ್ಯಾದುಗಳು ದಾಖಲಾಗಿವೆ. ಈ ಫಿರ್ಯಾದುಗಳಲ್ಲಿ ಸಾದರಾದ ಪುರಾವೆಯ ಮೇಲಿಂದ ಕಂಡುಬರುವ ಸಂಗತಿಗಳೇನಂದರೆ:- ಜೆಹರುದ್ದೀನ ಎಂಬವನು ಇಲ್ಲಿಯ ಹೊಸ ಫೌಜದಾರರ ಭಾವಯ್ಯನು. ಇವರು ಹಳದೀಪುರದಲ್ಲಿ ಜುಗಾರು ಮಂಡದಲ್ಲಿದ್ದರು. ಕಾದಿರ ಸಾಹೇಬ ಎಂಬ ಮೋಟಾರ ಡ್ರಾಯ್ವರನು ರಾತ್ರಿ ೭-೮ ಘಂಟೆಗೆ ಅಲ್ಲಿ ಹೋದ ಪೋಲೀಸನೆಂದು ಮಂಡದವರ ಭಾವನೆ. ಜೀವದಾಶೆಗೆ ಅಥವಾ ಯಾವ ಆಶೆಯಿಂದಲೋ ಮಂಡದವರೂ ಜೆಹರುದ್ದೀನನೂ ಕಾದಿರ ಸಾಹೇಬನಿಗೆ ಹೊಡೆದರು, ಆ ಬಗ್ಗೆ ಕಾದಿರ ಸಾಹೇಬನು ಜೆಹರುದ್ದೀನಾದಿ ಜನರ ಮೇಲೆ ಫಿರ್ಯಾದಿ; ಜೆಹರುದ್ದೀನನು ಕಾದಿರ ಸಾಹೇಬನ ಮೇಲೆ ಕಳವಿನ ಫಿರ್ಯಾದಿ ಕೊಟ್ಟಿದ್ದಾನೆ. ಆ ರಾತ್ರಿ ತನ್ನ ಮನೆಯಲ್ಲಿ ಕಾದಿರ ಸಾಹೇಬನು ಕದಿಯಲು ಬಂದಿದ್ದನೆಂದು ಜೆಹರುದ್ದೀನನ ಹೇಳಿಕೆ. ಹೀಗೆ ಇವೆರಡೂ ಫಿರ್ಯಾದಿಗಳ ವಿಚಾರ ನಡೆದಾಗ ಗಂಗಾಧರ ಚಂದು ಎಂಬವನು ಪೋಲೀಸ ಶಿಪಾಯಿ ಸಂತಾನ-ಪೇದ್ರುರವರ ಮೇಲೆ ಫಿರ್ಯಾದು ಕೊಟ್ಟಿದ್ದಾನೆ. ಜೆಹರುದ್ದೀನನು ಕಾದಿರ ಸಾಹೇಬನ ಮೇಲೆ ಕೊಟ್ಟ ಕಳುವಿನ ಫಿರ್ಯಾದಿಯಲ್ಲಿ ಪೋಲೀಸರು ಜೆಹರುದ್ದೀನನ ಪಕ್ಷದವರಾಗಿ ಗಂಗಾಧರನು ಕಾದಿರ ಸಾಹೇಬನು ಕೊಟ್ಟ ಫಿರ್ಯಾದಿಯಲ್ಲಿ ಜೆಹರುದ್ದೀನ ವಗೈರೆ ವಿರುದ್ಧವಾಗಿ ಸಾಕ್ಷಿಕೊಟ್ಟನು. ಅದೇ ದಿನ ರಾತ್ರಿ ೭॥ ಘಂಟೆಗೆ ಮೇಲ್ಕಂಡ ಇಬ್ಬ ಶಿಪಾಯರು ಆತನಿಗೆ ಕರಕೊಂಡು ಮದ್ಯದ ಅಂಗಡಿಗೆ ಒಯ್ದು ತಮ್ಮ ಕೈಯಿಂದ ಹಣ ಕೊಟ್ಟು ಆತನಿಗೆ ಸರಾಯಿ ಕುಡಿಸಿದರಂತೆ; ತಾವು ಕುಡಿದರಂತೆ. ಎಳೆದೆಳೆದು ಮಾರ್ಗದಮೇಲೆ ತಂದರಂತೆ. ಅಮಲೇರಿ ಬಿದ್ದಿದ್ದಾನೆಂದು ನಟಿಸಿ ತಲೆಯ ಮೇಲೆ ತಣ್ಣೀರನ್ನು ಹೊಯ್ಯುವ ಸಂಭ್ರಮ ಮಾಡಿ ಬಕ್ಕನಿಗೆ (ಗಂಗಾಧರನಿಗೆ ಬಕ್ಕನೆಂದು ಹೇಳುತ್ತಾರೆ) ಗುದ್ದಿದರು; ಬಡಿದರು. ಪಂಚನಾಮೆಗೆ ಪಂಚರನ್ನು ಕರೆದರು. ರಾ॥ ಗಣಪತಿ ನಾಗಪ್ಪಾ ತಾರೀಬಾಗಿಲ, ನರಸಿಂಹ ನಾರಾಯಣ ಶಾನಭಾಗ ಶಶಿಹಿತ್ತಲ ಮುಂತಾದವರು ಬಂದರು. ಪೋಲೀಸರು ತಯಾರಿಸಿಟ್ಟ ಪಂಚನಾಮೆಗೆ ಅವರು ಸಹಿ ಹಾಕಲೊಪ್ಪಲಿಲ್ಲ. ಆ ಪಂಚನಾಮೆಯಲ್ಲಿ ಬರೆದ ಹಕೀಕತು ಸರಿಯಿಲ್ಲವೆಂದು ಅವರ ಅಭಿಪ್ರಾಯ. ಅವರಿಗೆ ಬಿಟ್ಟು ಬೇರೆ ಮೂವರ ಕಡೆಯಿಂದ ಪಂಚನಾಮೆಯಾಯಿತು. ಪೋಲೀಸ ಪಂಚನಾಮೆಗೆ ಸಹಿ ಹಾಕಲೊಪ್ಪದ್ದರಿಂದ ಮಾರನೇ ದಿನ ರಾತ್ರಿ ವಕೀಲರು ರಾ॥ ನರಸಿಂಹ ಶ್ಯಾನಭಾಗರಿಗೆ ಹೊಡೆದರು. ವಕೀಲರ ಮೇಲಿಂದ ಫಿರ್ಯಾದು ಆಗಿದೆ. ರಾ॥ ತಾರೀಬಾಗಿಲ ವಗೈರೇರು ಪೋಲೀಸರ ನಿಮಂತ್ರಣೆಯಂತೆ ಪಂಚರಾಗಲು ಬಾರದ್ದರಿಂದ ಅವರ ಮೇಲೆ ಯುಕ್ತ ಕಂಡ ಕೆಲಸ ನಡಿಸುವದಕ್ಕಾಗಿ ಪೋಲೀಸರು ಮೇಲಧಿಕಾರಿಗಳ ಕಡೆಗೆ ರಿಪೋರ್ಟು ಮಾಡಿದ್ದಾರೆ. ಹೀಗೆ ಊರಲ್ಲೆಲ್ಲ ದೊಡ್ಡ ಗಡಿಬಿಡಿಯಾಗಿದೆ.

ಕಾಡು ಹಂದಿಗಳ ಶಿಕಾರಿ ಬಗ್ಗೆ ಕೆನರಾ ಕೋಸ್ಟ ಡಿವಿಜನ ಹದ್ದಿನ ಜಂಗಲುಗಳಲ್ಲಿ ಬಲೆ ಉಪಯೋಗಿಸಿದರೆ ಗುನ್ಹೆ ಆಗುವದಿಲ್ಲವಾಗಿ ಡಿ. ಫೊ॥ ಆಫೀಸರರಾದ ರಾ॥ ತಗ್ಗರಸೆಯವರು ತಿಳಿಸುತ್ತಾರೆ.

ಮುಡೇಶ್ವರ— ಊರಲ್ಲಿ ರಕ್ತಾತಿಸಾರ (ಜುಟ್ಟಿಹೂರಕಡ) ಕಡಿಮೆಯಾಗಿದೆ; ಜ್ವರದ ಹಾವಳಿ ತಗ್ಗಿಲ್ಲ.

ದಿನಾ ಒಂದೆರಡು ಮಳೆ ಹನಿಯುತ್ತಿರುವ ಪ್ರಯುಕ್ತ ಜಡ್ಡು (ಕೊಚ್ಚಿಗೆ) ಭತ್ತದ ಪೈರು ಪರಿಪಕ್ವವಾಗಿ ಗದ್ದೆಗಳಲ್ಲಿ ಮಲಗಿದ್ದರೂ, ಅದನ್ನು ಕೊಯ್ದು ತರಲಿಕ್ಕೆ ಒಕ್ಕಲಿಗರಿಗೆ ಅಡ್ಡಿಯಾಗಿ ಈ ಬಡವರು ಬಲು ಬೇಜಾರಪಡುತ್ತಿದ್ದಾರೆ. ಪರಂತು ಮಾರಾಟದ ಬಗ್ಗೆ ಹೇರಳ ಅಕ್ಕಿ ದಾಸ್ತಾನು ಮಾಡಿಟ್ಟ ಜಮೀನದಾರರಿಗೆ ಮಾತ್ರ ಈ ಪ್ರಕಾರ ಮಳೆ ಬೀಳುವದನ್ನು ನೋಡಿ ಹರ್ಷವೆನ್ನಬಹುದೇ? ಯಾಕೆಂದರೆ ಮಳೆಯು ನಿಮಿತ್ತ ಬೆಳೆಕೊಯ್ಲಿಗೆ ತಾಳಹರಣವಾದೀತೆಂಬ ಧೋರಣದಿಂದ ಅಕ್ಕಿಯ ಧಾರಣೆಯನ್ನು ಅಂಥ ಜಮೀನದಾರರೂ ಅಂಗಡಿಕಾರರೂ ಒಂದಾಗಿ ಏರಿಸುತ್ತಿದ್ದಾರೆ. ತಥಾಪಿ ನಿನ್ನೆ ಹಿಂಗಾರಿ ಮಳೆ ಹೊರಟು ಹೋಗುವ ಗುಡುಗು-ಮಿಂಚಿನ ಅಬ್ಬರವೆದ್ದು ಈ ಹೊತ್ತು (ಅಮಾವಾಸೆ) ಬಿಸಿಲು ಕಾಯುವದರಿಂದ ಇನ್ನು ಮಳೆ ಪೂರ್ಣವಾಗಿ ಹಿಂದಾದೀತೆಂದು ಜನರ ಅಭಿಪ್ರಾಯ.

ಇತ್ತಲಾಗಿ ಇಲ್ಲಿಯ ಉರ್ದು ಶಾಲಾ ಹೆಡ್‌ಮಾಸ್ತರೀ ಜಾಗಕ್ಕೆ ಬಂದ ಮಿ॥ ಅಬ್ದುಲ್ ರಹಿಮಾನ ಇವರು ಒಳ್ಳೇ ಸಾಹಸಶಾಂತ, ಚಟಪಟೀ, ವ ಅನುಭವೀಕ ಟ್ರೇಂಡರು ಆಗಿದ್ದರಾಗಿ ತೋರುತ್ತದೆ. ಇವರು ವಿದ್ಯಾರ್ಥಿಯರಿಗೂ ಅವರ ಪಾಲಕರಿಗೂ ಒಳ್ಳೇ ಪ್ರೋತ್ಸಾಹವನ್ನಿತ್ತು ಹುಡುಗರ ಸಂಖ್ಯೆ ಬೆಳೆಸಿ ೭ನೆಯ ಇಯತ್ತೆಯ ವರೆಗೆ ಏರಿಸಿದ್ದಾರೆ. ಇವೀಗಲೇ ಸಂಖ್ಯೆ ೧೦೦ ಕ್ಕೆ ಮುಟ್ಟಿದ್ದು ಇದನ್ನ ೨೫-೩೦ ಹುಡುಗರು ಸೇರಲಿಕ್ಕಿದ್ದಾರಾಗಿ ತಿಳಿಯುತ್ತದೆ. ಈಗಿದ್ದ ಇವರ ಇಬ್ಬರೂ ಅಸಿಸ್ಟಾಂಟರು ಅನ್‌ಟ್ರೇಂಡರಿದ್ದ ಮೂಲಕ ಇನ್ನೂ ಒಬ್ಬ ಟ್ರೇಂಡ ಅಸಿಸ್ಟಂಟರನ್ನು ಶೀಘ್ರ ಕೊಡಿಸಬೇಕಾಗಿ ಮೇಲಧಿಕಾರಿಗಳಿಗೆ ಬರಕೊಂಡಿರುತ್ತಾರಂತೆ. ಈ ಶಾಲೆಗೆ ಹುಡುಗರನ್ನು ಕಳುಹಿಸುವ ಪಾಲಕರೂ ಈಕುರಿತು ತಕ್ಕ ಅಮಲದಾರರಿಗೆ ಮನವಿಗಳನ್ನು ಕಳುಹುತ್ತಿದ್ದಾರೆ. ಈಗಿರುವ ಶಾಲೆಯಲ್ಲಿ ಹುಡಗರಿಗೆ ಕೂಡ್ರಲಿಕ್ಕೆ ಸರಕಾರಿ ನೇಮದ ಪ್ರಕಾರ ಸಾಕಷ್ಟು ಸ್ಥಳವಿಲ್ಲದ ಕಾರಣ ಅದನ್ನು ಬೆಳೆಸಿಕೊಡಬೇಕೆಂತಲೂ ಇವರ ಅಹವಾಲು ಇದೆ. ಡಿ॥ ಲೋಕಲ್ ಬೋರ್ಡಿನವರು ಇಂಥ ಸಾಹಸವಂತ ಹೆಡ್‌ಮಾಸ್ತರರ ಬಿನ್ನಹಗಳನ್ನು ಪೂರೈಸಿ, ಈ ಜಿಲ್ಹೆಯಲ್ಲಿ ಕನ್ನಡ ಶಾಲೆಗಳಿಗೆ ಸಿಗುವಷ್ಟು ಪ್ರೋತ್ಸಾಹವು ಉರ್ದು ಶಾಲೆಗಳಿಗೆ ದೊರಕುವದಿಲ್ಲೆಂದು ಇಲ್ಲಿಯ ಮುಸಲ್ಮಾನರಲ್ಲಿ ಕೆಲವರು ಆಡುವ ಮಿಥ್ಯಾಪವಾದವನ್ನು ಬೇಗನೇ ಹೋಗಲಾಡಿಸಿಕೊಳ್ಳುವದು ಚಂದವಲ್ಲವೇ?

ಭಟಕಳ— ಮಳೆಗಾಳಿ ಜೋರು. ಭತ್ತದ ಪೈರು ಬೆಳೆದು ತಯಾರಾಗಿದೆ. ಈಶೇಚ್ಛೆ! ವೈಶ್ಯರ ಕೇರಿಯಲ್ಲಿ ಹುಲಿ ಸಂಚರಿಸುತ್ತಿದೆ. ಬೇಟೆಯಾಡುವವರು ಅನುಗ್ರಹಿಸಿ ಕಾಪಾಡಬೇಕು.

ಇಲ್ಲಿಯ ದನಕರುಗಳಿಗೆ ಹಿಡಿದು ದೊಡ್ಡಿಗಳಲ್ಲಿ ಅಟ್ಟಿ ಪೋಲೀಸರು ಉಪದ್ರವ ಕೊಟ್ಟರು.

ಮೋಗಲಾಯಿಗಳು ಇಲ್ಲಿ ೧೦ ದಿವಸ ಮುಕ್ಕಾಮು ಮಾಡಲು ಅಪ್ಪಣೆ ಬೇಡಿದ್ದರು; ಜುಗಾರು ಮಂಡಕ್ಕೆ ಅಪ್ಪಣೆ ಬೇಡಿದ್ದರು. ಜುಗಾರ ಮಂಡಕ್ಕೆ ಅಪ್ಪಣೆ ಸಿಗಲಿಲ್ಲ. ಉಳಿಯಲಿಕ್ಕೆ ಅಪ್ಪಣೆ ಸಿಕ್ಕಿತು. ಮೆಜಿಸ್ಟ್ರೇಟರಿಗೆ ಎಲ್ಲರದೂ ಉಪಕಾರ.

ಹೊಪ್ರಕೆರೆ ತುಂಬುವಂತೆ ಮಾಲೀಕರಿಗೆ ೧ ತಿಂಗಳ ನೋಟೀಸು ಕೊಟ್ಟಿದೆ. ಅಷ್ಟು ಮುದ್ದತ್ತಿನೊಳಗೆ ಕೆರೆ ತುಂಬಿಸಿದ್ದರೆ ಮುನಿಸಿಪಾಲಿಟಿಯವರು ತುಂಬುವರು. ಇದು ಪ್ರಶಸ್ತವಾಯಿತು.

ಯುವಕ ಸಂಘದವರು ಗುರುವಾರಕ್ಕೆ ರಾ॥ ನಾರ್ಣಪ್ಪೈರ ಮಾಳಿಗೆಯ ಮೇಲೆ ರಾ॥ ಶಾಸ್ತ್ರಿ ಹೊರಸಾಲ ಇವರ ಅಧ್ಯಕ್ಷತೆಯಲ್ಲಿ ಯುವಕ ಸಂಘದ ವಾಚನಾಲಯವನ್ನೊಂದು ಹೊರಡಿಸಿದರು. ಮಂಗಳವಾಗಲಿ!

ತಲಾನ ಗ್ರಾಮದ ಬಳಿಯಲ್ಲಿರುವ ಕಡಸಲಗದ್ದೆ ಕೇರಿಯಲ್ಲಿ ಒಕ್ಕಲಿಗರು ಕಾವಲಿಗೆ ರಾತ್ರಿ ಮನೆಯಿಂದ ಹೊರ ಹೋದಾಗ ಹುಲಿರಾಯನು ಕೊಟ್ಟಿಗೆ ನುಗ್ಗಿ ೨ ಹೋರಿಗಳ ಮೇಲೆ ಹಾರಿದನು. ಒಂದರ ಫಲಾಹಾರವಾಯಿತು. ಇನ್ನೊಂದಕ್ಕೆ ಶ್ವಾಸ ಮಾತ್ರವಿತ್ತು. ಅದಕ್ಕೆ ಮಾರನೇ ದಿನ ಸ್ವರ್ಗವಾಸ. ಕಾಲ; ಕಷ್ಟ!

ಜಾಲೀಗ್ರಾಮದ ಚಿಣ್ಣನಮನೆ ಹತ್ರ ೩-೪ ದಿವಸಗಳು ಹುಲಿ [illegible]. ಹುಲಿ ದೀಪಕ್ಕೂ ಹೆದರುವದಿಲ್ಲ. ದೀಪದ ಬೆಳಕಿಗೆ ಅದು ಸಂಚರಿಸುತ್ತಿದೆ! ಪೇಟೆಯಲ್ಲಿ ಪೋಲೀಸ ಕಾಯಿದೆಯಿಂದ ದನಕರುಗಳಿಗೆ ಕಷ್ಟ! ಹಳ್ಳಿಗಳಲ್ಲಿ ಹುಲಿಯ ಕಾಟ!!

ಸಾಗರದಿಂದ ಇತ್ತಕಡೆ ಒಂದು ಮೋಟಾರ ಸರ್ವೀಸ ಆಗುವದಿದೆ. ಸರ್ವೀಸಿನ ಮಾರ್ಗವು ಜನರ ತಿರುಗಾಟಕ್ಕೇ ದುಡ್ಡಾಗುವದು. ಮಾರ್ಗ ದುರುಸ್ತಿಯಾದರೆ ಪ್ರಯಾಣಿಕರಿಗೆ ಸುಖ!

ನಮ್ಮ ಭಟ್ಕಳ ಪೇಟಾ ಮಹಾಲ್ಕರಿ ಸಾಹೇಬರಾದ ಮಿ॥ ಗಣಪತ ಎಂಗೇಶ ನಾಡ್ಕರ್ಣಿ ಇವರಿಗೆ ಮುಂಡಗೋಡಿಗೆ ವರ್ಗವಾಗಿ, ಅವರ ಬದಲಿಗೆ ಬಂದ ಮಿ॥ ಗಣಪತ ಮಂಜುನಾಥ ಬೈಲೂರ ಇವರು ಈವತ್ತು ಚಾರ್ಜ ವಹಿಸಿಕೊಳ್ಳುವರಂತೆ

ಶಿರ್ಶಿ— ಈ ವಾರದಲ್ಲಿ ಮಳೆ ಇಲ್ಲ. ಮಂಜು ಬೀಳುತ್ತದೆ. ಬಿಸಿಲ ತಾಪ ಬಹಳ.

ಇರಾಣೀಯರ ತಂಡುಗಳೂ ಇನ್ನೂವರೆಗೆ ಬರುತ್ತ ಹೋಗುತ್ತ ಇರುತ್ತವೆ. ಚೊತ್ತೀ-ಜುಗಾರಿನಾಟಗಳೂ ನಡೆಯುತ್ತವೆ. ಈವರೆಗೆ ಬಂದುಹೋದ ಇರಾಣಿಯರ ಸಂಖ್ಯೆಯು ೫೦೦ ಕ್ಕೆ ಮಿಕ್ಕಿರಬಹುದು. ಇಷ್ಟೆ ಅಲ್ಲ. ಜನರಿಗೆ ವ್ಯಾಪಾರವೇನೂ ಲಾಭದ್ದಾಗಲೀ, ಆಗುವ ಸಂಭವವಾಗಲೀ ತೋರುವದಿಲ್ಲ. ಹೀಗಿದ್ದು ಇಷ್ಟೆಲ್ಲ ಜನರು ದೌಡು ಮಾಡುತ್ತಿರುವ ಉದ್ದೇಶವೇನೋ ಗೂಢವಿರಬೇಕಾಗಿ ಪ್ರಬಲ ಸಂಶಯ ಬರುತ್ತದೆ! ಬಹುತರ ಸೊತ್ತಿಯಿಂದಲೇ ಇವರ ಉದರನಿರ್ವಾಹ ಸಾಗುವಂತೆ ತೋರುತ್ತದೆ! ಇವರಲ್ಲಿ ಕೆಲಕೆಲವು ಹೆಂಗಸರು-ಮಕ್ಕಳಿಗೆ ಇರಾಣಿ ಇಲ್ಲವೆ ಉರ್ದು ಭಾಷೆ ಬರುವದಿಲ್ಲ. ಈ ವಿಷಯದಲ್ಲಿ ಪೋಲೀಸರು ಅಲ್ಲಲ್ಲ ಚೌಕಶಿ ನಡಿಸಿ ಯೋಗ್ಯ ಬಂದೋಬಸ್ತ ಇಡಿಸುವದು ಅವಶ್ಯ.

ಈ ವರುಷವೂ ನವರಾತ್ರಿಯಲ್ಲಿ ಇಲ್ಲಿಯ ಶ್ರೀ ಮಾರಿಕಾಂಬಾ ದೇವಸ್ಥಾನದಲ್ಲಿ ಶ್ರೀ ರಾಮಭಾವು ಭಜನಿ ಯಾನೆ ಆಮುಷ್ಕೆ ಇವರೇ ಕೀರ್ತನಕಾರರಾಗಿ ಬರುವರೆಂದು ತಿಳಿದುಬರುತ್ತದೆ.

ಇಲ್ಲಿ ೬ ತಿಂಗಳ ಹಿಂದೆ ನಡೆದ ಕಳುವಿನ ಪ್ರಕರಣದಲ್ಲಿಯ ಆರೋಪಿಗಳಾದ ಶಾನಭೋಗಂಗೂ, ಕಾರಕೂನರ ಹೆಂಡತಿಗೂ ಮೂರು ಮೂರು ತಿಂಗಳ ಸಖ್ತ ಶಿಕ್ಷೆಯು ವಿಧಿಸಲ್ಪಟ್ಟಿತು. ಮುಂದೆ ಅಪೀಲು ಆಗಿದೆಯಂತೆ.

ಧಾರವಾಡದ ಟ್ರೇನಿಂಗ ಸ್ಕೂಲಿನಲ್ಲಿರುವ ಕಾಡೀ ಮಾಸ್ತರರನ್ನು ಇಲ್ಲಿಯ ಕನ್ನಡ ಶಾಲೆಗೆ ವರ್ಗ ಮಾಡಿಸಬೇಕಾಗಿ ಇಲ್ಲಿಯ ನಾಗರಿಕರ ಪ್ರಯತ್ನ ನಡೆದದೆ.

ಕಳೆದ ೮—೧೦ ವರುಷಗಳಲ್ಲಿ ಇಲ್ಲಿ ಅನೇಕ ಮೋಟಾರುಗಳೂ, ಮೋಟಾರ ಕಂಪನಿಗಳೂ ಉದಯಾಸ್ತ ಹೊಂದಿವೆ. ಈಗ ಮೋಟಾರ ಮಾಲಗಾಡಿಗಳನ್ನು ಭರದಿಂದ ಹರಿಸುವ ಪ್ರಯತ್ನ ನಡೆದಿದೆ. ಇದರಿಂದ ಬಡ ಜನ-ಜಾನುವಾರಗಳಿಗೆ ಮೃತ್ಯುವಾಗುವ ವಿಷಮಾವಸ್ಥೆಯನ್ನು ಲಕ್ಷಿಸಿ ಧನದಾಹದ ಮಹತ್ವಾಕಾಂಕ್ಷೆ ಜನರನ್ನು ಸನ್ಮಾರ್ಗಕ್ಕೆ ತರುವ [illegible] ವಿಚಾರವುಳ್ಳ ಧರ್ಮಾತ್ಮರಾರೂ ಇಲ್ಲದೇ ಹೋದದ್ದು ದುಃಖದ ಸಂಗತಿ !!

ಈಗಿನ ಮಟ್ಟಿಗೆ ಊರಲ್ಲಿ ರೋಗರುಜಿಗಳು ಇಲ್ಲದ್ದರಿಂದ ಈ ವರುಷವಾದರೂ ಶ್ರೀ ಅಮ್ಮನವರ ಜಾತ್ರೆಯಾಗುವದೆಂದು ಜನರ ನಿರೀಕ್ಷಣೆ ಇರುತ್ತದೆ.

ಇಲ್ಲಿಯ ಮುನಿಸಿಪಾಲಿಟಿ ಇಮಾರತಿ (ಮಾರ್ಕೆಟ)ನಲ್ಲಿ ಖಾಯಂ ಅಂಗಡಿ ಇಟ್ಟುಕೊಳ್ಳುವವರಿಗೆ ಅನುಕೂಲವಾಗುವಂತೆ ಪರಿವರ್ತಿಸಿ ಮುನಿಸಿಪಾಲಿಟಿಯು ಉತ್ಪನ್ನವನ್ನು ಏರಿಸಿರುತ್ತದೆ. ಆದರೂ ಮೊದಲು ಜನರು ಸ್ಥಳ ಸಾಲದೆ ಮಾರ್ಗದ ಮೇಲೆಯೇ ಸಂತೆಯ ದಿನ ಕಾಳು ವ್ಯಾಪಾರ ಮಾಡಬೇಕಾಗುತ್ತದೆ. ವಾಡಿಕೆಯಂತೆ ಅವರ ಕಡೆಯಿಂದ ತಲೆಪಟ್ಟಿ ವಸೂಲಾಗುತ್ತದೆ. ಸದ್ರಿ ರಸ್ತೆಯ ಮೇಲೆ ಸಂತೆಯ ದಿನ ಮೋಟಾರು ನಡಿಸಬಾರದೆಂದು ಬೋರ್ಡ ಹಚ್ಚಿದ್ದು ಮೋಟಾರುಗಳು ಕಾಯಿದೆಭಂಗ ಮಾಡುತ್ತವೆ — ಮುನಿಸಿಪಾಲಿಟಿಯ ಕಣ್ಣು ಸನ್ನಿಧಿಯಲ್ಲೇ !!

ಯಲ್ಲಾಪೂರ— ಮುಂಜಾನೆ ಮಂಜು! ಮಧ್ಯಾನ್ಹ ಸೆಖೆ!! ಸಂಜೆ ಚಳಿ!!! ಈ ರೀತಿ ವಾತಾವರಣದಿಂದ ರೋಗ ಪ್ರಸಾರಣೆಯ ಲಕ್ಷಣಗಳು ಕಾಣುತ್ತಿವೆ. ಜನರು ಜಾಗ್ರತರಾಗಿರಬೇಕು. ನವರಾತ್ರಿಯಲ್ಲಿ ಇಲ್ಲಿ ಕೀರ್ತನ ಮಾಡಲು ಹರಿದಾಸರು ಯಾರೂ ಸಿಗದೆ, ಇಲ್ಲಿಯ ಜನರ ಪೇಚಾಟ ಮನೆಗೆ ಬೆಂಕಿ ಹತ್ತಿದಾಗ ಬಾವಿ ತೋಡಹೋಗಬಾರದು.

ಹಾಸಣಗಿಯಲ್ಲಿ ಹೊಸ ಶಾಲೆ ಮಾಡುವದಕ್ಕಿಂತ ಮಂಜಿಕೇರಿ ಶಾಲೆಯಲ್ಲಿಯೇ ಇನ್ನೊಂದು ಇಯತ್ತು ಹೆಚ್ಚಿಸುವದು ಅಥವಾ ಅಲ್ಲಿ ಒಂದು ಉರ್ದೂ ಕ್ಲಾಸು ಇಡುವದು ಒಳ್ಳೆಯದೆಂದು ಒಬ್ಬರು ಅಭಿಪ್ರಾಯಪಡುವದನ್ನು ನೋಡಿದರೆ, "ನೀ ಸತ್ತರೂ ಚಿಂತೆಯಿಲ್ಲ; ನಾನು ಬದುಕುಳಿಯಬೇಕೆಂಬುದು" ನೆನಪಾಗುತ್ತದೆ. ಹಾಸಣಗಿಯಲ್ಲಿ ಮೊದಲಿನಿಂದ ಶಾಲೆಯಿದ್ದು ಒಮ್ಮೆ ಯಾವ ಕಾರಣದಿಂದಲೋ ಅದು ಬಂದಾದ್ದರಿಂದ ಸಣ್ಣ ಮಕ್ಕಳಿಗೆ ಅಡವಿ ದಾರಿಯಿಂದ ಮಂಜಿಕೇರಿಗೆ ಬಂದು ಕಲಿಯಲಿಕ್ಕೆ ಕಷ್ಟವಾದ್ದರಿಂದ ಆ ಊರವರು ತಮ್ಮಲ್ಲಿ ಪುನಃ ಶಾಲೆಯಾಗುವ ಬಗ್ಗೆ ಹಿಂದೇ ಸತತ ಪ್ರಯತ್ನಿಸುತ್ತಿರುವರು. ಶಾಲೆಯ ಇಮಾರತಿನ ಬಗ್ಗೆ ೩೦೦ ರೂಪಾಯಿ ಮುಂಗಡವಾಗಿ ಬೋರ್ಡಿನಲ್ಲಿ ನಾಲ್ಕು ವರ್ಷಗಳಿಂದ ಇಟ್ಟಿರುವರು. ಹೊಸ ಶಾಲೆಯಾಗುವ ವರೆಗೆ ಅಲ್ಲಿ ಈಗ ಒಂದು ಗಾಂವಠೀ ಶಾಲೆಯು ಊರವರಿಂದಲೇ ನಡಿಸಲ್ಪಡುವದು. ಅದ್ದರಿಂದ ಮಂಜೀಕೇರಿಯಲ್ಲಿ ಇನ್ನೊಂದು ಇಯತ್ತು ಹೆಚ್ಚಿಸುವದಾದರೆ ಅಥವಾ ಉರ್ದು ಕ್ಲಾಸು ಇಡುವದಾದರೆ ಹಾಸಣಗಿಯಲ್ಲಿ ಶಾಲೆಯು ಬೇಡವೆಂಬುವರ ಮರ್ಮವೇನೋ ತಿಳಿಯದು.

ಜಿಲ್ಲಾಧಿಪರೂ, ಪ್ರಾಂತ ಸಾಹೇಬರೂ ಇಲ್ಲಿಂದ ತೆರಳಿದರು. ಈ ತಾಲೂಕ ಬಿಸಗೋಡ ಗ್ರಾಮದಲ್ಲಿ ಯಾರೋ! ಒಂದು ಮನೆಗೆ ಬೆಂಕೀ ಹಚ್ಚಿದ್ದಲ್ಲದೆ, ಆ ಮನೆಯ ಒಬ್ಬ ಹೆಂಗಸನ್ನು ಸಮೀಪದಲ್ಲಿಯೇ ಖೂನಿ ಮಾಡಿದ್ದು, ಆ ಹೆಣವು ಆಸ್ಪತ್ರೆಗೆ ತರಲ್ಪಟ್ಟಿದೆ. ಪೋಲೀಸರು ಕೊಲೆಪಾತಕಿಗಳನ್ನು ಕಂಡುಹಿಡಿಯುವದರಲ್ಲಿದ್ದಾರೆ.

ವಾಚಕ ಮಹಾಶಯರಿಗೆ ವಿನಂತಿ.

ವರ್ಷಾಸನದಂತೆ ‘ವೃತ್ತ’ಕ್ಕೆ ರಜೆ.

‘ವೃತ್ತ’ವು ತಾ. ೨೨ ನೇ ಸೋಮವಾರಕ್ಕೆ ರಜೆಹೊಂದು ೨೯ ನೇ ಸೋಮವಾರಕ್ಕೆ ವಾಚಕರಿಗೆ ಭೆಟ್ಟಿಯಾಗುವದು.

ಇದು ೧೨ ನೇ ವರುಷದ ಕೊನೆಯ ಸಂಚಿಕೆ. ಇಂದಿಗೆ ‘ವೃತ್ತ’ದ ೧೨ ನೇ ವರುಷ ಮುಗಿದು ೧೩ ನೇ ವರುಷ ಹುಟ್ಟುತ್ತದೆ

ಈ ೧೨ ವರ್ಷಗಳಲ್ಲಿ ‘ವೃತ್ತ’ವು ಕಾಲಕಾಲಕ್ಕೆ ಸಮಯೋಚಿತವಾಗಿ ಪ್ರಜೆಗಳ ದೂರುಗಳನ್ನು ಧ್ವನಿಸಲು ಶಕ್ತಿಮೀರಿ ದುಡಿದದೆಂದು ನೀವು ಬಲ್ಲವರಿದ್ದೀರಿ. ಪುಟ ಹೆಚ್ಚಿಸಿ, ವಿವಿಧ ವಿಷಯಗಳ ಮೇಲೆ ಸವಿಸ್ತರ ಲೇಖಗಳನ್ನು ಪ್ರಕಟಿಸಬೇಕಾಗಿ ನಮ್ಮ ಕಡೆ ಹಿತಚಿಂತಕರು ಸೂಚನೆ ಸಹ ಮಾಡಿದ್ದಾರೆ. ಸುಧಾರಣೆ ಮಾಡುವ ಕೆಲಸವು ಸಂಪೂರ್ಣವಾಗಿ ಪ್ರೋತ್ಸಾಹದ ಮೇಲೆ ಅವಲಂಬಿಸಿದೆ. ಚಂದಾದಾರರೂ-ಹಿತಚಿಂತಕರೂ ಸ್ವಲ್ಪ ಪ್ರಯತ್ನ ಮಾಡಿ ಪ್ರೋತ್ಸಾಹವನ್ನು ಬೆಳಿಸಿದರೆ, ‘ವೃತ್ತ’ದೊಳಗಿನ ನ್ಯೂನತೆಗಳನ್ನು ಪರಿಹರಿಸಲಿಕ್ಕೆ ಬಹಳ ಅನುಕೂಲವಾಗುವಂತಿದೆ. ಕಾರಣ ಚಂದಾದಾರರೂ, ಹಿತಚಿಂತಕರೂ ತಮ್ಮ ತಮ್ಮ ಗೆಳೆಯರ ಮನವೊಲಿಸಿ ಚಂದಾದಾರರನ್ನು ಶೇಖರಿಸಬೇಕಾಗಿ ನಮ್ಮದೊಂದು ಬಿನ್ನಹವಿದೆ.

ವರ್ಷಾರಂಭದ ಚಂದಾದಾರರು ತಮ್ಮ ವರ್ಗಣಿ ರೂ. ೩-೦-೦ನ್ನು ಮುಂಗಡ ಮನಿಆರ್ಡರಿನಿಂದ ಕಳಿಸುವದು; ಯಾವದೇ ಕಾರಣದಿಂದ ಚಂದಾದಾರರಾಗಲಾರದವರು ಹಾಗೆಯೇ ಮುಂಚಿತವಾಗಿ ತಿಳಿಸತಕ್ಕದ್ದು.

ಇತಿ, ಮೆನೇಜರ, ಕಾ. ವೃ.

ಈ ದೀಪಾವಳಿ ಹಬ್ಬದಲ್ಲಿ
ಮುದ್ದು ಮಗನಿಗೊಂದು ಬಾಳಿಕೆಗೆ ಬರುವಂಥ
ಗಡಿಯಾರ— ಅಂದರೆ,
“ಮೆಚ್‌ಲೆಸ್”
ಕೊಡಿರಿ!

ಛಟ್ಟಿ ಗಡಿಯಾರ;
ಕೀ ಕೊಡುವದವಶ್ಯವಿಲ್ಲ.
ಲಿವ್ಹರ ಗಡಿಯಾರ!
ನಿಕಲ ಬೆಳ್ಳಿಯದು ರೂ. ೨೨-೦-೦.
ರೋಲ್ಡ ಚಿನ್ನದ್ದು ರೂ. ೩೪-೦-೦.

ನಿಮಗೆ ಸಂಸಾರದಲ್ಲಿ ಮಗನು ಚಂದಾಗಿ ನಡೆಕೊಂಡು ಮಾನ್ಯ ನಾಗರಿಕನಾಗಬೇಕೆಂದು ಅಪೇಕ್ಷೆಯುಂಟಲ್ಲವೇ? ಸಮಯದ ಮಹತ್ವವನ್ನು ಮುಂದಾಗಿ ಆತನಿಗೆ ತಿಳಿಸಿಬಿಡಿ. ಕಷ್ಟಪಟ್ಟು ಆತನು ಈ ಅನುಭವ ಪಡೆಯುವಂತೆ ಮಾಡಬೇಡಿ. ಸಮಯವನ್ನು ಹಾಳು ಮಾಡುವದೆಂದರೆ, ಇಡೀ ಬಾಳ್ವೆಯನ್ನೇ ಹಾಳುಮಾಡಿಕೊಳ್ಳುವದು; ಹಣವೂ ಹಾಳಾಗುತ್ತದೆ. “ವೆಸ್ಟ ಎಂಡ್” ಗಡಿಯಾರವೊಂದಿದ್ದರೆ, ಹುಡುಗರಿಗೆ ಸಮಯದ ಮಹತ್ವ ತಿಳಿಯುತ್ತದೆ; ಆತನು ತಕ್ಕ ಕಾಲದಲ್ಲಿ ತಕ್ಕ ಕೆಲಸ ಮಾಡುತ್ತಾನೆ “ಮೆಚ್‌ಲೆಸ್” ಅಂಥ ಗಡಿಯಾರವನ್ನು ನೀವು ಆರಿಸಿತೆಗೆದರೆ, ನಿಮಗೆ ಬಹು ಆನಂದವಾಗುವದು.

ಕೆಟಲಾಗು ಉಚಿತ ಸಿಗುತ್ತೆ; ಇಮ್ಮೆ ಬರೆಕೊಳ್ಳಿ!

ವೆಸ್ಟ ಎಂಡ್ ವಾಚ್ ಕಂಪನಿ,
ಮುಂಬಯಿ. ಕಲಕತ್ತಾ.

ಮಹಾತ್ಮರ ಆತ್ಮಚರಿತ್ರೆ.

(೨೫) ಖೇಡಾ ಸತ್ಯಾಗ್ರಹದ ಸಮಾಪ್ತಿ.

ಅನಪೇಕ್ಷಿತವಾಗಿ ಈ ಸತ್ಯಾಗ್ರಹವು ಸಮಾಪ್ತಿ ಹೊಂದಿತು. ಜನರಿಗೆ ಸಾಕಾಗಿ ಹೋಗಿತ್ತು. ಇನ್ನೂ ಈ ಕಾದಾಟವನ್ನು ನಡಿಸಿ ಹಟ ಮಾಡಿದರೆ ಸರ್ವನಾಶವಾಗಬಹುದಿತ್ತು. ಈ ಸತ್ಯಾಗ್ರಹದೊಳಗಿಂದ ಮರ್ಯಾದೆಯಿಂದ ಪಾರಾಗುವ ಹಾದಿಕೆಯನ್ನು ನಾನು ನಿರೀಕ್ಷಿಸುತ್ತಿದ್ದೆ. ಆ ಹಂಚಿಕೆಯಿಂದ ಸತ್ಯಾಗ್ರಹಿಗೆ ಗ್ರಾಹ್ಯವಾಗುವಷ್ಟು ಫಲಪ್ರಾಪ್ತಿಯಾದರೆ ಸಾಕಾಗಿತ್ತು. ಇಂಥದೊಂದು ಉಪಾಯವು ಅನಪೇಕ್ಷಿತವಾಗಿ ಪ್ರಾಪ್ತವಾಯಿತು. ದೈವಶಾಲಿ ಪಟೇದಾರರು ಹಣದ ಮೊಬಲಗು ತುಂಬಿದರೆ ಬಡ ಜನರಿಗೆ ತಹಕೂಬಿ ಸಿಗುವದಾಗಿ ನಡಿಯಾದ ತಾಲೂಕಿನ ಮಾಮಲೇದಾರರು ನನಗೆ ಹೇಳಿ ಕಳಿಸಿದರು. 'ಹಾಗೆಯೇ ಬರೆದು ಕೊಡಿ,' ಎಂದು ನಾ ಕೇಳಿದೆ. ಅವರು ಬರೆದು ಕೊಟ್ಟರು. ಆದರೆ, ಮಾಮಲೇದಾರರು ತಮ್ಮ ತಾಲೂಕಿನ ಪೂರ್ತ ಹೇಳಿದ್ದು; ಇಡೀ ಜಿಲ್ಲೆಯ ವಿಷಯ ವಚನ ಕೊಡುವ ಅಧಿಕಾರವು ಕಲೆಕ್ಟರರಿಗಿದೆ. ಆದ್ದರಿಂದ ಮಾಮಲೇದಾರರ ಕರಾರಿನಂತೆ ಇಡೀ ಜಿಲ್ಲೆಯಲ್ಲಿ ನಡೆಯುವದೇನೆಂದು ನಾನು ಕಲೆಕ್ಟರರ ಬಳಿ ವಿಚಾರಿಸಿದೆನು. ಮಾಮಲೇದಾರರ ಪತ್ರದಂತೆ ಎಲ್ಲ ತಾಲೂಕುಗಳಲ್ಲಿ ತೀರ್ಪ ತಹಕೂಬಿಯಾಗಬೇಕೆಂಬ ಹುಕುಮುಗಳು ಈ ಮೊದಲೇ ಹೊರಬಿದ್ದಿರುವದಾಗಿ ಅವರು ಉತ್ತರ ಕೊಟ್ಟರು. ಈ ಮಾತು ನನಗೆ ಗೊತ್ತಿರಲಿಲ್ಲ. ಹೀಗೆ ಈ ಕ್ರಮವು ಹೊಂದಿದ್ದರೆ ಜನರ ಪ್ರತಿಜ್ಞೆಯು [illegible] ನಾನು ಎಣಿಸಿದೆ. ಪ್ರತಿಜ್ಞೆಯಲ್ಲಿ ಇಷ್ಟೇ ಧ್ಯೇಯವಾಗಿತ್ತು. ಆದರಿಂದ ಈ ಹುಕುಮುಗಳು ನಮಗೆ ಸಮಾಧಾನಕರವೆಂದು ನಾವು ಅಭಿಪ್ರಾಯಪಟ್ಟೆವು.

ಆದರೆ, ಈ ಪ್ರಕಾರ ಸತ್ಯಾಗ್ರಹದ ಸಮಾಪ್ತಿಯಾದ್ದರಿಂದ ನನಗೇನು ಹುರುಪೆನಿಸಲಿಲ್ಲ. ಅದರೊಳಗೆ ಸತ್ಯಾಗ್ರಹಿಗಳ ಮರ್ಯಾದೆ ವಿಶೇಷವಿರಲಿಲ್ಲ. ಸಂಧಾನವಾಯಿತೆಂಬ ಭಾವನೆ ಕಲೆಕ್ಟರರಿಗೆ ಸ್ಪರ್ಶಿಸಲಿಲ್ಲ. ಕಲೆಕ್ಟರರ ಕಾರಭಾರವು ಮುಂಚಿನಂತೆಯೇ ಈಗಲೂ ನಡೆದಿತ್ತು. ಬಡಬಗ್ಗರಿಗೆ ತಹಕೂಬಿ ಸಿಗಬೇಕೆಂದಿತ್ತು. ಆದರೆ, ಬಡಬಗ್ಗರ ವ್ಯಾಖ್ಯೆಯಲ್ಲಿ ಸೇರುವ ಜನರು ದೊರಕುವದೇ ದುರ್ಲಭವಾಯಿತು. ಬಡಬಗ್ಗರೆಂದರೆ ಯಾರು ? ಎಂಬುದನ್ನು ನಿಶ್ಚಯಿಸಿಕೊಳ್ಳುವ ಅಧಿಕಾರವು ಜನರದು. ಆದರೆ ಅವರದನ್ನು ಉಪಯೋಗಿಸುವಷ್ಟು ಸಾಮರ್ಥ್ಯವಂತರಾಗಿರಲಿಲ್ಲ. ಆ ಅಧಿಕಾರವನ್ನು ಉಪಯೋಗಿಸುವ ಶಕ್ತಿ ಅವರಲ್ಲಿರಲಿಲ್ಲವೆಂದು ತಿಳಿದು ನನಗೆ ವ್ಯಸನವಾಯಿತು. ಸತ್ಯಾಗ್ರಹದ ವಿಜಯ ಸಮಾರಂಭವಾದರೂ, ನನಗೇನು ಆ ಬಗ್ಗೆ ಹುರುಪೇ ಇರಲಿಲ್ಲ. ವಿಜಯದ ಮುಖ್ಯ ಲಕ್ಷಣಗಳು ನಮ್ಮ ವಿಜಯದಲ್ಲಿ ಸೇರಿದ್ದಿಲ್ಲ. ಸತ್ಯಾಗ್ರಹಿಗಳು ಕಾದಾಟ ಮುಗಿದ ತರುವಾಯ ಮುಂಚಿನಕಿಂತ ಪ್ರಬಲರೂ, ಸಾಮರ್ಥ್ಯವಂತರೂ, ಸಾಹಸಿಗರೂ ಆದರೆ ಮಾತ್ರ ಸತ್ಯಾಗ್ರಹ ಕಾದಾಟದ ಸಮಾಪ್ತಿಯು ಯೋಗ್ಯವಾಯಿತೆಂದು ಹೇಳಬಹುದು.

ಆದರೆ ಈ ಹೋರಾಟದಿಂದ ಅಪ್ರತ್ಯಕ್ಷವಾಗಿ ಲಾಭಗಳನೇಕವಾದವು. ಇಂದಿಗೆ ನಾವದನ್ನು ಕಾಣುತ್ತೇವೆ, ಅವುಗಳ ಫಲವನ್ನು ಉಣ್ಣುತ್ತೇವೆ. ಖೇಡಾ ಸತ್ಯಾಗ್ರಹವು ಗುಜರಾಥದೊಳಗಿನ ಒಕ್ಕಲಿಗರಿಗೆ ನಿಜವಾದ ರಾಜಕಾರಣವನ್ನು ಬೋಧಿಸುವ ಪಾಠಶಾಲೆಯಾಯಿತು. ಅದರ ಜಾಗ್ರತೆಯ ಪ್ರಾರಂಭವು [illegible] ಅದೇ ಸಮಯ ಡಾ। ಬೆಝಂಟರವರು ರಭಸದಿಂದ ನಡಿಸಿದ ಸ್ವರಾಜ್ಯ ಚಳವಳಿಯ ಸೋಂಕು ಒಕ್ಕಲಿಗರಿಗಾಗಿತ್ತು. ಆದರೆ ಖೇಡಾ ಸತ್ಯಾಗ್ರಹದಿಂದ ಸುಶಿ[illegible] ಮುಂದಾಳುಗಳು ಒಕ್ಕಲಿಗರ ಜೀವನಕ್ರಮದ ಪರಿಚಯ ಮಾಡಿಕೊಳ್ಳಬೇಕಾಯಿತು. ಒಕ್ಕಲಿಗರೊಡನೆ ತನ್ಮಯರಾಗಲು ಅವರು ಕಲಿತರು. ಅವರಿಗೆ ಲೋಕಕಾರ್ಯದ ಕ್ಷೇತ್ರವು ದೊರಕಿತು, ಸ್ವಾರ್ಥತ್ಯಾಗದ ಶಕ್ತಿ ಮಿಗಿಲಾಯಿತು. ಈ ಹೋರಾಟದ ಮೂಲಕ ಶ್ರೀ ವಲ್ಲಭಭಾಯಿಯವರಿಗೆ ತಮ್ಮ ಆಯುಷ್ಯದ ಕಾರ್ಯಕ್ಷೇತ್ರವು ತಿಳಿಯಿತು. ಇದೇನು ಸಣ್ಣ ಲಾಭವಲ್ಲ. ಕಳೆದ ವರುಷ ನೆರೆ ಪ್ರಕರಣದಲ್ಲಿಯೂ, ಈ ವರುಷದ ಬಾರ್ಡೋಲಿ ಸತ್ಯಾಗ್ರಹದಲ್ಲಿಯೂ ಅವರಿಂದುಂಟಾದ ಲಾಭ ತಿಳಿಯುತ್ತದೆ. ಗುಜರಾಥದೊಳಗಿನ ಲೋಕಸೇವೆಗೆ ಹೊಸ ಸ್ಫೂರ್ತಿಯೂ, ಶಕ್ತಿಯೂ ಪ್ರಾಪ್ತಿಯಾದವು. ಪಟೇದಾರ ಒಕ್ಕಲಿಗರಿಗೆ ಸ್ವಸಾಮರ್ಥ್ಯದ ಅರಿವು ಹುಟ್ಟಿತು. ಅದನ್ನವರು ಎಂದಿಗೂ ಮರೆಯುವಂತಿದ್ದಿಲ್ಲ. ತಮ್ಮ ಉದ್ಧಾರ ಸಂಪೂರ್ಣವಾಗಿ ಜನರ ಮೇಲೆಯೇ ಅವಲಂಬಿಸಿದೆ. ಕಷ್ಟ ಸಹಿಸುವ ತಯಾರಿ, ತ್ಯಾಗ ಮಾಡುವ ತಯಾರಿ ಇದ್ದರೆ, ಉದ್ಧಾರ ಮಾಡಿಕೊಳ್ಳಬಹುದೆಂಬ ಪಾಠವು ಜನರ ಅಂತಃಕರಣದ ಮೇಲೆ ಚಲೋ ಬಿಂಬಿತು. ಖೇಡಾ ಕಾದಾಟದ ಮೂಲಕ ಗುಜರಾಥದ ಭೂಮಿಯ ಮೇಲೆ ಸತ್ಯಾಗ್ರಹವು ಬೇರು ಹಿಡಕೊಂಡಿತು.

ಸತ್ಯಾಗ್ರಹವು ಈ ಪ್ರಕಾರ ಸಮಾಪ್ತಿಯಾದ ಬಗ್ಗೆ ನನಗೇನು ಉತ್ಸಾಹವೆನಿಸಲಿಲ್ಲವೆಂದು ನಾನು ಹೇಳಿದ್ದೇನಷ್ಟೇ. ಆದರೆ, ಖೇಡಾ ಒಕ್ಕಲಿಗರಿಗೆ ಆನಂದಾತಿಶಯವಾಗಿತ್ತು. ಅವರು ಮಾಡಿದ ಪ್ರಯತ್ನಕ್ಕೆ ತಕ್ಕ ಫಲ ಸಿಕ್ಕಿತು. ತೊಂದರೆಗಳನ್ನು ಪರಿಹರಿಸಿಕೊಳ್ಳುವ ನಿಜವಾದ ಉಪಾಯವು ಅವರಿಗೆ ದೊರಕಿತ್ತು. ಈ ಭಾವನೆಯೇ ಅವರ ಆನಂದಕ್ಕೆ ಕಾರಣ. ಇದ್ದಾಗ್ಯೂ, ಖೇಡಾ ಒಕ್ಕಲಿಗರಿಗೆ ಸತ್ಯಾಗ್ರಹದ ಮರ್ಮ ತಿಳಿದಿದ್ದಿಲ್ಲ. ಮುಂದೆ ಅದರಿಂದ ಅವರು ಕಷ್ಟಪಡಬೇಕಾಯಿತು. ಈ ಸಂಗತಿಗಳನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸುವೆನು.

ತರತರದ ಮನೋಹರವಾದ ಸುಗಂಧ ದ್ರವ್ಯಗಳು ಬೇಕಾದಲ್ಲಿ ಕಾಠೇವಾಡ ಟ್ರೇಡಿಂಗ ಕಂಪನಿಯ ಜಗ ಪ್ರಖ್ಯಾತ ಹಾಗು ಲೋಕಪ್ರಿಯ ಸುಗಂಧಿ ಎಣ್ಣೆಗಳನ್ನೂ ಅತ್ತರಗಳನ್ನೂ ನೀವು ಉಪಯೋಗಿಸಿ ಅನುಭವಿಸಿರಿ, ಅವುಗಳ ಗುಣಾತಿಶಯವು ಹೊಳೆಯುವದು.

ಕುಸುಮೋಲ ಹೇರ ಆಯಿಲ್ ! (ರಜಿಸ್ಟರ್ಡ)

ಇದರ ಸುವಾಸನೆಯು ಅಪೂರ್ವವಿದೆ, ಮಧುರವಿದೆ, ಚಿತ್ತಾಕರ್ಷಕವಿದೆ; [illegible] ಬಹಳ [illegible] ಈ ತೈಲದ ಮೇಲೆ ರಸಿಕರ ಜೀವ! ಬೆಲೆ ರೂ ೧-೦ (ಅಂಚೆ ವೆಚ್ಚ ಪ್ರತ್ಯೇಕ.)

ವ್ಹೈಟ ರೋಝ ಹೇರ ಆಯಿಲ್ ! (ನಂ. ೭೭೭)

ಗುಲಾಬಿ ಹೂವು ಸಮಸ್ತ ಹೂವುಗಳಲ್ಲಿ ಶ್ರೇಷ್ಠವಾದದ್ದು. ಗುಲಾಬಿ ಹೂವಿಗಾಗಿ ಹಂಬಲಿಸುವವರು ಈ ಎಣ್ಣೆಯನ್ನು ಅವಶ್ಯವಾಗಿ ಉಪಯೋಗಿಸಬೇಕು. [illegible] ಈ ಎಣ್ಣೆ ಹಾಕಿಕೊಂಡರೆ, ಗುಲಾಬಿ ಹೂ ಮುಡಿಸಿಕೊಳ್ಳಬೇಕೆಂದಿಲ್ಲ; ಅಷ್ಟು ಈ ತೈಲದ ಸುವಾಸನೆಯಿದೆ! ಬಾಟ್ಲಿ ೧ರ ಬೆಲೆ ರೂ ೦-೧೪-೦ (ಅಂಚೆ ವೆಚ್ಚ ಬೇರೆ)

ಪುಷ್ಪಮಾಲತಿ ಹೇರ ಆಯಿಲ್.

ಈ ಎಣ್ಣೆಯು ಬೇರೆ ಬೇರೆ ಹೂವುಗಳಿಂದ ತಯಾರಾಗಿದ್ದಿರುತ್ತದೆ. ಇದರ ವಾಸನೆಯು ಈಗ ತಾನೆ ಅರಳಿದ ಹೂವುಗಳಂತೆ! ಮೂಸಿದರೆ, ಅಂತಃಕರಣವು ಪ್ರಸನ್ನವಾಗುತ್ತದೆ. ಬೆಲೆ ರೂ ೦-೧೪-೦ (ಟಪಾಲ ಹಾಸಲು ಪ್ರತ್ಯೇಕ)

ಒಟೋ-ಮಧುಕರ. (ರಜಿಸ್ಟರ್ಡ,

ಚಿತ್ತಾಕರ್ಷಕ ಸುವಾಸನೆಯುಳ್ಳ ಮಧುರವಾದ 'ಒಟೋ-ಮಧುಕರ'ವನ್ನು ನೀವು ಉಪಯೋಗಿಸಿರುವಿರೇನು? ೨-೩ [illegible] ಹಚ್ಚಿದರೆ, ಸುತ್ತುಮುತ್ತಲೆಲ್ಲ ಸುಗಂಧವಾಗುತ್ತದೆ! ಇಷ್ಟಾಗಿ ಈ ವಾಸನೆಯು ಬಹು ದಿನ ಬಾಳುತ್ತದೆ. ೪ ಔನ್ಸಿನ ಬಾಟ್ಲಿ ೧ರ ಬೆಲೆ ರೂ ೧-೦-೦. ಟಪಾಲ ಖರ್ಚು ಬೇರೆ.

ಕೇ. ಟಿ ಒಟೋರೋಝ (ನಂ ೭೭೭)-ಗುಲಾಬಿ ಪರಿಮಳವುಳ್ಳ ಉತ್ಕೃಷ್ಟ ಅತ್ತರ ೪ ಔನ್ಸಿನ ಬಾಟ್ಲಿ ೧ಕ್ಕೆ ರೂ ೧. (ಟಪಾಲ ಖರ್ಚು ಪ್ರತ್ಯೇಕ)
ಕೇ ಟಿ ಒಟೋ ಜಸ್ಮಾಯಿನ್ (ನಂ. ೭೭೭)-ಮಲ್ಲಿಗೆ ಹೂವಿನ ಪರಿಮಳವುಳ್ಳ ಅತ್ತರ. ೪ ಔನ್ಸಿನ ಬಾಟ್ಲಿ ೧ಕ್ಕೆ ರೂ. ೧ ,, ,,
ಕೇ ಟಿ ಒಟೋ-ಸುರಂಗಿ (ನಂ ೭೭೭)-ಸುರಗಿ ಹೂವಿನ ಪರಿಮಳವುಳ್ಳ ಅತ್ತರ. ೪ ಔನ್ಸಿನ ಬಾಟ್ಲಿ ೧ಕ್ಕೆ ರೂ. ೧ ,, ,,
ಕೇ ಟಿ. ಒಟೋ-ಮುಷ್ಕ (ನಂ ೭೭೭)-ಕಸ್ತೂರಿ ಪರಿಮಳದ ಅತ್ತರ. ೪ ಔನ್ಸಿನ ಬಾಟ್ಲಿ ೧ಕ್ಕೆ ರೂ ೧. ,, ,,

ಟೀಪು.- ೩ ಆಣೆಯ ಸ್ಟ್ಯಾಂಪು ಕಳಿಸುವವರಿಗೆ ಯಾವದೇ ೨ ಜಾತಿಯ ಎಣ್ಣೆಯ ನಮೂನೆ ಅಥವಾ ೧ ಜಾತಿಯ ಒಟೋ ನಮೂನೆ ಉಚಿತ ಸಿಗುತ್ತ

ಸೋಲ ಏಜಂಟ್ಸ— ಕಾಠೇವಾಡ ಟ್ರೇಡಿಂಗ ಕಂಪನಿ,

ಖೇತವಾಡಿ ಮೇನ ರೋಡ, ಮುಂಬಯಿ ನಂ ೪.

ಓದಿರಿ! ವಿಚಾರ ಮಾಡಿರಿ!! ಒಮ್ಮೆಲೇ ತರಿಸಿಬಿಡಿ!!!

ದಸರೆ-ದೀಪಾವಳಿಯ ದೊಡ್ಡ ಹಬ್ಬಗಳು ಬಂದವು!

ತೀರ ಸಮೀಪಿಸಿ ಬಂದವು!! ಇಂಥ ಹಬ್ಬಗಳಲ್ಲಿ ಪ್ರಾಚೀನ ಕಾಲದೊಳಗಿನ ಬುದ್ಧಿ ಬಲ್ಲಾದ ಸ್ತ್ರೀ ಪುರುಷರು ಕಟಿಗೂದಲಗಳಿಗೆ ಸುವಾಸನೆಯುಳ್ಳ ಸುಗಂಧದ ತೈಲಗಳನ್ನು ತುಂಬಾ ಲೇಪಿಸಿಕೊಂಡು ಸಡಗರದಿಂದ ಮೆರೆಯುತ್ತಿದ್ದರು. ಅದರಿಂದ ಅವರ ಸುತ್ತಮುತ್ತಲಿನ ಹವೆಯೆಲ್ಲ ಆಲ್ಹಾದಕರ ಸುವಾಸನೆಯಿಂದ ಕಂಪು ಚಿತ್ತವು ಶಾಂತವಾಗಿತ್ತು, ಗಂಭೀರವಾಗಿತ್ತು. ಹೀಗೆ ಇತಿಹಾಸವು ಹೇಳುತ್ತದೆ. ಚಿತ್ತವು ಶಾಂತಹೊಂದಿದರೆ, ಪವಿತ್ರಹೊಂದಿದರೆ ಈಶ್ವರನ ಆರಾಧನೆ ಮಾಡಲು ಅನುಕೂಲವಾಗುತ್ತದೆ. ಇಂಥ ಉಪಯೋಗದ ಬಗ್ಗೆ ಅತಿಶಯ ಪ್ರಶಸ್ತವಾದ ತೈಲವೆಂದರೆ -

ಕಾಮಿನಿಯಾ ಆಯಿಲ್!

(ರಜಿಸ್ಟರ್ಡ)

ಎಣ್ಣೆಯಾಗಿರುತ್ತದೆ. ದೂರ ದೂರವಿರುವ ಗ್ರಾಮಗಳಲ್ಲಿ ವಾಸಿಸುವವರಿಗೆ ಸಹ ಈ ತೈಲದ ಕೀರ್ತಿ ಗೊತ್ತಿದೆ. ಇದರಿಂದ ತಲೆಗೆ ತಂಪು, ಮಿದುಳಿಗೆ ಚಟುವಟಿಕೆ, ಕೂದಲು ಬೆಳೆಗೆ ಅನುಕೂಲ, ಕೂದಲು ವಿಪುಲವಾಗಿಯೂ, ಕಸುವಿನಿಂದಲೂ ಉದ್ದವಾಗಿಯೂ, ನುಣುಪಾಗಿಯೂ ಬೆಳೆಯುತ್ತವೆ. ಇದರ ವಾಸನೆಯು ಬಲು ಮಧುರ, ಹಾಗೆಯೇ ಸೌಮ್ಯವಾಗಿದ್ದು ಅದರ ಉಪಯೋಗದಿಂದ ಇಡೀ ದೇಹಕ್ಕೆ ಚಟುವಟಿಕೆಯು ಪ್ರಾಪ್ತವಾಗಿ ಆನಂದಕರವಾದ ತಂಪು ಸಿಗುತ್ತದೆ. ಇದಕ್ಕೆ ಸರ್ವೋತ್ಕೃಷ್ಟವಾದ ಅನೇಕ ಸಾಕ್ಷಿಗಳಿದ್ದಾವೆ. ಬೆಂಗಳೂರು, ಕಲಕತ್ತೆ, ಮದ್ರಾಸು, ಮೈಸೂರು, ಅಲಹಾಬಾದ ಮುಂತಾದ ಹಿಂದುಸ್ಥಾನದೊಳಗಿನ ದೊಡ್ಡ ದೊಡ್ಡ ಪಟ್ಟಣಗಳಲ್ಲಿಯೂ, ಅನೇಕ ಪ್ರದರ್ಶನಗಳಲ್ಲಿಯೂ ಸುವರ್ಣ ಪದಕಗಳೂ, ಶಿಫಾರಸು ಪತ್ರಗಳೂ ಸಿಕ್ಕಿರುತ್ತವೆ. ಸಾವಿರಾರು ಮಂದಿಗಳು ಈ ತೈಲದ ಉಪಯೋಗ ಮಾಡಿ ಉತ್ಸಾಹದಿಂದ ಈ ಎಣ್ಣೆಯ ಪ್ರಶಂಸೆ ಮಾಡುತ್ತಾರೆ. ನಿಮ್ಮ ಮನೆಯೊಳಗಿನವರ ಉಪಯೋಗಕ್ಕಾಗಿ ಸಿಕ್ಕ ಸಿಕ್ಕ ಎಣ್ಣೆಗಳನ್ನು ಉಪಯೋಗಿಸುವದಕ್ಕಿಂತ ನೀವು ಕಾಮಿನಿಯಾ ಆಯಿಲ್ ಎಣ್ಣೆಯನ್ನೇ ಖರೀದಿ ಮಾಡಿ ದೀಪಾವಳಿಯೊಳಗಿನ ಮಂಗಳ ಕಾರ್ಯವನ್ನು ಮಂಗಳ ಮಾಡಿರಿ

ಕಾಮಿನಿಯಾ ಆಯಿಲ್ (ರಜಿಸ್ಟರ್ಡ)

ಬೆಲೆ ಬಾಟ್ಲಿಗೆ ರೂ ೧-೦-೦, ವ್ಹಿ. ಪಿ. ಖರ್ಚು ೬ ಆಣೆ ಪ್ರತ್ಯೇಕ.

೩ ಬಾಟ್ಲಿಗಳಿಗೆ ರೂ ೨-೧೦-೦ ವ್ಹಿ. ಪಿ. ಖರ್ಚು ೧೨ ಆಣೆ ಬೇರೆ

ಹಾಗೆಯೇ ಮನಸ್ಸನ್ನು ಆನಂದಗೊಳಿಸಲಿಕ್ಕೂ, ಏಕಾಗ್ರಗೊಳಿಸಲಿಕ್ಕೂ

ಸುಂದರ ಸುಶೋಭಿತ ಉಡಿಕೆ-ತೊಡಿಗೆಗಳಿಂದ ಮನೋಹರವಾದ ಸುಗಂಧ ತೊಡಬೇಕು. ಅತ್ತರದ ಗುಳಿಗೆಗಳನ್ನು ಕಿವಿಯಲ್ಲಿ ಇಡಬೇಕು, ಭಕ್ತಿಭಾವದಿಂದ ದೇವತಾರ್ಚನೆ ಮಾಡುವಾಗ ಮಧುರ ವಾಸನೆಯುಳ್ಳ ಅತ್ತರ ನಿಮಗೆ ದೆ. ಇದಕ್ಕಾಗಿ ಅತಿಶಯ ಉಪಯುಕ್ತವಾದ ಹಾಗು ಮನೋಹರವಾದ ಅತ್ತರವೆಂದರೆ,—

ಒಟೋ-ದಿಲ್‌ಬಹಾರ!!

ಅತ್ತರವಿದು. ಈ ಅತ್ತರಕ್ಕೆ ಈಗ ಅರಳಿದ ಹೂವುಗಳ ಮಧುರವಾದ ವಾಸನೆ ಬರುತ್ತದೆ. ಈ ವಾಸನೆಯು ಬಾಳಿಕೆಯದು, ಕ್ಷಣಿಕವಾದದ್ದಿಲ್ಲ. ಅದಕ್ಕಾಗಿ ಈ ಅತ್ತರದ ಪ್ರಶಂಸೆ ಹೆಚ್ಚು! ಇತರ ಅನೇಕ ಜಾತಿಯ ಕಳಪ್ರತಿಯ ಅತ್ತರಗಳು ಪೇಟೆಯಲ್ಲಿ ಓಂ ರಸ್ತೆ ಒಟೋದಿಲ್‌ಬಹಾರದಂಥ ಡಬ್ಬಿಗಳಲ್ಲಿ ಹಾಕಿ ಮಾರುತ್ತಾರೆ. ಆದರೂ, ಓಟೋದಿಲ್‌ಬಹಾರದ ಕೀರ್ತಿಯೂ, ಸುಗಂಧವೂ ಇದ್ದಕ್ಕಿದ್ದಹಾಗೆಯೇ ಅಪ್ರತಿಮವಾಗಿ ಉಳಕೊಂಡಿದೆ!

ಇಂಥ ಸುಗಂಧ ಅತ್ತರದ ಉಪಯೋಗವನ್ನು ನೀವು ಸ್ವತಃ ಕೊಳ್ಳಿರಿ! ಗೆಳೆಯರ ಗುಂಪಿಗೆ ಕಾಣಿಕೆ ಕಳಿಸಿರಿ. ಹೀಗೆ ನಿಮ್ಮ ದಸರೆ-ದೀಪಾವಳಿಯನ್ನು ಆನಂದದಿಂದ ಕಳೆಯಿರಿ

ಬೆಲೆ — ಅರ್ಧ ಔಂಸ ಬಾಟ್ಲಿಗೆ ರೂ ೨-೦-೦ ಕ್ವಾ ಔಂಸ ಬಾಟ್ಲಿಗೆ ರೂ. ೧-೪-೦ ೧ ಡ್ರ್ಯಾಮನ ಬಾಟ್ಲಿಗೆ ರೂ ೦ ೧೨ ೦

೩ ಬಾಟ್ಲಿಗೆ ಪೋಸ್ಟ ಖರ್ಚು ಪ್ರತ್ಯೇಕ ೬ ಆಣೆ. ಓಟೋ-ದಿಲ್‌ಬಹಾರ ನಮೂನೆ ಬಾಟ್ಲಿಗೆ ೨ ಆಣೆ ಓಟೋದಿಲ್‌ಬಹಾರ ಸುಗಂಧಿ ಕಾರ್ಡಿಗೆ ೧ ಆಣೆ

ಸೂಚನೆ:- 'ಕಾಮಿನಿಯಾ ಆಯಿಲ್' ಮತ್ತು 'ಓಟೋದಿಲ್‌ಬಹಾರ' ಪ್ರತಿ ಊರೊಳಗಿನ ಪ್ರಸಿದ್ಧ ಅಂಗಡಿಯೊಳಗೆ ಮಾರಲ್ಪಡುತ್ತದೆ. ನಿಮ್ಮ ನೆರೆಹೊರೆಯಲ್ಲಿ ಯಾರೂ ಮಾರಾಟ ಮಾಡುವ ಅಂಗಡಿಕಾರನಿಲ್ಲದಿದ್ದರೆ ನೀವು ನೆಟ್ಟಗೆ ಕೆಳಗಿನ ಪತ್ತೆಯ ಮೇಲೆ ತರಿಸಿಕೊಳ್ಳಿರಿ. ಆದರೆ ನಿಮ್ಮ ಊರಿನ ಅಂಗಡಿಕಾರರೊಡನೆ ಕ್ರಯಕ್ಕೆ ಕೊಳ್ಳುವಾಗ ನೀವು ಲಕ್ಷದಲ್ಲಿಡತಕ್ಕ ಸಂಗತಿಯೇನೆಂದರೆ - ಅನೇಕ ಸುಳ್ಳು ಅಂಗಡಿಕಾರರು ತಮಗೆ ಹೆಚ್ಚು ಲಾಭ ಸಿಗುತ್ತದೆಂದು 'ಇದು ಹೆಚ್ಚು ಒಳ್ಳೇದ; ಮತ್ತು ಕಡಿಮೆ ಬೆಲೆಯದು' ಎಂತ ಹೇಳಿ ಕೆಟ್ಟ ಪದ್ದಾಲು ಕೊರಳಿಗೆ ಕಟ್ಟುತ್ತಾರೆ. ಇಂಥ ಮೋಸಕ್ಕೆ ಮರುಳಾಗಬೇಡಿರಿ. ಯಾವಾಗಲೂ "ಅಸ್ಸಲ ಕಾಮಿನಿಯಾ ಆಯಿಲ್" ಮತ್ತು "ಒಟೋ ದಿಲ್‌ಬಹಾರ"ವೇ ಬೇಕೆಂತ ಹೇಳಿರಿ!!

ಸೋಲ ಏಜಂಟ್ಸ— ಎಂಗ್ಲೋ-ಇಂಡಿಯನ್ ಡ್ರಗ್ ಮತ್ತು ಕೆಮಿಕಲ್ ಕಂಪನಿ,

ಪೋ. ಬಾ. ನಂ. ೨೦೮೨, ಮುಂಬಯಿ.

झंडूचें

द्राक्षासव– – मृद्विकारिष्ट – शारंगधर म. अ. १०

रामबाण औषध

सर्दि घालविणारें
भूक वाढविणारें
शौच्यास साफ करणारें
झोंप आणणारें
शक्ति देणारें
तेजस्वीपणा आणणारें

पिण्यास रुचिकर

किमत- एक रत्तलास १॥ रुपये.
क्याटलाग मागवा

झंडु फार्मास्युटिकल वर्क्स लिमिटेड
मुंबई नं: १४

ऐजंट— मेसर्स पंडित आणी कंपनी,
तीर्थहळ्ळी.

सिर्सि एजंट- एस. एल. धाकप्पा आणि ब्रदर्स

ಇಂಗ್ಲಂಡದಲ್ಲಿ ಸಿದ್ಧವಾದ

ರಾಯಲ್ ಅರ್ಜನ

ಸಾಯಕಲ್.

(ಸಾಯಕಲ್ಲಿನ ಪ್ರತಿ ಭಾಗದ ಮೇಲೂ "ಅರ್ಜನ" ಎಂಬ ಗುರುತಿರುವದು.)

ಚೆನ್ನಾಗಿ ಪೆಟ್ಟಿಗೆಯಲ್ಲಿಟ್ಟು ರೇಲ್ವೆ ಚಾರ್ಜ ತುಂಬಿ ನಿಮ್ಮೂರ ಸ್ಟೇಶನ ಮೇಲೆ
೮೫ ರೂ. ೮ ಆ. ಗೆ ಮಾತ್ರ.



ಇದರ ಕೂಡ ಡನ್‌ಲಾಪ್ ಕೋರ್ಡ ಟಾಯರ್ಸ. ಫ್ರೀವ್ಹೀಲ, ೨ ರಿಮ್ ಬ್ರೇಕ್ಸ್, ಮಡಗಾರ್ಡ್ಸ, [illegible] ಸ್ಪ್ರಿಂಗಸೀಟ, ರಬರ ಪೆಡಲ್ಸ, ಲೂಕಸ್ಸಿನ "ಪಾಥ ಫೈಂಡರ." ದೀಪ, ಉತ್ತಮ ಘಂಟೆ, ಡನ್‌ಲಾಪ್ ಪ್ಲೇಟೆಡ್ ಪಂಪ, ಎಲ್ಲ ಉಪಕರಣಗಳೊಂದಿಗೆ ಉಪಕರಣಗಳನ್ನಿಡುವ ಚೀಲ, ಇವೆಲ್ಲ ಕೊಡಲಾಗುತ್ತೆ. ಆರ್ಡರಿನ ಕೂಡ ರೂ. ೨೫ ಮುಂಗಡ, ಉಳಿದ ಹಣವನ್ನು ವ್ಹಿ. ಪಿ. ಯಿಂದ ವಸೂಲ ಮಾಡಲಾಗುವದು.

ವೆಲಿಂಗ್ಟನ್ ಸಾಯಕಲ್
ಎಂಡ್ ಮೋಟರ ಕಂಪನಿ,
ಮುಂಬಯಿ— ಹಾರ್ನಬೀ ರೋಡ,
ಪುಣೆ ಅರ್ಸೆನಲ್ ರೋಡ

ರೇಶ್ಮೆ ವಸ್ತ್ರ ಇನಾಮ.

ನಮ್ಮಲ್ಲಿಂದ ತರತರದ ಬಣ್ಣಗಳಲ್ಲಿ ಜರತಾರಿ ಪಸಾದ, ರೇಶ್ಮೆ ಸೀರೆ, ಪೀತಾಂಬರ, ಮೊಗುಟ, ರವಕೆ ಖಣ, ಎಲವಸ್ತ್ರ, ಪೇಟಾ, ಕಾಶ್ಮೀರ ಮತ್ತು ಕಾನಪೂರ ಶಾಲು. ಧಾವಳಿ, ನಾಮರ್ದ ರುದ್ರಾಕ್ಷಿ, ಸ್ಫಟಿಕ ಸರ, ಶ್ರೀ ಚಕ್ರ, ಪಂಚಾಯತನ, ಸಾಲಿಗ್ರಾಮ, ಶಂಖ, ಜಾಗಂಟೆ, ಘಂಟಾಮಣಿ, ತಾಳ, ಕಸ್ತೂರಿ, ಪಚ್ಚಕರ್ಪೂರ, ಕೇಸರಿ, ಶಿಲಾಜಿತ, ಅತ್ತರ ಮೊದಲಾದ ಪದಾರ್ಥಗಳನ್ನು ಗಿರಾಕಿಗಳ ಅಪೇಕ್ಷೆಯಂತೆ ಕಳುಹಿಸಲ್ಪಡುವವು. ಇಪ್ಪತ್ತೈದು ರೂಪಾಯಿ ಕ್ರಯ ಬಾಳುವ ಸಾಮಾನುಗಳಿಗೆ ಆರ್ಡರ್ ಮಾಡಿದರೆ ಒಂದು ರೇಶ್ಮೆ ವಸ್ತ್ರ ಇನಾಮವಾಗಿ ದೊರೆಯುವದು. ಪತ್ತೆ:-

ಕಾಪು ವಿಶ್ವನಾಥರಾವ್ ಎಂಡ್ ಬ್ರದರ್ಸ,
ದುರ್ಗಾಘಾಟ, [illegible] ಕಾಶೀ ಯು. ಪಿ.

ಸುಲಭ ಕ್ರಯ! ಸುಲಭ ಕ್ರಯ!!

ಡಾಕ್ಟರ ಜೀ. ಬೀ. ಯವರ

ಸುಗಂಧಿ ನಶ್ಯದ ಪುಡಿ.

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾ ಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ-- ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ, ಕಂಠಕ್ಕೆ ಮೇಲ್ಪಟ್ಟ [illegible] ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತಾರೆ. ಮಾದರಿ ಸಿಸೆ ಪುಕ್ಕಟೆ ಕಳಿಸಲಾದೀತು.

ಬುಡಿ ಒಂದಕ್ಕೆ ಕ್ರಯ ರೂ. ೦-೪-೦. ವ್ಹಿ. ಪಿ ೪ ಆಣೆ ಡಜನ್ ೧ ಕ್ಕೆ. ರೂ. ೩-೮-೦. ವ್ಹಿ. ಪಿ. ೦-೮-೦.
ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:— **ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ**

೧೦೦೦ ರೂಪಾಯಿ ಇನಾಮು

ಮಿರಜೆಯಲ್ಲಿಯ ಆಯುರ್ವೇದಿಕ ಪ್ರಸಿದ್ಧ ವೈದ್ಯ ವ್ಹಿ. ಎಸ್. ಕಾಪಸೇ ಇವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ

ವೀರ್ಯವು ತಿಳುವಾಗುವದರಿಂದುಂಟಾದ ರೋಗದಮೂಲಕ ಸಂತತಿಯಾಗದಿರೋಣ, ಮುಷ್ಟಿಮೈಥುನದಿಂದುಂಟಾದ ಇಂದ್ರಿಯಶಿಥಿಲತ್ವ, ನಪುಂಸಕತ್ವ, ಸ್ವಪ್ನಾವಸ್ಥೆ, ಮೂತ್ರದೊಂದಿಗೆ ಧಾತು ಹೋಗೋಣ, ಸ್ತ್ರೀಸ್ಪರ್ಶವಾದ ಕೂಡಲೆ ವೀರ್ಯಸ್ಖಲನವಾಗೋಣ, ಧಾತುಕೋಶದಲ್ಲಿಯ ಉಷ್ಣತೆ ಎದೆನೋವು (ಹಾರ್ಟ ಡಿಸೀಜ) ಮೂಲವ್ಯಾಧಿ, ಹಳೇ ಜ್ವರ, ಗರ್ಮಿ, ಕೈಕಾಲು, ಮೂತ್ರ ಉರಿಯೋಣ, ಪಿತ್ತವಿಕಾರ ನಿದ್ದೆಯು ಬಾರದೆ ಇರೋಣ ಮುಂತಾದ ಸರ್ವ ರೋಗಗಳು ಹೋಗಿ ವಿಶೇಷ ಹಸಿವೆಯಾಗಿ ಶೌಚಕ್ಕೆ ಸಾಫ ಆಗುತದೆ, ಧಾತು ಶುದ್ಧವಾಗಿ ಘಟ್ಟಿ ಆಗುವದಲ್ಲದೆ, ಪುರುಷತ್ವವು ಹೆಚ್ಚುತ್ತದೆ. ವೀರ್ಯಸ್ತಂಭನೆಯಾಗಿ ಕಾಮವಾಸನೆಯು ಮತ್ತು ಸಂತತಿ ಆಗಲಿಕ್ಕೆ ಸಹಾಯಕರ ಆಗುತ್ತದೆ. ರಸಿಕ [illegible] ಒಂದಾವರ್ತಿ ತಕೊಂಡು ಅನುಭವಿಸಿರಿ. (೫೨) ವನಸ್ಪತಿಗಳು ಮತು ಭಸ್ಮಸು "ಮೈಸೂರ ಇಶ್ವರ" ಪತ್ರಿಕೆಯಲ್ಲಿ ಪ್ರಕಾಶ ಮಾಡಿರುತ್ತದೆ. ಓದಿಕೊಳ್ಳಿರಿ.

ಮುಂಜಾನೆ ೨ ತೊಲೆಯು ೧ ವಡಿ, ರಾತ್ರಿಯು ಭೋಜನವಾದ ನಂತರ ೨ ತೊಲೆಯು ಒಂದು ವಡಿಯನ್ನು ತಕ್ಕೊಂಡು. ಅದರ ಮೇಲೆ ಸ್ವಲ್ಪ ಕಾಸಿದ ಹಾಲು ೨೦ ತೊಲೆ ಎಮ್ಮೆಯು ಅಥವಾ ಆಕಳ ಹಾಲನ್ನು ಕುಡಿಯಬೇಕು. ಪಥ್ಯವಿಲ್ಲ. ಸ್ತ್ರೀಸಂಗ್ಯವಿಲ್ಲ. ೨೧ ದಿವಸ ಸಾಕಾಗುವಷ್ಟು ೮೪ ತೊಲೆಯ ಒಂದು ಡಬ್ಬಿಗೆ ೫। ರೂ. ೩ ಡಬ್ಬಿಗೆ ೧೪। ರೂ ೬ ಡಬ್ಬಿಗೆ ೨೭ ರೂ. ೧೨ ಡಬಿಗೆ ೫೦ ರೂ. ವ್ಹಿ ಪಿ ಖರ್ಚ ಬೇರೆ. ೩ ಡಬ್ಬಿಗಳನ್ನು ತಕ್ಕೊಂಡರೆ ನಿಮ್ಮ ಮನಸ್ಸಿನಂತೆ ಪೂರ್ಣ ಗುಣಬರುವದು.

ಪತ್ತೆ:— **ಮಾಲಕ ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ.**

ಅಮೃತಾಂಜನ

ನೋವು ಪರಿಹಾರಕ್ಕೆ ದಿವ್ಯೌಷಧ.

ಈ ಮದ್ದು ಅತ್ಯಂತ ಅವಶ್ಯವಾದದ್ದು;

ಬಳಕೆಗೆ ತೀರ ಅನುಕೂಲ; ಮನೆತನದವರಂತು ಇಟ್ಟುಕೊಳ್ಳಲೇ ಬೇಕು; ಬಿದ್ದ-ಸುಟ್ಟ ಘಾಯಿಗಳಿಗೆ, ನೆಗಡಿ-ಕೆಮ್ಮಿಗೆ, ತಲೆನೋವಿಗೆ, ಇವೇ ಮುಂತಾದ ಇತರ ನೋವುಗಳಿಗೆ ಇದರಿಂದ ಬಹು ಬೇಗನೇ ಗುಣಬರುತದೆ. ಬೇಕಾದಲ್ಲಿ ಸಿಗುತ್ತೆ.

ಬಾಟ್ಲಿಗೆ ೧೦ ಆಣೆ. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡೀಪೋ,
ಮುಂಬಯಿ ಮತ್ತು ಮದ್ರಾಸ.

Printed and Published by Krishnarao Keshav Shenvi (Editor) at his Star of Kanara Prsse, Kumta.